C.NO – 940


ಶ್ರೀಮದ್ವೀರಶೈವ ಷಟ್ಸ್ಥಲ ವಿದ್ಯಾಬೋಧಿನೀ



ಧರ್ಮರತ್ನ ಪ್ರಶಸ್ತಿ ಸಮಲಂಕೃತೇನ
ಉಮಚಿಗಿ ವೃಷ್ಟಿಮಠಾಧೀಶೇನ
ಪಂ|| ಶಂಕರಶಾಸ್ತ್ರಿಣಾ
ವಿರಚಿತೇಯಂ.

ಕೇನೋಪನಿಷದಃ

ಶಾಂಕರೀ ವ್ಯಾಖ್ಯಾ.



ಶಿವಾದ್ವೈತ ವಿದ್ಯಾವಿಭೂಷಣ
ಸಿರಸಿ ಗುರುಶಾಂತಶಾಸ್ತ್ರಿಕೃತ ಕರ್ಣಾಟಕ ಭಾಷಾಮಯ
ಭಾವದರ್ಪಣ ಸಹಿತಾಚ.

—:0:—

ಮೈಸೂರ್
ಶ್ರೀಮತ್ಕನ್ಯಕಾಪರಮೇಶ್ವರೀ ಮುದ್ರಣಾಲಯೆ ಮುದ್ರಿತಾ.

ಪ್ರಥಮಾವೃತ್ತಿ ೧೦೦೦.

೧೯೨೩.

ರಿಜಸ್ಟರ್ಡ್ ಕಾಪಿರೈಟ್

[ಕ್ರಯ ೧-೮-೦

Q132:24:R234
33F3

Q132:24:R234 940
33F3
Shankara Shastri
Umachigi.
Kenopanishad Shankaribyakhyal


Q132:24:R234
33 F3

940

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.


ಶ್ರೀಮದ್ವೀರಶೈವ ಷಟ್ಸ್ಥಲ ವಿದ್ಯಾಬೋಧಿನೀ




ಧರ್ಮರತ್ನ ಪ್ರಶಸ್ತಿ ಸಮಲಂಕೃತೇನ
ಉಪುಚಿಗಿ ವೃಷ್ಟಿಮಠಾಧೀಶೇನ
ಪಂ|| ಶಂಕರಶಾಸ್ತ್ರಿಣಾ
ವಿರಚಿತೇಯಂ.

ಕೇನೋಪನಿಷದಃ

ಶಾಂಕರೀ ವ್ಯಾಖ್ಯಾ.



ಶಿವಾದ್ವೈತ ವಿದ್ಯಾವಿಭೂಷಣ
ಸಿರಸಿ ಗುರುಶಾಂತಶಾಸ್ತ್ರಿಕೃತ ಕರ್ಣಾಟಕ ಭಾಷಾಮಯ
ಭಾವದರ್ಪಣ ಸಹಿತಾಚ.



ಮೈಸೂರ್
ಶ್ರೀಮತ್ಕನ್ಯಕಾಪರಮೇಶ್ವರೀ ಮುದ್ರಣಾಲಯೆ ಮುದ್ರಿತಾ.
ಪ್ರಥಮಾವೃತ್ತಿ ೧೦೦೦.
೧೯೨೩.

ರಿಜಿಸ್ಟರ್ ಕಾಪಿರೈಟ್.] [ಕ್ರಯ ೧-೮-೦

Q132:24:R234
33F3
~~1968~~

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ......940......
~~1968~~

ಭೂ ಮಿ ಕಾ .

ಲೋಕೇಸ್ಮಿನ್. ,,ನವೀರಶೈವಸದೃಶಮತಮಸ್ತಿ ಜಗತ್ರಯೇ,, ಇತ್ಯಾದಿ ವಾಕ್ಯಪರ್ಯಾಲೋಚನಯಾ ಜ್ಞಾಯತೇಕಿಲ. ಸಮಸ್ತಪಂಡಿತಮಂಡನೈಃ." ನತತ್ಸಮಶ್ಚಾಪ್ಯಧಿಕಶ್ಚದೃಶ್ಯತ ಇತ್ಯಾದಿ ಶ್ರುತ್ಯಾ ಶಿವಸಾದೃಶ್ಯ ಶಿವಾಧಿಕ್ಯದ್ವಯಮಪಿ ಯಥಾ ದೇವತಾಂತರೇಷು ನಿಷಿಧ್ಯತೆ, ತಥೈವ ವೀರಶೈವಮತ ಸಾದೃಶ್ಯಾಧಿಕಂ ನಿಷಿಧ್ಯತೆ ಮತಾಂತರೇಷ್ವಿತಿ.

ಏತಾದೃಶ ವೀರಶೈವಮತಬೋಧಕ ಶಿವಾಗಮ ವೇದಯೋರೈಕ್ಯೇಪಿ ಅನ್ಯಸಮಯವಿರಚಿತೇಶಾವಾಸ್ಯಾದ್ಯುಪನಿಷದ್ಬ್ರಹ್ಮಸೂತ್ರಭಾಷ್ಯಾಧಿಕಂ ಶಿವಾಗಮವಿರುದ್ಧಂ ಮನಸ್ವಾನೋ ದಶೋಪನಿಷದಾಂ. ಬ್ರಹ್ಮಸೂತ್ರಾಣಾಂಚಾನುಕೂಲವ್ಯಾಖ್ಯಾನಂ ಚಿಕೀರ್ಷುರ್ವೀರಶೈವಮತಸ್ಥಾಪನಾಚಾರ್ಯಕೃತ ಪ್ರಸ್ಥಾನತ್ರಯವಾರ್ತಾಯಾಶ್ರೂಯಮಾಣತ್ವೇಪಿ ತದುಪಲಬ್ಧ್ಯಭಾವಾತ್, ರೇಣುಕಾಗಸ್ತ್ಯಸಂವಾದರೂಪ ಸಿದ್ಧಾಂತಶಿಖಾಮಣಿ ಕ್ರಿಯಾಸಾರಾದ್ಯನೇಕಗ್ರಂಥಜಾಲಮವಲಂಬ್ಯ. ಶ್ರೀಮಜ್ಜಗದ್ಗುರು ಪಂಚಾಚಾರ್ಯ ಕೃಪಾಸಾದಿತ ತತ್ಸಿದ್ಧಾಂತರಹಸ್ಯೋಹಮೇತದುದ್ಯಮ ನಿರತೋಭವಂ. ತಸ್ಮಾದೇತದ್ಗ್ರಂಥಾವಲೋಕನೇನ ಕೇಚಿಲ್ಲಿಂಗಧಾರಿಣಃ ಶೈವಾಗಮವಿರುದ್ಧ ಗ್ರಂಥಶ್ರದ್ಧಾಂತ್ಯಕ್ತ್ವಾ ಸ್ವಸಿದ್ಧಾಂತ ಬದ್ಧ ಶ್ರದ್ಧಾ ಭವೇಯುಃ.

ಪ್ರಸ್ತುತಃ ಉಪನಿಷದ್ಬ್ರಹ್ಮಸೂತ್ರಾಧಿಕಂಚ ಶಿವಾಗಮಾನುಕೂಲೇನೈವ ವ್ಯಾಖ್ಯೆಯ ಮನ್ಯಥಾ ವೇದಸಿದ್ಧಾಂತಯೋರೈಕ್ಯಮೇಕಾರ್ಥ ಪ್ರತಿಪಾದನಾತ್॥ ಆಗಮೇಷು ಪದಾರ್ಥಾಯೆ ತೆಏವೆ ವ್ಯಾಸಸೂತ್ರಕೆ॥ ಇತ್ಯಾದ್ಯಾಗಮಾದಿ ವಾಕ್ಯಾನಾಮಪ್ರಾಮಾಣ್ಯಮಾಪದ್ಯೇತ, ತಸ್ಮಾದಿದಾನೀಂ ಶಿವಾಗಮಪ್ರತಿಪಾದಿತ ಷಟ್‍ಸ್ಥಲ ಶಿವಾದ್ವೈತಸಿದ್ಧಾಂತಾನುಸಾರೇಣಮಯಾ ವ್ಯಾಖ್ಯಾತಾಂ ಕೇನೋಪನಿಷದಂ (ಚಿತ್ರದುರ್ಗ ಡಿಸ್ಟ್ರಿಕ್ಟ ಚಳ್ಳಕೆರೆ ತಾಲ್ಲೋಕು ಕಸಬಾ) ಬುಡ್ಡಹಟ್ಟಿ ತುಡಮಾ ಚನ್ನಪ್ಪಾಭಿದಸ್ಯ ಶ್ರೀಮತಸ್ತನೂಜೌಕುರುವತ್ತೆಪ್ಪ. ತಿಪ್ಪಣ್ಣ ನಾಮಾನಾವುಭಾವಪಿ ದೃಷ್ಟ್ವಾ| ತನ್ಮುದ್ರಣಾಯ ಸರ್ವಾಂತರ್ಯಾಮಿ ಶ್ರೀಶಂಕರಪ್ರೇರಣಯಾ ಧನಸಾಹಾಯ್ಯಂ ಕೃತವಂತೌ | ತಸ್ಮಾದೇತತ್ ಶಿವಧರ್ಮಪ್ರಕಾಶಕ ಗ್ರಂಥಮುದ್ರಣ ಪ್ರವರ್ತಕಯೋರೇತಯೋರಿತೋಪ್ಯಧಿಕಾಯುರಾರೋಗ್ಯೈಶ್ವರ್ಯಾಭಿವೃದ್ಧಿಪ್ರದೋಭವತು ಶ್ರೀಸಾಂಬಸದಾಶಿವ ಇತ್ಯಾಶಾಸ್ತೆ ಅಪಿಚ ಏತದ್ಗ್ರಂಥಮುದ್ರಣಾವಸರೆ ಗ್ರಂಥಶೋಧನಾದಿ ಸಾಹಾಯ್ಯಂ ಕೃತವತಃ. ಶಿವಾದ್ವೈತ ವಿದ್ಯಾವಿಭೂಷಣ ವೇ|| ಸಿ|| ಗುರುಶಾಂತಶಾಸ್ತ್ರಿಣಃ ಕೃತಜ್ಞತಾಂ ಸಮರ್ಪಯತಿ

ಗ್ರಂಥಕಾರಃ.

ಪೀಠಿಕೆ.

ಲೋಕದಲ್ಲಿ ಪ್ರಸಿದ್ಧಗಳಾದ ವೈದಿಕ ಮತಗಳು ಅನೇಕವಾಗಿರುವುವು. ಅವುಗಳಲ್ಲಿ "ಸವೀರಶೈವಮತಮಸ್ತಿಜಗತ್ರಯೆ" ಎಂಬ ಶಿವಾಗಮ ವಾಕ್ಯದಿಂದ ವೀರಶೈವಮತವು ಅತ್ಯಂತ ಪವಿತ್ರವಾದುದೆಂದು ಹೇಳಲ್ಪಟ್ಟಿರುವುದು. ವೀರಶೈವಮತಕ್ಕೆ ಶಿವಾಗಮಗಳೇ ಪ್ರಮಾಣಗಳು. ವೇದದಲ್ಲಿರುವ ಅರ್ಥವನ್ನೇ ಶಿವಾಗಮಗಳು ಹೇಳುವುದರಿಂದಲೂ, ವೇದಕರ್ತನಾದ ಮಹೇಶ್ವರನಿಂದಲೇ ಶಿವಾಗಮಗಳು ಬರಿಯಲ್ಪಟ್ಟವುಗಳಾದುದರಿಂದಲೂ ಶಿವಾಗಮಗಳು ವೇದದಂತೆ ಪ್ರಮಾಣಗ್ರಂಥಗಳಾಗಿರುವುವು. "ವೇದಸಿದ್ಧಾಂತಯೋರೈಕ್ಯಮೇಕಾರ್ಥಪ್ರತಿಪಾದನಾತ್" ಎಂದು ಕ್ರಿಯಾಸಾರಾದ್ಯನೇಕ ಗ್ರಂಥಗಳಲ್ಲಿಯೂ ಇದೇ ಅಭಿಪ್ರಾಯವು ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಹೀಗೆ ಶಿವಾಗಮಗಳು ವೇದದರ್ಥವನ್ನು ಅನುಸರಿಸಿಯೇ ಇದ್ದರೂ ಕೆಲ ಆಚಾರ್ಯರು ಶಿವಾಗಮಗಳಿಗೆ ವಿರೋಧವಾಗಿಯೇ ವೇದಾರ್ಥವನ್ನು ಮಾಡಿರುವರು. ಆ ಗ್ರಂಥಗಳು ಶಕ್ತಿವಿಶಿಷ್ಟಾದ್ವೈತಿಗಳಾದ ವೀರಶೈವರಿಗೆ ಸಾಧಕಗಳಲ್ಲವು. ವೀರಶೈವರು ಕ್ರಿಯೆ ಜ್ಞಾನಗಳೆರಡಕ್ಕೂ ಸಮುಸಮುಚ್ಚಯವನ್ನು ಅಂಗೀಕರಿಸುವರು. ಕ್ರಿಯೆಯೆಂದರೆ ಅಷ್ಟಾವರಣ, ಪಂಚಾಚಾರ ಸಂಬಂಧವಾದ ನಿಷ್ಕಾಮ ಕ್ರಿಯೆ, ಸಕಾಮವಾದ ಜ್ಯೋತಿಷ್ಟೋಮಾದಿ ಪಶುಕ್ರಿಯೆಗಳನ್ನೂ, ಲಿಂಗಾಂಗ ಸಾಮರಸ್ಯಕ್ಕೆ ಭಿನ್ನವಾದ ಜ್ಞಾನವನ್ನೂ ಇವರು ಅನುಷ್ಠಿಸುವುದಿಲ್ಲವು. ಈ ರೀತಿಯಾದ ಕ್ರಿಯಾಜ್ಞಾನಗಳು ವೇದಗಳಲ್ಲಿ ಅಸ್ಪಷ್ಟವಾಗಿ ಹೇಳಲ್ಪಟ್ಟಿದ್ದರೂ ಶಿವಾಗಮಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುವು. ಶಿವಾಗಮಗಳು ವೇದಗಳು ಇವೆರಡೂ ವೀರಶೈವರಿಗೆ ಪರಮ ಪ್ರಾಮಾಣ್ಯಗಳು. ಇತ್ತೀಚೆಗೆ ಇವೆರಡಕ್ಕೂ ವಿರೋಧವಿಲ್ಲದಂತೆ ಮತವನ್ನು ನಿರ್ವಾಹಮಾಡುವ ವೀರಶೈವ ವಿದ್ವಾಂಸರ ಸಂಖ್ಯೆಯು ಕಡಿಮೆಯಾದುದರಿಂದ ವೇದಾಗಮಗಳಮೇಲೆ ಪೂರ್ವಿಕರಾದ ಅನೇಕ ವೀರಶೈವಾಚಾರ್ಯರು ಅನೇಕ ಗ್ರಂಥಗಳನ್ನು ಬರೆದಿದ್ದರೂ ಅವುಗಳನ್ನು ನೋಡುವುದಕ್ಕೆ ವಿದ್ವತ್ತಿನ ಸಹಾಯವಿಲ್ಲದೆ ಆ ಗ್ರಂಥಗಳೆಲ್ಲವನ್ನೂ ಬಿಟ್ಟು ಬೇರೆಬೇರೆ ತಮ್ಮತಮ್ಮ ಮನಸ್ಸಿಯಾದ ಮಾರ್ಗದಲ್ಲಿ ಪ್ರವರ್ತಿಸುತ್ತ ಬಂದುದರಿಂದ ಪ್ರಾಚೀನ ಗ್ರಂಥಗಳಲ್ಲಿ ಅನೇಕ ಗ್ರಂಥಗಳು ನಿರ್ನಾಮಗಳಾದುವು. ಸಿದ್ಧಾಂತೋಕ್ತವಾದ ನಡತೆಗಳು ನಮ್ಮನ್ನು ಬಿಟ್ಟು ಅರಣ್ಯವನ್ನು ಪ್ರವೇಶಿಸಿದುವು. ಈ ಕಾರಣಗಳಿಂದ ನಮ್ಮಗಳಲ್ಲನೇಕರು ತಿರುಳಿಲ್ಲದ

ಪರೆಯಂತೆ ಆಕಾರಮಾತ್ರದಿಂದ ವೀರಶೈವರಾಗಿದ್ದಾರೆ. ಇದಸ್ನೆಲ್ಲಾ ನಮ್ಮ ವೇ॥ ಧರ್ಮರತ್ನ ಪಂಡಿತ ಉಮಚಿಗೆ ಮಳಿಮಠದ ಶಂಕರಶಾಸ್ತ್ರಿಗಳು ಪರ್ಯಾಲೋಚಿಸಿ, ಪ್ರಕೃತದಲ್ಲಿ ಉಪಲಬ್ಧಗಳಾದ ಕೆಲವು ಗ್ರಂಥಗಳ ಆಧಾರದಿಂದ ಈಶಾದಿ ದಶೋ ಪನಿಷತ್ತುಗಳಿಗೆ ವೇದಾಗಮಗಳಿಗೆ ವಿರೋಧವಾಗದಂತೆ ವೀರಶೈವ ಸಿದ್ಧಾಂತಾ ನುಸಾರವಾಗಿ ವ್ಯಾಖ್ಯಾನವನ್ನು ಬರಿಯುತ್ತಿರುವುದು ನಮ್ಮ ಮತದ ಸುಕೃತವೆಂ ದೇ ಹೇಳಬೇಕು. ಈ ದಶೋಪನಿಷತ್ತುಗಳಲ್ಲಿ ಪ್ರಥಮೋಪನಿಷತ್ತಿನ ಶಾಂಕರಿ ಯೆಂಬ ವ್ಯಾಖ್ಯಾನವು ಪ್ರಿಂಟಾಗಿ ಮೂರು ನಾಲ್ಕು ವರ್ಷಗಳಾದವು. ಈಗ ಎರಡನೇ ಉಪನಿಷತ್ತಿಗೆ ವ್ಯಾಖ್ಯಾನವನ್ನು ಬರೆದಿರುವರು. ಇಷ್ಟರಲ್ಲೇ ಉಳಿದಿ ರುವ ಉಪನಿಷತ್ತುಗಳಿಗೂ ವ್ಯಾಖ್ಯಾನವನ್ನು ಬರೆಯುವವರಾಗಿದ್ದಾರೆ. ಇದಲ್ಲದೆ ವೀರಶೈವ ಸಿದ್ಧಾಂತ ಸುಧಾಕರವೆಂಬ ಗ್ರಂಥವನ್ನು ಬ್ರಹ್ಮಸೂತ್ರ ಶಾಂಕರೀವೃ ತ್ತಿಯೆಂಬ ಗ್ರಂಥವನ್ನು ಕೂಡಾ ಬರೆದಿರುತಾ್ತರೆ. ಇವೆಲ್ಲವೂ ಮುದ್ರಣವಾಗಿವೆ, ಬ್ರಹ್ಮಸೂತ್ರ ಶಾಂಕರಿವೃತ್ತಿಯು ಮಾತ್ರ ಆಗುತ್ತಲಿದೆ. ಇವರು ಸಕಲ ಸಿದ್ಧಾಂತ ವಿಚಾರ ಪಾಂಡಿತ್ಯ ಭೂಷಿತರಾಗಿರುವುದಲ್ಲದೆ ನಮ್ಮ ಮತಸ್ಥಾಪಕರಾದ ಆಚಾ ರ್ಯರ ಸಿದ್ಧಾಂತಾಶಯವನ್ನು ಪ್ರಕಾಶಪಡಿಸಬೇಕೆಂಬ ಅಭಿಲಾಷೆಯುಳ್ಳವರಾಗಿರು ವರು. ಈ ಕಾಲದಲ್ಲಿ ಇಷ್ಟರವಟ್ಟಿಗೆ ವೈದುಷ್ಯವನ್ನು ಪಡೆದು ಗ್ರಂಥಾವಲೋಕನ ಸಾಮರ್ಥ್ಯದಿಂದ ನೂತನವಾಗಿ ಸಿದ್ಧಾಂತ ಗ್ರಂಥಗಳನ್ನು ರಚಿಸುತ್ತಿರುವದನ್ನು ನೋಡಿದರೆ ನಮ್ಮಾ ಭಾಗ್ಯೋದಯವನ್ನು ಎಷ್ಟು ಹೇಳಿದರೂ ಕಡಿಮೆಯಾಗಿದೆ. ಇದರಂತೆ ಪಂಡಿತ ಜನಗಳೆಲ್ಲರೂ ಉದ್ಯುಕ್ತರಾದರೆ ಆರ್ಜಿಸಿದ ಪಾಂಡಿತ್ಯವು ಸಫ ಲವಾಗುವದು. ಇದಿಲ್ಲದಿದ್ದರೆ ಅರಣ್ಯದಲ್ಲಿ ಬಿದ್ದ ಚಂದ್ರಿಕೆಯಂತೆ ನಿರರ್ಥಕವಾ ಗುವದು. ಮತ್ತು ಈ ವಿದ್ವಾಂಸರಿಂದ ಈಗ ಬರಿಯಲ್ಪಟ್ಟಿರುವ ಈಶ ಕೇನೋಪ ನಿಷದ್ವ್ಯಾಖ್ಯಾನಗಳೆರಡನ್ನು ಸಂಸ್ಕೃತಭಾಷೆಯಲ್ಲಿ ಬರೆದಿರುವುದರಿಂದ ಸರ್ವಜ ನಗಳಿಗೂ ತಿಳಿಯುವದಿಲ್ಲವು. ಆದುದರಿಂದ ಇವರು ಲೋಕೋಪಕಾರಕ್ಕಾಗಿ ಬರೆದ ಗ್ರಂಥಗಳು ಪ್ರಾಯಶಃ ಸರ್ವರಿಗೂ ತಿಳಿದರೆ ಅವರ ಶ್ರಮವು ಸಾರ್ಥಕ ವಾಗುವದೆಂದು ಈ ಗ್ರಂಥಕರ್ತರು ಅಪೇಕ್ಷಿಸಿದ್ದರಿಂದ ನಾನು ಮೊದಲು ಈಶಾ ವಾಸ್ಯೋಪನಿಷಚ್ಛಾಂಕರೀಯೆಂಬ ವ್ಯಾಖ್ಯಾನಕ್ಕೆ ಸಂಕ್ಷೇಪವಾಗಿ ಕನ್ನಡ ಟೀಕೆ ಯನ್ನು ಬರೆದೆನು. ಈಗ ಕೇನೋಪನಿಷಚ್ಛಾಂಕರವ್ಯಾಖ್ಯಾನಕ್ಕೂ ಭಾವದರ್ಪ ಣವೆಂಬ ಕನ್ನಡ ಟೀಕೆಯನ್ನೂ ಬರೆದಿರುವೆನು. ಈ ಗ್ರಂಥಮುದ್ರಣಕ್ಕಾಗಿ ಸಾ ಹಾಯ್ಯಮಾಡಿದ ಚಿತ್ರದುರ್ಗದ ಜಿಲ್ಲಾ ಚೆಳ್ಳಕೆರೆಯಲ್ಲಿರುವ ಮ॥ ರಾ॥ ಬುಡ್ಲಪಟ್ಟಿ

ತುಡವೂ ಚನ್ನಪ್ಪನವರ ಪುತ್ರರಾದ ಕುರುವತ್ತೆಪ್ಪನವರಿಗೂ ಮತ್ತು ಸನ್ನಿವಾಳಡ ಲ್ಲಿರುವ ಮ|| ತಿಪ್ಪಣ್ಣನವರಿಗೂ ಶ್ರೀ ಮದುಮೂರಮಣನು ಸಂಪೂರ್ಣವಾದ ಆಯುಭರ್ಾಗ್ಯಾದಿಗಳನ್ನಿತ್ತು ಕಾಪಾಡಬೇಕಾಗಿ ಪ್ರಾರ್ಥಿಸುತ್ತೇನೆ. ಈ ಕಾಲ ದಲ್ಲಿ ಇಷ್ಟರಮಟ್ಟಿಗೆ ಪ್ರೋತ್ಸಾಹವನ್ನು ಕೊಟ್ಟು ಮತಸೇವೆಯನ್ನು ಮಾಡುವ ದು ವಿರಳವೇ ಸರಿ. ಈ ಉಭಯಮಹಾಶಯರ ಜನ್ಮವೇ ಧನ್ಯವಾದುದು. ತಾನು ಹುಟ್ಟಿದ ಮತದ ಸೇವೆಗಿಲ್ಲದ ದ್ರವ್ಯದಿಂದೇನು ಪ್ರಯೋಜನ ? ಇದರಿಂದ ಸಕಲ ವೀರಶೈವ ಮತಾಭಿಮಾನಿಗಳೆಲ್ಲರೂ ಈಗ ಹೊಸದಾಗಿ ಪ್ರಿಂಟಾಗಿರುವ ಕೇನೋ ಪನಿಷದ್ವ್ಯಾಖ್ಯಾನವನ್ನು ತರಿಸಿಕೊಂಡು ವಿದ್ವಾಂಸರ ಶ್ರಮವನ್ನು ಸಾರ್ಥಕಪ ಡಿಸಬೇಕೆಂದು ಅಶೇಷ ವೀರಶೈವರಿಗೂ ಪ್ರಾರ್ಥಿಸುತ್ತೇನೆ.

ಶಿವಾದ್ವೈತ ವಿದ್ಯಾವಿಭೂಷಣ,

ಸಿರಸಿ ಗುರುಶಾಂತಶಾಸ್ತ್ರೀ.



ಶುದ್ಧಾಶುದ್ಧಪತ್ರಿಕಾ.

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೫	೨೬	ಶರೀರೇಂದ್ರಿಗಳೆಲ್ಲವೂ	ಶರೀರೇಂದ್ರಿಯಗಳೆಲ್ಲವೂ
೧೧	೧೦	ಸಮುರಸ್ಯ	ಸಾಮರಸ್ಯ
೧೧	೨೬	ಕರ್ಮಿಕ	ಕಾರ್ಮಿಕ
೧೧	೨೭	ಮೂರುದುಲಗಳಂ	ಮೂರುಮಲಗಳಂ
೧೬	೫	ಪುತ್ತ	ಪುತ್ರ
೧೫	೨೪	ಉಧ್ವ	ಊರ್ಧ್ವ
೧೬	೩	ತತ್ತತ್ಸಮವಾಯಿ	ತತ್ಸಮವಾಯಿ
೨೬	೪	ವೈಶದ್ಯರ್ಥಂ	ವೈಶದ್ಯಾರ್ಥಂ
೨೬	೬	ಶೃತೇರೇವ	ಶ್ರುತಿರೇವ
೨೮	೭	ತೇನೇಷಿತಾಂ	ಕೇನೇಷಿತಾಂ
೨೯	೬	ತಸ್ಮಲ್ಲಿಂಗಂ	ತಸ್ಮಾಲ್ಲಿಂಗಂ
೩೧	೧೦	ಇಯದಿದಂ	ಯದಿದಂ
೩೧	೨೨	ಪ್ರಸಾದಲಿಂಗರೂಪವಾಗಿ	ಮಹಾಲಿಂಗರೂಪವಾಗಿ
೩೪	೧೨	ನಿಷ್ಕಲಂ | ಪದಂ)	ನಿಷ್ಕಲಂಕಂ) ಪರಂ
೩೪	೨೬	ಸಮರ್ಥನಾದವನು	ಅಸಮರ್ಥನಾದವನು
೪೬	೧೨	ನೊನವೇದೆತಿನ	ನೊವೇದೇತಿನ
೪೭	೭	ಅತೊನಾಹಂ	ಅತೊನ ‹‹ನಾಹಂ
೪೮	೪	ವಿಜ್ಞಾತಯ	ವಿಜ್ಞಾತಮ
೪೦	೬	ಸ್ವತಂತ್ರಶಕ್ತಿಕಂಚಿತ್	ಸ್ವತಂತ್ರಶಕ್ತಿಕಂಕಂಚಿತ್
೫೦	೭	ವಿಜ್ಞಾನತಾಂ	ವಿಜಾನತಾಂ
೫೦	೨	ಏಕಭಾವಃಸ್ವಭಾವಾಃ	ಏಕಭಾವಸ್ವಭಾವಾಃ
೫೨	೨	ನನ್ವಸ್ತೀತ್ಯೆವೋಪಲಬ್ಧವ್ಯಃ ಸತ್ವೇತರಸತ್ವ	ನನು ‹‹ಅಸ್ತೀತ್ಯೇವೊಪಲಬ್ಧವ್ಯ ಇತ್ಯತ್ರ ಸತ್ವೇತರಾ ಸತ್ವ››
೫೫	೫	ಕಾರಣರೂಪೇನಿಶ್ಚಿತಂ	ಕಾರಣರೂಪೇಽನಿಶ್ಚಿತಂ
೫೪	೧	ತಮನವಗಚ್ಛಸಿ	ತ್ವಮ್ ನಾವಗಚ್ಛಸಿ
೬೦	೬	ವಿಚ್ಛಿತ್ತಿ	ವಿಚ್ಛಿನ್ನ
೬೨	೧೦	ಸ್ವತಂತಂ	ಸ್ವತಂತ್ರಃ
೬೬	೮	ವಾದೊಯುಕ್ತಃ	ವಾದೊ ಅಯುಕ್ತ
೬೭	೯	ನಿಷ್ಕಲಶ್ರವೊಭವೇತ್	ನಿಷ್ಕಲಶ್ರವೋಃಭವಾನ್

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೭೧	೪	ದಿಕ್ಷೇಸೇಯಂ	ದೀಕ್ಷಾಸೇಯಂ
೭೧	೭	ಶ್ರುತ್ಯಾಕ್ಷೇಪ	ಶ್ರುತಿ ವ್ಯಾಕ್ಷೇಪ
೭೫	೩	ವೇದನಾದಿಧರ್ಮಸ್ಯ	ವೇದನಾನಾದಿಧರ್ಮಸ್ಯ
೭೯	೨	ತಸ್ಮಾತ್ತಸ್ತತ್ವೇಚ	ತಸ್ಮಾತ್ತತ್ವಸ್ಯತ್ವೇಚ
೭೯	೬	ಪೂರ್ವಾನನುಭತಸ್ಯ	ಪೂರ್ವಾನನುಭೂತಸ್ಯ
೭೯	೮	ಅವಸ್ಯಕತ್ವಾಪರಿ	ಅವಸ್ಯಕತ್ವಾತ್‌ಪರಿ
೮೦	೨	ಏತಸ್ಮಿನ್	ಏಕಸ್ಮಿನ್
೮೦	೯	ಸಗುಣನಿರ್ಗುಣಿಧ್ಯಾನೋಪ ವರ್ಣನಂ	ಸಗುಣನಿರ್ಗುಣಧ್ಯಾನೋಪ ವರ್ಣನಂ
೮೧	೧೧	ಯುಕ್ತಿಯ	ಮುಕ್ತಿಯ
೧೦೪	೬	ಯೋಗಿವನಿರುಪಾದಾನ	ಯೋಗಿವನ್ನಿರುಪಾದಾನ
೧೦೭	೩	ವಿಜ್ಞಾತುಮಶಕಂ	ವಿಜ್ಞಾತುಮಶಕ್ಯಂ
೧೦೭	೧೧	ನೈತದಶಕಂ	ನೈತದಶಕ್ಯಂ
೧೦೯	೬	ನತಸ್ಮಿನ್ನೆವೇತಿ	ಸತಸ್ಮಿನ್ನೇವೇತಿ
೧೧೦	೪	ಉಜ್ವಕಾಕಾರಂ	ಉಜ್ವಲಾಕಾರಂ
೧೧೩	೭	ವಿದ್ಯುಪ್ರಕಾಶೊ	ವಿದ್ಯುತ್ಪ್ರಕಾಶೊ
೧೧೪	೭	ಸಂಬಂಧಂ	ಸಂಬದ್ಧಂ
೧೧೪	೮	ಮನಸಾಂತು	ಮನಸಾತು
೧೧೪	೧೧	ಸರ್ವಾತ್ಮಶಿವೊ	ಸರ್ವಾತ್ಮಕಶಿವೊ
೧೧೫	೩	ಆಧ್ಯಾತ್ಮಿಕೋಪದೆಶಾ ಇತ್ಯರ್ಥಃ	ಆಧ್ಯಾತ್ಮಿಕೋಪದೇಶಇತ್ಯರ್ಥಃ
೧೧೫	೭	ಕಿಯತ್	ಯತ್
೧೧೫	೧೩	ಪ್ರಾರ್ಥನೇಯತ್ವಾತ್	ಪ್ರಾರ್ಥನೀಯತ್ವಾತ್
೧೧೬	೩	ವಿಕ್ಷಯತ್ವಮಿತಿ	ವಿಷಯತ್ವಮಿತಿ
೧೧೬	೧೦	ಹವನಂಕಿಲೋಪಾಸಕಂ	ಹಕಿಲೋಪಾಸಕಂ
೧೧೭	೨೧	ಇಂದ್ರಬ್ರಹ್ಮವಿದ್ಯಾ	ಬ್ರಹ್ಮವಿದ್ಯಾ
೧೧೮	೧೨	ತವೊ	ಶವೊ
೧೧೯	೨	ಸಮುದ್ಭವಾ	ಸಮುದ್ಭವಾಃ
೧೨೦	೨	ಮುತೋ	ಮತೊ





ಸೋಯಮುಜ್ಜಯನೀಪೀಠ ಸಿದ್ಧಲಿಂಗಜಗದ್ಗುರುಃ ।
ಯೋವೀರಶೈವಸಿದ್ಧಾಂತ ಮುದ್ಧರತ್ಯವನೀತಲೇ ॥

ಶ್ರೀಮಜ್ಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

—: O :—

ಓಂ ತತ್ಸತ್.

ಕೇನೋಪನಿಷದಃ ಶಾಂಕರೀವ್ಯಾಖ್ಯಾ.

ಪಂಚಾಚಾರ್ಯಾನ್ ನಮಸ್ಕುರ್ವೇ ಪಂಚಸಿಂಹಾಸನಾಧಿಪಾನ್ |
ಪಂಚಬ್ರಹ್ಮಮಯಾನ್ ಪಂಚ ತತ್ತ್ವಾಧೀಶಾನ್ ಜಗದ್ಗುರೂನ್ ||೧||

—: ಶಿವಾಯ ನಮಃ :—

ಕನ್ನಡ ಭಾವದರ್ಪಣವು.

ಕಂ || ಉದ್ಧತ ದುರ್ಮಾರ್ಗವಂ ಗೆ |
ಲ್ದುದ್ಧರಿಸುತ್ತ ನಿಖಿಲಜನರಂ ವಸುಮತಿಯೊಳ್ ||
ಸಿದ್ಧಿವಡೆದಹುಳ ಸುಮರುಲ |
ಸಿದ್ಧ ಗುರೂತ್ತಮನ ಚರಣ ನಳಿನಕೆ ಮಣಿವೆಂ ||೧||

ಕಂ || ರೇಣುಕ ಮುಖ್ಯಾಚಾರ್ಯರ |
ಮಾಣದೆ ಪೊಗಳುತ್ತೆ ಮೈಮೆಯಂ ಕನ್ನಡದಿಂ ||
ಜಾಣಿಂ ಶಾಂಕರ ಟೀಕೆಗೆ |
ವಾಣೀಕೃಪೆಯಿಂದೆ ರಚಿಪೆ ನರ್ಥಮ ನೊಲವಿಂ ||೨||

ಕಂ || ಮರುಳಾಚಾರ್ಯರ ವಂಶದೊಳ್ |
ಳರದುದಿಸುತೆ ಸಾಹಿತೀಕಲಾ ಬಲದಿಂದಂ ||
ಶಿರಸಿ ಗುರುಶಾಂತ ವಿಬುಧಂ |
ವಿರಚಿಸಿದಂ ನಲಿದು ಭಾವದರ್ಪಣಮ ನಿದಂ ||೩||

ಶ್ರೀ ರೇಣುಕಾದಿ ಯಾವ ಪಂಚಾಚಾರ್ಯರು, ಕರುಣಾಸಮುದ್ರರಾದ, ಅಪಾರ ಮಹಿಮರಾದ, ಶ್ರೀ ಪಂಚಶಿವಮೂರ್ತಿಯ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ—ಎಂಬ ಐದು ಮುಖಗಳಿಂದ ಹುಟ್ಟಿದುದರಿಂ, ಮಣ್ಣಿನಿಂದುಂಟಾದ ಮಡಿಕೆಯು ಮಣ್ಣಿಗಿಂತ ಬೇರೆಯಲ್ಲದಂತೆ ಕಾರಣಗಳಾದ ಸದ್ಯೋಜಾತಾದಿ ಪಂಚಬ್ರಹ್ಮಗಳಿಂದ ಬೇರ್ಪಡದೆ ಪಂಚಬ್ರಹ್ಮಸ್ವರೂಪರಾಗಿಯೇ ಇರುವರೋ, ಯಾವ ಪಂಚಾಚಾರ್ಯರು ಭೂಮಿ,

ಯೋಽಪಿಶ್ರ್ಯಂ ಪ್ರದಧಾತಿ ಮಾರ್ಜನಪರಂ ಯಂ ಸಂಸ್ತುವಂತ್ಯಾಗಮಾಃ |
ಯೋಽನಾಕಾರಿ ಶಿವಂ ಸಮಸ್ತಯಮಿನಾಂ ಯಸ್ಮೈ ಸಮಃ ಪ್ರಾಣಿನಾಂ ||
ಯಸ್ಮಾತ್ಸಂಸ್ಕೃತಿಸಂಹೃತಿ ಸ್ಸಮಭವ ದ್ಯಸ್ಯೇಕ್ಷಣಂ ಮೋಕ್ಷದಂ |
ಯಸ್ಮಿನ್ಸಿದ್ಧ ಮಭೂದ್ಗುರುತ್ವಮಖಿಲಂ ತಂ ದಾರುಕಾರ್ಯಂ ಭಜೇ ||೨||

ಜಲ, ಅಗ್ನಿ, ವಾಯು, ಆಕಾಶ ರೂಪಗಳಾದ ಪಂಚಭೂತಗಳಿಗಧಿಪತಿಗಳಾಗಿರುವರೋ ಯಾವ ಆಚಾರ್ಯರು (ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭೂತಲೆ) ಎಂಬ ಸ್ಕಾಂದೋಕ್ತಿಯಿಂ ಲೋಕೋದ್ಧಾರಕೆ ಮನಗೈಯ್ದು, ರೇಣುಕನೆಂಬಭಿಧಾನದಿಂ ರಂಭಾಪುರಿಯೊಳು ಧರ್ಮಪೀಠವೊಂದನ್ನು, ಮರುಳಸಿದ್ಧಾಚಾರ್ಯನೆಂಬ ನಾಮದಿಂ ಉಜ್ಜಯಿನೀಪುರದೊಳು ಧರ್ಮಪೀಠವೊಂದನ್ನೂ, ಏಕೋರಾಮಾರಾಧ್ಯನೆಂಬಭಿಧಾನದಿಂ ಹಿಮಾಲಯದೊಳು ಧರ್ಮಸಿಂಹಾಸನವೊಂದನ್ನೂ, ಪಂಡಿತಾರಾಧ್ಯನೆಂಬ ನಾಮದಿಂ, ಶ್ರೀ ಶೈಲದೊಳು ಧರ್ಮಪೀಠವೊಂದನ್ನೂ, ವಿಶ್ವಾರಾಧ್ಯರೆಂಬ ನಾಮದಿಂ ಕಾಶೀ ಕ್ಷೇತ್ರದೊಳೊಂದು ಪೀಠವನ್ನೂ ಸ್ಥಾಪಿಸಿ, ಆಯಾಯ ಪೀಠಾಧಿಪತಿಗಳಾಗಿ ತಮ್ಮ ಶಿಷ್ಯಪರಂಪರೆಗೆ, ಶಿವಸಿದ್ಧಾಂತ ಪ್ರಕಾರ ಧರ್ಮೋಪದೇಶಮಂ, ಜ್ಞಾನೋಪದೇಶಮಂ ಮಾಡುತ್ತ, ವೇದಾಗಮೋಕ್ತವಾದ ಅತಿಪವಿತ್ರವಾದೀ ವೀರಶೈವಮತವಂ ಲೋಕದೊಳು ಪ್ರಚಾರಂಗೈಯ್ದು, ಶಿವಭಕ್ತಿಯಂ ಸ್ಥಾಪಿಸಿದರೋ ಅಂತಹ ಶ್ರೀ ರೇಣುಕಾಚಾರ್ಯ, ಮರುಳಾಚಾರ್ಯ, ಏಕೋರಾಮಪಂಡಿತ, ವಿಶ್ವಾರಾಧ್ಯರೆಂಬ ಜಗದ್ಗುರುಗಳ ಅಡಿದಾವರೆಗೆ ಭಕ್ತಿಯಿಂ ನಮಸ್ಕರಿಸುತ್ತೇನೆ. ಎಂದು ಈ ಶಾಂಕರೀಕಾರನು ಶಾಂಕರೀ ಎಂಬ ತನ್ನ ಕೇನೋಪನಿಷತ್ತಿನ ವ್ಯಾಖ್ಯಾನವು ವಿಘ್ನಗಳಿಲ್ಲದೆ ಸಮಾಪ್ತಿಯಂ ಹೊಂದಬೇಕೆಂಬ ಕುತೂಹಲದಿಂದ (ಸಮಾಪ್ತಿಕಾಮೋ ಮಂಗಲ ಮಾಚರೇತ) ಎಂಬನುಮಿತೋಕ್ತಿಯಂ ಅನುಸರಿಸಿ ಶಿಷ್ಟಾಚಾರ ಸಂಪ್ರದಾಯಾನುಸಾರವಾಗಿ ವೀರಶೈವ ಸಿದ್ಧಾಂತ ಸ್ಥಾಪಕರಾದ ಜಗದ್ಗುರು ಪಂಚಾಚಾರ್ಯರನ್ನು ಗ್ರಂಥಾರಂಭದಲ್ಲಿ ನಮಸ್ಕರಿಸಿರುವನು.

ಇನ್ನು ಪಂಚಾಚಾರ್ಯರಲ್ಲಿ ಒಬ್ಬರಾದ ತನ್ನ ಗೋತ್ರದ ಮೂಲಗುರುಗಳನ್ನು ಸ್ತೋತ್ರಮಾಡುವನು. ಅದೆಂತೆಂದೊಡೆ, ಅಪಾರಮಹಿಮಾಸ್ಪದನಾದ ನಿಗಮಾಗಮಂಗಳಿಂ ಪ್ರತಿಪಾದ್ಯನಾದ ಸೃಷ್ಟಿ, ಸ್ಥಿತಿ ಸಂಹಾರ ತಿರೋಧಾನ ಅನುಗ್ರಹಗಳೆಂಬ ಪಂಚಕೃತ್ಯಾಧೀಶ್ವರನಾದ, ಸರ್ವಜ್ಞತ್ವಾದಿ ಆರು ಧರ್ಮಗಳಿಂ ಕೂಡಿದ, ಶ್ರೀಪರಮೇಶ್ವರನ ಪಂಚಸೂತ್ರಮಯವಾದ ಶಾಂತಾಕಾರವಾದ ಲಿಂಗಮೂರ್ತಿಯ ಧಾರಣ ಪೂಜಾದಿಗಳೆನ್ನೆಸಗುವುದರಲ್ಲಿ ಅಭಿರತಿಯಂ ಹುಟ್ಟಿಸಿ, ಭಾರತಭೂಮಿಯನ್ನೆಲ್ಲ ಆಸ್ತಿಕಮಯವನ್ನಾಗಿ ಮಾಡುತ್ತ, ಪರಶಿವನ ಮುಖದಿಂದುದಯಿಸಿರುವುದರಿಂದ ವೇದದಂತೆ ಪರಮ ಪ್ರಮಾಣ ಭೂತಗಳಾದ ಕಾಮಿಕಾದಿ ವಾತುಲಾಂತವಾದ ನಿಖಿಲ ಶಿವಾಗಮಗಳಿಂದ ಶಿವನಿಗೆ ಅಭಿನ್ನನೆಂದು ಸ್ತುತಿಸಲ್ಪಟ್ಟವನಾಗಿ, ಸನಕ ಸನಂದನಾದಿ ನಿಖಿಲ ಮುನಿಪುಂಗವರಿಗೆ ಜ್ಞಾನೋಪದೇಶಂಗೆಯ್ದು, ಸಮಸ್ತ ಋಷಿಗಳಿಗೂ ಶಿವಂಕರವಾದ ಮುಕ್ತಿ ಸಾಮ್ರಾಜ್ಯ ಲಕ್ಷ್ಮಿಯನ್ನು ದಯಪಾಲಿಸಿ, ಭಕ್ತಿಯಿಂದ

ನಿರತಿಶಯಗುರುತ್ವಂ ದಾರುಕಾಚಾರ್ಯಶಿಷ್ಯಂ | ನಿಗಮನಿಚಯನುತ್ಯಂ ಮುಕ್ತಿದಾನಪ್ರಸಕ್ತಂ || ಗುರುಕುಲತಿಲಕಂ ಶ್ರೀ ಸಿದ್ಧಲಿಂಗಂ ಜಗಾಮ | ವಸನನ್ವೃತಸುಗಂಧೋ ವಸ್ತ್ರಮನ್ಯದ್ಯಥೈತಿ ||೩|| ಶಿವಾದ್ವೈತಂ ಸಮುದ್ಧರ್ತುಂ ಯೋಽವತೀರ್ಯ ಮಹೀತಲೇ | ಅಲಂಚಕಾರ ಯೋಗೀಂದ್ರಃ ಪೀಠಮುಜ್ಜಯಿನೀಸ್ಥಿತಂ ||೪|| ಯಸ್ಯದೇವೇ ಪರಾಭಕ್ತಿರ್ಯಥಾದೇವೇ ತಥಾಗುರೌ | ಭಗವತ್ಯಾಶ್ರುತೇರಸ್ಯಾವಿರೋಧೋ ಮಾಸ್ತುಸರ್ವದಾ ||೫|| ಬುದ್ಧ್ಯೈವಂ ವೀರಶೈವಾನಾಂ ಸಮೋ ಯತ್ರ ಪ್ರವರ್ತತೇ | ತಂ ವಂದೇ ಶಿವಯೋಗೀಂದ್ರಂ ಸಿದ್ಧಲಿಂಗಂ ಜಗದ್ಗುರುಂ ||೬||

ನಮುಸ್ಕರಿಸಲ್ಪಟ್ಟ ಜೀವರಾಶಿಗಳೆಲ್ಲವನ್ನೂ ಜನನ ಮರಣಗಳೆಂಬ ಸಂಸಾರ ಸಾಗರದಿಂದ ದಾಟಿಸಿ, ಸ್ವತಸ್ಸಿದ್ಧವಾದ ಗುರುತ್ವವಂ ವಹಿಸಿದ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ದಾರುಕಾಚಾರ್ಯರನ್ನು ಸ್ತೋತ್ರಮಾಡುತ್ತೇನೆ ಎಂದು ಶಾಂಕರೀಕಾರನು ಎರಡನೆಯ ಮಂಗಲಾಚರಣೆಯಲ್ಲಿ ತನ್ನ ಗೋತ್ರದ ಮೂಲ ಗುರುಗಳನ್ನು ಸಾತ್ವಿಕ ಭಕ್ತಿಭಾವದಿಂ ಬರೆವ ಗ್ರಂಥ ಸಮಾಪ್ತಿಯ ಇಚ್ಛೆಯಿಂದ ಪ್ರಬಲತರವಾದ ಮಂಗಲವನ್ನು ಆಚರಿಸಿದ್ದಾನೆ.

ಆಮೇಲೆ ದಾರುಕಾಚಾರ್ಯರಿಂದ ಸ್ಥಾಪಿತವಾದ ಉಜ್ಜಯಿನೀಪುರಿಯೊಳು ಪ್ರಕಾಶಿಸಂಗೊಳಿಪ ಸದ್ಧರ್ಮಪೀಠವನ್ನೇರಿ ಮತೋದ್ಧಾರಕಾರ್ಯದೊಳು ಉಜ್ಜ್ವಗಿಪ ಶ್ರೀ ಸಿದ್ಧಲಿಂಗ ಶಿವಾಚಾರ್ಯರಂ ಶಾಂಕರೀ ಎಂಬ ವ್ಯಾಖ್ಯಾನಕರ್ತನು ಎಂಟು ಶ್ಲೋಕಗಳಿಂದ ಸ್ತುತಿಸುವನು. ಲೋಕದೊಳು ಕಸ್ತೂರೀ ಗಂಧದಿಂದ ಗಮಗಮಿಸುತ್ತಿರುವ ಒಂದು ಬಟ್ಟೆಯ ಮೇಲೆಮೇಲೆ ಇರಿಸಿದ ಗಂಧವಿಲ್ಲದ ಬಟ್ಟೆಗಳಿಗೆ ಕೆಳಗಣ ಬಟ್ಟೆಯಲ್ಲಿರುವ ಕಸ್ತೂರೀ ವಾಸನೆಯು ಮೇಲುಮೇಲಣ ಬಟ್ಟೆಗಳಿಗೆ ಬರುವಂತೆ ಶ್ರೀ ಮೂಲಗುರುಗಳಾದ ದಾರುಕಾಚಾರ್ಯರಲ್ಲಿರುವ ಅಪ್ರತಿಹತವಾದ ಗುರುತ್ವವು ಪರಂಪರೆಯಾಗಿ ನಿಖಿಲ ಸಾತ್ವಿಕ ಗುಣಗಳಿಂದೊಡಗೂಡಿದ ಸಿದ್ಧಲಿಂಗ ಶಿವಾಚಾರ್ಯರನ್ನು ಆಶ್ರಯಿಸಿರುವುದರಿಂದ ಸದ್ಧರ್ಮಪೀಠವಂ ಅಲಂಕರಿಸಿ ವೀರಶೈವಸಿದ್ಧಾಂತವೆಂಬ ಬೆಳದಿಂಗಳನ್ನು ಎಲ್ಲೆಲ್ಲಿಯೂ ಹರಡುತ್ತಿರುವ ಶ್ರೀ ಸಿದ್ಧಲಿಂಗ ಯತಿಗಳಿಗೆ ಶಿರಸಾ ಅಭಿವಂದನೆಯಂ ಮಾಡುವೆನು. ಜ್ಯೋತಿರ್ಲಿಂಗರೂಪವಾದ ಪರಮಾತ್ಮನಲ್ಲಿರಿಸಿರುವಂತೆ ದೈವಸ್ವರೂಪವಂ ಪ್ರಕಾಶಗೊಳಿಸುತ್ತಿರುವ ಗುರುಗಳಲ್ಲಿಯೂ ಭಕ್ತಿಯಂ ಇರಿಸಬೇಕೆಂಬ ಜಾಬಾಲೋಪನಿಷತ್ತಿನಲ್ಲಿ ಮುಕ್ತಕಂಠದಿಂ ಉದ್ಘೋಷಿಸುತ್ತಿರುವ "ಯಥಾದೇವೇ ತಥಾಗುರೌ" ಎಂಬ ವಾಕ್ಯವಂ ಶ್ರುತಿಪಥಕ್ಕೆ ತಂದು ಸಮಸ್ತ ಬ್ರಾಹ್ಮಣಾದಿ ವರ್ಣಾವಲಂಬಿಗಳು ಬ್ರಹ್ಮಚರ್ಯಾದಿ ಆಶ್ರಮಾವಲಂಬಿಗಳೂ ಆದ ನಿಖಿಲ ವೀರಶೈವರು ಆವ ಧರ್ಮಗುರುಗಳಿಗೆ ಅಭಿವಂದನೆಯಂ ಮಾಡುವರೋ ಅಂತಹ ಧರ್ಮಪೀಠಾಧಿಪತಿಗಳಾಗಿಯೂ, ದೈವಸ್ವರೂಪವಂ ಬೋಧಿಸುವವರಾಗಿಯೂ, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಫಲಗಳನ್ನು ಕೊಡುವವರಾಗಿಯೂ ಇರುವ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರಂ ತ್ರಿಕರಣಶುದ್ಧಿಯಿಂ ತ್ರಿಕಾಲದೊಳು ನಮಸ್ಕರಿಸುವೆನು.

ಯತ್ಸ್ಮೃತ್ಯಾ ವಿದಧಾತಿ ಗ್ರಂಥನಿಚಯಂ ಸದ್ಭಕ್ತಿಯುಕ್ತೋಽಜನಃ |
ಯಂ ಲಬ್ಧ್ವಾ ಲಭತೇ ಶ್ರಿಯಂ ನಿರವಧಿಂ ಶೈವೀಂ ಪರಾಂಚಿನ್ಮಯೀಂ ||
ಯತ್ಸಂದರ್ಶನತಃ ಪ್ರಯಾತಿ ವಿಲಯಂ ತಾಪತ್ರಯಂ ದೇಹಿನಾಂ |
ಸೋಽಸ್ತು ಶ್ರೀಗುರುಸಿದ್ಧಲಿಂಗಯತಿರಾಣ್ಮೇ ಶ್ರೇಯಸೇ ಭೂಯಸೇ ||೭||
ಸಿದ್ಧಲಿಂಗ ಶಿವಾಚಾರ್ಯ ಪಾದಪದ್ಮನಖತ್ವಿಷಃ |
ಮದಜ್ಞಾನತಮೋನಾಶಂ ಪರಂ ಕುರ್ವಂತು ಸಂತತಂ ||೮||
ಶಂಕರೋಽಹಂ ಯತಃ ಸ್ತೌಮಿ ಸಿದ್ಧಲಿಂಗಂ ಜಗದ್ಗುರುಂ |
ತಸ್ಮಾತ್ಕೇನೋಪನಿಷದೋ ಜೀಯಾದ್ವ್ಯಾಖ್ಯಾಹಿ ಶಾಂಕರೀ ||೯||
ಗುರೋಃ ಶಿವಸ್ಯಚಾಭೇದಾದ್ಗುರುಃ ಸಾಕ್ಷಾಚ್ಛಿವಾತ್ಮಕಃ |
ತಸ್ಮಾದ್ಗುರುಪ್ರಸಾದೋಽಸ್ತು ಹ್ಯೇತದ್ಗ್ರಂಥಸಮಾಪ್ತಯೇ ||೧೦||

ಸಿದ್ಧಲಿಂಗ ಶಿವಾಚಾರ್ಯರ ಚರಣ ಕಮಲವಂ ಸದ್ಭಕ್ತಿಯುಕ್ತನಾದ ಆವ ವೀರಶೈವನು ತನ್ನ ಹೃದಯದಲ್ಲಿ ಶುದ್ಧಮನೋಭಾವದಿಂ ಸಂತತವಾಗಿ ಸ್ಮರಿಸುತ್ತಿರುವನೋ, ಸಿದ್ಧಲಿಂಗ ಶಿವಾಚಾರ್ಯನ ಸಮೀಪವಂ ಹೊಂದಿ ಆವ ಭಕ್ತನು ಸೇವಾಸಕ್ತನಾಗಿರುವನೋ, ಆವ ಭಕ್ತನು ನಿರ್ಮಲ ಭಕ್ತಿಯಿಂ ಸಂದರ್ಶನವಂ ಮಾಡುವನೋ. ಅಂತಹ ಪವಿತ್ರವಾದ ನಿಜಭಕ್ತರ್ಗೆ ಭವ ತಾಪವಂ ಶಾಂತಗೊಳಿಸಿ ಗ್ರಂಥವಂ ಬರೆಯುವ ಯೋಗ್ಯತೆಯನ್ನೂ, ಮೋಕ್ಷಸಂಪತ್ತನ್ನೂ ಕೊಡುವನಲ್ಲದೆ, ಅವರ ಅನುಗ್ರಹಮಾತ್ರದಿಂದ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ ಗಳೆಂಬ ತಾಪಗಳು ತತ್‌ಕ್ಷಣವೇ ನಾಶವನ್ನು ಹೊಂದುವವು. ಇಂತಪ್ಪ ಶಿವಜ್ಞಾನಿಗಳಾದ ಸಿದ್ಧ ಲಿಂಗ ಶಿವಾಚಾರ್ಯರ ಪಾದಾಗ್ರದಲ್ಲಿ ಹೊಳೆಯುತ್ತಿರುವ ಉಗುರುಗಳ ಕಾಂತಿಗಳು ಶಾಂಕರಿ ಎಂಬ ವ್ಯಾಖ್ಯಾನಕರ್ತೃವಾದ ನನ್ನ ಹೃದಯ ಕುಹರವನ್ನು ಬಹುಕಾಲದಿಂದ ಆಶ್ರಯಮಾಡಿ ಕೊಂಡು ಬಂದಿರುವ ಅಜ್ಞಾನರೂಪವಾದ ಕಗ್ಗತ್ತಲೆಯನ್ನು ಒತ್ತರಿಸಿ, ವೀರಶೈವ ಸಿದ್ಧಾಂತದ ನಿಜತತ್ವದ ಬೆಳಕನ್ನುಂಟುಮಾಡಿ ಕೇನೋಪನಿಷತ್ತಿನ ಶಾಂಕರೀ ಎಂಬ ವ್ಯಾಖ್ಯಾನವಂ ಬರೆ ಯುವುದಕ್ಕೆ ಹೊರಟಿರುವ ಶಂಕರನೆಂಬಭಿಧಾನವಂ ಹೊಂದಿದ ನನ್ನ ಮನೋರಥವು ಸಾಫಲ್ಯಂಗೆ ಯ್ದು ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯರ ಅನುಗ್ರಹವಂ ಪಡೆದು ಪ್ರಾರಂಭ ಮಾಡಿರುವ ಈ ಗ್ರಂಥವು ಸಂಪೂರ್ಣತೆಯಂ ಪೊಂದಿ ಲೋಕದೊಳು ಸೂರ್ಯಚಂದ್ರರಿರುವ ವರಿವಿಗೂ ಸುಪ್ರಸಿ ದ್ಧಿಯಂ ಪಡೆದು ದೇದೀಪ್ಯಮಾನವಾಗಿ ಮೆರೆಯಲಿ ಎಂಬಭಿಲಾಷೆಯಿಂದ ಶಿವನಿಗೂ ಗುರುವಿಗೂ ಅಭೇದಬೋಧಕವಾದ ವಾಕ್ಯವಂ ಸ್ಮರಿಸುತ್ತ ಪರಿಪೂರ್ಣವಾದ ಭಕ್ತಿಯೊಡನೆ ಶ್ರೀಗುರುಪ್ರಸಾ ದವನ್ನು ಪರಮ ಭಕ್ತಿಯಿಂ ಪ್ರಾರ್ಥಿಸುತ್ತೇನೆ ಎಂದು ಶಾಂಕರೀಕಾರನ ಗುರುಸ್ತೋತ್ರಗಳ ಸಂಕ್ಷೇಪವಾದಭಿಪ್ರಾಯವು.

ಮೂ॥ ಆಪ್ಯಾಯಂತು ಮಮಾಂಗಾನಿ ವಾಕ್ಪ್ರಾಣಶ್ಚ
ಕ್ಷುಃ ಶ್ರೋತ್ರಮಥೋ ಬಲಮಿಂದ್ರಿಯಾಣಿ ಚ ।
ಸರ್ವಾಣಿ ಸರ್ವಂ ಬ್ರಹ್ಮೌಪನಿಷದಂ ಮಾಹಂ
ಬ್ರಹ್ಮನಿರಾಕುರ್ಯಾಂ । ಮಾಮಾ ಬ್ರಹ್ಮನಿರಾಕ
ರೋ ದನಿರಾಕರಣ ಮಸ್ತ್ವನಿರಾಕರಣಂಮೇಸ್ತು ।
ತದಾತ್ಮನಿ ನಿರತೇ ಯ ಉಪನಿಷತ್ಸುಧರ್ಮಾಸ್ತೇ
ಮಯಿ ಸಂತು ತೇ ಮಯಿ ಸಂತು । ಓಂ ಶಾಂತಿ
ಶ್ಶಾಂತಿ ಶ್ಶಾಂತಿಃ ॥

ಶಾ॥ ಆಪ್ಯಾಯಂತ್ವಿತಿ | ಮಮದೀಕ್ಷಿತಸ್ಯ, ಅಂಗಾನಿ ಸ್ಥೂಲಸೂಕ್ಷ್ಮ ಕಾರಣ ರೂಪಾಣಿ ತ್ಯಾಗಾಂಗಾದೀನಿ, ವಾಗಿತೀತರ ಕರ್ಮೇಂದ್ರಿಯಾಣಾಂ ಉಪಲಕ್ಷಣಂ | ಚಕ್ಷುಃ ಶ್ರೋತ್ರಮಿತಿ ಇತರಜ್ಞಾನೇಂದ್ರಿಯಾಣಾಂ ಉಪಲಕ್ಷಣಂ | ಪ್ರಾಣಶ್ಚ ಪ್ರಸಿದ್ಧಃ ಪ್ರಾಣವಾಯುಃ || ಬಲಂ ಸ್ವಸ್ವಕಾರಣಶಕ್ತಿಂ ನಿರಾವರಣಚಿದ್ರೂಪಂ "ಬಲಲಾಭೆ ವಿಶ್ವಮಾತ್ಮಸಾತ್ಕರೋತಿ" ಇತಿ ಸೂತ್ರವ್ಯಾಖ್ಯಾನೇ ಚಿತೇರ್ಬಲತ್ವ ವ್ಯಪದೇಶಾತ್, ದೇಹೇಂದ್ರಿಯಾದಿ ಪರಂಪರಾ ಕಾರಣತ್ವಾತ್ ಚಿಚ್ಛಕ್ತೇರೇವ| ಆಪ್ಯಾಯಂತು ಪ್ರಾಪ್ನುವಂತು ಸ ಪುನರ್ಮಾಂ

ದೇಹವೇ ನಾನು. ಚಕ್ಷುರಾದಿ ಇಂದ್ರಿಯಗಳೆಲ್ಲವೂ ನನ್ನವು ಎಂದು ಬಹು ಜನ್ಮಗಳಿಂದ ಅಭಿಮಾನವಂ ಹೊಂದಿರುವುದರಿಂದ ಕಾಮಕ್ರೋಧಾದಿ ದುಷ್ಟಗುಣಗಳಿಂದ ಆವರಿಸಿ ಅನೇಕ ವಿಧವಾದ ಸುಖದುಃಖಗಳಿಂದ ಒಳಗೊಂಡಿರುವ ಸಂಸಾರವೆಂಬ ಹಗ್ಗದಿಂದ ಕಟ್ಟಲ್ಪಟ್ಟವನಾಗಿ ಭವಚಕ್ರದಲ್ಲಿ ಸುತ್ತಿ ಸುತ್ತಿ ಬಳಲಿ ಬಾಯಿಬಿಡುತ್ತಿರುವೆನು. ಈ ಜೀವನನ್ನು ದುಃಖಕ್ಕೀಡು ಮಾಡಿದ ಸಂಸಾರಪಾಶವನ್ನು ಕಿತ್ತುಹಾಕದೆ ನನಗೆಂದಿಗೂ ಬ್ರಹ್ಮಸ್ವರೂಪವುಂಟಾಗುವುದಿಲ್ಲ. ದೇಹದಲ್ಲಿ ನಾನೆಂಬ ಬುದ್ಧಿಯು, ಇಂದ್ರಿಯಗಳಲ್ಲಿ ನನ್ನದೆಂಬ ಬುದ್ಧಿಯು, ನಷ್ಟವಾಗಿ ದೇಹವು ನಾನಲ್ಲ, ಕಣ್ಣು, ಕಿವಿ ಮೊದಲಾದ ಇಂದ್ರಿಯಗಳೂ ನನ್ನವಲ್ಲ, ಹಗ್ಗವನ್ನು ನೋಡಿ ಹಾವೆಂದು ತಿಳಿಯುವಂತೆ, ವ್ಯರ್ಥವಾಗಿ ಭ್ರಮವನ್ನು ಹೊಂದಿರುವೆನು ಈ ಶರೀರೇಂದ್ರಿಯಗಳೆಲ್ಲವೂ (ಶಕ್ತಿಯುಕ್ತ ಜಗತ್ಕೃತ್ಸ್ನಂ) ಎಂಬುಕ್ತಿಯಂತೆ ಶಿವನಲ್ಲಿ ನಿತ್ಯವಾಗಿರುವ ಶಕ್ತಿಯು ಪದಾರ್ಥಗಳಾಗಿರುವುವು. ಲೋಕದೊಳ್ ಕಾರ್ಯವರ್ಗವೆಲ್ಲವೂ ಕಾರಣದಲ್ಲಿಯೇ ಸೇರಬೇಕಾಗಿರುವಂತೆ ಶರೀರೇಂದ್ರಿಗಳೆಲ್ಲವೂ, ಕಾರಣವಾದ ಶಕ್ತಿಯಲ್ಲಿಯೇ ಲಯವಂ ಹೊಂದಲಿ, ಶಕ್ತಿಯಾದರೋ

ಸಂಗಚ್ಛಂತು | ತೇಷಾಂ ಸಂಬಂಧೇ ತತ್ರಾಹಂ ಮಾನಿತಾದ್ಯುತ್ಪತ್ತೇಃ | ಅಹಂ ಮಮೇತ್ಯಭಿಮಾನಸ್ಯಚ ಬಂಧಕತ್ವಾತ್ | ತದಭಿಮಾನಪೂರ್ವಕತ್ವಾತ್ ಷಡೂರ್ಮಿ ಷಡ್ವರ್ಗಾದೇಃ | ತಸ್ಮಾತ್ತತ್ರೈವ ವರ್ತಂತಾಮಿತಿ | ಅಥೊ—ಏತಾದೃಗರ್ಪಣಚಿಂತನಾನಂತರಂ | ಸರ್ವಾಣೀಂದ್ರಿಯಾಣಿ ಸರ್ವಾಣಿ ಚಾಂಗಾನಿ ಸರ್ವಂ ಸರ್ವಾತ್ಮಕಂ | "ಸರ್ವಂಖಲ್ವಿದಂಬ್ರಹ್ಮ" ಇತಿಶ್ರುತೇಃ | ಔಪನಿಷದಂ ಬ್ರಹ್ಮ ಬ್ರಹ್ಮೈವ ಭವಂತಿ | ಚಿಚ್ಛಕ್ತೇಸ್ತತ್ರ ಬ್ರಹ್ಮರೂಪತ್ವಾತ್ | ಅಹಂ ಬ್ರಹ್ಮಲಿಂಗಂ | "ಲಿಂಗಂ ತದ್ಬ್ರಹ್ಮಸಂಜ್ಞಿತಂ" "ತಲ್ಲಿಂಗಂ ಬ್ರಹ್ಮಶಾಶ್ವತಂ" "ಲಿಂಗಂ ಬ್ರಹ್ಮ ಸನಾತನಂ" ಇತ್ಯಾದ್ಯುಕ್ತೇಃ | ಮಾನಿರಾಕುರ್ಯಾಂ ಉತ್ಪಾದವಿನಾಶಶಾಲಿ ಹೇಯ ಪ್ರಪಂಚಮಿವ ನಾಧಿಕ್ಷಿಪೇಯಂ | ಕಿಂತು ಸರ್ವದಾ ತತ್ಪೂಜಾ ಧಾರಣಾದ್ಯವಹಿತಚಿತ್ತಏವಭವಾಮಿ || ಮಾ ಮಾಂ ಬ್ರಹ್ಮ ಮಾನಿರಾಕರೋತ್ | ಸ್ವಪದಾನ್ನವಿಯೋಜಯತು|ಕಿಂತು ಭ್ರಮರ ಕೀಟನ್ಯಾಯೇನ ಸ್ವಗತ ಕಲ್ಯಾಣಗುಣ ಸಾಹಿತ್ಯೇನ ಸ್ವಸ್ವರೂಪಂ ಪ್ರಾಪಯತು | ಮೇ ಮಮ ಅನಿರಾಕರಣಂ ಉತ್ಪಾದ ವಿನಾಶಶಾಲಿತ್ವಾತ್ ಹೇಯಪ್ರಪಂಚಂ ನಿರಾಕರಣಂ ತದ್ಭಿನ್ನಂ ಉಪಾದೇಯಂ ಲಿಂಗಸ್ವರೂಪಂ ಬ್ರಹ್ಮ ಅನಿರಾಕರಣಂ| ಅಸ್ತು ಆತ್ಯಂತಿಕ ಪಾಶವಿಚ್ಛೇದಾಯ ಭವತ್ವಿತ್ಯರ್ಥಃ | ಅತ್ರ ಆವೃತ್ತಿರಾದರಾರ್ಥಾ | ಉಪಲ

ಧರ್ಮಿರೂಪನಾದ ಶಿವನನ್ನು ಬಿಡದಿರಲಿ, ಎಂದು ಕಾರ್ಯಗಳಾದ ಶರೀರೇಂದ್ರಿಯಾದಿ ಪ್ರಪಂಚವು ಶಿವಮಯವಾದುದೇ ಹೊರತು ನನ್ನ ಸಂಬಂಧನಾದುದಲ್ಲ. ಎಂಬ ದೃಢತರವಾದ ಭಾವನೆಯೊಡಗೂಡಿಕಾರಣವಾದ ಶಿವಲಿಂಗರೂಪ ಬ್ರಹ್ಮದಲ್ಲಿ ಲಯಚಿಂತನೆಯು ಮಾಡುವಾತನೇ ಜೀವನ್ಮುಕ್ತನು. ಅವನ ಶರೀರೇಂದ್ರಿಯಾದಿಗಳೆಲ್ಲವೂ ಉಪನಿಷತ್ತಿನಲ್ಲಿ ಹೇಳಲ್ಪಟ್ಟ ಜಗತ್ಕಾರಣನಾದ ಶಿವನ ಸ್ವರೂಪವನ್ನೇ ಹೊಂದುವವು. ಸದ್ಗುರುವಿನ ಅನುಗ್ರಹ ಸಾಮರ್ಥ್ಯದಿಂದ, ಅರ್ಪಣದ ವಿಧಾನವಂ ತಿಳಿದು ತೃಪ್ತಿ, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಷಡ್ವಿಷಯಗಳನ್ನು ಇವುಗಳನ್ನು ಗ್ರಹಿಸುವ ಮನಸ್ಸು, ಕಿವಿ, ಚರ್ಮ, ನೇತ್ರ, ನಾಲಿಗೆ, ಮೂಗು, ಎಂಬ ಆರು ಇಂದ್ರಿಯಗಳನ್ನೂ, ಆಯಾಯ ಇಂದ್ರಿಯ ವೃತ್ತಿಗಳಾದ ಮಹಾಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ, ಗುರುಲಿಂಗ, ಆಚಾರಲಿಂಗ, ಎಂಬ ಆರು ಲಿಂಗಗಳಿಗೆ ಸಮರ್ಪಣಂಗೆಯ್ಯುತ್ತಿರಲು, ಭಿನ್ನಾಕಾರನಾದ ಜ್ಞಾನವು ನಷ್ಟವಾಗಿ ವಿಷಯ ಪ್ರಪಂಚವು, ಆಯಾಯ ಲಿಂಗಾಕಾರವಾಗಿಯೇ ತೋರುವುದು. ಆಯಾಯ ಆಚಾರಾದಿ ಲಿಂಗಗಳನ್ನಾದರೂ ಕ್ರಮದಿಂದ ಮೇಲೆ ಮೇಲಿರುವ ಲಿಂಗಗಳಲ್ಲಿ, ಅರ್ಪಿಸುತ್ತ ಬರಲು, ಈ ಅರ್ಪಣ ಚಿಂತನೆಯು, ದೃಢವಾಗಿ ಎಲ್ಲವೂ ಶಿವಲಿಂಗರೂಪವಾದ ಬ್ರಹ್ಮಸ್ವರೂಪವೇ ಆಗುವುದು. ಬ್ರಹ್ಮವೆಂದರೆ ಲಿಂಗವು. ಈ ಅರ್ಥದಲ್ಲಿ 'ಲಿಂಗಂ ಬ್ರಹ್ಮಸನಾತನಂ" ಮೊದಲಾದ ಅನೇಕ ಪ್ರಮಾಣಗಳು,

ಚ್ಯತೇಚ ಬ್ರಹ್ಮಾಂಡಪುರಾಣೇ ಏತದುಪಬೃಂಹಣ ಚ್ಛಾಯಾವಾಕ್ಯಂ| ಅನಿರಾಕರಣಂಬ್ರಹ್ಮ ಕಾರಣತ್ವಾಚ್ಚಿರಂತನಂ | ಅನಿರಾಕರಣಂ ಮೇಽಸ್ತು ಧಾರಣಂ ದೇಶಿಕೋತ್ತಮ|| ಇತಿ ತದಾತ್ಮನಿ ತಸ್ಮಿನ್ ಪರಬ್ರಹ್ಮಣಿ ಮಹೇಶ್ವರೇ ಯೇ ಧರ್ಮಾಃ ಭಕ್ತಮಾಹೇಶ್ವರರೂಪ ಸರ್ವಜ್ಞತ್ವಾದಿಧರ್ಮಾಃ ಉಪನಿಷತ್ಸು ಕಥಿತಾಃಸಂತಿ | „ಯಃ ಸರ್ವಜ್ಞಃ ಸಸರ್ವವಿತ್" ಆನಂದೋ „ಬ್ರಹ್ಮ" „ಸಏಕೋಽಬ್ರಹ್ಮಣ ಆನಂದಃ" „ಶಾಂತಿಸಮೃದ್ಧಮಮೃತಂ" „ಜ್ಞಾಜ್ಞೌ ದ್ವಾವಜಾವೀಶಾನೀಶೌ" „ವಿದ್ಯಾವಿದ್ಯೇ ಈಶತೇಯಸ್ತು ಸೋಽನ್ಯಃ" „ಸ್ವಾಭಾವಿಕೀಜ್ಞಾನಬಲಕ್ರಿಯಾಚ" „ಏಕಏವರುದ್ರೋ ನದ್ವಿತೀಯಾಯ ತಸ್ಥೇ" „ಯ ಇಮಾನ್‌ಲೋಕಾನೀಶತೇ ಈಶನೀಭಿಃ" „ಸರ್ವಜ್ಞತಾತೃಪ್ತಿರನಾದಿಬೋಧಃ ಸ್ವತಂತ್ರತಾ ನಿತ್ಯಮಲುಪ್ತಶಕ್ತಿಃ | ಅನಂತಶಕ್ತಿಶ್ಚ ವಿಭೋರ್ವಿಧಿಜ್ಞಾಃ ಷಡಾಹುರಂಗಾನಿ ಮಹೇಶ್ವರಸ್ಯ| ಇತ್ಯಾದ್ಯುಪನಿಷತ್ಸು ಶಿವೋಪನಿಷತ್ಸು ಚ || ಏಷಾಮಂಗಾನಾಂ ಭಕ್ತಾದಿಸ್ಥಲರೂಪತ್ವಂ ತು | ಯದ್ಭಕ್ತಸ್ಥಲಮಿತ್ಯಾಹು ಸ್ತತ್ಸರ್ವಜ್ಞತ್ವಮುಚ್ಯತೇ | ಯನ್ಮಾಹೇಶ್ವರಕಂ ನಾಮ ತತ್ತೃಪ್ತಿರಭಿಧೀಯತೇ | ಇತ್ಯಾದಿನೋಕ್ತಂ ಪಾರಮೇಶ್ವರತಂತ್ರೇ | ಏಷಾಮೇವ ಧರ್ಮತ್ವಗುಣತ್ವ ವ್ಯಪದೇಶೇನಾಪಿ ವ್ಯವಹಾರಃ | ಸಾರ್ವಜ್ಞ್ಯಾದಿಗುಣಾನ್ ಪರಾನ್ | ಸ ಏವಾಹಂ ಶೈವ ಧರ್ಮ, ಇತ್ಯಾದ್ಯುಕ್ತೇಶ್ಚ ಸತ್ವಾತ್ || ತತ್ರ ನಿರತೇ ನಿರಂತರಮಾಸಕ್ತೇ

ಟಿ. ನಾನಾದರೂ ಆ ಲಿಂಗವನ್ನು ನಿರಾಕರಿಸದೆ ಯಾವಾಗಲೂ ಅದರ ಪೂಜಾಧಾರಣ ಮೊದಲಾದ ಕರ್ಮಗಳಲ್ಲಿ ಅತ್ಯಂತ ಮನಸ್ಸುಳ್ಳವನಾಗಿರುವೆನು. ಆದುದರಿಂದ ಆ ಲಿಂಗವೂ ಕೂಡ ನನ್ನನ್ನು ತನ್ನ ಸಚ್ಚಿದಾನಂದಸ್ವರೂಪಸ್ಥಾನದಿಂದ ದೂರನನ್ನಾಗಿ ಮಾಡದೆ ಭ್ರಮರ ಕೀಟನ್ಯಾಯದಂತೆ ತನ್ನ ಸರ್ವಜ್ಞತ್ವಾದಿ ಕಲ್ಯಾಣಗುಣಗಳನ್ನು ಕೊಟ್ಟು ತನ್ನಲ್ಲಿ ಸಮರಸ ಮಾಡಿಕೊಳ್ಳಲಿ! ನನ್ನಿಂದಾದರೂ ಆ ಲಿಂಗವು ಉತ್ಪತ್ತಿವಿನಾಶದಿಂದ ಕೂಡಿದ ಪ್ರಪಂಚದಂತೆ ನಿರಾಕರಿಸಲು ಯೋಗ್ಯವಲ್ಲವು. ಆದುದರಿಂದ ಅದು ನನಗೆ ಸ್ವೀಕರಿಸಲು ಯೋಗ್ಯವೇ ಸರಿ. ಆ ಲಿಂಗವು ನನ್ನ ಪಾಶವಿಚ್ಛೇದವನ್ನು ಮಾಡಲಿ. ಮತ್ತು ನನಗೆ ಬಂಧವನ್ನುಂಟುಮಾಡಿದ ಸಮಸ್ತ ಪದಾರ್ಥಗಳನ್ನು ಅರ್ಪಣೆಮಾಡುವುದಲ್ಲದೆ ಯಾವಾಗ ಆತ್ಮಾರ್ಪಣೆಯನ್ನೂ ಮಾಡಿದೆನೋ ಆಗ ನಾನು ಆ ಪರಶಿವನೇ ಆಗುವುದರಿಂದ ಆವನ ಸರ್ವಜ್ಞತ್ವಾದಿಗುಣಗಳು ನನ್ನಲ್ಲಿ ಉಂಟಾಗಲಿ ಎಂದು ದೀಕ್ಷಿತನು ಪ್ರಾರ್ಥಿಸುವನು.

ಆ ಪರಶಿವ ಬ್ರಹ್ಮವು ನಿರ್ಗುಣವಾದುದರಿಂ ಅವರಲ್ಲಿ ಸರ್ವಜ್ಞತ್ವಾದಿ ಗುಣಗಳೆಲ್ಲಿಂದ ಬರಬೇಕು; ಅಂದರೆ ಬ್ರಹ್ಮವು ಹೇಯಗುಣಗಳಿಲ್ಲದ್ದಾದರೂ, ಸರ್ವಜ್ಞತ್ವಾದಿ ಕಲ್ಯಾಣಗು

ಮಯಿ ತೇ ಧರ್ಮಾಃ ಪೂರ್ವೋಕ್ತಾಃ ಸಂತು | ಶಾಂತಿಃ ಶಾಂತಿಃ ಶಾಂತಿಃ ಇತಿ ತ್ರಿರುಚ್ಚಾರಸ್ತ್ರಿಮಲನಾಶಾರ್ಥಃ || ಅಥವೈತನ್ಮಂತ್ರ ಉಪಬೃಂಹಣಾನುಸಾರೇಣೇತ್ಥಂ ವ್ಯಾಖ್ಯೇಯಃ | ಸ್ಥೂಲಸೂಕ್ಷ್ಮಕಾರಣ ಶರೀರಕರ್ಮಜ್ಞಾನೇಂದ್ರಿಯಾದೌ ತತ್ಸರ್ವಾತ್ಮಕ ಪರಶಿವಲಿಂಗಮುಪನಿಷತ್ಪ್ರತಿಪಾದ್ಯಂ | ಯದ್ವರ್ತತೇ | ತದ್ಭಾವಾದಿ ಲಿಂಗರೂಪೇಣ ಸ್ಥಿತ್ವಾ ಸ್ಥೂಲಶರೀರೆ ಇಷ್ಟಲಿಂಗರೂಪೇಣ ಸೂಕ್ಷ್ಮಶರೀರೆ ಪ್ರಾಣಲಿಂಗರೂಪೇಣ ಕಾರಣಶರೀರೆ ಭಾವಲಿಂಗರೂಪೇಣ ಕರ್ಮಜ್ಞಾನೇಂದ್ರಿಯೇಷು ಆಚಾರಾದಿ ಲಿಂಗರೂಪೇಣ ಸ್ಥಿತ್ವಾ ತನ್ಮಲನಾಶಂ ಕುರುತೆ | ತಲ್ಲಿಂಗಮೇವ ತಾನಿಸರ್ವಾಣಿ ಶರೀರೇಂದ್ರಿಯಾಣಿ ಪ್ರಾಪ್ನುವಂತು | ನತತ್ಪೃಥಗ್ಭೂತಾನಿ ಭವಂತು | ಅಹಂತು ತಲ್ಲಿಂಗಂ ನತ್ಯಜಾಮಿ ಕಿಂತು ತತ್ಪೂಜಾ ಧ್ಯಾನ ಧಾರಣ ಶೀಲ ಏವಭವಾಮಿ. ತದಪಿಲಿಂಗಂ, ಮಾಂ ನತ್ಯಜೇತ್ | ಮಮ ಆತ್ಮನಿ ದೇಹೇ ತಲ್ಲಿಂಗಂ ನಿರಂತರಮಸ್ತು | ಸಮ್ಯಗನಿರಾಕರಣಮಸ್ತು—ಉಪನಿಷತ್ಸು ಪ್ರತಿಪಾದಿತ ಭಸ್ಮರುದ್ರಾಕ್ಷಾದಿಧರ್ಮಾಶ್ಚ ಮಯಿಸಂತು | ತಥಾಚೋಪಬೃಂಹಣಾನಿ || ಸರ್ವಂ ಸರ್ವಾತ್ಮಕಂ ಬ್ರಹ್ಮಲಿಂಗರೂಪಂ ಸನಾತನಂ | ತದೌಪನಿಷದಂ ದಿವ್ಯಂ ಮಮಾಂಗಾನಿ ವಿಶೇಷತಃ || ಸ್ಥೂಲಸೂಕ್ಷ್ಮಾದಿ ದೇಹಾನಿ ಜ್ಞಾನಕರ್ಮೇಂದ್ರಿಯಾಣಿಚ | ಭಾವಾದಿಲಿಂಗ

ಣಗಳುಳ್ಳದ್ದಾಗಿರುವುದು. ಈ ವಿಷಯದಲ್ಲಿ ಬ್ರಹ್ಮೋಪನಿಷತ್ತು ಶಿವೋಪನಿಷತ್ತು ಮೊದಲಾದ ಅನೇಕ ಪ್ರಮಾಣಗಳಿರುವವು. ಅಲ್ಲದೆ ಆ ಗುಣಗಳು ಶಿವನಲ್ಲಿ ಯುಕ್ತಿಯಿಂದಲೂ ಸಿದ್ಧಗಳಾಗುವವು. ಹ್ಯಾಗೆಂದರೆ ಕುಂಬಾರನು ತಾನು ಮಡಿಕೆಯನ್ನು ಮಾಡಬೇಕಾದರೆ ಆ ಮಡಿಕೆಯ ಜ್ಞಾನವಿಲ್ಲದಿದ್ದರೆ ಅದನ್ನು ಮಾಡಲಾರನು. ಆದುದರಿಂದ ಆ ಮಡಿಕೆಯ ಜ್ಞಾನವು ಅವನಲ್ಲಿ ಮೊದಲೇ ಸಿದ್ಧವಾಗಿರುವಂತೆ ಪರಶಿವ ಬ್ರಹ್ಮವು ಸರ್ವಜಗತ್ತನ್ನು ಸೃಷ್ಟಿಸಿರುವಕಾರಣ ಶಿವನಿಗೆ ಸರ್ವ ಜಗತ್ತಿನ ಜ್ಞಾನವು (ಸರ್ವಜ್ಞತ್ವವು) ಇರಬೇಕಲ್ಲವೆ? ಈ ಸರ್ವಜ್ಞತ್ವ ಶಕ್ತಿಯಿಂದ ಶಿವನು ಜಗತ್ತಿಗೆ ನಿಮಿತ್ತಕಾರಣನಾಗುವನು. ಮತ್ತು ಪರಶಿವನು ಸಂಪೂರ್ಣ ನಿತ್ಯತೃಪ್ತಿಯುಳ್ಳವನಾಗದಿದ್ದರೆ ಪ್ರಾಣಿಗಳಲ್ಲಿ ಸ್ವಲ್ಪವಾದ ಆನಂದವೂ ಕೂಡ ಕಾಣಲಾರದು. ಆದುದರಿಂದ ಶಿವನು ಸಂಪೂರ್ಣ ನಿತ್ಯತೃಪ್ತಿಯುಳ್ಳವನೇ ಆಗಿರಬೇಕು. ಅನಾದಿಸಿದ್ಧವಾದ ಸ್ವರೂಪಾನಂದವ. ಅನುಭವವೆಂಬ ಭೋಗಕ್ಕೆ ಕಾರಣವಾದ ಅಂತಃಕರಣವೆಂಬ ಚಿಚ್ಛಕ್ತಿಯು (ಬೋಧಶಕ್ತಿಯು) ಆ ಬ್ರಹ್ಮಕ್ಕೆ ಇಲ್ಲದಿದ್ದರೆ ಜಡತ್ವವು ಬರಬೇಕಾಗುವುದು. ಸ್ಫಟಿಕಶಿಲೆಯು ತನಗೆ ಸ್ವರೂಪಾನುಭವವು ಇಲ್ಲದಿರುವುದರಿಂದ ಜಡವಾಗಿರುವಂತೆ ಆ ಬ್ರಹ್ಮದಲ್ಲಿ ಸಚ್ಚಿದಾನಂದ ಸ್ವರೂಪಗಳಿದ್ದರೂ ವ್ಯರ್ಥಗಳಾಗಬೇಕಾದೀತು. ಹೇಗೆಂದರೆ ಕುರುಡನಿಗೆ ತನ್ನ ಸೌಂದರ್ಯ

ರೂಪೇಣ ಸ್ಥಿತ್ವಾ ಸರ್ವತ್ರಸರ್ವದಾ ‖ ಆಪ್ಯಾಯಯಂತು ಸತತಂ ಪರಮಾನಂದಸಂಪದಾ| ತದಹಂಮಾನಿರಾಕುರ್ಯಾಂ ನತ್ಯಜಾಮಿ ಕದಾಚನ ‖ ಮಾ ಮಾಂ ಬ್ರಹ್ಮ ಸದಾಲಿಂಗಂ ನತ್ಯಜೆನ್ಮಾ ನಿರಾಕರೋತ್ | ಮೆ ಮಮಾತ್ಮನಿ ದೇಹೇತು

ಸ್ವರೂಪವು ವ್ಯರ್ಥವಲ್ಲವೆ? ರಾಜನಿಗೆ ವಿಷಯಸಾಮ್ರಾಜ್ಯ ಸುಖವು ಅವನಿಗೋಮ ಅಂತಃಕರಣವಿಲ್ಲದಿದ್ದರೆ ವ್ಯರ್ಥವಲ್ಲವೆ? ನಿದ್ರಾಕಾಲದಲ್ಲಿ ಅವನಿಗೆ ಯಾವುದೂ ತೋರುವುದಿಲ್ಲವಷ್ಟೆ? ಅಂದರೆ ನಿದ್ರಾಕಾಲದಲ್ಲಿ ವಿಷಯಗಳಿಂದ ಅವನಿಗೆ ಯಾವ ಸುಖವೂ ತೋರದಿರುವುದರಿಂದ ಆಕಾಲದಲ್ಲಿ ಅವನಿಗೆ ಎಷ್ಟು ಧನಕನಕಾದಿ ವಿಷಯಗಳಿದ್ದರೂ ಅವು ವ್ಯರ್ಥಗಳಲ್ಲವೆ? ಅದರಂತೆ ಪರಶಿವ, ಬ್ರಹ್ಮಕ್ಕೆ ಆನಂದಭೋಗೆ ಸಾಧಕವಾದ ಚಿಚ್ಛಕ್ತಿಯೆಂಬ ಬೋಧವು ಅನಾದಿ ಸಿದ್ಧವಿರದಿದ್ದರೆ ಅದಕ್ಕೆ ತನ್ನ ಚಿದಾನಂದಸ್ವರೂಪಗಳಿಂದ ಪ್ರಯೋಜನವೇನು? ಮತ್ತು ಸಂಸಾರಕ್ಕೆ ನಿವರ್ತಕವಾದ ಅಬೋಧವು ಶಿವನಲ್ಲಿ ಅನಾದಿಯಿಂದ ಇರದಿದ್ದರೆ ಆ ಪರಶಿವನಲ್ಲಿ ಒಮ್ಮೊಮ್ಮೆ ಬಂಧವನ್ನ ಹೇಳಬೇಕಾದೀತು ಈ ವಿಷಯದ ವಿಸ್ತಾರವಾದ ವಿಚಾರವನ್ನು ಶಾಂಕರಿಕಾರನು ಮುಂದಿನ ಹನ್ನೆರಡನೇ ಮಂತ್ರದ ವ್ಯಾಖ್ಯಾನದಲ್ಲಿ ಮಾಡಿರುವನು. ಚಂದ್ರ, ಸೂರ್ಯ, ನಕ್ಷತ್ರ, ಸಮುದ್ರ, ವಾಯು, ಮೊದಲಾದುವುಗಳು ತಮ್ಮ ತಮ್ಮ ನಿಯಮವನ್ನು ಬಿಡದೆ ಪ್ರವರ್ತಿಸುವುದನ್ನು ನೋಡಿದರೆ ಇವೆಲ್ಲವುಗಳೂ ಪರತಂತ್ರಗಳು ಇವೆಲ್ಲಕ್ಕೂ ಒಬ್ಬ ಸ್ವತಂತ್ರ ನಿಯಾಮಕ ನಿರಬೇಕೆಂದು ಗೊತ್ತಾಗುವುದಷ್ಟೆ? ಆ ನಿಯಾಮಕನಿರದಿದ್ದರೆ ಅವು ನಿಯಮದಿಂದ ನಡೆಯಲಾರವು. ಆದುದರಿಂದ ನಿಯಾಮಕನಾದ ಶಿವನಲ್ಲಿ ಸರ್ವಸ್ವತಂತ್ರತ್ವವನ್ನು ಸ್ವೀಕರಿಸತಕ್ಕದ್ದು. ಮತ್ತು ಗ್ರಾಮ್ಯ ಪ್ರಜರು ಆ ಹಳ್ಳಿಯ ಗೌಡನಿಗೆ ಪರತಂತ್ರರು. ಅವನು ಅವರಿಗೆ ಸ್ವತಂತ್ರನು. ಆ ಗೌಡನು ಮತ್ತೊಬ್ಬ ಹೆಚ್ಚಿನ ಅಧಿಕಾರಿಗೆ ಪರತಂತ್ರನು. ಆ ಹೆಚ್ಚಿನ ಅಧಿಕಾರಿಯು ರಾಜನಿಗೆ ಪರತಂತ್ರನು. ರಾಜನು. ಸ್ವತಂತ್ರನು. ರಾಜನು ಜನನಮರಣಗಳಿಗೂ ರೋಗಾದಿಗಳಿಗೂ ಪರತಂತ್ರನು. ಈ ಪ್ರಕಾರವಾಗಿ ಶಿವನಿಗೆ ಅನ್ಯಗಳಾದ ವಸ್ತುಗಳಲ್ಲಿ ಪರತಂತ್ರತ್ವ ಸ್ವತಂತ್ರತ್ವಗಳು ಪರಸ್ಪರ ಸಾಪೇಕ್ಷಿಕಗಳಾಗಿವೆ. ಆದುದರಿಂದ ಎಲ್ಲಿಯಾದರೊಂದು ಕಡೆಯಲ್ಲಿ ನಿರಪೇಕ್ಷಿಕ ಸ್ವತಂತ್ರತ್ವವನ್ನು ಹೇಳಲೇಬೇಕು ಇಲ್ಲದಿದ್ದರೆ ಪರತಂತ್ರತ್ವ ಸ್ವತಂತ್ರತ್ವ ಪ್ರವಾಹಕ್ಕೆ ಅನವಸ್ಥೆಯುಂಟಾದೀತು. ಆದ್ದರಿಂದ ನಿರತಿಶಯ ಸ್ವತಂತ್ರತ್ವವು ಎಲ್ಲಿದೆಯೋ ಅವನಿಗೇನೇ ಶಿವನೆಂದು ಹೇಳುತ್ತೇವೆ. ಚೇತನಾಚೇತನ ಪ್ರಪಂಚವನ್ನು ನೋಡಿದರೆ ಶಿವನಲ್ಲಿ ಈ ಪ್ರಪಂಚವನ್ನುಂಟುಮಾಡುವ ಅಸಾಧಾರಣ ಶಕ್ತಿಯನ್ನು ಸ್ವೀಕರಿಸಬೇಕಲ್ಲವೆ? ಆ ಸಾಮರ್ಥ್ಯವೇ ಅವನಲ್ಲಿಲ್ಲದಿದ್ದರೆ. ಈ ಪ್ರಪಂಚವನ್ನು ರಚಿಸಲಾರನು. ಆದ್ದರಿಂದ ಆಶಕ್ತಿಯು ಅವನಲ್ಲಿ ಲೋಪಹೊಂದುತ್ತದೆಂದರೆ ಆ ಕಾಲದಲ್ಲಿ ಶಕ್ತಿಯಿಲ್ಲದ ಹೆಣದಂತೆ ಅವನು ಯಾವ ಸೃಷ್ಟಿಯನ್ನೂ ಮಾಡಲಾರನು. ಆದುದರಿಂದ ಆಶಕ್ತಿಯು ಅವನಲ್ಲಿ ಅಲುಪ್ತವಾದದ್ದು. ಅನಂತ ಶಕ್ತಿಯೆಂದರೆ ಅಪರಿಚ್ಛಿನ್ನಶಕ್ತಿಯು, ನಮ್ಮ ಶಕ್ತಿಯೂ ಪರಿಚ್ಛಿನ್ನವಾಗಿರುವುದರಿಂದ ಒಂದೊಂದೇ ಕಾಲದಲ್ಲಿ ಒಂದೊಂದೇ ದೇಶ

ತದ್ಬ್ರಹ್ಮಾಸ್ತು ನಿರಂತರಂ ‖ ಅನಿರಾಕರಣಂ ಸಮ್ಯಗನಿರಾಕರಣಂಭವೇತ್ | ಉಪನಿಷತ್ಸುಚ ಯೇ ಧರ್ಮಾ ಭಸ್ಮರುದ್ರಾಕ್ಷಸಂಜ್ಞಕಾಃ ‖ ಮಯಿ ತೇ ಸಂತುತೇ ನಿತ್ಯಂ ಸಂತು ತೇ ಮಯಿಸರ್ವದಾ ‖ ಇತಿ ‖

ದಲ್ಲಿ ಅಷ್ಟಷ್ಟೇ ಕಾರ್ಯಗಳನ್ನು ಮಾಡುತ್ತೇವೆ. ಶಿವನಿಗಾದರೂ ಕಾಲ, ದೇಶ, ವಸ್ತುಗಳೆಂಬ ಪರಿಚ್ಛೇದಗಳಿಲ್ಲದಿರುವುದರಿಂದ ಅವನು ತನ್ನ ಶಕ್ತಿಯಿಂದ ಎಲ್ಲ ಕಾಲದಲ್ಲಿಯೂ. ಎಲ್ಲ ದೇಶ ದಲ್ಲಿಯೂ ಕಾರ್ಯಗಳನು ಮಾಡಬಲ್ಲನು. ಆದುದರಿಂದ ಅವನಶಕ್ತಿಯೂಕೂಡ ಅಪರಿಚ್ಛಿನ್ನ ವಾದದ್ದೇಸರಿ. ಈ ಪ್ರಕಾರಗಳಾದ ಸರ್ವಜ್ಞತ್ವಾದಿ ಆರುಶಿವನಶಕ್ತಿಗಳು ನನ್ನಲ್ಲಿ ಸೇರಲಿಎಂದು ದೀಕ್ಷಿತನು ಪ್ರಾರ್ಥಿಸಿರುವನು. ಈ ರೀತಿಯಾಗಿ ಶಾಂಕರೀಕಾರನು ಈ ಶಾಂತಿಮಂತ್ರಕ್ಕೆ ವ್ಯಾಖ್ಯಾನ ಮಾಡಿ ಮತ್ತೆ ಉಪಬೃಂಹಣ ವಾಕ್ಯಗಳಿಗನುಸಾರವಾಗಿ ಮತ್ತೊಂದುತರದ ವ್ಯಾಖ್ಯಾನವನ್ನು ಈ ಮಂತ್ರಕ್ಕೆ ಮಾಡಿದ್ದಾನೆ. ಹೇಗೆಂದರೆ ಗುರುಮೂರ್ತಿಯು ತನ್ನ ಸ್ಥೂಲಾದಿ ಶರೀರಗಳಲ್ಲಿ ಇಷ್ಟಾದಿ ಲಿಂಗಗಳ ಯೋಜನೆಯನ್ನು ಮಾಡಿದನಂತರ ದೀಕ್ಷಿತನು ತನ್ನ ಸ್ಥೂಲ ಶರೀರದ ಮೇಲಿನ ಪ್ರೀತಿಯನ್ನು ಬಿಟ್ಟು ಇಷ್ಟಲಿಂಗವೇ ನನ್ನ ದೇಹವೆಂದು ಅಲ್ಲಿ ಅತಿಪ್ರೀತಿ ಯನ್ನಿಟ್ಟು ಸ್ಥೂಲ ಶರೀರಕ್ಕೆ ಸಂಬಂಧ ಪಟ್ಟ ಸರ್ವ ಪದಾರ್ಥಗಳನ್ನು ಆಲಿಂಗಕ್ಕೆ ಭಾವದಿಂ ದಅರ್ಪಿಸಿದವನಾಗಿಯೂ ಇದರಂತೆಯೇ ಸೂಕ್ಷ್ಮ ಶರೀರ, ಕಾರಣ ಶರೀರಗಳ ಅಭಿಮಾನವನ್ನು ಬಿಟ್ಟು ಅವುಗಳ ಮೇಲಿನಪ್ರೀತಿಯನ್ನು ಪ್ರಾಣ ಭಾವಲಿಂಗಗಳಲ್ಲಿಟ್ಟು ನಿತ್ಯದಲ್ಲಿಯೂ ಸ್ಥೂಲ ಶರೀರದ ನೆನವುಬಂದಾಗ ಉದಾಶೀನ ಬುದ್ಧಿಯನ್ನು ಅಭ್ಯಾಸಮಾಡುತ್ತಲೂ ಸೂಕ್ಷ್ಮ, ಕಾರಣಗಳೆಂಬ ಶರೀರಗಳ ಸ್ಮರಣೆಯುಂಟಾದಾಗ ಆ ಶರೀರಗಳಲ್ಲಿಯೂ ಉದಾಸೀನ ಬುದ್ಧಿಯನ್ನು ಅಭ್ಯಾಸಮಾಡುತ್ತ, ಇಷ್ಟ, ಪ್ರಾಣ, ಭಾವ, ರೂಪಗಳಾದ ಲಿಂಗ, ಜಂಗಮ, ಗುರುಗಳೇ ನನ್ನ ಸ್ಥೂಲಾದಿ ಶರೀರಗಳೆಂದು ಭಾವಿಸಿ ಸ್ಥೂಲಾದಿ ಅಂಗಗಳಿಗೂ ಇಷ್ಟಾದಿ ಲಿಂಗಗಳಲ್ಲಿ ಐಕ್ಯಂ ಗೊಳಿಸಿ ಅಂಗಗಳು ಇಷ್ಟಾದಿ ಲಿಂಗರೂಪದಿಂದಲೇ ಇರುತ್ತವೆ. ಎಂದು ತಿಳಿದಾಚರಿಸುವ ವೀರ ಶೈವನ ಶರೀರಗಳೂ ಇಂದ್ರಿಯಗಳೂ ಪರಬ್ರಹ್ಮಲಿಂಗಸ್ವರೂಪಗಳೇ ಆಗುವುವು. ಅಂದರೆ ಅವು ಗಳ ಬಿನ್ನ ಭಿನ್ನಜ್ಞಾನವಡಗಿ ಲಿಂಗಜ್ಞಾನವೊಂದೇ ಉಳಿಯುವುದೆಂದು ತಾತ್ಪರ್ಯವು. ಈ ಪ್ರಕಾರ ಅಷ್ಟಾವರಣವನ್ನೇ ತನ್ನಂಗವನ್ನಾಗಿ ಭಾವಿಸುವವನೇ ವೀರಶೈವನೆಂದು ಸಾರುವುದರಿಂದ ನಾನು ಆ ಲಿಂಗವನ್ನು ಎಂದೆಂದಿಗೂ ನಿರಾಕರಿಸುವುದಿಲ್ಲ. ಲಿಂಗವು ನನ್ನನ್ನು ಯಾವಾಗಲೂ ನಿರಾಕರಿಸದಿರಲಿ, ಸರ್ವಶಕ್ತವಾದ ಪರಶಿವಲಿಂಗದೊಳ ಅತ್ಯಂತ ಆಸಕ್ತನಾದ ನನ್ನಲ್ಲಿ ವೇದೋಕ್ತಗಳಾದ ಭಸ್ಮರುದ್ರಾಕ್ಷಾದಿ ಧಾರಣ ರೂಪ ಧರ್ಮಗಳು ಯದಬಿಡದಿರಲಿ ಎಂದು ಪ್ರಾರ್ಥಿಸುತ್ತಾನೆ. ವೇದ ಮಂತ್ರಗಳಿಗೆ ಹಾಗೋ ಹೀಗೊ ಎಂದು ಸಂಶಯ ಹುಟ್ಟಲಾಗಿ, ಇತಿಹಾಸ ಪುರಾಣಗಳಿಂದ ಅದರ ಅರ್ಥವನ್ನು ನಿಶ್ಚಯಿಸ ಬೇಕಾದದ್ದೆಂದು ಬಾರತೋಕ್ತಿ ಇರುವುದರಿಂದ, ಈ ಅರ್ಥವನ್ನೇ ಪ್ರತಿಪಾದಿಸಿರುವ ಅನೇಕ ಪುರಾಣ ಇತಿಹಾಸೋಕ್ತಿಗಳು ಇರುವಂತೆ, 'ಇನ್ನಾವ ಅರ್ಥವನ್ನೂ ತೋರಿಸುವ ಉಪಬ್ರಹ್ಮಣವಾಕ್ಯಗಳಿಲ್ಲದುದರಿಂದ

ಅಥೇದಾನಿಮನೇಕ ಜನ್ಮಾನುಷ್ಠಿತ ಶ್ರೌತಸ್ಮಾರ್ತಕರ್ಮ ಪರಿಪಕ್ವ ಚಿತ್ತ ಪ್ರರೂಢ ಭಕ್ತ್ಯುದ್ರೇಕಾ ಪರಪರ್ಯಾಯ ಶಕ್ತಿಪಾತ ಚಿಹ್ನಹೇತುಕಯಾ, ನಂದ್ಯಾದಿ ಗಣನಾಯಕ ಗೋತ್ರಸಂಜಾತ ಪ್ರಥಮೋತ್ಪತ್ತಿ ಮಾತ್ರ ಪ್ರಾಪ್ತ ವೀರಮಹೇಶ್ವರತ್ವಯುಕ್ತ ಷಟ್‌ಕರ್ಮಾಧಿಕಾರ ಪ್ರಯೋಜಕ ವೀರಮಹೇಶ್ವರ ದೀಕ್ಷಾಸಂಪನ್ನ ಗುರುಕೃತದೀಕ್ಷಯಾ, ಸಂಪಾದಿತಲಿಂಗಾಂಗಸಾಮರಸ್ಯಾಂಕುರಸ್ಯ ಶಿಷ್ಯಸ್ಯ, ಮೋಕ್ಷಫಲಕಾರಿಣೀಭೂತಾ ಬ್ರಹ್ಮಜಿಜ್ಞಾಸಾ ಕೇನೇಷಿತಮಿತ್ಯಾದಿನಾ ನಿರ್ದಿಶ್ಯತೆ. ತತ್ರಾಪಿಸುಖಪ್ರತಿಪತ್ತ್ಯರ್ಥಂ ಶಿಷ್ಯಗುರುಪ್ರಶ್ನ ಪ್ರತಿವಚನಂ ತತ್ರಾದೌಯಥೈಕ ಏವರಾಜಾ ಪ್ರಜಾಸಾಮಾನ್ಯಪ್ರೇರಕಃ ತತ್ತದ್ಗ್ರಾಮ್ಯ ಜನಪ್ರೇರಕಸ್ತ್ವಸ್ಯ ಸ್ತನ್ನಿಯಮಿತಾಧಿಕಾರೀ, ತಥಾ ಪ್ರಶ್ನವಾಕ್ಯ ಘಟಿ

ಈ ಮಂತ್ರಕ್ಕೆ ಲಿಂಗಾಂಗ ಸಮರಸ್ಯ ರೂಪವಾದ ಹಿಂದೆ ಹೇಳಿದ ಅರ್ಥವೇ ದೃಢಕರಿಸ ಲಕ್ಕುಂ ಎಂದು ಶಾಂಕರೀಕಾರನಿಂದ ಈ ಶಾಂತಿ ಮಂತ್ರಕ್ಕೆ ಅನೇಕ ಪ್ರಮಾಣ ವಾಕ್ಯಗಳಂ ತೋರಿಸಿ ಲಿಂಗಾಂಗ ಸಾಮರಸ್ಯಪರವಾದ ಅರ್ಥವೇ ಈ ಶಾಂತಿಮಂತ್ರದ ಮುಖ್ಯ ತಾತ್ಪರ್ಯವೆಂದು ಪ್ರತಿಪಾದಿಸಲ್ಪಟ್ಟಿರುವುದು.

"ಅನೇಕಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ | ನರಾಣಾಂಕ್ಷೀಣಪಾಪಾನಾಂ ಶಿವೇಭಕ್ತಿಃ ಪ್ರಜಾಯತೇ" ಎಂದು ಶಿವಾಗಮೋಕ್ತಿಯಿಂದ ನಾನಾ ಜನ್ಮಗಳಲ್ಲಿ ಅನೇಕ ವಿಧವಾದ ಶ್ರುತ್ಯುಕ್ತ ಕರ್ಮವನ್ನೂ, ಸ್ಮೃತ್ಯುಕ್ತ ಕರ್ಮವನ್ನೂ, ಮಾಡಿ ಯಾವ ಯಾವನ ಅಂತಃಕರಣವು, ಕಾಮಾದಿಗಳಿಂದ ಬಿಡಲ್ಪಟ್ಟು, ಪರಿಪಾಕಾವಸ್ಥೆಯಂ ಹೊಂದಿದಿಯೋ" ಅವನಲ್ಲಿಯೇ ಶಿವಭಕ್ತಿಯೆಂಬ ಮೋಕ್ಷ ಫಲದ ಬೀಜವು ತಲೆದೋರುವುದು. ಶಿವಭಕ್ತಿಯು ದಿನೇ ದಿನೆ ಹೆಚ್ಚುತ್ತ ಬಂದರೆ. ಅದಕ್ಕೆ ಶಕ್ತಿಪಾತವೆಂದು ಹೇಳುವರು. ಮುಖವು ಅರಳಿರುವುದು. ಸ್ವರವು ನಡುಗುತ್ತಿರುವುದು. ಅಂಗದಲ್ಲಿ ರೋಮಗಳು ನೆಟ್ಟುಕೊಂಡಿರುವುದು. ಚಿತ್ತವು ಯಾವಾಗಲೂ ಹರ್ಷವನ್ನು ಹೊಂದಿರುವುದು. ಇವುಗಳೆಲ್ಲವೂ ಶಿಷ್ಯನ ಶಕ್ತಿಪಾತವನ್ನು ಕಂಡುಹಿಡಿಯುವ ಚಿಹ್ನಗಳು ವೀರ, ನಂಧಿ, ವೃಷಭ ಮೊದಲಾದ ಗೋತ್ರದೊಳು ಜನಿಸಿದ ಜನ್ಮತಃ ವೀರಮಾಹೇಶ್ವರತ್ವದಿಂಕೂಡಿದ ಷಟ್‌ಕರ್ಮಾಧಿಕಾರವೆ ಪ್ರಯೋಜನವಾಗಿವುಳ್ಳ ವೀರಮಾಹೇಶ್ವರದೀಕ್ಷೆಯಂ ಪಡೆದ ಸದ್ಗುರುವು. ಶಕ್ತಿಪಾತವನ್ನು ಪರೀಕ್ಷೆಮಾಡಿ ವಂಶ್ಯರಾದ ಶಿಷ್ಯರ್ಗೆ ವೇಧಾ, ಕ್ರಿಯಾ, ಮನು ಎಂಬ ತ್ರಿವಿಧವಾದ ವೀರಮಾಹೇಶ್ವರದೀಕ್ಷೆಯಂ ಕೊಟ್ಟು ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಶರೀರಗಳನ್ನು ಆಶ್ರಯಿಸಿಕೊಂಡಿರುವ ಆಣವ, ಮಾಯಾ, ಕರ್ಮಿಕಗಳೆಂಬ ಮೂರುಮಲಗಳಂ ಹುಟ್ಟುಗೆಡಿಸಿ, ಇಷ್ಟ ಪ್ರಾಣ ಭಾವಗಳೆಂಬ ಮೂರು ಲಿಂಗಗಳನ್ನು ಧಾರಣಮಾಡಿ ಆ ಲಿಂಗ ಸ್ವರೂಪವನ್ನೂ, ಆ ಲಿಂಗಗಳ ಉಪಾಸನೆಯ ಕ್ರಮವನ್ನೂ, ಬೋಧಿಸಿ, ಉಪದೇಶವಂ ಗೆಯ್ದೊಡೆ ಶಿಷ್ಯನ ಹೃದಯ ಕ್ಷೇತ್ರದೊಳು ಬಿತ್ತಲ್ಪಟ್ಟ ಶಿವಭಕ್ತಿಯೆಂಬ ಬೀಜಾಂ

ತೇಷಿತ ಪ್ರೇಷಿತಾಭ್ಯಾಂ ಅಂತರ್ಬಹಿಃಕರಣಜಾತಸ್ಯಪ್ರೇರಕಃ ಕಃ, ತದ್ವಿಶೇಷಸ್ಯಚ ಪ್ರೇರಕಃ ಕಃ, ಇತಿ ಪ್ರಶ್ನವಾಕ್ಯಂ ಪ್ರವರ್ತತೇ ||

ಮೂ || ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ಕೇನೇಷಿತಾಂ ವಾಚಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ ||೧||

ಶಾ|| ಕೇನ ಕರಣಸಾಮಾನ್ಯಂ, ಇಷಿತಂ ಪ್ರೇರಿತಂಭವತಿ. ಇತಃಪರಂ ತತ್ತತ್ಕರಣಪ್ರೇರಕಂ ಪೃಚ್ಛತಿ, ಪ್ರೇಷಿತಮಿತಿ, ಕೇನ ಮನಃ ಸಂಕಲ್ಪಾದಿರೂಪಂ ಪ್ರೇಷಿತಂ ಪ್ರೇರಿತಂ ಸತ್ ಪತತಿ ಸ್ವವಿಷಯಂ ಗಚ್ಛತಿ. ಪ್ರಾಣಶ್ಚಪ್ರಸಿದ್ಧಃ ಪ್ರಾಣವಾಯುಃ, ಕೇನ ಕರ್ತ್ರಾ, ಯುಕ್ತಃ ಪ್ರೇರಿತಸ್ಸನ್, ಪ್ರಥಮಃ ಇಂದ್ರಿಯ

ಕರವು ಲಿಂಗಾಂಗ ಸಾಮರಸ್ಯವೆಂಬ ಕಂಟುಗಳನ್ನು ಬಿಟ್ಟು ಚನ್ನಾಗಿ ಬಲಿಮು, ಸತ್ಯ, ಕ್ಷಮೆ, ದಯೆ, ಶೌಚ, ನಿಯಮ, ಮಾರ್ದವ, ತಪಸ್ಸು, ತ್ಯಾಗ, ಬ್ರಹ್ಮಚರ್ಯ, ಸಂತುಷ್ಟಿ, ಆರ್ಜವಗಳೆಂಬ ಪರಿಶುದ್ಧವಾದ ಜಲಸೇಚನೆಯಿಂದ ಕ್ರಮ ಕ್ರಮವಾಗಿ, ಸಕಾಲದೊಳು, ಮೋಕ್ಷರೂಪವಾದ ದೊಡ್ಡಿತ್ತಾದ ಫಲವನ್ನು ಕೊಡುವುದು. ಇಂತಹ ಮೋಕ್ಷಫಲಕ್ಕೆ ಸಾಧನವಾದ ಲಿಂಗರೂಪವಾದ ಬ್ರಹ್ಮದ ವಿಚಾರವನ್ನು (ಕೇನೇಷಿತಂ) ಎಂಬ ಮೊದಲನೆ ಮಂತ್ರವು ಹೇಳುವುದು.

ಜಿಜ್ಞಾಸುಗಳಿಗೆ ವಿಶೇಷ ಶ್ರಮವಾಗಬಾರದೆಂಬ ಉದ್ದೇಶದಿಂದಲೇ ಶಿಷ್ಯನು ಪ್ರಶ್ನೆ ಮಾಡಿದಂತೆಯೂ, ಗುರುವು ಉತ್ತರ ಹೇಳಿದಂತೆಯೂ, ಭಗವತೀ ಶ್ರುತಿ ದೇವಿಯು ನಿರೂಪಿಸುವಳು ಒಬ್ಬ ರಾಜನು ಪಟ್ಟಣವಾಸಿ ಗ್ರಾಮವಾಸಿಗಳಾದ ಜನಗಳೆಲ್ಲರ ಮೇಲೆಯೂ ಸನ್ನಧಿಕಾರವನ್ನು ನಡೆಯಿಸುತ್ತ ಸರ್ವರಿಗೂ, ಪ್ರೇರಕನಾಗುವನು. ಆಯಾಯ ಗ್ರಾಮವಾಸಿಗಳ ಮೇಲೆ ಒಬ್ಬೊಬ್ಬ ಅಧಿಕಾರಿಯು ಆ ರಾಜನ ಆಜ್ಞೆಯ ಮೇರೆ ಪ್ರೇರಕನಾಗುವನು. ಅದರಂತೆ ಅಂತಃ ಕರಣ ಬಹಿಃ ಕರಣಗಳೆಲ್ಲಕ್ಕೂ ಪ್ರೇರಕನಾವನು. ಒಂದೊಂದೆ ಕರಣಕ್ಕೆ ಪ್ರೇರಕನಾವನು ಎಂಬ ಪ್ರಶ್ನೆಯು ಈ ಮಂತ್ರವಾಕ್ಯದಲ್ಲಿರುವ ಇಷಿತ ಮತ್ತು ಪ್ರೇಷಿತ ಶಬ್ದಗಳಿಂದ ವ್ಯಕ್ತವಾಗುವದು.. ಅಂತಃ ಕರಣ ಬಹಿಃ ಕರಣಗಳೆಲ್ಲವೂ ಯಾವನ ಪ್ರೇರಣೆಯಿಂದ ತಮ್ಮ ತಮ್ಮ ವ್ಯಾಪಾರವಂ ಮಾಡುತ್ತವೆ? ಎಂಬ ಪ್ರಶ್ನೆಯು ಇಷಿತ ಶಬ್ದದಿಂದ ಗೊತ್ತಾಗುತ್ತದೆ. ಮತ್ತು ಮನಸ್ಸು ಯಾವಾತನ ಪ್ರೇರಣೆಯಿಂದ ಸಂಕಲ್ಪ ವಿಕಲ್ಪ ಅಧ್ಯವಸಾಯಗಳನ್ನು ಮಾಡುತ್ತದೆ? ಪ್ರಾಣವು ಯಾವಾತನ ಪ್ರೇರಣೆಯಿಂದ ಶರೀರದ ಆಯಾಯ ಸ್ಥಾನಕ್ಕೆ ಗಮಿಸುತ್ತದೆ? ಇಂದ್ರಿಯ ವ್ಯಾಪಾರಕ್ಕಿಂತಲೂ ಮೊದಲೇ ಪ್ರಾಣವು ಪ್ರವರ್ತಿಸುವ ಕಾರಣ ಈ ಪ್ರಾಣಕ್ಕೆ ಪ್ರಥಮವೆಂದು ಶ್ರುತಿಯು ಹೇಳಿದೆ. ಯಾವನ ಪ್ರೇರಣೆಗೆ ವಿಷಯವಾದ ವಾಗೀಂದ್ರಿಯದಿಂದ ವೈಖರಿ ಮೊದಲಾದ ಶಬ್ದಗಳು ಹುಟ್ಟುತ್ತವೆ. ಮತ್ತು ಚಕ್ಷುರಿಂದ್ರಿಯವನ್ನು ಯಾವ ದೇವನು ಪ್ರೇರಿಸುವನು? ಶ್ರೋತ್ರೇಂದ್ರಿಯವನ್ನು ಯಾವ ದೇವನು ಪ್ರೇರಿಸುವನು? ಇಲ್ಲಿ ವಾಕ್ಕೆಂಬ

ವ್ಯಾಪಾರಾತ್ ಪ್ರಾಕ್ ಪ್ರವರ್ತಮಾನತ್ವಾತ್ ಜ್ಯೇಷ್ಠ ಇತ್ಯರ್ಥಃ ಪ್ರೈತಿ. ತತ್ರ ತತ್ರಗಚ್ಛತಿ. ಕೇನಚ ಇಷಿತಾಂ ಪ್ರೇರಿತಾಂ, ವಾಚಂ ವಾಗಿಂದ್ರಿಯರೂಪಾಂ, ವದಂತಿ. ಚಕ್ಷುಃ ಶ್ರೋತ್ರಂ ಚ, ಕ ಉ ಕ ಏವ, ದೇವಃ ದೀಪ್ತಿ ಶೀಲಃ, ಯುನಕ್ತಿ ಪ್ರೇರಯತೀತ್ಯರ್ಥಃ, ವಾಗಿತಿ ಚಕ್ಷುಃ ಶ್ರೋತ್ರಮಿತಿ ಚ ಕರ್ಮೇಂದ್ರಿಯಾಣಾಂ ಜ್ಞಾನೇಂದ್ರಿಯಾಣಾಂ ಚೋಪಲಕ್ಷಕಂ, ಇಷಿತ ಮಿತ್ಯನೇನ ಕಸ್ಯಕರಣ ಸಾಮಾನ್ಯಪ್ರೇಷಯಿತೃತ್ವಂ ಪ್ರೇಷಿತಮಿತ್ಯನೇತನ ಕಸ್ಯಕರಣ ವಿಶೇಷ ಪ್ರೇಷಯಿತೃತ್ವಂ, ಇತಿಪೃಷ್ಟೋಗುರುಃ ಸಾಮಾನ್ಯಪ್ರಯೋಕ್ತುರ್ವ್ಯಾಪಕತ್ವಾತ್, ಮನ ಆದ್ಯಗ್ರಾಹ್ಯತ್ವಾತ್, ತಂ ವಿಹಾಯ, ಪ್ರಥಮತಃ ವಿಶೇಷ ಪ್ರೇಷಯಿತೃರೂಪಂ ತತ್ತಲ್ಲಿಂಗಮಾಹ ||

ಮೂ || ಶ್ರೋತ್ರಸ್ಯಶ್ರೋತ್ರಂ ಮನಸೋ ಮನೋ ಯ ದ್ವಾಚೋ
ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಶ್ಚಕ್ಷುಷಶ್ಚಕ್ಷುಃ ಅತಿಮು
ಚ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾಭವಂತಿ ||೨||

ಶ್ರೋತ್ರಸ್ಯೇತಿ. ಶ್ರೋತ್ರಸ್ಯ ಶಬ್ದವಿಷಯಕ ಪ್ರತ್ಯಕ್ಷ ಜನಕಸ್ಯ ಇಂದ್ರಿಯಸ್ಯ, ಶ್ರೋತ್ರಂ ಶ್ರೋತ್ರಾಂಗಾವಚ್ಛಿನ್ನ ಪ್ರಸಾದಲಿಂಗಂ, "ಶ್ರೋತ್ರಾಂಗೇ ತುಪ್ರಸಾದಕಂ" ಇತ್ಯುಕ್ತತ್ವಾತ್ | ತತ್ ಶ್ರೋತ್ರೇಂದ್ರಿಯಸ್ಯ ಪ್ರೇರಕಮಿತ್ಯರ್ಥಃ. ಮನಸಃ ಮನೋರೂಪಸ್ಯ ಅಂತರಿಂದ್ರಿಯಸ್ಯ, ಮಾನಸಪ್ರತ್ಯಕ್ಷ ಜನ

ಪದದಿಂದ ಎಲ್ಲಾ ಕರ್ಮೇಂದ್ರಿಯಗಳೂ ಚಕ್ಷುಶ್ರೋತ್ರವೆಂಬ ಪದಗಳಿಂದ ಎಲ್ಲಾ ಜ್ಞಾನೇಂದ್ರಿಯಗಳೂ ಉಪಲಕ್ಷಿಸಲ್ಪಡುವವೆಂದು ತಿಳಿಯತಕ್ಕದ್ದು. ಈ ಪ್ರಕಾರವಾಗಿ ಶಿಷ್ಯನು ಕೇಳಲಾಗಿ ಗುರುವು ಎಲ್ಲಾ ಇಂದ್ರಿಯಗಳಿಗೂ ಪರಂಪರೆಯಿಂದ ಪ್ರೇರಕವಾದ ಪರಶಿವ ಲಿಂಗವನ್ನೇ ಮೊದಲು ತಿಳಿಸುವುದು ಶ್ರಮಸಾಧ್ಯವು. ಅದು ಸೂಕ್ಷ್ಮಬುದ್ಧಿಗಮ್ಯವು. ಆದುದರಿಂದ ಕರಣಸಾಮಾನ್ಯಕ್ಕೆ ಪರಂಪರೆಯಿಂದ ಪ್ರೇರಕವಾದ ಆ ಊರ್ಧ್ವಲಿಂಗವನ್ನು ಬಿಟ್ಟು ಪ್ರಥಮದಲ್ಲಿ ಒಂದೊಂದು ಇಂದ್ರಿಯಗಳಿಗೆ ಪ್ರೇರಕಗಳಾದ ಆಯಾಯ ಲಿಂಗಗಳನ್ನು ಹೇಳುತ್ತಾನೆ. ಶಬ್ದದ ಪ್ರತ್ಯಕ್ಷಕ್ಕೆ ಕಾರಣವಾದ ಶ್ರೋತ್ರೇಂದ್ರಿಯಕ್ಕೆ ಶ್ರೋತ್ರೇಂದ್ರಿಯವೆಂಬಂಗವುಳ್ಳ ಪ್ರಸಾದಲಿಂಗವೇ ಪ್ರೇರಕವಾಗುತ್ತದೆ. ಏಕೆಂದರೆ ಶ್ರೋತ್ರಾಂಗದಲ್ಲಿ ಪ್ರಸಾದಲಿಂಗವಿರುವುದೆಂದು ಶಿವಾಗಮೋಕ್ತಿಯಿರುತ್ತದಷ್ಟೆ; ನಾನು ಸುಖಿಯು, ನಾನು ದುಃಖಿಯು. ಎಂಬ ಪ್ರತ್ಯಕ್ಷಕ್ಕೆ ಕಾರಣವಾದ ಮನಸ್ಸಿಗೆ ಮನಸ್ಸೆಂಬ ಅಂಗವುಳ್ಳ ಮಹಾ ಲಿಂಗವೇ ಪ್ರೇರಕವಾಗುವುದು. ಹೃದಯವೆಂಬ ಅಂಗದಲ್ಲಿ ಮಹಾಲಿಂಗವಿರುತ್ತದೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ವಚನಕ್ಕೆ ಕಾರಣವಾದ ವಾಗಿಂದ್ರಿಯಕ್ಕೆ ವಾಕ್ಕೆಂಬ ಅಂಗವುಳ್ಳ ಪ್ರಸಾದಲಿಂಗವೇ ಪ್ರೇರಕವಾಗುತ್ತದೆ. ಪ್ರಸಿದ್ಧವಾದ ಘ್ರಾ

ಕಸ್ಯ ಮನಃ ಮನೋಂಗಾವಚ್ಛಿನ್ನ ಮಹಾಲಿಂಗಂ | "ಹೃದಯಾಂಗೇ ಮಹಾಲಿಂಗಮಿತ್ಯುಕ್ತೇಃ | ವಾಚಃ ವಾಗಿಂದ್ರಿಯಸ್ಯ, ವಚನ ಜನಕಸ್ಯ, ವಾಚಂ ವಾಗಂಗಾವಚ್ಛಿನ್ನ ಪ್ರಸಾದಲಿಂಗಂ | ಅತ್ರ ದ್ವಿತೀಯಾ ಪ್ರಥಮಾತ್ವೇನ ಬೋಧ್ಯಾ | ಪ್ರಾಣಸ್ಯ ಪ್ರಸಿದ್ಧಸ್ಯ ಪ್ರಾಣಃ ಪ್ರಾಣಾವಚ್ಛಿನ್ನೇಶ್ವರಃ ಪ್ರಾಣಲಿಂಗ ಮಿತ್ಯರ್ಥಃ. ಚಕ್ಷುಷಃ ರೂಪವಿಷಯಕ ಪ್ರತ್ಯಕ್ಷಜನಕಸ್ಯ ಚಕ್ಷುರಿಂದ್ರಿಯಸ್ಯ, ಚಕ್ಷುಃ ಚಕ್ಷುರಂಗಾವಚ್ಛಿನ್ನ ಶಿವಲಿಂಗಂ. "ದೃಗಂಗೇಶಿವಲಿಂಗಕಂ" ಇತ್ಯಭಿಧಾನಾತ್ | ಸ ಉ ಯದ್ಯಸ್ಮಾತ್ ಯಸ್ತ್ವಯಾ ತತ್ತತ್ಕರಣಪ್ರೇರಕಃ ಪೃಷ್ಟಃ ಸ ಉ ಈಶ್ವರಃ ತತ್ತದಂಗಾವಚ್ಛಿನ್ನ ಲಿಂಗರೂಪ ಇತ್ಯರ್ಥಃ. ವಾಕ್‌ಶ್ರೋತ್ರೇಂದ್ರಿಯಪ್ರೇರಕಂ ಪ್ರಸಾದಲಿಂಗ ಮಿತ್ಯುಕ್ತಂತು ತಯೋರಭೇದೇನೇತಿ ಸಂಗಚ್ಛತೆ. ಉಕ್ತಂಚಾನುಭವಸೂತ್ರೆ ಶ್ರೋತ್ರವಾಚೋರ್ನಭೇದೋಸ್ತೀತಿ | ನನು ಆಚಾರಲಿಂಗಂ ಘ್ರಾಣಾಖ್ಯಂ ಭಕ್ತಸ್ಥಲ ಸಮಾಶ್ರಯಂ ಇತ್ಯಾದಿನಾ ಘ್ರಾಣೇಂಯ ಸ್ಯೈವ ಆಚಾರಾದಿ ಲಿಂಗತ್ವವ್ಯವದೇಶಾತ್ ಕಥಂತದಂಗಾಂಗಿಭಾವಃ | ಇತಿಚೇನ್ನ. ಕರಣಾನಾಂ ಕರ್ತುರ್ಘ್ರೇಯಾದಿ ಪದಾರ್ಥ ಸ್ವೀಕಾರಸಾಧನತ್ವಾತ್ ತದೇಕನಿಷ್ಠತ್ವಾತ್ ಲಿಂಗರೂಪತ್ವ ವ್ಯಪದೇಶಾತ್| ಅನ್ಯಥಾ "ಯಥಾ

ಣಕ್ಕೆ ಪ್ರಾಣಪ್ರಧಾನವಾದ ಸೂಕ್ಷ್ಮಶರೀರವೇ ಅಂಗವಾಗುಳ್ಳ ಪ್ರಾಣಲಿಂಗವೇ ಪ್ರೇರಕವಾಗುತ್ತದೆ. ಸ್ವರೂಪದ ಪ್ರತ್ಯಕ್ಷಕ್ಕೆ ಕಾರಣವಾದ ಚಕ್ಷುರಿಂದ್ರಿಯಕ್ಕೆ ಚಕ್ಷುರಿಂದ್ರಿಯವೆಂಬ ಅಂಗವುಳ್ಳ ಶಿವಲಿಂಗವೇ ಪ್ರೇರಕವು. ದೃಗಂಗದಲ್ಲಿ ಶಿವಲಿಂಗವಿರುವುದೆಂದು ಶಾಸ್ತ್ರವು ಹೇಳುತ್ತದೆ. ಆದ್ದರಿಂದ ಎಲೈ ಶಿಷ್ಯನೇ ನೀನು ಕೇಳಿದ ಪ್ರಶ್ನೆಗೆ ಈ ಪ್ರಕಾರವಾಗಿ ಉತ್ತರವು ಹೇಳಲ್ಪಟ್ಟಿತು.

ಮತ್ತು ವಾಗೇಂದ್ರಿಯಕ್ಕೂ ಕರ್ಣೇಂದ್ರಿಯಕ್ಕೂ ಪ್ರಸಾದಲಿಂಗವೇ ಪ್ರೇರಕವೆಂದು ಹೇಳಿರುವದು. ಅವೆರಡಕ್ಕೂ ಅಭೇದವಿರುವುದರಿಂದ ಸಂಗತವಾಗುತ್ತದೆ. ಶ್ರೋತ್ರವಾಕ್ಕುಗಳಿಗೂ ಶಬ್ದಕ್ಕೂ, ವಚನಕ್ಕೂ, ಭೇದವಿಲ್ಲೆಂದು ಅನುಭವಸೂತ್ರವು ಹೇಳುತ್ತದೆ. ಆದರೆ ಆಚಾರಲಿಂಗವೇ ಘ್ರಾಣವೆಂದು "ಆಚಾರಲಿಂಗಂ ಘ್ರಾಣಾಖ್ಯಂ ಭಕ್ತಸ್ಥಲಸಮಾಶ್ರಯಂ" ಎಂಬುವುದರಿಂದ ತಿಳಿದುಬರುತ್ತದೆ. ಅಂದಮೇಲೆ ಘ್ರಾಣೇಂದ್ರಿಯ ಅಂಗವು, ಆಚಾರಲಿಂಗವು ಅಂಗವುಳ್ಳದ್ದೆಂದು ಹ್ಯಾಗೆ ಹೇಳುತ್ತೀರಿ ಅಂದರೆ ಘ್ರಾಣ ಮೊದಲಾದ ಕರಣಗಳು ಕರ್ತೃವಿನ ಗಂಧಾದಿ ಪದಾರ್ಥ ಸ್ವೀಕಾರಕ್ಕೆ ಸಾಧನಗಳಾಗಿರುವವು ಆದುದರಿಂದ ಆ ಕರಣಗಳು ಕರ್ತೃನಿಷ್ಠಗಳಾಗುವವು. ಆದಕ್ಕೋಸ್ಕರ ಅವು ಕರ್ತೃಸ್ವರೂಪಗಳೇ. ಅಕೃತ್ರಿಮ ಕರ್ತೃವಾದರೂ ಸ್ವತಂತ್ರನಾಗದಿರುವುದರಿಂದ ಸ್ವತಂತ್ರ ಪರಮಕರ್ತೃರೂಪವಾದ ಲಿಂಗನಿಷ್ಠನು. ಆದುದರಿಂದ ಅವನು ಲಿಂಗಕ್ಕೆ ಅಭಿನ್ನನಾಗಿರುವುದರಿಂದ ಇಂದ್ರಿಯಗಳಿಗೆ ಲಿಂಗಗಳೆಂದು ಸಿದ್ಧಾಂತಿಗಳು ಹೇಳುವರು. ಸಿದ್ಧಾಂತಾನುಸಾರವಾಗಿ ಶಿವನ ಸಂಕುಚಿತಗಳಾದ ಷಡ್ವಿಧ ಶಕ್ತಿಗಳೇ ಮನಸ್ಸು ಮೊದಲಾದ

ಜ್ಞಾನೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಂ | ತಥಾ ಕರ್ಮೇಂದ್ರಿಯಾಂಗೇಷು ಕ್ರಮಾಲ್ಲಿಂಗಂ ಪ್ರತಿಷ್ಠಿತಂ || ಇತ್ಯನುಭವಸೂತ್ರೋಕ್ತಂ ವಿರುಧ್ಯೇತ ಪರಶಿವರೂಪೋರ್ಧ್ವಲಿಂಗಮೇಕಮೇವ. ಸ್ವಶಕ್ತಿಮಹಿಮ್ನಾ ಆಚಾರಾದಿಷಡ್ವಿಧಲಿಂಗರೂಪಂ ಸತ್ ತತ್ತದಿಂದ್ರಿಯಾಣಿ ಪ್ರೇರಯತೀತಿ ಸಾಕ್ಷಾತ್ ಪ್ರೇಷಯಿತೃತ್ವಂ ತತ್ತದಂಗಾವಚ್ಛಿ ಲಿಂಗಾನಾಂ ಪರಂಪರಯಾತುಸರ್ವೇಷಾಮಧಿಷ್ಠಾನಂ ತದೇಕಮೇವೋರ್ಧ್ವಲಿಂಗಂ ಭವತೀತ್ಯರ್ಥಃ. ಯದ್ವಾ, ಯತ್, ವಸ್ತು ಶ್ರೋತ್ರಸ್ಯ, ಇಂದ್ರಿಯಸ್ಯ ಶ್ರೋತ್ರಂ ಶ್ರೋತ್ರಾವಚ್ಛಿನ್ನ ಪ್ರಸಾದಲಿಂಗರೂಪಂ ಸತ್ ಪ್ರೇರಕಂ ಭವತಿ | ಏವಂ ರೂಪೇಣ ವ್ಯಾಖ್ಯಾನಂ ಕೃತ್ವಾ ತತ್ ಯಾವತ್ಕರಣ ಪ್ರೇರಕ ಮಿತಿ. ಕೇನೇಷಿತ ಮಿತ್ಯಸ್ಯ ಪ್ರತಿ ವಚನ ಮುಕ್ತಮಿತಿ ಜ್ಞಾತವ್ಯಂ | ಏವಂ ಜ್ಞಾತ್ವಾ ಅತಿಮುಚ್ಯ ತ್ಯಕ್ತ್ವಾ ಸವಿಷಯ ತತ್ತದಿಂದ್ರಿಯಾಣಾಂ ತತ್ತಲ್ಲಿಂಗೇಷು ಸಮರ್ಪಣ ಪೂರ್ವಕಂ ಆಚಾರಾದಿ

ಆರು ಇಂದ್ರಿಯ ಸ್ವರೂಪಗಳಾಗಿವೆ. ಸಾಧಕನು ಬಾಹ್ಯೇಂದ್ರಿಯಗಳನ್ನು ತಡೆದು ಚಿತ್ತವೆಂಬ ಅಂತರಿಂದ್ರಿಯವನ್ನು ಮಹಾಲಿಂಗದಲ್ಲಿ ಸಮರಸ ಮಾಡಲೂ ಚಿತ್ತವು ಶಿವನ ಚಿಚ್ಛಕ್ತಿರೂಪವಾಗುತ್ತದೆ. ಆಮೇಲೆ ಚಿಚ್ಛಕ್ತಿಯು ಮಹಾಲಿಂಗರೂಪವಾಗುತ್ತದೆ. ಇದರಂತೆ ಬಾಕಿ ಐದು ಜ್ಞಾನೇಂದ್ರಿಯಗಳು ಆಯಾಯ ಶಿವಶಕ್ತಿರೂಪಗಳಾಗಿ ಆ ಶಕ್ತಿಗಳು ಆಯಾಯ ಲಿಂಗಗಳಲ್ಲಿ ಸಮರಸಗಳಾಗಲು ಆ ಶಕ್ತಿಗಳು ಲಿಂಗಗಳೇ ಆಗಿಬಿಡುವವು. ಕಾರಣ ಇಂದ್ರಿಯಗಳಿಗೇನೇ ಲಿಂಗಗಳೆಂದು ಹೇಳಿದೆ. ಇದು ಜೀವಾವಸ್ಥೆಯಲ್ಲಿ ಹೇಳಿದ ಮಾತಲ್ಲ. ಕಿಂತು ಚತುರ್ಥಾವಸ್ಥೆಯಲ್ಲಿ (ಶಿವಾವಸ್ಥೆಯಲ್ಲಿ) ಹೇಳಿದ ಮಾತಾಗಿದೆ. ಹೀಗೆ ಹೇಳದಿದ್ದರೆ ಜ್ಞಾನೇಂದ್ರಿಯಗಳೆಂಬ ಅಂಗಗಳಲ್ಲಿ ಹ್ಯಾಗೆ ಲಿಂಗವು ಕ್ರಮವಾಗಿ ಪ್ರತಿಷ್ಠಿಸಲ್ಪಟ್ಟಿದೆಯೊ? ಹಾಗೆ ಕರ್ಮೇಂದ್ರಿಯಾಂಗಗಳಲ್ಲಿಯೂ ಲಿಂಗವು ಪ್ರತಿಷ್ಠಿಸಲ್ಪಟ್ಟಿದೆಯೆಂದು ಹೇಳುವ ಅನುಭವಸೂತ್ರಕ್ಕೆ ವಿರೋಧವಾಗುವುದು ಆದುದರಿಂದ ಭಕ್ತಾದ್ಯಂಗರೂಪಶಕ್ತಿಗಳು ಘ್ರಾಣಾದೀಂದ್ರಿಯಗಳಿಂದ ಸಹಿತಗಳಾಗಿ ಆಚಾರಾದಿ ಲಿಂಗಗಳಲ್ಲಿ ಅರ್ಪಿತಗಳಾಗಲು, ಆಗ ಇಂದ್ರಿಯಗಳು ಲಿಂಗಸ್ವರೂಪಗಳೇ. ಹೊರ್ತು, ಚೀರೆಕಾಲದಲ್ಲಿ ಅವು ಭಿನ್ನಗಳಾಗಿಯೇ ಇರುವವು ಆಗ ಅಂಗಾಂಗಿ ಭಾವವು ಸಂಗತವೇ ಆಗುವದು. ಪರಶಿವರೂಪವಾದ ಉರ್ಧ್ವಲಿಂಗ ವೊಂದೇ ತನ್ನ ಶಕ್ತಿಯ ಮಹಿಮಾತಿಶಯದಿಂದ ಆಚಾರಾದಿ ಷಡ್ವಿಧ ಲಿಂಗಸ್ವರೂಪವಾಗಿ ಆಯಾಯ ಇಂದ್ರಿಯಗಳನ್ನು ತಮ್ಮ ತಮ್ಮ ವ್ಯಾಪಾರದಲ್ಲಿ ಪ್ರೇರಿಸುತ್ತದಾದಕಾರಣ ಸಾಕ್ಷಾತ್ಸಂಬಂಧದಿಂದ ಪ್ರೇರಿಸುವ ತನವು ಆಚಾರಾದಿ ಆರು ಲಿಂಗಗಳಿಗೆ ಬರುವದು ಪರಂ ಪರಾಸಂಬಂಧದಿಂದ ಅವೆಲ್ಲವಕ್ಕೂ ಅಧಿಷ್ಠಾನವಾದ ಪರಶಿವಲಿಂಗವೇ ಪ್ರೇರಕವಾಗುತ್ತದೆಂದು ತಿಳಿಯತಕ್ಕದ್ದು. ಈಪ್ರಕಾರವಾಗಿ ತಿಳಿದು ಗಂಧವನ್ನೂ ಆಗಂಧವನ್ನು ಗ್ರಹಿಸುವ ಘ್ರಾಣೇಂದ್ರಿಯವನ್ನೂ ಗಂಧಕ್ಕೆ ಆಶ್ರಯವಾದ ಪೃಥಿವೀ ತತ್ವವನ್ನೂ ಆಚಾ

ಲಿಂಗಂ ತತ್ತ್ವದೂರ್ಧ್ವಲಿಂಗೆ ವಿಸೃಜ್ಯ ಅರ್ಥಾತ್ ಸಾಮರಸ್ಯಂ ಪ್ರಾಪಯ್ಯ ಧೀರಾಸ್ತಾದೃಶ ಸಾಮರಸ್ಯ ವಿದ್ಯಾರ ಸಿಕಾಃ ಗಂಧಾದಿ ಗಂಧಾದಿ ಗ್ರಾಹಕ ತತ್ತ್ವತ್ಸಮವಾಯಿ ವಸ್ತುಜಾತಂ ಆಚಾರಾದಿ ಲಿಂಗೆ ಸಮರಸೀ ಕೃತ್ಯ ಆಚಾರ ಲಿಂಗಂ ಗುರುಲಿಂಗೆ ತಚ್ಚ ಶಿವಲಿಂಗೆ ತದಪಿಚರಲಿಂಗೆ ತದ್ಧಿ ಪ್ರಸಾದೆ ತತ್ತು ಮ ಹಾಲಿಂಗೆ ಲೀನಂ ಕುರ್ವಂತಿ ಯೇ ತೇಧೀರಾಃ ಅಸ್ಮಾಲ್ಲೋಕಾತ್ ಪುತ್ರಕಲ ತ್ರಾದ್ಯುಪಲಕ್ಷಿತಾತ್ ಶರೀರಾತ್ ಪ್ರೇತ್ಯ ವ್ಯಾವೃತ್ಯ' ತದಭಿ ಮಾನಂ ತ್ಯ ಕ್ತ್ವಾ, ಅಮೃತಾ ಮುಕ್ತಾಭವಂತೀತ್ಯರ್ಥಃ ||೨||

ರಲಿಂಗದಲ್ಲಿ ಸಮರಸಮಾಡಿ ಇದರಂತೆ ರಸವನ್ನೂ ಅದನ್ನು ಗ್ರಹಿಸುವ ರಸನೇಂದ್ರಿಯವನ್ನು ರಸ ಕ್ಕೆ ಆಶ್ರಯವಾದ ಜಲತತ್ತ್ವವನ್ನೂ ಗುರುಲಿಂಗದಲ್ಲಿ ಸಮರಸಮಾಡಿ ರೂಪವನ್ನೂ ಅದನ್ನು ಗ್ರಹಿಸುವ ಚಕ್ಷುರಿಂದ್ರಿಯವನ್ನೂ ರೂಪಕ್ಕೆ ಆಶ್ರಯವಾದ ತೇಜಸ್ತತ್ತ್ವವನ್ನೂ ಶಿವಲಿಂಗದಲ್ಲಿ ಸಮರಸಮಾಡಿ, ಸ್ಪರ್ಶವನ್ನೂ ಅದನ್ನು ಗ್ರಹಿಸುವ ತ್ವಗಿಂದ್ರಿಯವನ್ನೂ, ಸ್ಪರ್ಶಕ್ಕೆ ಆಶ್ರಯ ವಾದ ವಾಯುತತ್ತ್ವವನ್ನೂ ಜಂಗಮಲಿಂಗದಲ್ಲಿ ಸಮರಸಮಾಡಿ, ಶಬ್ದವನ್ನೂ ಅದನ್ನು ಗ್ರಹಿ ಸುವ ಶ್ರವಣೇಂದ್ರಿಯವನ್ನೂ, ಶಬ್ದಕ್ಕೆ ಆಶ್ರಯವಾದ ಆಕಾಶತತ್ತ್ವವನ್ನೂ ಪ್ರಸಾದಲಿಂಗದಲ್ಲಿ ಸಮರಸಮಾಡಿ. ತೃಪ್ತಿಯೆಂದರೆ ಸುಖವು. ಇದನ್ನೂ ಇದನ್ನು ಗ್ರಹಿಸುವ ಮನಸ್ಸನ್ನೂ ಮನ ಸ್ಸಿಗೆ ಆಶ್ರಯವಾದ ಜೀವಾತ್ಮನನ್ನೂ ಮಹಾಲಿಂಗದಲ್ಲಿ ಸಮರಸಮಾಡಿ, ಆ ಆಚಾರಲಿಂಗವನ್ನು ಗುರುಲಿಂಗದಲ್ಲಿಯೂ ಗುರುಲಿಂಗವನ್ನು ಚರ (ಜಂಗಮ) ಲಿಂಗದಲ್ಲಿಯೂ, ಆ ಚರಲಿಂಗವ ನ್ನು ಪ್ರಸಾದಲಿಂಗದಲ್ಲಿಯೂ, ಆ ಪ್ರಸಾದಲಿಂಗವನ್ನು ಮಹಾಲಿಂಗದಲ್ಲಿಯೂ ಸಮರಸಮಾಡಿ ದವರಿಗೆ ಧೀರರು (ವೀರರು) ಎಂದು ಹೆಸರು. ಇಂಥ ಧೀರರೆ ವೀರಶೈವರು. ಇವರೇ ಈ ಪುತ್ರ ಕಲತ್ರಮಿತ್ರರುಗಳಮೇಲಿನ ಅಭಿಮಾನವನ್ನು ಬಿಟ್ಟು ಮುಕ್ತರಾಗುವರೆಂದು ದ್ವಿತೀಯಮಂತ್ರವು ಹೇಳುವುದು. ||೨||

ಯಾವ ಪರಶಿವನ ರೂಪವಾದ ಭಾವಲಿಂಗವು ಪರಂಪರೆಯಿಂದ ಕರಣ ಸಾಮಾನ್ಯಕ್ಕೇ ಪ್ರೇರಕವಾಗುತ್ತದೆಯೊ? ಅಲ್ಲಿ ಚಕ್ಷುರಾದಿ ಗ್ರಾಹ್ಯತ್ವವದೆಯೊ? ಇಲ್ಲವೊ? ಎಂಬ ಪ್ರಶ್ನಕ್ಕೆ ಉತ್ತರವನ್ನು ಹೇಳುತ್ತದೆ. ಮನಸ್ಸು ಮೊದಲಾದ ಉಪಾಧಿವಶದಿಂದ ಮಹಾಲಿಂಗಾದಿ ರೂಪ ವಾಗಿರುವ, ಹಾಗೂ ಭಾವದಿಂದ ಗ್ರಹಿಸಲು ಯೋಗ್ಯವಾದ ಯಾವ ಭಾವಲಿಂಗವದೆಯೊ ಅದಕ್ಕೆ ರೂಪವಿಲ್ಲದಿರುವುದರಿಂದ ಅದನ್ನು ಚಕ್ಷುರಿಂದ್ರಿಯವು ಹೊಂದುವದಿಲ್ಲ. (ಅದನ್ನು ಗ್ರಹಿಸುವ ದಿಲ್ಲ.) ಚಕ್ಷುರಿಂದ್ರಿಯಕ್ಕೆ ಅಗಮ್ಯವಾದ ಸ್ವರ್ಗವು ಹ್ಯಾಗೆ ವಾಕ್ಕಿಗೆ ವಿಷಯವಾಗುವದೊ? ಹಾಗೆ ಭಾವಲಿಂಗವು ವಾಕ್ಕಿಗೆ ವಿಷಯವಾಗಬಹುದಲ್ಲಾ? ಅಂದರೆ ಅದು ವಾಕ್ಕಿಗೂ ವಿಷಯ ವಾಗುವದಿಲ್ಲ. (ಶಬ್ದಜನ್ಯವಾದ ಜ್ಞಾನಕ್ಕೆ ವಿಷಯವಾಗುವದಿಲ್ಲ.) ಯಾಕೆಂದರೆ ಆ ಭಾವ ಲಿಂಗವು ಅಪರಿಚ್ಛಿನ್ನವಾಗಿರುವುದರಿಂ? ಆ ಭಾವಲಿಂಗವು ತನಗೆ ಇತರವಾದ ಜ್ಞಾನಕ್ಕೆ ವಿಷ ಯವಾಗುತ್ತದೆಂದರೆ ಘಟದಂತೆ ಜಡವೆನಿಸಬೇಕಾಗುವದು. ಆದ್ದರಿಂದ ಅದು ಮತ್ತೊಂದು

ಯತ್ಪರ ಶಿವಲಿಂಗಂ ಪರಂಪರಯಾ ಕರಣಸಾಮಾನ್ಯ-ಪ್ರೇರಕಂ ಭವತಿ ತತ್ರ ಚಕ್ಷುರಾದಿ ಗ್ರಾಹ್ಯತ್ವಮಸ್ತಿ ನಾ ನವೇತ್ಯಾಕಾಂಕ್ಷಾಯಾಮಾಹ ||

ಮೂ|| ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನೋ ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾದನ್ಯದೇವ ತದ್ವಿದಿತಾದಥೋ ಅವಿದಿತಾದಧಿ । ಇತಿ ಶುಶ್ರುಮ ಪೂರ್ವೇಷಾಂ ಯೇ ನಸ್ತದ್ವ್ಯಾಚಚಕ್ಷಿರೇ ||೩||

ಶಾಂ||ನ ತತ್ರೇತಿ, ಯದ್ಭಾವಲಿಂಗಂ ಭಾವಗ್ರಾಹ್ಯಂ ಮನಆದ್ಯವಚ್ಛೇದೇನ ಮಹಾಲಿಂಗಾದಿರೂಪಂ ತತ್ರಭಾವಲಿಂಗೇ ಚಕ್ಷುರಾದ್ಯಗಮ್ಯೇ ಚಕ್ಷುಃ ಚಕ್ಷುರಿಂದ್ರಿಯಂ ನ ಗಚ್ಛತಿ ನ ತತ್ಪ್ರಾಪ್ನೋತೀತ್ಯರ್ಥಃ ರೂಪಾದಿವಿಹೀನತ್ವಾತ್ತಸ್ಯ "ನ ಸಂದೃಸೇ ತಿಷ್ಠತಿರೂಪಮಸ್ಯ ನ ಚಕ್ಷುಷಾ ಪಸ್ಯತಿ ಕಶ್ಚ ನೈನಂ" ಇತಿ ಶ್ರುತೇಃ. ಚಕ್ಷುರಾದ್ಯಗ್ರಾಹ್ಯೇಽಪಿ ಸ್ವರ್ಗಾದೌ ವಾಗ್ವಿಷಯತ್ವಮಿವಾಸ್ತು ತದೂರ್ಧ್ವ ಲಿಂಗೇ ವಾಗ್ವಿಷಯತ್ವಂ ಇತ್ಯತ ಆಹ ನ ವಾಗಿತಿ ವಾಕ್ ಉಚ್ಚಾರ್ಯಮಾಣಶ್ಶಬ್ದಃ ನ ಗಚ್ಛತಿ ನ ಸ್ವವಿಷಯಂ ಕರೋತಿ. ತನ್ನ ಶಾಬ್ದ ಬೋಧವಿಷಯಂ

ಜ್ಞಾನಕ್ಕೆ ವಿಷಯವಲ್ಲ. ಹಾಗಾದರೆ "ಶಾಸ್ತ್ರಯೋನಿತ್ವಾತ್" ಎಂಬುವ ಸೂತ್ರದಿಂದ ಶ್ರೀ ವ್ಯಾಸರು ಶಾಸ್ತ್ರಕ್ಕೆ ಆ ಪರಶಿವಲಿಂಗದ ಮಹತ್ವಪ್ರಕಾಶಕತನವನ್ನು ಏಕೆ ಹೇಳಿರುವರು? ಅಂದರೆ ಅವರು ಯಾವ ತಾತ್ಪರ್ಯದಿಂದ ಹೇಳಿರುವರೆಂಬುದನ್ನು ವಿಚಾರಿಸು. "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ" ಎಂಬುವ ಮೊದಲಾದ ಶ್ರುತಿಗಳಿಂದ ಚತುರ್ಮುಖಬ್ರಹ್ಮನಿಗೆ ವೇದ ಮೊದಲಾದ ಶಾಸ್ತ್ರವನ್ನು ಉಪದೇಶಮಾಡಿದ ಮಹೇಶ್ವರನ ಉಕ್ತಿಯು ಅವನ ಇಚ್ಛೆಗೆ ಅಧೀನವಾಗಿದೆ. ಆ ಇಚ್ಛಾಶಕ್ತಿಯು ಶಿವನ ಚಿಚ್ಛಕ್ತಿಗೆ (ವಿಮರ್ಶಶಕ್ತಿಗೆ) ಅಧೀನವಾಗಿದೆ. ಆ ಚಿಚ್ಛಕ್ತಿಯು ಪ್ರಭಾಕರನ ಪ್ರಭೆಯಂತೆ ಶಿವನ ಸ್ವರೂಪವಾಗಿದೆ. ಅಂದರೆ ವೇದವಾಕ್ಯಗಳು ಶಿವನ ವೈಖರೀವಾಕ್ಯಗಳೇ ಆಗಿರುವುವು. ಈ ವೈಖರೀ ವಾಕ್ಯಗಳಿಗೆ ಕಾರಣವು ಮಧ್ಯಮೆ ಎಂಬ ವಾಕ್ಕು. ಈ ಮಧ್ಯಮೆ ಎಂಬ ವಾಕ್ಕಿಗೆ ಕಾರಣವು ಪಶ್ಯಂತೀ ಎಂಬ ವಾಕ್ಕು ಈ ಪಶ್ಯಂತೀ ವಾಕ್ಯಕ್ಕೆ ಪರಾ ವಾಕ್ಕು ಕಾರಣವಾಗಿದೆ. ಪರಾವಾಕ್ಕೆಂದರೆ ಅತಿ ಸೂಕ್ಷ್ಮವಾದದ್ದು. ಇದಕ್ಕೇನೇ ವಿಮರ್ಶಶಕ್ತಿಯೆಂದು ಹೇಳುವರು. ಮಣ್ಣು ಗಡಿಗೆಗಳಿಗೆ ಅಭೇದವಿರುವಂತೆ ಸ್ಥೂಲವಾದ ವೈಖರೀ ವಾಕ್ಯವೆಂಬ ವೇದವು ತನಗೆ ಪರಂಪರಾಕಾರಣವಾದ ಶಿವನ ವಿಮರ್ಶಶಕ್ತಿಗೆ ಅಭಿನ್ನವಾಗಿರುವುದು. ಈ ವಿಮರ್ಶಶಕ್ತಿಯು ಶಿವನಿಗೆ ಅತಿರಿಕ್ತವಲ್ಲ. ಅತಿರಿಕ್ತವಾದ ವಿಮರ್ಶಶಕ್ತಿಗೆ ಆ ಪರಶಿವಬ್ರಹ್ಮವು ವಿಷಯವಾಗಿದ್ದರೆ ಅದು ಘಟದಂತೆ ಜಡವೆನಿಸುತ್ತಿತ್ತು. ಆದುದರಿಂದ ಮಹೇಶ್ವರನ ವಿಮರ್ಶಶಕ್ತಿಯಿಂದ ಪರಂಪರಾಗತವಾದ ವೇದಾದಿ ಶಾಸ್ತ್ರವೆಂಬ ವೈಖರೀ ವಾಕ್ಯವು ಆ ವಿಮರ್ಶ

ಭವತೀತ್ಯರ್ಥಃ ಅಪರಿಚ್ಛಿನ್ನತ್ವಾತ್ ಸ್ವಾತಿರಿಕ್ತಸಂವಿದಂತರವೇದ್ಯತ್ವೇ ಘಟಾದಿವಜ್ಜಡತ್ವಪ್ರಸಂಗಾಚ್ಚ ನನ್ವೇವಂಚೇತ್ "ಶಾಸ್ತ್ರಯೋನಿತ್ವಾತ್" ಇತಿ ಸೂತ್ರೋಕ್ತಂ ವೇದಾಗಮಾದಿ ಶಬ್ದಪ್ರಮಾಣಸ್ಯ ತನ್ಮಾಹಾತ್ಮ್ಯ ಪ್ರಕಾಶನ ಹೇತುತ್ವಂ ನ ಸ್ಯಾತ್. ವೇದಾಗಮಾದಿ ಪ್ರಮಾಣಸ್ಯ ಸ್ವಾತಿರಿಕ್ತತ್ವಾತ್, ಸ್ವಾತಿರಿಕ್ತವೇದ್ಯತ್ವೇ ಜಡತ್ವ ಪ್ರಸಂಗಾತ್. ಇತಿ ಚೇನ್ನ, "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ" ಇತಿಶ್ರುತೇಃ ಬ್ರಹ್ಮಾಣಂ ಪ್ರತಿ ವೇದಾದಿಶಬ್ದಜಾಲಮುಪದೇಷ್ಟೃತ್ವ ಮಹೇಶ್ವರಸ್ಯ ಉಕ್ತೇರ್ವಿವಕ್ಷಾಧೀನತ್ವಾತ್ ಇಚ್ಛಾಯಾಃ ಸವಿಷಯತ್ವಾತ್ "ಚತ್ವಾರಿ ವಾಕ್ಪರಿಮಿತಾ ಪದಾನಿ ತಾನಿ ವಿದುರ್ಬ್ರಾಹ್ಮಣಾ ಯೇ ಮನೀಷಿಣಃ ಗುಹಾತ್ರೀಣಿ ನಿಹಿತಾನೇಂಗಯಂತಿ ತುರೀಯಾಂ ವಾಚಂ ಮನುಷ್ಯಾ ವದಂತಿ" ಇತಿ ಶ್ರುತೇಃ ಅಂಕುರಾಯಮಾಣಾಂಕುರಿತಪಲ್ಲವಿತಫಲಿತ ಸೂಕ್ಷ್ಮಾ ಪಶ್ಯಂತೀ ಮಧ್ಯಮಾ ವೈಖರ್ಯಪರಪರ್ಯಾಯಾರಂಭವಿವಕ್ಷಾಧ್ಯವಸಾಯೋಕ್ತಿರೂಪೇಣ ಸ್ವವಿಮರ್ಶಶಕ್ತಿರೂಪತಾವಗಮಾತ್ ತಸ್ಯಾಃ ಸ್ವಾನತಿರಿಕ್ತತ್ವಾತ್ ಅನಧಿಗತ ತನ್ಮಾಹಾತ್ಮ್ಯ ಲೇಶ ಪ್ರಕಾ

ಶಕ್ತಿಯ ರೂಪವೇ ಆಗಿದೆ. ಆದಕಾರಣದಿಂದ ಶಾಸ್ತ್ರಕ್ಕೆ ಆ ಮಹೇಶ್ವರನ ಸ್ವಲ್ಪ ಮಹಾತ್ಮ್ಯದ ಪ್ರಕಾಶಕತನವು ಉಂಟು ಎಂಬುವುದೇ ವ್ಯಾಸಮಹರ್ಷಿಗಳು ಹೇಳಿದ 'ಶಾಸ್ತ್ರಯೋನಿತ್ವಾತ್' ಎಂಬುವ ಸೂತ್ರದ ಅಭಿಪ್ರಾಯವು.

ಅವರು ಪರಶಿವಬ್ರಹ್ಮಕ್ಕೆ ಇತರವಾದ ಶಾಸ್ತ್ರದಿಂದ ಗಮ್ಯತ್ವವನ್ನು ಹೇಳಿರುವುದಿಲ್ಲ. ಮೇಲೆ ಹೇಳಿದ ಪ್ರಕಾರ ಬ್ರಹ್ಮಕ್ಕೆ ಅಭಿನ್ನವಾದ ಶಾಸ್ತ್ರವು ಬ್ರಹ್ಮಕ್ಕೆ ಪ್ರಕಾಶಕವಾಗುತ್ತದೆಂದು ಗೊತ್ತಾಗುತ್ತದೆ ಹಾಗಾದರೆ "ನ ವಾಗ್ಗಚ್ಛತಿ" (ಬ್ರಹ್ಮವನ್ನು ಹೊಂದುವುದಿಲ್ಲ) ಎಂದು ಶ್ರುತಿಯು ಏಕೆ ಹೇಳುತ್ತದೆ. ವಸ್ತುತಃ ಶುದ್ಧವಾದ ವೇದಾದಿ ಶಬ್ದಪ್ರಪಂಚವು ಶಿವನಿಗೆ ಅಭಿನ್ನವಾಗಿದ್ದರೂ ಅಶುದ್ಧವಾದ ಶಬ್ದಪ್ರಪಂಚವು ಶಿವನಿಗೆ ಭಿನ್ನವಾಗಿದೆ. ಆದ್ದರಿಂದ ಆ ಭಿನ್ನವಾದ ಶಬ್ದಪ್ರಪಂಚವು ಪರಶಿವನನ್ನು ತನಗೆ ವಿಷಯಮಾಡಿಕೊಳ್ಳಲು ಸಮರ್ಥವಾಗುವುದಿಲ್ಲವೆಂದು ಹೇಳುವಲ್ಲಿ ಆ ಶ್ರುತಿಯ ತಾತ್ಪರ್ಯವಿರುತ್ತದೆಂದು ಸ್ಪಷ್ಟವಾಗುತ್ತದೆ. ಬ್ರಹ್ಮವು ಅತಿರಿಕ್ತವಾದ ಶಾಸ್ತ್ರಕ್ಕೆ ವಿಷಯವಾಗುತ್ತದೆಂಬುವುದು ಪುರುಷನು ತನ್ನ ಪಾದದಿಂದ ತನ್ನ ಶಿರಸ್ಸಿನ ನೆರಳನ್ನು ದಾಟುವನೆಂಬುವುದಕ್ಕೆ ಸಮಾನವಾಗಿದೆ. ಎಂದು ತ್ರಿಕಹೃದಯಗ್ರಂಥವೂ ಆ ಪರಶಿವ ಬ್ರಹ್ಮದಲ್ಲಿ ಪ್ರಮಾಣ ಕಲ್ಪನಮಾಡುವುದರಿಂದೇನುಪ್ರಯೋಜನವೆಂದು ತಂತ್ರಾಲೋಕವೆಂಬ ಗ್ರಂಥವೂ ಹೇಳುತ್ತದೆ. ಆದ್ದರಿಂದ ಆ ಬ್ರಹ್ಮವು ತನಗೆ ಅತಿರಿಕ್ತವಾದ ವಾಕ್ಕಿಗೆ ವಿಷಯವಾಗುವುದಿಲ್ಲ. ಮತ್ತು ಆ ಪರಶಿವ ಬ್ರಹ್ಮವನ್ನು ಮನಸ್ಸೂ ಕೂಡ ಹೊಂದುವುದಿಲ್ಲಾ ಎಂದು ಶ್ರುತಿಯು ಹೇಳುತ್ತದೆ. ಹಾಗಾದರೆ "ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ" "ಹೃದಾ

ಶಸ ಹೇತುತ್ವಾತ್ ವೇದೈಕಪ್ರಮಾಣಗಮ್ಯತ್ವಂ ತಲ್ಲಿಂಗಸ್ಯ ಸಿದ್ಧ್ಯತಿ, ನನ್ವೇವಂ ಚೇತ್ ಕಥಂ ನವಾಗ್ಗಚ್ಛತೀತ್ಯುಕ್ತಂ ಸಮಂಜಸಂಭವ ? ಇತಿ ಚೇದ್ಬ್ರೂಮಃ ನವಾಗ್ಗಚ್ಛತೀತ್ಯುಕ್ತಿಸ್ತು ಸ್ವಾತಿರಿಕ್ತತ್ವೇನ ಪ್ರತೀಯಮಾನವಾಗ್ವಿಷಯತಾಂ ಬ್ರಹ್ಮಣೋ ವಾರಯತಿ ನತು ತದನತಿರಿಕ್ತ ವಾಗ್ವಿಷಯತಾಂ ಅತಿರಿಕ್ತವಾಗ್ವಿಷಯಕತ್ವೇ ಜಡತ್ವಾದಿಪ್ರಸಂಗಃ ಉಕ್ತಂಚ ಶ್ರೀತ್ರಿಕಹೃದಯೇ ಅತಿರಿಕ್ತಪ್ರಮಾಣವಿಷಯತ್ವಂ ಬ್ರಹ್ಮಣೋ ನ ಸಂಭವತೀತಿ | ಸ್ವಪದಾಸ್ವ ಶಿರಶ್ಛಾಯಾಂ ಯದ್ವಲಂಘಿತು ಮೀಹತೇ | ಪಾದೋದ್ದೇಶೇ ಶಿರೋ ನಸ್ಯಾ ತ್ತಥೇಯಂ ಬೈಂದವೀಕಲಾ || ಇತಿ ಉಕ್ತಂಚ ತಂತ್ರಾಲೋಕೇ ಪ್ರಕಾಶೋ ನಾಮ ಮಶ್ಛಾಯಂ ಸರ್ವತ್ರೈವಪ್ರಕಾಶತೇ ಅನಪಸ್ನವನೀಯತ್ವಾತ್ ಕಿಂ ತಸ್ಮಿನ್ಮಾನ ಕಲ್ಪನೈಃ|| ಇತಿ ನೋ ಮನಸ್ತತ್ರ ಭಾವಲಿಂಗೆ ನಚ್ಛತಿ ಸ್ವಾನವಚ್ಛಿನ್ನತ್ವಾತ್ತಸ್ಯ ನನು ,,ಹೃದಾ ಹೃದಿಸ್ಥಂ ಮನಸಾ ಯ ಏನಂ ಏದುರಮೃತಾಸ್ತೇ ಭವಂತಿ'' ದೃಶ್ಯತೇ ತ್ವಗ್ರ್ಯಯಾಬುಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ'' ಹೃದಾಮನೀಷಾ ಮನಸಾಭಿಕ್ಲ ಪ್ತೋಯ ಏತದ್ವಿದುರಮೃತಾಸ್ತೇ ಭವಂತಿ'' ,,ಮನಸೈವಾನುದ್ರಷ್ಟವ್ಯಂ'' ,,ಮನಸೈವೇದಮಾಪ್ತವ್ಯಂ'' ಬುದ್ಧ್ಯಾ ಲೋಕನಸಾಧ್ಯ ಸ್ಮಿನ್ ವಸ್ತು ಸ್ವಸ್ತವಿ

ಹೃದಿಸ್ಥಂ'' ''ಮನಸೈವೇದಮಾಪ್ತವ್ಯಂ'' (ಹೃದಯದಲ್ಲಿ ಇರುವ ಬ್ರಹ್ಮವನ್ನು ಮನಸ್ಸಿನಿಂದ ಯಾರು ತಿಳಿಯುವರೋ ಅವರು ಮುಕ್ತರಾಗುವರು. ಮನಸ್ಸಿನಿಂದಲೇ ಬ್ರಹ್ಮವನ್ನು ಹೊಂದಬೇಕು.) ಎಂಬುವ ಮೊದಲಾದ ಶ್ರುತಿಗಳು ಮನಸ್ಸು ಬ್ರಹ್ಮದಲ್ಲಿ ಪ್ರವೇಶಮಾಡುತ್ತದೆಂದು ಹೇಳುವವು. ''ನೊ ಮನಃ'' ಎಂಬ ಶ್ರುತಿಯು ಮನಸ್ಸು ಬ್ರಹ್ಮದಲ್ಲಿ ಪ್ರವೇಶಮಾಡುವುದಿಲ್ಲವೆಂದು ಹೇಳುತ್ತದೆ. ಮತ್ತು ''ಬುಧ್ಯಾಲೋಕನಸಾಧ್ಯೆ'' ಎಂಬ ಭಗವದ್ಗೀತೆಯೂಕೂಡ ಮನಸ್ಸು ಬ್ರಹ್ಮದಲ್ಲಿ ಪ್ರವೇಶಿಸುತ್ತದೆಂದು ಹೇಳುತ್ತದೆ. ಅಂದಮೇಲೆ ಬ್ರಹ್ಮದಲ್ಲಿ ಮನಸ್ಸು ಪ್ರವೇಶಿಸುತ್ತದೆಂದು ಹೇಳುವ ಶ್ರುತಿಗೂ ಸ್ಮೃತಿಗೂ ಅಪ್ರಮಾಣವೆನ್ನಬೇಕೊ ಮನಸ್ಸು ಬ್ರಹ್ಮದಲ್ಲಿ ಪ್ರವೇಶಿಸುವದಿಲ್ಲವೆಂದು ಹೇಳುವ ಶ್ರುತಿಗೆ ಅಪ್ರಾಮಾಣವೆನ್ನಬೇಕೊ ಎಂದು ಶಂಕೆಯು ಪ್ರಾಪ್ತವಾಗಲು, ಈ ಶಂಕೆಗೆ ಕೆಲವರು ಈ ಪ್ರಕಾರವಾಗಿ ಸಮಾಧಾನವನ್ನು ಹೇಳುತ್ತಾರೆ. ಹೇಗಂದರೆ ಅಜ್ಞಾನದ ಆವರಣ ನಾಶಕ್ಕಾಗಿ ಅಜ್ಞಾನಾವಚ್ಛಿನ್ನಚೈತನ್ಯಕ್ಕೆ 'ಅಹಂಬ್ರಹ್ಮಾಸ್ಮಿ' ಎಂಬ ವೃತ್ತಿವ್ಯಾಪನೆಯುಂಟು. ಆದ್ದರಿಂದ ಮನಸ್ಸು ಬ್ರಹ್ಮದಲ್ಲಿ ಪ್ರವೇಶಮಾಡುತ್ತದೆಂದು ಹೇಳುವ ಶ್ರುತಿ ಸ್ಮೃತಿ ವಾಕ್ಯಗಳಿಗೆ ವಿರೋಧವಿಲ್ಲ. ಫಲವ್ಯಾಪ್ಯತ್ವವನ್ನು ಅಂಗೀಕರಿಸದಿರುವುದರಿಂದ ಅಂದರೆ ''ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ,, ಎಂಬುವ ಶ್ರುತಿಯಲ್ಲಿ ಹೇಳಲ್ಪಟ್ಟ ಕೇವಲ ಅಪರೋಕ್ಷ ಸ್ವರೂಪವಾದ ಶುದ್ಧಬ್ರಹ್ಮವನ್ನು ಅ ಹಾನುಬ್ರಹ್ಮನೆಂಬುವ ವೃತ್ತಿಯು ವ್ಯಾಪಿಸುವುದಿಲ್ಲ. ಆದ್ದರಿಂದ ಮನಸ್ಸು ಬ್ರಹ್ಮದಲ್ಲಿ ಪ್ರವೇಶಮಾಡುವುದಿಲ್ಲವೆಂದು ಹೇಳುವ ಶ್ರುತಿವಾ

ತಾಯದಿ ಬುದ್ಧಿಯೋಗ ಮುಪಾಶ್ರಿತ್ಯಮಚ್ಚಿತ್ತಸ್ಸತತಂಭವ ಇತ್ಯಾದ್ಯನೇಕ ಶ್ರುತಿ ಸ್ಮೃತಿ ವಾಕ್ಯಾನಾಮಪ್ರಾಮಾಣ್ಯಂ ಸ್ಯಾತ್ ಇತಿ ಚೇದತ್ರ ಕೇಚಿತ್ ಆವರಣನಾಶಾರ್ಥಂ ಅಜ್ಞಾನಾವಚ್ಛಿನ್ನಚೈತನ್ಯಸ್ಯ ವೃತ್ತಿವ್ಯಾಪ್ಯತ್ವಾಂಗೀಕಾರಾತ್ ನೋಕ್ತವಾಕ್ಯಾನಾಮಪ್ರಾಮಾಣ್ಯಂ ಫಲವ್ಯಾಪ್ಯತ್ವಸ್ಯಾನಂಗೀಕಾರಾಚ್ಚ ‹‹ನೊಮನಸೊ›› ‹‹ಯನ್ಮನಸಾನಮನುತೇ›› ಇತ್ಯಾದಿವಾಕ್ಯಾನಾಂಚ ನಾಪ್ರಾಮಾಣ್ಯಂ ತದುಕ್ತಂ ಫಲವ್ಯಾಪ್ಯತ್ವಮೇವಾಸ್ಯ ಶಾಸ್ತ್ರಕೃದ್ಭಿರ್ನಿವಾರಿತಂ| ಬ್ರಹ್ಮಣ್ಯಜ್ಞಾನನಾಶಾಯ ವೃತ್ತಿವ್ಯಾಪ್ತಿರಪೇಕ್ಷಿತಾ || ಇತಿ ತಥಾಹಿ. ತತ್ವಮಸ್ಯಾದಿ ವಾಕ್ಯಾದಖಂಡಾರ್ಥಾವಬೋಧಾನಂತರಂ ಅಹಂಬ್ರಹ್ಮಾಸ್ಮೀತಿ ಚಿತ್ತವೃತ್ತಿರುದೇತಿ ಸಾಚ ಯದಾ ಅಜ್ಞಾನಾವಚ್ಛಿನ್ನಚೈತನ್ಯಂ ಚಿತ್ಪ್ರತಿಬಿಂಬಸಹಿತಾಸತೀ ವಿಷಯೀಕರೋತಿ ತದಾಚೈತನ್ಯಗತಾಜ್ಞಾನಂ ನಿವರ್ತಯತಿ ತದಜ್ಞಾನನಾಶಾನಂತರಂ ಶುದ್ಧಚೈತನ್ಯಂ ಸ್ವಯಮೇವಪ್ರಕಾಶತೇ ತಾದೃಶಾಖಂಡಾಕಾರವೃತ್ತ್ಯಾ ಅಜ್ಞಾನಸ್ಯ ನಷ್ಟತ್ವೇಪಿ ತತ್ಕಾರ್ಯಮವಶಿಷ್ಯತೇ ಇತಿ ಚೇನ್ನ ಪಟೋಪಾದಾನ ತಂತುದಾಹೇ ಪಟನಾಶಸ್ಯೇವ ಮೂಲಾವಿದ್ಯಾನಾಶೇ ತತ್ಕಾರ್ಯಸ್ಯಾಖಿಲಸ್ಯನಷ್ಟತ್ವಾತ್ ತದುಕ್ತಂ ‹‹ತತ್ವಮಸ್ಯಾದಿವಾಕ್ಯೋತ್ಥ

ಕ್ಯಕ್ಕೂ ವಿರೋಧವಿಲ್ಲ. ಹೇಗೆಂದರೆ ತತ್ವಮಸ್ಯಾದಿ ವಾಕ್ಯಗಳಿಂದ ಅಖಂಡವಾದ ಅರ್ಥದ ಬೋಧವಾಗಲು ನಾನು ಬ್ರಹ್ಮನು ಎಂಬುವ ಅಖಂಡಾಕಾರವಾದ ಚಿತ್ತವೃತ್ತಿಯು ಹುಟ್ಟಿ ಅಜ್ಞಾನಾವಚ್ಛಿನ್ನಚೈತನ್ಯವನ್ನು ಜೀವನನ್ನು ಹೊಂದಿ ಅಲ್ಲಿರುವ ಅಜ್ಞಾನವನ್ನು ನಾಶಮಾಡುತ್ತದೆ. ಆಮೇಲೆ ಶುದ್ಧಚೈತನ್ಯವು ತನ್ನಿಂದ ತಾನೇ ಪ್ರಕಾಶಿಸುತ್ತದೆ. ಆ ಅಜ್ಞಾನದ ನಾಶವಾದಮೇಲೆ ಅದರ ಕಾರ್ಯವಾದ ಸಂಸಾರವೂ ಕೂಡ ನಾಶವಾಗುತ್ತದೆ. ತಂತುಗಳನ್ನು ಸುಟ್ಟರೆ ಪಟವು ಉಳಿಯಲಾರದಷ್ಟೆ? ಎಂದು ಹೇಳುತ್ತಾರೆ. ಅಂದರೆ ಇವರ ತಾತ್ಪರ್ಯವು ಅಜ್ಞಾನಾವಚ್ಛಿನ್ನಚೈತನ್ಯದಲ್ಲಿ ಅಂದರೆ ಜೀವಾತ್ಮನಲ್ಲಿ ಮನಸ್ಸು ಪ್ರವೇಶಮಾಡುತ್ತದೆ. ಶುದ್ಧಚೈತನ್ಯವಾದ ಪರಬ್ರಹ್ಮದಲ್ಲಿ ಮನಸ್ಸು ಪ್ರವೇಶಮಾಡುವುದಿಲ್ಲವಾದುದರಿಂದ ಎರಡು ವಾಕ್ಯಗಳಿಗೂ ವಿರೋಧವಿಲ್ಲೆಂದು ಆಯಿತು. ಇವರ ಮತವನ್ನು ನಿರಸನಮಾಡುವುದಕ್ಕಾಗಿ ಶ್ರೀ ಶಾಂಕರೀಕಾರನು ವಿಚಾರಮಾಡುವದೇನೆಂದರೆ ಆ ಬ್ರಹ್ಮವು ತನಗೆ ಇತರವಾದ ನಾನು ಬ್ರಹ್ಮನೆಂಬ ವೃತ್ತಿಗೆ ವಿಷಯವೆಂದರೆ ಘಟದಂತೆ ಆ ಬ್ರಹ್ಮವು ಜಡವಾಗಿರಬೇಕಾಗುವುದು ಇದು ಘಟವು ಎಂಬುವ ಅಂತಃಕರಣವೃತ್ತಿಗೆ ವಿಷಯವಾಗುವುದಾದ್ದರಿಂದಲೇ ಘಟವು ಜಡವಾಗಿರುವುದು. ಇದರಂತೆ ಬ್ರಹ್ಮವೂಕೂಡ ವೃತ್ತಿಗೆ ವಿಷಯವಾದರೆ ಜಡವಾಗಬೇಕಾಗುವದು. ಆ ಬ್ರಹ್ಮವು ತನಗೆ ಅಭಿನ್ನವಾದ ನಾನು ಬ್ರಹ್ಮನೆಂಬ ಅಂತಃಕರಣವೃತ್ತಿಗೆ ವಿಷಯವೆಂದರೆ, ಸ್ವಸಿದ್ಧಾಂತಹಾನಿಯಾಗುವುದಲ್ಲದೆ ನಮ್ಮ ಶಿವಾದ್ವೈತಮತವನ್ನು ಅಂಗೀಕರಿಸಿದಂತಾಗುವುದು, ಎಂದು ಅಂದರೆ ಬ್ರಹ್ಮಾ

ಸಮ್ಯಗ್ಧೀಜನ್ಮಮಾತ್ರತಃ| ಅವಿದ್ಯಾ ಸಹ ಕಾರ್ಯೇಣ ನಾಸೀದಸ್ತಿ ಭವಿಷ್ಯತಿ ||
ಇತಿ ವದಂತಿ ಅತ್ರಕಿಂಚಿದ್ವಿಚಾರ್ಯತೆ ಬ್ರಹ್ಮಣ ಸ್ವಾತಿರಿಕ್ತ ವೃತ್ತಿವಿಷಯತ್ವೆ ಘಟಾದಿವಜ್ಜಡತ್ವ ಪ್ರಸಂಗಾತ್ ಅಜ್ಞಾನಾವಚ್ಛಿನ್ನ ಬ್ರಹ್ಮಣಸ್ತತ್ವೇಪಿ ನ ತದ್ಗತಾಜ್ಞಾನಂ ನಿವರ್ತಯತಿ ಸಾ ಜಡಾ ತಯೋೇರವಿರೋಧಿತ್ವಾತ್ "ಅವಿರೋಧಿತಯಾಕರ್ಮ ನಾವಿದ್ಯಾಂ ವಿನಿವರ್ತತೆ" ಇತ್ಯುಕ್ತತ್ವಾತ್ ತಾದೃಶ ವೃತ್ಯವಚ್ಛಿನ್ನಚೈತನ್ಯಸ್ಯ ತನ್ನಿವರ್ತಕತ್ವಮಿತಿಚೇನ್ನಲೋಹಾವಚ್ಛಿನ್ನ ಸೂಚ್ಯಾದೇರಿವ ತಸ್ಯ ತನ್ನಾಶಕ ಸಾಮರ್ಥ್ಯಾಯೋಗಾತ್ ತಸ್ಮಾನ್ನ ಸಾ ಫಲವತೀ ಬ್ರಹ್ಮಾತಿರಿಕ್ತಾ ವಾ, ಇತಿ ಸಂಕ್ಷೇಪಃ ನನುಕಥಂ ತರ್ಹಿ" ಮನಸೈವಾನುದ್ರಷ್ಟವ್ಯಂ "ಮನಸೈವೇದ

ದ್ವೈತಿಯು ಶಿವಾದ್ವೈತಿಯನ್ನು ಕುರಿತು ಎಲೈ ಶಿವಾದ್ವೈತಿಯೆ ಆ ವೃತ್ತಿಯು ಬ್ರಹ್ಮಕ್ಕೆ ಅತಿರಿಕ್ತವಾದದ್ದೆ ಆದರೂ ಅದು ಶುದ್ಧ ಚೈತನ್ಯವನ್ನು ವ್ಯಾಪಿಸುವುದಿಲ್ಲ. ಕಿಂತುಅಜ್ಞಾನಾವಚ್ಛಿನ್ನಚೈತನ್ಯವನ್ನು ಹೊಂದಿ ಅಲ್ಲಿರುವ ಅಜ್ಞಾನವನ್ನು ನಾಶಮಾಡುತ್ತದೆ. ಶುದ್ಧಬ್ರಹ್ಮವು ಅದಕ್ಕೆ ವಿಷಯವಾಗುವುದಿಲ್ಲವಾದ್ದರಿಂದ ಬ್ರಹ್ಮವು ಜಡವೆನಿಸಲಾರದು ಎಂದು ಉತ್ತರಕೊಟ್ಟನು. ಎಲೈ ಬ್ರಹ್ಮಾದ್ವೈತಿಯೆ ಆವೃತ್ತಿಯು ಜಡವಲ್ಲವೆ? ಅದರಲ್ಲಿ ಅಜ್ಞಾನವನ್ನು ನಾಶಮಾಡುವ ಸಾಮರ್ಥ್ಯವು ಎಲ್ಲಿಂದ ಬರಬೇಕು. ಅಜ್ಞಾನವೂ ಜಡವು ಅದರ ಕಾರ್ಯವಾದ ನಾನು ಬ್ರಹ್ಮನೆಂಬ ಅಂತಃಕರಣವೃತ್ತಿಯೂ ಜಡವು. ಅಂದಮೇಲೆ ಅವಿರೋಧಿಗಳಾದ ಇವೆರಡಕ್ಕೂ ಒಂದರಿಂದೊಂದರ ನಾಶವನ್ನು ಹೇಳುವುದು ಹುಚ್ಚುತನವಲ್ಲವೆ? "ಅವಿರೋಧಿತಯಾ ಕರ್ಮ ನಾವಿದ್ಯಾಂ ವಿನಿವರ್ತತೆ" ಎಂದು ಹೇಳಿದ ನಿಮ್ಮ ಆಚಾರ್ಯರ ಮಾತನ್ನೇ ನೀವು ಮರತುಬಿಟ್ಟಂತಾಯಿತಲ್ಲ. ಕರ್ಮವು ಅವಿದ್ಯೆಗೆ ವಿರೋಧಿಯಾಗದಿರುವದರಿಂದ ಅದು ಅವಿದ್ಯೆಯ ನಿವೃತ್ತಿಯನ್ನು ಮಾಡಲಾರದೆಂದು ಹೇಳುವ ನೀವುಗಳು ವಿರೋಧಿಯಾಗದಿರುವ ಆ ಅಂತಃಕರಣವೃತ್ತಿಯಿಂದ ಅವಿದ್ಯೆಯ ನಾಶವನ್ನು ಹೇಗೆ ಹೇಳುತ್ತೀರಿ ಮತ್ತು ಆ ಜಡವಾದ ವೃತ್ತಿಯು ಅವಿದ್ಯೆಯನ್ನು ನಾಶಮಾಡುವ ಬಗೆ ಹೇಗೆ? ಶಿವಾದ್ವೈತಿಯೇ ಕೇಳು ನಾವು ಕೇವಲ ಆ ವೃತ್ತಿಯೇ ಅಜ್ಞಾನಕ್ಕೆ ನಾಶಕವೆಂದು ಹೇಳುವುದಿಲ್ಲ. ಪರಂತು ಆ ವೃತ್ಯವಚ್ಛಿನ್ನಚೈತನ್ಯವು ಅಜ್ಞಾನವನ್ನು ನಾಶಮಾಡುತ್ತದೆಂದು ಹೇಳುತ್ತೇವೆ. ಆದ್ದರಿಂದ ನಿನ್ನ ಪ್ರಶ್ನೆಗೆ ಆಸ್ಪದವಿಲ್ಲ. ಆ ಚೈತನ್ಯವು ಜಡವಲ್ಲವಷ್ಟೆ? ಎಲೈ ಬ್ರಹ್ಮಾದ್ವೈತಿಯೆ ವೃತ್ಯವಚ್ಛಿನ್ನ ಚೈತನ್ಯವೇ ನಾಶಕವೆಂದು ಹೇಳುವ ನೀನು ಶುದ್ಧ ಚೈತನ್ಯವೇ ಆ ಜ್ಞಾನಕ್ಕೆ ನಾಶಕವೆಂದು ಏಕೆ ಹೇಳುವುದಿಲ್ಲ. ಶಿವಾದ್ವೈತಿಯೇ ಆ ಶುದ್ಧ ಚೈತನ್ಯವು ನಿರ್ಲಿಪ್ತ ಮತ್ತು ಅಸಂಗವಲ್ಲವೆ ಅದರಲ್ಲಿ ನಾಶಕ ತನವು ಬರುವುದಿಲ್ಲ. ಹಾಗಾದರೆ ಎಲೈ ಬ್ರಹ್ಮಾದ್ವೈತಿಯೇ ಸಸಂಗವಾದ ಆವೃತ್ತಿಗೆ ನಾಶಕತನವನ್ನು ಹೇಳು. ಅಂದರೆ ಶಿವಾದ್ವೈತಿಯೇ ಆ ವೃತ್ತಿಯು ಜಡವು ಅದರಲ್ಲಿ ನಾಶಮಾಡುವ ಸಾಮರ್ಥ್ಯವು ಇಲ್ಲವೆಂದು ನೀನೇ ಕೇಳಿಲ್ಲವೆ. ಆದ್ದರಿಂದ ಆ ವೃತ್ಯವಚ್ಛಿನ್ನವಾದ ಚೈತನ್ಯಕ್ಕೆ

ಮಾಪ್ತವ್ಯಂ'' ''ದೃಶ್ಯತೇ ತ್ವಗ್ರ್ಯಯಾ ಬುಧ್ಯಾ'' ಇತ್ಯಾದಿವಾಕ್ಯಾನಾಂ ಸಂಗತಿಃ ಇತಿ ಚೇದುಚ್ಯತೆ ''ತತ್ಪ್ರಾಣೇಷ್ವಂ ತರ್ಮನಸೋಲಿಂಗಂ'' ಇತಿ ಶ್ರುತಿಸಿದ್ಧ ಪ್ರಾಣಲಿಂಗವಿಷಯಕತ್ವಂ ತೇಷಾಂ ವಾಕ್ಯಾನಾಮಿತಿಬ್ರೂಮಃ ಶಿವಾದಿ ಧರಣ್ಯಂತ ಷಟ್‌ತ್ರಿಂಶತ್ತತ್ತ್ವೋರ್ಧ್ವಗತ ಪರಬ್ರಹ್ಮಣೋ ಲಿಂಗಸ್ಯ ಘೃತಕಾಠಿಣ್ಯನ್ಯಾಯೇನ ಪ್ರಾಣಲಿಂಗರೂಪತ್ವಾತ್ ತಸ್ಯಚಮನಸೋಗ್ರಾಹ್ಯತ್ವಾತ್| ಪ್ರಾಣಲಿಂಗಂ ಮನೋಗ್ರಾಹ್ಯಂ ಭವೇತ್ ಸಕಲನಿಷ್ಕಲಂ || ಇತ್ಯುಕ್ತತ್ವಾತ್ ನ ''ಮನಸೈವೇದಮಾಪ್ತವ್ಯಂ'' ಇತ್ಯಾದಿ ಶ್ರುತಿವಾಕ್ಯವ್ಯಾಕೋಪಃ ''ಯನ್ಮನಸಾ ನಮನುತೇ'' ಇತ್ಯಾದಿ ವಾಕ್ಯಾನಾಂತು ನಿರ್ಗುಣ ನಿಷ್ಕಲ ಭಾವಲಿಂಗ ವಿಷಯ

ನಾಶಕತನವನ್ನು ಹೇಳಿದ್ದೇವೆ. ತಿಳಿಯಿತೆ? ಒಳ್ಳೇದು ಬ್ರಹ್ಮಾದ್ವೈತಿಯೆ ನೋಡು ! ಕೇವಲ ವೃತ್ತಿಯಲ್ಲಿಯೂ ಕೇವಲ ಚೈತನ್ಯದಲ್ಲಿಯೂ ಇಲ್ಲದ ನಾಶಕತನವು ವೃತ್ತಿಯಿಂದ ಕೂಡಿದ ಚೈತನ್ಯದಲ್ಲಿ ಬರಬಹುದೆ? ಇದು ನಿನ್ನ ಅನುಭವಕ್ಕಾದರೂ ಬರುತ್ತದೇನು. ಒಂದೊಂದರಲ್ಲಿಲ್ಲದ ಧರ್ಮವು ಒಂದರಿಂದ ಕೂಡಿದ ಮತ್ತೊಂದರಲ್ಲಿ ಬರುತ್ತದೆನ್ನುವ ಮಾತು ಅನುಭವವಿರುದ್ಧವಲ್ಲವೆ? ಕುಂಡಲದಲ್ಲಿಯೂ ದೇವದತ್ತನಲ್ಲಿಯೂ ಇಲ್ಲದ ಪಶುತನವು ಕುಂಡಲ ವಿಶಿಷ್ಟನಾದ ದೇವದತ್ತನಲ್ಲಿ ಬರುತ್ತದೆಂದು ಹೇಳಬಹುದೆ? ಮತ್ತು ವೃತ್ಯವಚ್ಛಿನ್ನ ಚೈತನ್ಯವು ವೃತ್ತಿಗೆ ಅಧೀನವಾಗಲಿಲ್ಲವೆ? ಲೋಹಪಿಂಡದಲ್ಲಿ ಪೂರ್ಣವಾಗಿ ಜಡಿದ ಸೂಜಿಯು ಲೋಹಪಿಂಡಾಧೀನವಲ್ಲವೇ? ಆ ಸೂಜಿಯು ಮತ್ತೊಂದನ್ನು ನಾಶಮಾಡಲಾರದು ಅದರಂತೆ ವೃತ್ಯವಚ್ಛಿನ್ನವಾದ ಚೈತನ್ಯವೂ ಕೂಡಾ ಅವಿದ್ಯೆಯನ್ನು ನಾಶಮಾಡಲಾರದು ಆದ್ದರಿಂದ ಆ ಜಡವಾದ ವೃತ್ತಿಯು ಫಲವುಳ್ಳದ್ದಾಗಲಿಲ್ಲ. ಆದಕಾರಣ ವೃತ್ತಿಗೆ ಫಲವ್ಯಾಪ್ತಿಯು ಇಲ್ಲದಿರುವದರಿಂದ ಮನಸ್ಸು ಬ್ರಹ್ಮದಲ್ಲಿ ಪ್ರವೇಶಿಸುವದಿಲ್ಲವೆಂದು ಹೇಳುವ ವಾಕ್ಯಕ್ಕೆ ವಿರೋಧವಿಲ್ಲವೆಂದೂ ಬ್ರಹ್ಮಕ್ಕೆ ವೃತ್ತಿವ್ಯಾಪ್ತಿಯನ್ನು ಸ್ವೀಕರಿಸುವದರಿಂದ ಮನಸ್ಸು ಬ್ರಹ್ಮದಲ್ಲಿ ಪ್ರವೇಶಿಸುತ್ತದೆ, ಎಂಬುವ ವಾಕ್ಯಗಳಿಗೆ ವಿರೋಧವಿಲ್ಲವೆಂದೂ, ಶೃತಿವಾಕ್ಯಗಳ ವಿರೋಧವನ್ನು ಪರಿಹರಿಸುವದು ಯುಕ್ತವಲ್ಲೆಂದು ಶಾಂಕರೀಕಾರನು ಸಂಕ್ಷೇಪದಿಂದ ನಿರಸನ ಮಾಡಿರುವನು ಎಲೈ ಶಿವಾದ್ವೈತಿಯೆ ನಿನ್ನ ಮತದಲ್ಲಿ ಮನಸ್ಸು ಬ್ರಹ್ಮದಲ್ಲಿ ಪ್ರವೇಶಮಾಡುವದಿಲ್ಲವೆಂಬರ್ಥವುಳ್ಳ "ನೋಮನೋ'' ಅವಾಂಗ್ಮಾನಸಗೋಚರಃ'' ಎಂಬುವ ಮೊದಲಾದ ವಾಕ್ಯಗಳಿಗೂ ''ಹೃದಾ ಹೃದಿಸ್ಥಂ,, ಮನಸೈವೇದಮಾಪ್ತವ್ಯಂ'' ಎಂಬುವ ಮೊದಲಾದ ಮನಸ್ಸು ಬ್ರಹ್ಮದಲ್ಲಿ ಪ್ರವೇಶಿಸುತ್ತದೆಂಬರ್ಥವುಳ್ಳ ವಾಕ್ಯಗಳಿಗೂ, ವಿರೋಧವನ್ನು ಹೇಗೆ ಪರಿಹರಿಸುವಿ ಅಂದರೆ ಎಲೈ ಬ್ರಹ್ಮಾದ್ವೈತಿಯೆ ನಮ್ಮ ವೀರಶೈವ ಮತದಲ್ಲಿ ನಮ್ಮ ಪೂರ್ವಾಚಾರ್ಯರು ಆ ವಿರುದ್ಧವಾಕ್ಯಗಳಿಗೆ ಬಹುಸರಳ ರೀತಿಯಿಂದ ವಿರೋಧವನ್ನು ಪರಿಹರಿಸಿರುವರು, ಹೇಗಂದರೆ "ತತ್ಪ್ರಾಣೇಷ್ವಂತರ್ಮನಸೋಲಿಂಗಂ,, ಅಂದರೆ ಪ್ರಾಣಪ್ರಧಾನವಾದ ಸೂಕ್ಷ್ಮ ಶರೀರದಲ್ಲಿರುವ ಆ ಲಿಂಗವು ಮನಸ್ಸಿನಿಂದ ಗ್ರಹಿಸಲು ಯೋಗ್ಯ

ಕತ್ವೇನ ಸಾಮಂಜಸ್ಯಾಚ್ಚ ನ ವಿರೋಧಃ ತಸ್ಯ ಭಾವೈಕಗ್ರಾಹ್ಯತ್ವಾತ್. "ಭಾವಗ್ರಾಹ್ಯಮನೀಡಾಖ್ಯಂ ಭಾವಾಭಾವಕರಂ ಶಿವಂ ಕಲಾಸರ್ಗಕರಂ ದೇವಂ ಯೇ ವಿದುಸ್ತೇ ಜಹುಸ್ತನುಂ" ಇತಿಶ್ರುತೇಃ" ನಿಷ್ಕಲಂ ಭಾವಲಿಂಗಂ ಸ್ಯಾದ್ಭಾವಗ್ರಾಹ್ಯಂ ಪರಾತ್ಪರಂ ಸನ್ಮಾತ್ರಂಭಾವ ಲಿಂಗಂಸ್ಯಾದಿತಿನಿಷ್ಠಾ ಮಹಾತ್ಮನಾಂ || ಇತ್ಯನುಭವಸೂತ್ರಾಚ್ಚ ನಚ ತಸ್ಯಗ್ರಾಹ್ಯತ್ವೇ ಪರಿಚ್ಛಿನ್ನತ್ವಂದುರ್ವಾರಮಿತಿವಾಚ್ಯಂ | ಈದೃಗಿದಮಿತಿ ಪರಬ್ರಹ್ಮಣೋ ಲಿಂಗಸ್ಯ ಪರಿಚ್ಛೇದಾಸಂಭವೇಪಿ "ಅಸ್ತೀತ್ಯೇವೋಪಲಬ್ಧವ್ಯಃ" "ಭಾವಗ್ರಾಹ್ಯಂ" ಇತ್ಯಾದಿ ಶ್ರುತ್ಯಾ ಗ್ರಾಹ್ಯತ್ವಸಂಭವಾತ್ ಭಾವೋನಾಮಸತ್ತಾ ತಯಾ ಗ್ರಾಹ್ಯತ್ವಾತ್ ಪರಶಿವಸ್ಯ ಭಾವಲಿಂಗತ್ವವ್ಯಪದೇಶಃ ಅಸ್ತೀತ್ಯಾರಭ್ಯತೇವಸ್ತು ತತ್ಸತ್ತಾ ಭಾವಉಚ್ಯತೇ ಇತ್ಯನುಭವಸೂತ್ರೋಕ್ತೇಃ ಯದ್ವಾ ಭಾವೋ ನಾಮ ವಿಶುದ್ಧಚಿತ್ತಂ ಚಿತಿಶಕ್ತಿರೂಪಂ ತೇನಗ್ರಾಹ್ಯತ್ವಾತ್ಪರಶಿವಸ್ಯ ಭಾವಲಿಂಗತ್ವೇನಾಭಿಧಾನಂ | ತಸ್ಮಾತ್ತಲ್ಲಿಂಗಂ ಚಕ್ಷುರಾದಿಬಾಹ್ಯಕರಣೇನ ನಪದ್ಮಃ ನವಾ ಅಂತಃಕರಣೇನ ವಿಜಾನೀಮಃ

ವಾಗುತ್ತದೆ ಎಂಬುವ. ಈ ಶೃತಿಯಿಂದ ಸಿದ್ಧವಾದದ್ದಾಗಿಯೂ, ಸಕಲ ನಿಷ್ಕಲಸ್ವರೂಪವಾಗಿಯೂ ಇರುವ ಯಾವ ಪ್ರಾಣಲಿಂಗವಿದೆಯೊ? ಅದು ಮನಸ್ಸಿನಿಂದ ಗ್ರಹಿಸಲು ಯೋಗ್ಯವಾಗಿರುವದರಿಂದ "ಹೃದಾ ಹೃದಿಸ್ಥಂ" ಮನಸ್ಯೆವೇದ ಮಾಪ್ತವ್ಯಂ., ಎಂಬುವ ಮನಸ್ಸು ಬ್ರಹ್ಮವನ್ನು ಹೊಂದುತ್ತದೆ ಎಂಬುವ ವೊದಲಾದ ಶೃತಿಗಳಿಗೆ ವಿರೋಧವಿಲ್ಲ.

ಪರಶಿವಬ್ರಹ್ಮವು ತಾನು ಸರ್ವತ್ರವ್ಯಾಪಕವಾಗಿಯೂ, ವಿಶ್ವಾತ್ಮಕವಾಗಿಯೂ, ವಿಶ್ವಾಧಿಪತಿಯಾಗಿಯೂ ಇದ್ದರೂ ಘೃತಕಾಠಿಣ್ಯ ನ್ಯಾಯದಿಂದ ಭಕ್ತರನ್ನು ಅನುಗ್ರಹಿಸುವದಕ್ಕಾಗಿ ಸೂಕ್ಷ್ಮ ಶರೀರದಲ್ಲಿ ಪ್ರಾಣಲಿಂಗರೂಪವಾಗಿದೆ. ಈ ಪ್ರಾಣಲಿಂಗವು ಮನಸ್ಸಿನಿಂದ ಗ್ರಹಿಸಲು ಯೋಗ್ಯವಾಗಿರುವದರಿಂದ ಮನಸ್ಸು ಬ್ರಹ್ಮವನ್ನು ಹೊಂದುತ್ತದೆಂದು ಹೇಳುವ ಶ್ರುತಿಗೆ ವಿರೋಧವಿಲ್ಲ, ಮನಸ್ಸು ಬ್ರಹ್ಮದಲ್ಲಿ ಪ್ರವೇಶಮಾಡುವದಿಲ್ಲವೆಂದು ಹೇಳುವ "ನೋಮನಃ, ಯನ್ಮನಸಾನಮನುತೆ,, ಎಂಬ ಶ್ರುತಿಗಳು ಭಾವಲಿಂಗ ವಿಷಯಕಗಳು, ಆದ್ದರಿಂದ ಮನಸ್ಸು ಬ್ರಹ್ಮವನ್ನು ಹೊಂದುವದಿಲ್ಲವೆಂದು ಹೇಳುವ ಶ್ರುತಿಗಳಿಗೆ ವಿರೋಧವಿಲ್ಲ ಯಾಕಂದರೆ ಭಾವಲಿಂಗವು ಕೇವಲಭಾವದಿಂದಲೇ ಗ್ರಹಿಸಲು ಯೋಗ್ಯವಾಗಿದೆ" ಭಾವಗ್ರಾಹ್ಯಂ,, (ಭಾವದಿಂದ ಗ್ರಾಹ್ಯವು) ಎಂದು ಶ್ರುತಿಯೂ,, ಸದ್ರೂಪಂ ಭಾವಲಿಂಗಂ ಸ್ಯಾತ್, ಭಾವಗ್ರಾಹ್ಯಂ ಪರಾತ್ಪರಂ| ಎಂದು ಅನುಭವ ಸೂತ್ರವೂ ಹೇಳುತ್ತದೆ. ಭಾವಲಿಂಗಕ್ಕೂ ಕೂಡಾ ಗ್ರಾಹ್ಯತ್ವವನ್ನು ಹೇಳಿದರೆ ಅದು ಪರಿಚ್ಛಿನ್ನವಾಗಲಿಲ್ಲವೆ? ಅಂದರೆ ಇದು ಇಂಥಾದ್ದು ಎಂಬುವ ಪರಿಚ್ಛೇದ ವಿಲ್ಲದಿದ್ದರೂ "ಅಸ್ತೀತ್ಯೇವೋ ಪಲಬ್ಧವ್ಯಃ" ಭಾವಗ್ರಾಹ್ಯಂ,, ಎಂಬದಾಗಿ ಶ್ರುತಿಗಳಿರುವದರಿಂದ ಅದಕ್ಕೆ ಗ್ರಾಹ್ಯತ್ವವನ್ನು ಹೇಳಬೇಕಾಗಿದೆ. ಇಲ್ಲದಿದ್ದರೆ ಆ ಶ್ರುತಿಗಳಿಗೆ ಅಪ್ರಮಾಣ್ಯವನ್ನು ಹೇಳಬೇ

ಶ್ರೋತ್ರಸ್ಯಶ್ರೋತ್ರ ಮಿತ್ಯಾದಿನಾ ಯದುಕ್ತೋ ಲಿಂಗಾಂಗಸಾಮರಸ್ಯರೂಪ ಉಪಾಯಃ ತಮಂತರೇಣ ನ ವಿಜಾನೀಮ ಇತ್ಯರ್ಥಃ ಯಥಾ ಯೇನ ಪ್ರಕಾರೇಣ ಶ್ರೋತ್ರಾದೇಃ ಶ್ರೋತ್ರಾದಿರೂಪಂ ಯಲ್ಲಿಂಗಂಜಾತಂ ಭಕ್ತಾನುಗ್ರಹಾರ್ಥಂ ತದೇತದಿದಂತಯಾ ಕಥಮನುಶಿಷ್ಯಾದುಪದಿಶೇತ್ ಕಿಂತುಪೂರ್ವಾಚಾರ್ಯೈರ್ಯಥೋಪದಿಷ್ಟಂ ತಥೈವ ವ್ಯಾಚಷ್ಟೇ ಶೃಣ್ವಿತ್ಯಾಹ ತದಿತಿ ಯದುಕ್ತಂ ಷಟ್ ಸ್ಥಲರೂಪಂಬ್ರಹ್ಮ ತದಿತ್ಯರ್ಥಃ ವಿದಿತಾದ್ಭಾವತ್ವೇನ ಪ್ರತೀಯಮಾನಾತ್ ಕಾರಣಾತ್ಮಕಾತ್ | ಅನ್ಯತ್ಪೃಥಗಿತ್ಯರ್ಥಃ ಅಥೋಪಿ ಅವಿದಿತಾತ್ ಸದಾ ಸತ್ವೇನಾಪ್ರತೀಯಮಾನಾದಸತಃ ಕಾರ್ಯಜಾತಾತ್ | ಅಧಿ ಉಪರಿ ಅನ್ಯದಿತಿ ಯಾವತ್ | ನ ಕಾರಣರೂಪಮೇವ ಸನ್ನ ಕಾರ್ಯರೂಪಮೇವಾಸದಿತ್ಯರ್ಥಃ | "ಸತ್ಯಂಚಾನೃತಂಚ" ಇತಿ ಶ್ರುತೇಃ ಸದಸಚ್ಚಾಹಮರ್ಜುನೇತಿಸ್ಮೃತೇಶ್ಚ ಸನ್ನಿದಮಸಂಗತಂ ಸತ್ವಾಸತ್ವಯೋ ರ್ವಿರೋಧಾತ್ | ಇತಿ ಚೇನ್ನ ಸತ್ವಾಸತ್ವವಿರೋಧ ವಿಷಯಕಜ್ಞಾನೇ ತಯೋಃ ಸಹಾವಸ್ಥಾನಮಿವ ಚಿಜ್ಜ್ಯೋತಿಷಿ ಲಿಂಗೆ ಸಹಾವಸ್ಥಾ

ಕಾದೀತು? ಭಾವವೆಂದರೆ ಸತ್ತಾ ಈ ಸತ್ವದಿಂದ ಆ ಪರಶಿವ ಬ್ರಹ್ಮವು ಗ್ರಹಿಸಲು ಯೋಗ್ಯವಾಗಿರುವದರಿಂದ ಅದಕ್ಕೆ ಭಾವಲಿಂಗವೆಂದು ವೀರಶೈವ ಶಾಸ್ತ್ರದ ಸಂಜ್ಞೆಯು "ಕತ್ಸತ್ತಾ ಭಾವ ಉಚ್ಯತೆ,, ಎಂದು ಅನುಭವ ಸೂತ್ರವು ಹೇಳುತ್ತದೆ. ಅಥವಾ ಭಾವವೆಂದರೆ ವಿಶುದ್ಧ ಚಿತ್ತವು, (ಚಿಚ್ಛಕ್ತಿಯು) ವಿಶ್ವಾತ್ಮಕ ಶಿವೋಹಂ ಚಿನ್ಮಾತ್ರೋಹಂ,, ಹೀಗೆಂಬುವ ಅನುಭವಕ್ಕೆ ಕಾರಣವಾದ ವಿಮರ್ಶ ಶಕ್ತಿಯು ಜೀವಾವಸ್ಥೆಯಲ್ಲಿ ಚಿತ್ತರೂಪದಿಂದಿರುವ ಅಂತಃಕರಣವು ಯಾವಾಗ ಶಿವಯೋಗಾಭ್ಯಾಸದಿಂದ ಶಿವನ ಚಿಚ್ಛಕ್ತಿರೂಪವಾಗುತ್ತದೆಯೊ? ಆಗ ಅಂಥ ಚಿಚ್ಛಕ್ತಿರೂಪವಾದ ಭಾವದಿಂದ ಪರಶಿವಲಿಂಗವು ಗ್ರಹಿಸಲು ಯೋಗ್ಯವಾಗುತ್ತದೆ ಆದ್ದರಿಂದ ಆ ಪರಶಿವ ಲಿಂಗಕ್ಕೆ ಭಾವಲಿಂಗವೆಂದು ಶೈವಶಾಸ್ತ್ರವು ಹೇಳುತ್ತದೆ. ಆದುದರಿಂದ ಆ ಲಿಂಗವನ್ನು ಚಕ್ಷುರಾದಿ ಬಾಹ್ಯಕರಣಗಳಿಂದಲೂ ಅಶುದ್ಧವಾದ ಅಂತಃಕರಣದಿಂದಲೂ ನಾವು ತಿಳಿಯುವದಿಲ್ಲಾ ಹಿಂದಿನ ಮಂತ್ರದಲ್ಲಿ ಹೇಳಿದ ಪ್ರಕಾರ ಲಿಂಗಾಂಗ ಸಾಮರಸ್ಯರೂಪವಾದ ಶಿವಯೋಗಾಭ್ಯಾಸದಿಂದ ಮಾತ್ರ ತಿಳಿಯಲು ಯೋಗ್ಯವಾಗುವದು. ಆದ್ದರಿಂದ ಎಲೈ ಶಿಷ್ಯನೇ ಕೇಳು ಇಗೊ ಇದೆ ಪರಶಿವಲಿಂಗವೆಂದು ಘಟಪಟದಂತೆ ತೋರಿಸಲಿಕ್ಕೆ ಬರುವದಿಲ್ಲಾ ಪರಂತು ಪೂರ್ವಾಚಾರ್ಯರು ನಮಗೆ ಯಾವ ಪ್ರಕಾರವಾಗಿ ಉಪದೇಶಮಾಡಿರುವರೊ? ಹಾಗೆ ನಾವೂಕೂಡಾ ಹೇಳುತ್ತೇವೆ. ಆ ಪರಶಿವಲಿಂಗವು ಕೇವಲ ಕಾರಣವೂ ಅಲ್ಲಾ ಕೇವಲ ಕಾರ್ಯವೂ ಅಲ್ಲಾ ಕಾರಣಕ್ಕಿಂತಲೂ ಕಾರ್ಯವು ಅಸತ್ತಾಗಿದೆ ಕಾರಣವು ಕಾರ್ಯಕಿಂತಲೂ ಸತ್ತಾಗಿದೆ ಆದ್ದರಿಂದ ಕಾರ್ಯವು ಅಸತ್ತಿಂತಲೂ ಕಾರಣವು ಸತ್ತಿಂತಲೂ ಪೂರ್ವಾಚಾರ್ಯರು ಹೇಳಿದ ಪ್ರಕಾರ ಶ್ರೀಶಾಂಕರೀಕಾರನು ಹೇಳಿದ್ದಾನೆ. ವಟ್ಟನಮೇಲೆ ಆ ಪರಬ್ರಹ್ಮವು ಕೇವಲ

ನಾತ್| ಅನ್ಯಥಾ ತವ ವಿರೋಧಸ್ಫೂರ್ತಿರೇವ ನಸ್ಯಾತ್. ನಸ್ಯಾಚ್ಚ" ಸತ್ಯಮ ನೃತಂಚ ಭಾವಗ್ರಾಹ್ಯಮನೀಡಾಖ್ಯಂ ಭಾವಾಭಾವಕರಂಶಿವಂ" ಸದಸಚ್ಚಾಹ ಮರ್ಜುನ ಇತಿ ಶ್ರುತಿಸ್ಮೃತ್ಯಾದೇಃ ಪ್ರಾಮಾಣ್ಯಂ. ಇತಿ ಇತ್ಥಮುಕ್ತಂ ವಚನಂ ಪೂರ್ವೇಷಾಂ ಗುರೂಣಾಂ ಶುಶ್ರುಮ ವಯಂ ಶ್ರುತವಂತಃ ತೆ ಕೇ ಗುರವಃ ಇತ್ಯತಆಹ ಯೆ ಇತಿ, ಯೇ ಶಿವತತ್ವವಿದಃ ಸಃ ಅಸ್ಮಭ್ಯಂದೀಕ್ಷಿತೇಭ್ಯಃ ತತ್ ಪರಶಿವಲಿಂಗಂ | ಶ್ರೊತ್ರಾದೇಃ ಶ್ರೊತಾದಿರೂಪಂ | ಶ್ರೋತ್ರಾದ್ಯವಚ್ಛಿ ನ್ನ ಪ್ರಸಾದಾದಿಲಿಂಗರೂಪಂ ಸತ್ ಯದ್ವರ್ತತೆ ತದಿತ್ಯರ್ಥಃ. ವ್ಯಾಚಚಕ್ಷಿರೆ ಉಕ್ತವಂತಃ | ಏತೇನ ಗುರುಮುಖಾದೇವ ಸ್ವಸ್ವರೂಪ ಶಿವಲಿಂಗಸಾಮರಸ್ಯ ಜ್ಞಾನಂ ಭವತಿ | ನಾನ್ಯಥೇತಿ ಸೂಚಿತಂ | ಸೂತ್ರಿತಂಚ ಶಿವೇನಾಪಿ" ಗುರು

ಕಾರಣಸ್ವರೂಪವಲ್ಲವು. ಕೇವಲ ಕಾರ್ಯಸ್ವರೂಪವೂ ಅಲ್ಲವು ಕಾರ್ಯಕಾರಣಗಳೆರಡರ ಸ್ವರೂಪವಾಗಿರುವುದು. ಈ ವಿಷಯದಲ್ಲಿ ಶ್ರುತಿ ಸ್ಮೃತಿ ವಾಕ್ಯಗಳ ಪ್ರಮಾಣವು ಶಾಂಕರಿ ಯಲ್ಲಿ ತೋರಿಸಲ್ಪಟ್ಟಿರುವುದು ಕಾರಣ ಕಾರ್ಯ ಉಭಯ ರೂಪಗಳಾದ ಸತ್ವಾಸತ್ವಗಳನ್ನು ಬ್ರಹ್ಮದಲ್ಲಿ ಹೇಳುವದು ಅನುಭವ ವಿರುದ್ಧವಲ್ಲವೆ ? ಒಂದರಲ್ಲಿ ಸತ್ವಾಸತ್ವಗಳಿಗೆ ವಿರೋಧವೆ ನ್ನುವ ನಿನ್ನ ಜ್ಞಾನದಲ್ಲಿ ಹ್ಯಾಗೆ ಅವುಗಳಿಗೆ ವಿರೋಧ ವಿಲ್ಲವೊ? ಅದರಂತೆ ಚಿಜ್ಜ್ಯೋತೀ ರೂಪ ವಾದಪರಶಿವಲಿಂಗದಲ್ಲಿ ಅವುಗಳಿಗೆ ವಿರೋಧವಿಲ್ಲವೆಂದು ಏಕೆ ತಿಳಿಯಬಾರದು. ನಿನ್ನ ಜ್ಞಾನದ ಲ್ಲಿ ಸತ್ವಾಸತ್ವಗಳೆರದಿದ್ದರೆ ಅವುಗಳಿಗೆ ವಿರೋಧವೆಂಬ ಜ್ಞಾನವಾದರೂ ನಿನಗೆ ಹೇಗಾದೀತು? ಆದ್ದರಿಂದ ಅವುಗಳಿಗೆ ವಿರೋಧವೇ ಇಲ್ಲವೆಂದು ಅಂಗೀಕರಿಸಬೇಕು ಹಾಗೂ ವಿರೋಧವನ್ನು ಹೇಳುವಪಕ್ಷದಲ್ಲಿ "ಸತ್ಯಮನೃತಂಚ. | ಸದಸಚ್ಚಾಹಮರ್ಜುನ| ಇತ್ಯಾದಿ ಶ್ರುತಿ ಸ್ಮೃತಿ ವಾ ಕ್ಯಗಳಿಗೆ ಹೇಗೆ ಪ್ರಾಮಾಣ್ಯವಂ ಅಂಗೀಕರಿಸಬೇಕು? ಆದಕಾರಣ ಹಿಂದೆ ಶ್ರೋತ್ರಕ್ಕೆ ಶ್ರೊತ್ರವು ಮೊದಲಾದ ಶ್ರುತಿಗಳಿಂದ ಹೇಳಲ್ಪಟ್ಟ ಪರಶಿವಬ್ರಹ್ಮವು ಸದಸದ್ರೂಪವಾಗಿರುವುದು. ಆದ ಕಾರಣದಿಂದ ಸದ್ರೂಪಕಾರಣವಾದ ಭಾವಲಿಂಗದಲ್ಲಿ ಮನಸ್ಸು ಮೊದಲಾದ ಇಂದ್ರಿಯಗಳ ಪ್ರವೇಶವಿಲ್ಲವು. ಅಸದ್ರೂಪವಾದ ಕಾರ್ಯ ಬ್ರಹ್ಮದಲ್ಲಿ ಅಂದರೆ ಪ್ರಾಣಲಿಂಗಾದಿಗಳಲ್ಲಿ ಮ ನಸ್ಸು ಮೊದಲಾದವುಗಳ ಪ್ರವೇಶವಾಗುತ್ತದೆ. ಎಂದು ಶಿವಜ್ಞಾನಿಗಳಾದ ಪೂರ್ವಾಚಾರ್ಯರ ವಚನವನ್ನು ನಾವು ಕೇಳಿದ್ದೇವೆ. ಇದರಿಂದ ಪ್ರಾಚೀನರಾದ ಶಿವಾಚಾರ್ಯರ ಮುಖದಿಂದ ಸ್ವಸ್ವರೂಪವಾದ ಲಿಂಗ ಮತ್ತು ಅಂಗ ಇವುಗಳ ಸಾಮರಸ್ಯ ಜ್ಞಾನವಾಗುತ್ತದಲ್ಲದೆ ಬೇರೆ ಯಾವುದರಿಂದಲೂ ಆಗುವದಿಲ್ಲವೆಂದು ಸೂಚಿತವಾಯಿತು. ಆದ್ದರಿಂದಲೇ ಗುರುವೇ ಉಪಾಯ ವು ಎಂದು ಶಿವಸೂತ್ರದಲ್ಲಿ ಹೇಳಲ್ಪಟ್ಟಿರುವುದು. ಗುರೂಪದೇಶದಿಂದಲೇ ಪರಶಿವಲಿಂಗಸ್ವ ರೂಪವು ಅಳವಡುವುದಲ್ಲದೆ ಇತರ ಶಾಸ್ತ್ರಗಳಿಂದ ಅಂದರೆ ಶಿವಸ್ವರೂಪವನ್ನು ಪ್ರತಿಪಾದಿಸುವ ಅಸಂಪ್ರದಾಯಿಕವಾದ ಶಾಸ್ತ್ರಗಳಿಂದ ಸಾಧ್ಯವಲ್ಲದುದರಿಂದ ಶಿವತತ್ವ ಬೋಧಕಗಳಾದ ಶಾಸ್ತ್ರಗಳ

ರುಪಾಯ ಇತಿ | ಉಕ್ತಂಚಾನುಭವಸೂತ್ರೇ | ಗುರೂಪದೇಶತಃ ಸಾಧ್ಯಂನಾನ್ಯಥಾ ಶಾಸ್ತ್ರಕೋಟಿಭಿರಿತಿ ||೩||

ಪ್ರಥಮಮಂತ್ರೋಕ್ತ ಪ್ರಶ್ನವಾಕ್ಯಾನಾಂ ದ್ವಿತೀಯಮಂತ್ರೇಣ ಪ್ರತಿವಚನಸ್ಯೋಕ್ತತ್ವೇಪಿ ಶಿಷ್ಯಬುದ್ಧಿ ವೈಶದ್ಯಾರ್ಥಂ ಏಕೈಕಪ್ರಶ್ನಸ್ಯೈಕೈಕಮಂತ್ರೇಣ ಪ್ರತಿವಚನಮುಚ್ಯತೆ. ತತ್ರ ಆಕಾರಾದಿ ಪರಿಚ್ಛಿನ್ನ ವಿಷ್ಣ್ವಾದೌ ಸ್ವಾತಿರಿಕ್ತತ್ವೇನೋಪಾಸನಾ ಪ್ರಕಾರಃ ಬ್ರಹ್ಮಬುದ್ಧಿಶ್ಚ ಮಾಭೂದಿತಿ ಶ್ರುತೇರೇವ ಗುರುರೂಪೇಣ ಪ್ರತಿಮಾಕಾರಾದಿ ಪರಿಚ್ಛಿನ್ನಂ ನ ಬ್ರಹ್ಮ, ಕಿಂತು ತಲ್ಲಿಂಗಂ ಪರಮಂ ಬ್ರಹ್ಮ ಸಚ್ಚಿದಾನಂದಲಕ್ಷಣಂ ಇತಿ ಸಿದ್ಧಾಂತಾಗಮೋಕ್ತ ಪ್ರಕಾರೇಣ ತದೇವ ಬ್ರಹ್ಮತ್ವಂ ವಿದ್ಧೀತ್ಯುಪದಿಶತಿ ಯದ್ವಾಚೇತಿ ||

ಮಂ|| ಯದ್ವಾಚಾನಭ್ಯುದಿತಂ ಯೇನವಾಗಭ್ಯುದ್ಯತೆ |
ತದೇವಬ್ರಹ್ಮತ್ವಂ ವಿದ್ಧಿ ನೇದಂ ಯದಿದಮುಪಾ
ಸತೆ ||೪||

ರ್ಥವನ್ನೇ ಬೋಧಿಸುವ ಪಂಚಾಕ್ಷರೀ ಮೊದಲಾದ ಮಂತ್ರಗಳಂ ಉಪದೇಶಿಸುವ ಶಿವಾಚಾರ್ಯರ ಉಪದೇಶವನ್ನು ಪಡೆದು ಶಿವತತ್ವವನ್ನು ಸಾಕ್ಷಾತ್ಕಾರಮಾಡಿಕೊಳ್ಳತಕ್ಕುದೆಂದು ಅನುಭವಸೂತ್ರವೂ ಹೇಳುವುದು. ||೩||

ಅ|| ಮೊದಲಿನ ಮಂತ್ರದಲ್ಲಿರುವ ಪ್ರಶ್ನೆಗಳಿಗೆ ಎರಡನೆಯ ಮಂತ್ರದಲ್ಲಿ ಉತ್ತರವು ಹೇಳಲ್ಪಟ್ಟಿದ್ದರೂ ಶಿಷ್ಯನ ಬುದ್ಧಿಯು ಮತ್ತಿಷ್ಟು ವಿಶದವಾಗಲಿ ಎಂಬುದ್ದೇಶದಿಂದ ಒಂದೊಂದು ಪ್ರಶ್ನೆಕ್ಕೆ ಪೂರ್ತಿಯಾದ ಒಂದೊಂದು ಮಂತ್ರದಿಂದಲೇ ಉತ್ತರವು ಹೇಳುತ್ತ, ಶಿಲಾದಿಪ್ರತಿಮಾಕಾರದಿಂದ ಕೂಡಿದ ವಿಷ್ಣ್ವಾದಿ ದೇವತೆಗಳಲ್ಲಿ ಉಪಾಸಕರು ತಮಗಿಂತಲೂ ಬೇರೆಯೆಂಬ ಭಿನ್ನಭಾವವನ್ನು ಹೊಂದಿ ಉಪಾಸನೆ ಮಾಡುವುದೂ, ಆ ವಿಷ್ಣ್ವಾದಿ ದೇವತೆಗಳಲ್ಲಿ ಬ್ರಹ್ಮ ಬುದ್ಧಿಯೂ, ಉಂಟಾಗಬಾರದೆಂಬುದ್ದೇಶದಿಂದ ಪ್ರತಿಮಾಕಾರದಿಂದ ಪರಿಚ್ಛಿನ್ನರಾದ ವಿಷ್ಣ್ವಾದಿಗಳಲ್ಲಿ ಬ್ರಹ್ಮತ್ವವಿಲ್ಲವು. ತಲ್ಲಿಂಗಂ ಪರಮಂ ಬ್ರಹ್ಮ ಸಚ್ಚಿದಾನಂದ ಲಕ್ಷಣಂ | ಎಂಬ ಸಿದ್ಧಾಂತವಾಕ್ಯಕ್ಕನುಸಾರವಾಗಿ,, ತದೇವ ಅಂದರೆ ಆ ಲಿಂಗವೇ ಬ್ರಹ್ಮವು ಅದನ್ನೇ,, ನೀನು ಉಪಾಸನೆಮಾಡು ಎಂದು ಶ್ರುತಿಯೇ ಗುರುರೂಪದಿಂದ ಯದ್ವಾಚಾ ಎಂಬ ಮಂತ್ರದಿಂದ ಶಿಷ್ಯನಿಗೆ ಬೋಧಿಸುತ್ತದೆ

ಶಬ್ದಪ್ರಮಾಣವು ಬ್ರಹ್ಮಾತಿರಿಕ್ತವಾದುದೆಂಬ ಮತದಲ್ಲಿ ಪೂರ್ವೋಕ್ತವಾದ ಯಾವ ಪರಶಿವಲಿಂಗವುಂಟೊ? ಅದು ಶಬ್ದದಿಂದ ಪ್ರಕಾಶಿಸಲ್ಪಡುವದಿಲ್ಲವು ಯಾವ ಪ್ರಸಾದಲಿಂಗರೂಪವಾದ ಪರಶಿವಲಿಂಗದಿಂದ ಶಬ್ದವು ಯಾವ ಯಾವ ಅರ್ಥವನ್ನು ಪ್ರಕಾಶಗೊಳಿಸುತ್ತದೆಯೊ! ಅದೇ ಬ್ರ

ಯದಿತಿ, ಯತ್ಪೂರ್ವೋಕ್ತಂ ಪರಶಿವಲಿಂಗಂ ವಾಚಾ ವರ್ಣಪದಾದಿರೂಪಯಾ ಅನಭ್ಯುದಿತಂ ಅಪ್ರಕಾಶಿತಂ ಯೇನ ಪ್ರಸಿದ್ಧೇನ ಪ್ರಸಾದಲಿಂಗರೂಪೇಣ ವಾಕ್ | ಅಭ್ಯುದ್ಯತೇ ತತ್ತದರ್ಥೇ ಪ್ರಕಾಶ್ಯತೇ | ತದೇವ ಪರಶಿವಲಿಂಗಮೇವಬ್ರಹ್ಮ "ಬೃಹತ್ವಾತ್ ಬೃಂಹಣತ್ವಾಚ್ಚ" ಬ್ರಹ್ಮಶಬ್ದಾಭಿಧೇಯಕಮಿತ್ಯರ್ಥಃ ಅತ ಏವ ಶಿವಾತಿರಿಕ್ತಸ್ಯಾಬ್ರಹ್ಮತ್ವಮುಕ್ತಂ | ನನು "ನಾರಾಯಣಂ ಮಹಾಜ್ಞೇಯಂ ವಿಶ್ವಾತ್ಮಾನಂ ಪರಾಯಣಂ ನಾರಾಯಣ ಪರೋಜ್ಯೋತಿರಾತ್ಮಾ ನಾರಾಯಣಃ ಪರಃ | ನಾರಾಯಣ ಪರೋಧ್ಯಾತಾ ಧ್ಯಾನಂ ನಾರಾಯಣಃ ಪರಃ | ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಪಿ ವಾ | ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ" | ಇತ್ಯಾದಿ ಶ್ರುತಿಶತಸತ್ವಾತ್, ಶಿವಲಿಂಗಾತಿರಿಕ್ತ ನಾರಾಯಣಾದೇಃ ಕಥಮಬ್ರಹ್ಮತ್ವಮಿತಿ ಚೇನ್ನ | ತತ್ರ ನಾರಾಯಣಶಬ್ದಸ್ಯ ಶಿವಪರತ್ವಾತ್" | ಸರ್ವಮಿದಂ ಬ್ರಹ್ಮ ವಿಷ್ಣುರುದ್ರೇಂದ್ರಾಸ್ತೇ ಸಂಪ್ರಸೂಯಂತೇ" ಸೋಮಃ ಪವತೇ ಜನಿತಾ ಪೃಥಿವ್ಯಾ ಜನಿತಾಗ್ನೇಃ ಜನಿತಾಸೂರ್ಯಸ್ಯ ಜನಿತೇಂದ್ರಸ್ಯ ಜನಿತೋತ ವಿಷ್ಣೋಃ" ಇತ್ಯಾದಿ ಶ್ರುತೇಃ | ವಿಷ್ಣ್ವಾದೀನಾಂ ಶಿವೋಪಾದಾನತಯಾ ಶಿವಾತ್ಮಕತ್ವಾತ್ | ತದನನ್ಯತ್ವಮಾರಂಭಣ

ಹ್ಮವು. ಆ ಬ್ರಹ್ಮರೂಪವಾದ ಲಿಂಗವು ಸೃಷ್ಟಿಗುನ್ಮುಖವಾಗಿರುವುದರಿಂದಲೂ .ಸರ್ವತ್ರ ವ್ಯಾಪಕವಾಗಿರುವುದರಿಂದಲೂ ಬ್ರಹ್ಮ ಶಬ್ದದಿಂದ ಹೇಳಿಸಿಕೊಳ್ಳಲ್ಪಡುತ್ತೆಂದು ಶ್ರೀ ರೇಣುಕ ಭಗವತ್ಪಾದರು ಅಗಸ್ತ್ಯಮಹರ್ಷಿಗಳಿಗೆ ಉಪದೇಶ ಮಾಡಿರುವರು. ಈ ಮಂತ್ರದಲ್ಲಿರುವ ಏವ ಎಂಬ ಶಬ್ದದಿಂದ ಶಿವಾತಿರಿಕ್ತರಾದ ದೇವತೆಗಳಲ್ಲಿ ಬ್ರಹ್ಮತನವಿಲ್ಲೆಂದು ಪ್ರಕಾಶಗೊಳಿಸಲ್ಪಟ್ಟಿತು. ಹಾಗಾದರೆ ನಾರಾಯಣಂ ಮಹಾಜ್ಞೇಯಂ ಮೊದಲುಗೊಂಡು ವ್ಯಾಪ್ಯನಾರಾಯಣಃಸ್ಥಿತಃ | ಎಂಬುವವರಿವಿಗೂ ಇರುವ ಶ್ರುತಿ ವಾಕ್ಯಗಳಲ್ಲಿ ಅನೇಕಾವರ್ತಿ ನಾರಾಯಣನಿಗೇನೆ. ಬ್ರಹ್ಮವೆಂದು ಹೇಳಿದೆ? ಅಂದರೆ, ಇಲ್ಲಿ ನಾರಾಯಣನೆಂದರೆ ಶಿವನೆಂದು ಅರ್ಥ ಮಾಡಬೇಕು. ದಶಾವತಾರಗಳನ್ನೆತ್ತಿದ ವಿಷ್ಣುವೆಂದು ಅರ್ಥ ಮಾಡಬಾರದು. ಯಾಕೆಂದರೆ, ಕಾರ್ಯಕಾರಣಗಳಿಗೆ ಅಭೇದವಿರುವದರಿಂದ ಶಿವನಿಂದ ಹುಟ್ಟಿದ ನಾರಾಯಣನಿಗೆ ಬ್ರಹ್ಮವೆಂದು ಶ್ರುತಿಯಲ್ಲಿ ಒಮ್ಮೊಮ್ಮೆ ಹೇಳಿರುವುದು. ಬ್ರಹ್ಮವಿಷ್ಣ್ವಾದಿಗಳು ಶಿವನಿಂದ ಹುಟ್ಟಿರುವರೆಂಬುವಲ್ಲಿ ವ್ಯಾಖ್ಯಾನಕಾರನು ಅನೇಕ ಶ್ರುತಿಗಳನ್ನು ತೋರಿಸಿದ್ದಾನೆ. ಮತ್ತು ಕಾರ್ಯಕಾರಣಗಳಿಗೆ ಅಭೇದವೆಂಬುವ ವಿಷಯದಲ್ಲಿ "ತದನನ್ಯತ್ವಮಾರಂಭಣ ಶಬ್ದಾದಿಭ್ಯಃ" ಎಂಬ ಬ್ರಹ್ಮಸೂತ್ರವು ಪ್ರಮಾಣವಾಗಿದೆ. ಆದ್ದರಿಂದ ನಾರಾಯಣಾದಿ ಸಮಸ್ತ ಶಬ್ದಗಳಿಂದ ಆ ಪರಶಿವನೇ ವಾಚ್ಯನಾಗುವನೆಂಬುವದು ಸಮಂಜಸವಾಗಿರುವುದು. ನಾರಾಯಣೋಪನಿಷತ್ತಿನ ಉಪಸಂಹಾರವಾಕ್ಯವು ಕೂಡಾ ರುದ್ರಸ್ವರೂಪವೆಂತಲೂ, ಅವನಿಗೋಸ್ಕರ ನಮಸ್ಕಾರವೆಂತಲೂ ಹೇಳುತ್ತದೆ. ಮತ್ತು

ಶಬ್ದಾದಿಭ್ಯಃ ॥ ಇತ್ಯಧಿಕರಣೇ ಕಾರ್ಯಕಾರಣಯೋರನನ್ಯತ್ವವ್ಯಪದೇಶಾತ್ । ನಾರಾಯಣಾದಿ ಸರ್ವಶಬ್ದವಾಚ್ಯತ್ವಮಪಿ ಶಿವಸ್ಯ ಸಮಂಜಸಂ ಭವತಿ। ಅತಸ್ತ ದುಪಸಂಹಾರೇ ಸರ್ವೋವೈರುದ್ರಸ್ತಸ್ಮೈ ರುದ್ರಾಯನಮಃ ॥ ಇತ್ಯಾದಿನಾ ರುದ್ರಸ್ಯ ಸರ್ವಾತ್ಮಕತ್ವಮುಪದಿಷ್ಟಂ। ಕಿಂಚ ಶಿವಪರತ್ವಂಚ । ಅರಾಃ ಪ್ರಾಕ ಧನಾಭಾವಂ ಸುಖಾಭಾವಂವದಂತ್ಯಣಃ। ನತೌ ಸ್ಯಾತಾಂ ಯಸ್ಯಭಕ್ತೇಃ ಸವೈ ನಾರಾಯಣಃ ಶಿವಃ ॥ ಇತ್ಯಾದಿನೋಕ್ತಂ। ತ್ವಂ ವಿದ್ಧಿ ಜಾನೀಹಿ। ಏತೇನ ಶೇನೇಷಿತಾಂ ವಾಚಮಿಮಾಂ। ಇತ್ಯಸ್ಯ ಪ್ರತಿವಚನಮುಕ್ತಂ। ತದೇವೇತ್ಯೇ ವಕಾರೇಣ ಶಿವಲಿಂಗಾತಿರಿಕ್ತಸ್ಯಾಬ್ರಹ್ಮತ್ವೇ ಉಕ್ತೇಪಿ ನೇದಮಿತ್ಯನೇನಪುನಃ ಬ್ರಹ್ಮತ್ವಮುಚ್ಯತೆ. ಯದಿದಂ ಆಕಾರಾದಿಪರಿಚ್ಛಿನ್ನಂ ವಿಷ್ಣ್ವಾದಿ ಸ್ವಾತಿರಿಕ್ತಃ ಯಾ. ಉಪಾಸತೆ ಕೇಚಿನ್ನೇದಂ ಬ್ರಹ್ಮ ಉಕ್ತಂಚೇಶ್ವರೇಣ ವಸಿಷ್ಠಂಪ್ರತಿ ॥ ಶೃ ಣುಬ್ರಹ್ಮವಿದಾಂ ಶ್ರೇಷ್ಠ ದೇವಾರ್ಚನಮನುತ್ತಮಮಂ। ನದೇವಃ ಪುಂಡರೀ ಕಾಕ್ಷೋ ನಚದೇವ ಸ್ತ್ರೀಲೋಚನಃ ॥ ಸದೇವೋ ದೇವರೂಪೋಹಿ ನದೇವಶ್ಚಿತ್ರ ರೂಪಕಃ। ಅಕೃತ್ರಿಮಮನಾದ್ಯಂತಂ ದೇವನಂ ದೇವಉಚ್ಯತೆ । ಆಕಾರಾದಿ ಪರಿಚ್ಛಿನ್ನೇಮಿತೆ ವಸ್ತುನಿ ತತ್ಕೃತಃ। ಅಕೃತ್ರಿಮಮನಾದ್ಯಂತಂದೇವನಂ ಚಿಚ್ಛಿವಂ

ಶಿವನಿಗೆ ನಾರಾಯಣನೆಂದು ಹೆಸರು ಬರಲಿಕ್ಕೆ ಕಾರಣವೇನಂದರೆ—ಅರಾ ಎಂಬ ಪದವು ನಿರ್ಧನತ್ವವನ್ನು ಬೋಧಿಸುತ್ತದೆ. ಅಣ ಎಂಬುವದು ದುಃಖವನ್ನು ಹೇಳುತ್ತದೆ. ಯಾವ ಶಿವ ನಲ್ಲಿರುವ ಭಕ್ತಿಯಿಂದ ಇವೆರಡೂ ನಷ್ಟಗಳಾಗುವವೋ ಆ ಶಿವನೇ ನಾರಾಯಣನು. ಎಂದು ಸಿದ್ಧಾಂತಾಗಮವು ಹೇಳುತ್ತಿರುವುದರಿಂದ, ಪರಶಿವಲಿಂಗವೇ ಬ್ರಹ್ಮವು. ಅದನ್ನೇ ನೀನು ಬ್ರಹ್ಮವೆಂದು ತಿಳಿ. ಏವಕಾರದಿಂದ ಶಿವಲಿಂಗಾತಿರಿಕ್ತವಾದ ದೇವತೆಗಳಲ್ಲಿ ಬ್ರಹ್ಮತನವಿಲ್ಲೆಂದು ಹೇಳಿದ್ದರೂ, ಮತ್ತು ಅವರಲ್ಲಿ ಬ್ರಹ್ಮತ್ವವಿಲ್ಲೆಂದೇ ಹೇಳುತ್ತದೆ ಆಕಾರದಿಂದ ಪರಿಚ್ಛಿನ್ನ ರಾದ ಯಾವ ವಿಷ್ಣ್ವಾದಿ ದೇವತೆಗಳನ್ನು ಕೆಲವರು ಉಪಾಸಿಸುತ್ತಿರುವರೋ? ಆ ದೇವತೆಗಳ ಲ್ಲಿ ಬ್ರಹ್ಮತನವಿಲ್ಲ. ಈ ವಿಷಯದಲ್ಲಿ ಯೋಗವಾಸಿಷ್ಠದ ವಾಕ್ಯಗಳೂ ಕೂಡ ಪ್ರಮಾಣ ಗಳಾಗಿವೆ. ಆಕಾರಾದಿ ಪರಿಚ್ಛಿನ್ನವಾದ ಮಿತವಾದ ವಸ್ತುವಿನಲ್ಲಿ ದೇವತ್ವವಿಲ್ಲೆಂದೂ, ಚಿಚ್ಛಿವನೇ ದೇವನೆಂದೂ, ಶಿವತತ್ವದ ಜ್ಞಾನವಿಲ್ಲದವರಿಗೋಸ್ಕರವಾಗಿ ಆಕಾರಾದಿಗಳ ಪೂಜೆಯು ಹೇಳಲ್ಪಟ್ಟದೆ ಎಂದೂ, ಒಂದು ಯೋಜನ ಪರಿಮಿತವಾದ ಮಾರ್ಗವನ್ನು ಹಿಡದು ನಡೆಯಲಾರದವನಿಗೆ ಒಂದು ಕ್ರೋಶಪರಿಮಿತವಾದ ಮಾರ್ಗವನ್ನು ಕಲ್ಪಿಸಿಕೊಟ್ಟಂತೆ, ಶಿವತತ್ವ ಜ್ಞಾನವಿಲ್ಲದ ಮಂದಾಧಿಕಾರಿಗಳಿಗೋಸ್ಕರವಾಗಿ ಆಕಾರಾದಿಗಳುಳ್ಳದೇವತೆಗಳ ಪೂಜೆಯು ಹೇ ಳಲ್ಪಟ್ಟಿರುವುದೇಹೊರತು ಉತ್ತಮಾಧಿಕಾರಿಯಾದವನಿಗೆ ಆ ಪರಿಚ್ಛಿನ್ನ ದೇವತೆಗಳ ಅರ್ಚನೆಯು

ವಿದುಃ | ಅಜ್ಞಾತ ಶಿವತತ್ವಾನಾಮಾಕಾರಾದ್ಯರ್ಥಸಂಕೃತಂ | ಯೋಜನಾರ್ಥ್ವ
ಸ್ಯಶಕ್ತಸ್ಯ ಕ್ರೋಶಾಧ್ವಾಪರಿಕಲ್ಪ್ಯತೇ || ನನುಲಿಂಗಸ್ಯಾ ಪ್ಯಾಕಾರಸತ್ವಾತ್ |
ಕಥಂ ತದ್ಬ್ರಹ್ಮ ಇತಿ ಚೇನ್ನ| ವಸ್ತುತಸ್ತ್ವಾಕಾರಶೂನ್ಯತ್ವಾತ್ || ಪ್ರತಿಮಾ
ಕಾರಶೂನ್ಯಸ್ಯ ಲಿಂಗಸ್ಯ ಪರಮಾತ್ಮನಃ ಪ್ರತಿಮಾಕಾರದೇವಾನಾಂ ಸಾದೃ
ಶ್ಯಂಕಥಮಿಹಾರ್ಯತೇ || ಇತ್ಯಾದಿಸಿದ್ಧಾಂತಾಗಮೋಕ್ತೇಃ | ತತ್ಪರ ಶಿವಲಿಂ
ಗಮೇವಬ್ರಹ್ಮ ತದೇವೋಪಾಸ್ಯಂ ತಾಸ್ಮಲ್ಲಿಂಗಂ ಪರಂಬ್ರಹ್ಮ ಸಚ್ಚಿದಾನಂದ
ಲಕ್ಷಣಂ | ನಿಜರೂಪಮಿತಿ ಧ್ಯಾನಾತ್ತದವಸ್ಥಾ ಪ್ರಜಾಯತೇ || ಬ್ರಹ್ಮ
ವಿಷ್ಣ್ವಾದಯೋ ದೇವಾ ಸ್ಸರ್ವೇವೇದಾದಯಸ್ತಥಾ | ಲೀಯಂತೇ ಯತ್ರಗ
ಮ್ಯಂತೆ ತಲ್ಲಿಂಗಂ ಬ್ರಹ್ಮಕೇವಲಂ || ಚಿದಾನಂದಮಯಃ ಸಾಕ್ಷಾಚ್ಛಿವಏವ
ನಿರಂಜನಃ ಲಿಂಗಮಿತ್ಯುಚ್ಯತೆನಾನ್ಯದ್ಯತಃಸ್ಯಾದ್ವಿಶ್ವಸಂಭವಃ || ಬಹುನಾ
ತ್ರಕಿಮುಕ್ತೇನ ಲಿಂಗಮಿತ್ಯುಚ್ಯತೇ ಬುಧೈಃ | ಶಿವಾಭಿದಂ ಪರಂಬ್ರಹ್ಮ
ಚಿದ್ರೂಪಂ ಜಗದಾಸ್ಪದಂ || ಇತ್ಯಾದಿನಾ ಶಿವಲಿಂಗಸ್ಯೈವ ಪರಬ್ರಹ್ಮತ್ವಂ
ತದುಪಾಸ್ಯತ್ವಂ ಸ್ವಾತಿರಿಕ್ತಾನುಪಾಸ್ಯತ್ವಾದ್ಯುಕ್ತತ್ವಾತ್ | ತಚ್ಛಿವಲಿಂಗಸ್ಯೈವ
ಪರಬ್ರಹ್ಮತ್ವಂ ತಸ್ಯೈವೋಪಾಸ್ಯತ್ವಂ ಸಿಧ್ಯತಿ. ನನುಸ್ವಾನತಿರಿಕ್ತತ್ವೇನ ಕಥಮು
ಪಾಸನಾಸಂಗಚ್ಛತೇ | ಉಪಾಸ್ಯೋಪಾಸಕಭಾವಸ್ಯ ಭೇದಘಟಿತತ್ವಾತ್ ಇತಿ
ಚೇನ್ನ | ನಾತ್ಮನಃ ಪರದೇವತಾ॥ ಇತ್ಯುಕ್ತೇರಾತ್ಮಾಸ್ಯ ದೇವತಾಯಾ

ಹೇಳಲ್ಪಟ್ಟಿಲ್ಲವೆಂದೂ ಮೊದಲಾದ ಅರ್ಥಗರ್ಭಿತವಾದ ವಾಕ್ಯಗಳೂ ಪ್ರಮಾಣಗಳಾಗಿವೆ. ಹಾ
ಗಾದರೆ ಲಿಂಗಕ್ಕೆ ಆಕಾರವಿಲ್ಲವೋ? ಅದಕ್ಕೆ ಆಕಾರವಿದ್ದಪಕ್ಷದಲ್ಲಿ ಅದು ಹೇಗೆ ಬ್ರಹ್ಮವೆನಿಸುವ
ದು? ಅಂದರೆ ಅದಕ್ಕೆ ವಸ್ತುತಃ ಆಕಾರವೇ ಇಲ್ಲವು. ಆಕಾರವೆಂದರೆ ಪ್ರತಿಮಾಕಾರವಲ್ಲವೆ? ಅದು
ಲಿಂಗಕ್ಕೆ ಎಲ್ಲಿಂದ ಬರುವುದು? ಈ ವಿಷಯದಲ್ಲಿ 'ಪ್ರತಿಮಾಕಾರಶೂನ್ಯಸ್ಯ' ಎಂಬ ಸಿದ್ಧಾಂತಾ
ಗಮದ ಪ್ರಮಾಣವಿದೆ. ಆದ್ದರಿಂದ ಪ್ರತಿಮಾಕಾರವಿಲ್ಲದ ಪರಶಿವಲಿಂಗವೇ ಬ್ರಹ್ಮವು. ಅದನ್ನೇ ಉ
ಪಾಸನೆಯಂ ಮಾಡಲಿಕ್ಕೆ ಯೋಗ್ಯವು. ಆದುದರಿಂದ ಸಚ್ಚಿದಾನಂದರೂಪವಾದ ಲಿಂಗವೇ ಬ್ರಹ್ಮ
ವೆಂತಲೂ, ಅದು ತನ್ನ ಸ್ವರೂಪವೆ ಎಂದು ತಿಳಿದು ಧ್ಯಾನಮಾಡುವುದರಿಂದ ಶಿವಾವಸ್ಥೆಯು ಉಂ
ಟಾಗುವದೆಂತಲೂ, ಬ್ರಹ್ಮವಿಷ್ಣ್ವಾದಿ ದೇವತೆಗಳೂ, ಸಮಸ್ತ ವೇದಗಳೂ ಯಾವವಸ್ತುವಿನಲ್ಲಿ ಹು
ಟ್ಟಿ ಲೀನಗಳಾಗುತ್ತವೆಯೋ ಅದೇ ಬ್ರಹ್ಮವೆಂತಲೂ ಲಿಂಗವೆಂತಲೂ ಮೊದಲಾದ ಅರ್ಥಗಳಿಂದ
ಕೂಡಿದ ಸಿದ್ಧಾಂತಶಿಖಾಮಣಿಯ ವಾಕ್ಯಗಳೂಕೂಡ ಪರಶಿವಲಿಂಗಕ್ಕೇನೇ ಬ್ರಹ್ಮವೆಂದು ಹೇಳು
ತ್ತವೆಯಲ್ಲದೆ ಆ ಲಿಂಗವೇ ಉಪಾಸ್ಯವು. ಅದುವೇ ಸಚ್ಚಿದಾನಂದರೂಪವೂ ಎಂದು ಬೋಧಿಸುತ್ತ
ವೆ. ತನಗೆ ಅಭಿನ್ನವಾಗಿ ಉಪಾಸನೆ ಮಾಡುವ ಬಗೆ ಹೇಗೆ? ಉಪಾಸ್ಯೋಪಾಸಕ ಭಾವವು ಭೇ
ದದಿಂದ ಕೂಡಿರುವುದು? ಅಂದರೆ ತನಗಿಂತಲೂ ಬೇರೆ ದೇವರಿಲ್ಲಾ, ಎಂಬ ಶ್ರುತಿವಾಕ್ಯವಿರುವ

ಅಸತ್ವಾತ್ | ಆತ್ಮಾತಿರಿಕ್ತೋಪಾಸನೇ ಅನಾತ್ಮತ್ವಾಪತ್ತ್ಯಾಮುಕ್ತ್ಯಸಂಭವಃ ಸ್ಯಾತ್. ಆತ್ಮಸ್ಥಮತ್ಯಂತರುಚಿಂ ಪ್ರಶಾಂತ ಮಶಾಂತಮೀಶಂಹಿ ಯಜಂತಿಸಂತಃ || ತಂಬಾಹ್ಯನಾನಾಪ್ರತಿಮಾಸು ಬಾಹ್ಯಕ್ರಿಯಾಭಿರೇವಾಲ್ಪಧಿಯೋಯಜಂತಿ || ಇತ್ಯುಕ್ತೇಃ "ಅಥಯೋನ್ಯಾಂದೇವತಾಮುಪಾಸ್ತೇನ್ಯೋಸಾವನ್ಯೋಹಮಸ್ಮೀತಿನಸವೇದ" ಇತಿ ಶ್ರುತೇಃ | "ಆತ್ಮೇತ್ಯೇವೋಪಾಸೀತ" ಇತಿ ಶ್ರುತೇಶ್ಚ, ಶಿವೋಹಮಿತಿ ಭಾವೋಹಿ ಶಿವತಾಪತ್ತಿಕಾರಣಂ ಇತ್ಯುಕ್ತತ್ವಾತ್ | ನಾಶಿವಸ್ಯ ಶಿವೋಪಾಸ್ತಿರ್ಘಟತೇ ಜನ್ಮಕೋಟಿಭಿಃ | ಶಿವಸ್ಯೈವ ಶಿವೋಪಾಸ್ತಿರಿತಿ ನಾನಾಶ್ರುತಿಸ್ಥಿತಿಃ||ಇತ್ಯನುಭವ ಸೂತ್ರಾಚ್ಚ" ಶಿವೋ ಭೂತ್ವಾ ಶಿವಂ ಯಜೇದಿತಿಶ್ರುತ್ಯಾಪಿ ಸ್ವಾನತಿರಿಕ್ತತ್ವೇನೈವ ಶಿವೋಪಾಸನಂ ವಿಧೀಯತೇ | ಭ್ರಮದ್ಭ್ರಮರಚಿಂತಾಯಾಂ ಕೀಟಸ್ಯ ಭ್ರಮರತ್ವವತ್ | ಶಿವೋಹಮಿತಿಭಾವೇನ ಶಿವೋಭವತಿಜದ್ಧ್ರುವಂ, ತಸ್ಮಾತ್ ಕ್ರಿಯಾದ್ವೈತಂ ನಕರ್ತವ್ಯಂ ಭಾವಾದ್ವೈತಂ ಸಮಾಚರೇತ್ | ಅನ್ಯಥಾ ಸರ್ವಾದ್ವೈತ ನಿರಸನಸ್ಥಲ ವಿರೋಧಃ ಸ್ಯಾತ್ | ಅತ ಏವಾನುಭವಸೂತ್ರೇ ಪೂಜಾಕಾಲೇ ಪದಾರ್ಥಕಾಯಃ ಪೂಜಾಂತೇಪ್ರಸಾದಕಾಯ ಇತ್ಯುಕ್ತಂ | ತದ್ವೃಢಭಾವನೋದಯಪರ್ಯಂತಂ ಸ್ವಶಕ್ತಿ

ಮೂಲಕ ಆತ್ಮನಿಗೆ ಅತಿರಿಕ್ತನಾದದ್ದು ಎಂದು ತಿಳಿದು ಉಪಾಸನೆಯಂ ಮಾಡಿದರೆ ಅದಕ್ಕೆ ತಕ್ಕ ಅನಾತ್ಮತ್ವದಫಲವು ಉಂಟಾದೀತು. ಪರಮುಕ್ತಿಯು ಲಭಿಸಲಾರದು, ಅತಿಪ್ರಕಾಶಮಾನವಾದ ತನ್ನಲ್ಲಿರುವ (ತನಗಭಿನ್ನವಾದ)ಈಶನನ್ನು ಸತ್ಪುರುಷರು ಪೂಜಿಸುವರು. ಬಾಹ್ಯಪ್ರತಿಮೆಗಳನ್ನು ಅಲ್ಪಬುದ್ಧಿಯುಳ್ಳವರು ಪೂಜಿಸುವರೆಂತಲೂ ಅಭಿಯುಕ್ತರ ವಾಕ್ಯವಿರುವುದು. ಮತ್ತು ಶಿವನು ತನಗೆ ಭಿನ್ನನೆಂದು ತಿಳಿದು ಉಪಾಸನೆ ಮಾಡಬೇಕೆಂದರೆ ಯಾವನು ತನಗೆನ್ಯನಾಗಿ ಅಂದರೆ ಅವನು ಅನ್ಯನು ನಾನು ಬೇರೆ ಎಂದು ಉಪಾಸನೆ ಮಾಡುವನೋ ಅವನು ತಿಳಿಯುವುದಿಲ್ಲವೆಂಬ ಶ್ರುತಿಗೂ, ತಾನೆ ಬ್ರಹ್ಮವೆಂದು ಉಪಾಸನೆಯಂ ಮಾಡಬೇಕು. ಎಂದು ಬೇರೆ ಶ್ರುತಿವಾಕ್ಯಕ್ಕೂ, ಶಿವನಾಗಿಯೇ ಶಿವನನ್ನು ಪೂಜಿಸಬೇಕೆನ್ನುವ ಶ್ರುತಿಗೂ ಸಮಂಜಸಗಳಾಗಲಾರವು. ಆದ್ದರಿಂದಲೇ ಅನುಭವಸೂತ್ರದೊಳಗೂಡ ಶಿವನಿಗೇನ ಶಿವೋಪಾಸನೆ ಘಟಿಸುತ್ತದಲ್ಲದೆ ಶಿವನಾಗದವನಿಗೆ ಕೋಟಿ ಜನ್ಮಗಳನ್ನೆತ್ತಿದರೂ ಘಟಿಸುವದಿಲ್ಲವೆಂದೂ ಹೀಗೆ ಅನೇಕ ಶ್ರುತಿಗಳ ಸ್ಥಿತಿ ಇರುವದೆಂದು ಹೇಳುತ್ತದೆ. ಭ್ರಮಿಸುವ ಭ್ರಮರದ ಚಿಂತನೆಯು ಆ ಕೀಟಕ್ಕೆ ದೃಢವಾಗಲು ಆ ಕೀಟವು ಭ್ರಮರವೇ ಆಗುವಂತೆ, ನಾನೇ ಶಿವನೆಂಬ ಭಾವವು ದೃಢವಾಗಲು ಶಿವತ್ವವು ಸಿದ್ಧಿಸುವದು. ಆದ್ದರಿಂದ ಕ್ರಿಯಾದ್ವೈತವನ್ನು ಮಾಡದೆ ಭಾವಾದ್ವೈತವನ್ನು ಆಚರಿಸಬೇಕು ಇಲ್ಲದಿದ್ದರೆ ಸರ್ವಾದ್ವೈತ ನಿರಸನ ಸ್ಥಲಕ್ಕೆ ವಿರೋಧವಾದೀತು ? ಆದ್ದರಿಂದಲೆ ಪೂಜಾಕಾಲದಲ್ಲಿ ಪದಾರ್ಥಕಾಯನಾಗಿಯೂ ಪೂಜಾಂತದಲ್ಲಿ ಅಂದರೆ ಸರ್ವ ಪದಾರ್ಥಗಳನ್ನು ಶಿವಲಿಂಗಕ್ಕರ್ಪಿಸಿದ ಮೇಲೆ ಪ್ರಸಾದ

ವಿಜೃಂಭಿತ ಶಿವಜೀವಯೋಃ ಪೂಜ್ಯಪೂಜಕಯೋರ್ಭೇದಸ್ಯ ಪಾರಮಾರ್ಥಿಕಸ್ಯಸ್ಥಿತತ್ವಾತ್, ಏತನ್ಮಂತ್ರೇಣ ಆಕಾರಾದ್ಯವಚ್ಛಿನ್ನ ವಿಷ್ಣ್ವಾದ್ಯುಪಾಸನ ನಿಷೇಧೇನ ಶಿವಲಿಂಗೋಪಾಸನಂಚ ಸೂಚಿತಮಿತಿಜ್ಞಾತವ್ಯಂ ||೪||

ಮೂ || ಯನ್ಮನಸಾ ನಮನುತೆ ಯೇನಾಹುರ್ಮನೋಮತಂ | ತದೇವಬ್ರಹ್ಮತ್ವಂವಿದ್ಧಿ ನೇದಂ ಯದಿದಮುಪಾಸತೆ ||೫||

ಶಾಂ||ಯತ್ ಪರಶಿವಲಿಂಗಂ, ಮನಸಾ ಅಂತಃಕರಣೇನ, ನಮನುತೇ ಕೋಪಿನಜಾನಾತಿ| ಯೇನ ಮಹಾಲಿಂಗರೂಪೇಣ,ಮನಃ ಮತಂ |ಜ್ಞಾತಮಾಹುಃ | ಕಥಯಂತಿ ಶಿವಜ್ಞಾನಿನಃ | ತದೇವ ಪರಶಿವಲಿಂಗಮೇವ, ಬ್ರಹ್ಮತ್ವಂ ವಿದ್ಧಿ ನೇದಂ ಇಯದಿದಮುಪಾಸತೆ | ಇತ್ಯಾದಿ ವ್ಯಾಖ್ಯಾತಂ ಪ್ರಾಗೇವ | ತತ್ರೇದ

ಶಾಯ.ನೆಂತಲೂ ಹೇಳಿದೆ. ಆದ್ದರಿಂದ ಶಿವಭಾವನೆಯು ದೃಢವಾಗುವವರಿಯಂತರ ಪೂಜ್ಯಪೂಜಕರುಗಳಿಗೆ ಪಾರಮಾರ್ಥಿಕವಾದ ಭೇದವಿರುವದರಿಂದ ಯಾವ ದೋಷವೂ ಇಲ್ಲಾ. ಅಂದರೆ ಶಿವಪೂಜಾಕಾಲದಲ್ಲಿ ಸಮಸ್ತ ಪದಾರ್ಥಗಳೂ ಪೂಜಿಸುವ ನಾನು ಪೂಜ್ಯನಾದ ಪರಶಿವಲಿಂಗವೂ ಭಿನ್ನಗಳೆಂದು ತಿಳಿದು ಪೂಜಾ ಮುಗಿದಮೇಲೆ ಆ ಯೆಲ್ಲಾ ಪದಾರ್ಥಗಳು ಲಿಂಗದಲ್ಲಿ ಅರ್ಪಿಸಲ್ಪಟ್ಟು ಆತ್ಮಾರ್ಪಣೆಯೂ ಕೂಡ ಆಗಿಹೋದಮೇಲೆ ಶಿವಾತಿರಿಕ್ತವಾಗಿ ಯಾವದೂ ಉಳಿಯಲಿಲ್ಲವೆಂದು ಭಾವಿಸಿ, ಪುನಃ ಪೂಜಾಕಾಲ ಪ್ರಾಪ್ತಿಯಾಗುವವರಿಗೂ ಶಿವನೇ ನಾನು ಎಂದು ಬಾವಾಭ್ಯಾಸವನ್ನು ಮಾಡುತ್ತ ಹೋಗಲಾಗಿ ಆ ಭಾವವು ದೃಢವಾಗಲು ಉಪಾಸಕನಿಗೆ ಶಿವತ್ವಪ್ರಾಪ್ತಿಯಾಗುತ್ತದೆಂದು ತಾತ್ಪರ್ಯವು (ಆದ್ದರಿಂದ ಯಾವ ಯುಕ್ತಿಗೂ ಯಾವ ಶ್ರುತಿಗೂ ವಿರೋಧವಿಲ್ಲಾ. ಈ ಮಂತ್ರದಿಂದ ಆಕಾರಾದ್ಯವಚ್ಛಿನ್ನಗಳಾದ ದೇವತೆಗಳ ಉಪಾಸನೆಯು ನಿಷೇಧವಾದಿ ಶಿವಲಿಂಗೋಪಾಸನೆಯು ವಿಹಿತವಾಯಿತೆಂದು ತಿಳಿಯತಕ್ಕದ್ದು. ||೪||

ಯಾವ ಪರಶಿವಲಿಂಗವನ್ನು ಮನಸ್ಸಿನಿಂದ ಜನವು ತಿಳಿಯುವದಿಲ್ಲವೋ ? ಯಾವ ಪರಶಿವಶಿವಲಿಂಗವು ಪ್ರಸಾದಲಿಂಗರೂಪವಾಗಿ ಮನಸ್ಸನ್ನು ತಿಳಿಯುವದೆಂದು ಶಿವಜ್ಞಾನಿಗಳು ಹೇಳುವರೋ ? ಅದುವೇ ಪರಬ್ರಹ್ಮವು. ಅದನ್ನೆ ನೀನು ತಿಳಿ. ಪ್ರತಿಮಾಕಾರದಿಂದ ಪರಿಚ್ಛಿನ್ನರಾದ ದೇವತೆಗಳು ಬ್ರಹ್ಮಸ್ವರೂಪರಲ್ಲಾ | ಶಿವಲಿಂಗಕ್ಕೆ ಆಕಾರವಿಲ್ಲದಿರುವದರಿಂದ ವಿಷ್ಣ್ವಾದಿ ದೇವತೆಗಳಿಗೆ ಆಕಾರ ವಿರುವದರಿಂದ ಶಿವಲಿಂಗವೇ ಬ್ರಹ್ಮವೆಂದು ಹಿಂದಣ ವ್ಯಾಖ್ಯಾನದಲ್ಲಿ ಹೇಳಲ್ಪಟ್ಟಿತು. ಇದರಿಂದ ಮೂರ್ತಿ ಪೂಜೆಯೇ ಖಂಡಿಸಲ್ಪಟ್ಟಿತೆಂದು ಭ್ರಾಂತರಾಗಬಾರದು ಶಿವಲಿಂಗವೆಂಬುವದೇ ಮೂರ್ತಿ ರೂಪವಾಗಿದೆ ಪರಶಿವ ಬ್ರಹ್ಮಕ್ಕೆ ಮೂರ್ತಿ ಇಲ್ಲವೆಂದರೆ ವೀರಶೈವರಿಗೆ ಶಿವನ ಪೂಜೆಯು ಸಂಭವಿಸಲಿಕ್ಕಿಲ್ಲವು. ಮೂರ್ತಿಸ್ವರೂಪದಿಂದಲೇ ಮಹಾ ದೇವನಿಗೆ ಪೂಜ್ಯತ್ವ

ಮುಕ್ತಂ। ಶಿವಲಿಂಗಸ್ಯಾಕಾರಾದಿ ಪರಿಚ್ಛಿನ್ನತ್ವಾಭಾವಾತ್ ವಿಷ್ಣ್ವಾದೇರಾಕಾರ ಪರಿಚ್ಛಿನ್ನತ್ವಾತ್ । ಶಿವಲಿಂಗಸ್ಯೈವ ಬ್ರಹ್ಮತ್ವ ಮುಪಾಸ್ಯತ್ವಮಿತಿ । ಅನೇನ ವ್ಯಾಖ್ಯಾನೇನ ಮೂರ್ತಿಪೂಜೈವ ಖಂಡಿತೇತಿ ನಭ್ರಮಿತವ್ಯಂ । ಶಿವಲಿಂಗಸ್ಯ ಮೂರ್ತಿರೂಪತ್ವಾತ್। ಅನ್ಯಥಾ ವೀರಶೈವಾನಾಂ ಶಿವಪೂಜೈವ ನ ಸಂಭವೇತ್। ಮೂರ್ತ್ಯಾತ್ಮನೈವ ದೇವಸ್ಯ ಯಥಾಪೂಜ್ಯತ್ವಕಲ್ಪನಾ । ಇತ್ಯುಕ್ತತ್ವಾತ್ ಸಚ್ಚಿದಾನಂದಾತ್ಮಕ ಪರಶಿವಸ್ಯೈವ ಘೃತಕಾಠಿಣ್ಯನ್ಯಾಯೇನ ಲಿಂಗಮೂರ್ತಿರೂಪತ್ವಾತ್ । ಪ್ರತಿಮಾಕಾರ ಶೂನ್ಯಸ್ಯಲಿಂಗಸ್ಯ ಪರಮಾತ್ಮನಃ ॥ ಇತ್ಯುಕ್ತ್ಯಾತು ಪ್ರತಿಮಾಕಾರೋನಿಷಿಧ್ಯತೇ । “ಯಾತೇರುದ್ರಶಿವಾತನೂ ರಘೋರಾಪಾಪಕಾಶಿನೀತಿ” ಶ್ರುತೇಃ ನನ್ವೇವಂಚೇಚ್ಛಿವಲಿಂಗಸ್ಯಾಪಿ ಪರಿಚ್ಛಿನ್ನತ್ವಾತ್ ।ಕಥಂ ತಸ್ಯ ಬ್ರಹ್ಮತ್ವಂ । ಇತಿಚೇನ್ನ । ತಸ್ಯಸರ್ವಸ್ವಾತಂತ್ರ್ಯಪ್ರಯುಕ್ತಲಿಂಗರೂಪತ್ವೇಽಪಿ। ನಾಬ್ರಹ್ಮತ್ವಂ । ಘೃತಸ್ಯಕಠಿಣತಾದಶಾಯಾಮಪ್ಯಘೃತತ್ವಾಭಾವಇವ ಪರಬ್ರಹ್ಮಣಃ ಶಿವಸ್ಯ ಭಕ್ತಾನುಗ್ರಹಾರ್ಥಂ ಇಷ್ಟಾದಿ ಲಿಂಗರೂಪತ್ವೇಽಪಿ ನಾಬ್ರಹ್ಮತ್ವಂ ವಕ್ತುಂಶಕ್ಯತೇ । ನೇದಮಿತ್ಯಾದಿನಾ ಶಿವಲಿಂಗಾತಿರಿಕ್ತ ವಿಷ್ಣ್ವಾದೀನಾಂ

ವೆಂದು ಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದ ಸಚ್ಚಿದಾನಂದ ರೂಪ ಪರಶಿವನೇ ತನ್ನ ಸ್ವಾತಂತ್ರ್ಯ ಶಕ್ತಿಯಿಂದ ಕರಗಿದ ತುಪ್ಪವು ಹೆತ್ತುಪ್ಪವಾದಂತೆ ಲಿಂಗಮೂರ್ತಿ ಸ್ವರೂಪನಾಗಿರುವನು. ಎಲೈ ಶಿವನೇ ನಿನ್ನ ಮಂಗಲಮಯವಾದ ಯಾವ ಲಿಂಗಮೂರ್ತಿಯು ಭಕ್ತರುಗಳಲ್ಲಿ ಪ್ರಕಾಶಿಸುವಂಥಾದ್ದಾಗಿದೆಯೋ? ಎಂದು ಯಜುರ್ವೇದವು ಹೇಳುತ್ತದೆ ಆದ್ದರಿಂದ ಆ ಪರಶಿವನು ಲಿಂಗಮೂರ್ತಿ ಸ್ವರೂಪನಾಗಿದ್ದರೂ ಅವನ ಲಿಂಗಮೂರ್ತಿಗೂಕೂಡಾ ಬ್ರಹ್ಮತನವು ಸಿದ್ಧಿಸುತ್ತದೆ ಘೃತಕ್ಕೆ ಕಠಿಣತ್ವಾವಸ್ಥೆಯು ಪ್ರಾಪ್ತವಾದಾಗ್ಯೂ ಕಠಿಣವಾದ ಆ ತುಪ್ಪಕ್ಕೆ ಘೃತತ್ವವೇ ಇರುವಂತೆ ಬ್ರಹ್ಮವು ತನ್ನ ಸ್ವಾತಂತ್ರ್ಯ ಶಕ್ತಿಯಿಂದ ಇಷ್ಟಾದಿ ಲಿಂಗಸ್ವರೂಪವಾದಾಗ್ಯೂ । ಆ ಇಷ್ಟಲಿಂಗಾದಿಗಳಿಗೆ ಬ್ರಹ್ಮತ್ವವು ಸಿದ್ಧವಾಗುತ್ತದೆ. ಹಾಗಾದರೆ ‘ನೇದಂ’ ಎಂಬುವದರಿಂದ ಯಾವದೂ ಬ್ರಹ್ಮವಲ್ಲವೆಂದು ಶ್ರುತಿಯು ಹೇಳುತ್ತದೆ. ಅಂದರೆ ಶಂಖಚಕ್ರ ಗದಾ ತ್ರಿಶೂಲಾದಿ ಧಾರಣೆಯುಳ್ಳ ಯಾವ ದೇವತೆಗಳೂ ಬ್ರಹ್ಮವಲ್ಲ. ಆದ್ದರಿಂದ ಆ ದೇವತೆಗಳು ಉಪಾಸ್ಯರಲ್ಲ ಎಂದು ಶ್ರುತಿಯ ತಾತ್ಪರ್ಯವು. ಹೀಗೆ ಹೇಳದೆ ಶಿವಲಿಂಗವನ್ನು ಕೂಡಾ ನಿಷೇಧ್ಯ ಕೋಟಿಯಲ್ಲಿ ಸೇರಿಸಿದರೆ ಇದೇ ಉಪನಿಷತ್ತಿನಲ್ಲಿ ದೇವತೆಗಳ ಮುಂಭಾಗದಲ್ಲಿ ಪ್ರಾದುರ್ಭೂತವಾದ ಯಕ್ಷವೆಂಬ ಜ್ಯೋತಿರ್ಲಿಂಗಕ್ಕೆ ಬ್ರಹ್ಮವೆಂದು ಹೇಳಿದ ಪಾರ್ವತೀ ದೇವಿಯ ವಾಕ್ಯದಿಂದ ಅದರಲ್ಲಿ ದೇವತೆಗಳಿಗೆ ಬ್ರಹ್ಮತ್ವ ನಿಶ್ಚಯವಾಗದೇ ಹೋದೀತು? ಆದಕಾರಣ ಶಿವಲಿಂಗಕ್ಕೆ ಬ್ರಹ್ಮತ್ವವನ್ನೂ ಉಪಾಸ್ಯತ್ವವನ್ನೂ ಅವಶ್ಯಕವಾಗಿ ಸ್ವೀಕರಿಸತಕ್ಕದ್ದು. ಶ್ರುತಿಸಮ್ಮತವು. ತ್ರಿಶೂಲ ಚಂದ್ರಕಲಾಧಾರಿಯಾದ ಪರಮಾತ್ಮಲೀಲಾ ವಿಗ್ರಹಕ್ಕೆ ಬ್ರಹ್ಮತ್ವವೂ ಇಲ್ಲವು. ಉಪಾಸ್ಯತ್ವವೂ ಇಲ್ಲವು. ಅದು ವೀರಶೈವನಿಗೆ

ಶಂಖಚಕ್ರ ತ್ರಿಶೂಲಾದಿಧಾರಿಣಾಮಬ್ರಹ್ಮತ್ವಮನುಪಾಸ್ಯತ್ವಂಚೋಕ್ತಂ | ನತು ಶಿವಲಿಂಗಸ್ಯ. ಅನ್ಯಥಾ ಅತ್ರೈವೋಪನಿಷದಿ. ಪ್ರಾದುರ್ಭೂತಯಕ್ಷಸ್ಯ ಲಿಂಗ ರೂಪಸ್ಯ ಸಾಬ್ರಹ್ಮೇತಿಹೋವಾಚೇತ್ಯುಮಾ ವಾಕಾದ್ಬ್ರಹ್ಮತ್ವನಿಶ್ಚಯೋನಸ್ಯಾ ದ್ದೇವಾನಾಂ ಇತಿ ತಸ್ಯ ಶಿವಲಿಂಗಸ್ಯ ಬ್ರಹ್ಮತ್ವೋಪಾಸ್ಯತ್ವ ಪ್ರತಿಪಾದಕ ವಾಕ್ಯಾನಾ ಮನಂತತ್ವಾಚ್ಚ. ನನು ಚಂದ್ರಕಲಾದಿಧಾರಿಣಃ ಪ್ರತಿಮಾಕಾರವಿಶಿ ಷ್ಟಸ್ಯ "ಶುದ್ಧ ಮುಕ್ತಾಫಲಾಭಾಸಮುಪಾಸ್ಯಂ ಗುಣಮೂರ್ತಿಭಿಃ" ಇತಿ ಉಪಾ ಸ್ಯತ್ವೋಕ್ತತ್ವಾತ್. ಕಥಂ ತಸ್ಯಘೋರಮೂರ್ತೇರನುಪಾಸ್ಯತ್ವಂತ್ವಯೋಚ್ಯತೇ| "ಇತಿಚೇದುಚ್ಯತೇ. ಗುಣಮೂರ್ತಿ ಬ್ರಹ್ಮಾದ್ಯುಪಾಸ್ಯತ್ವೋಕ್ತಾವಪಿ ನಹಿಕರ್ಮ ಭೂಮೌ ತದ್ವಿಷಯಕ ವೀರಶೈವೋಪಾಸನಾವಿಧೀಯತೇ | ಸ್ವಕೀಯಾಧೊ ಮಾ ಯಾಶಕ್ತಿ ಪರಿಕಲ್ಪಿತ ಚಂದ್ರಕಲಾದಿ ವಿಶಿಷ್ಟ ಶರೀರವತ್ವಾದತಏವ ಸಂಸಾರಪರಿ ಬೃಂಹಣತ್ವಾಚ್ಚ | ಮುಮುಕ್ಷುಭಿಸ್ತತ್ಸ್ವರೂಪಸ್ಯಾನುಪಾಸ್ಯತ್ವಾತ್ | ಸ್ವ ಯಂಬದ್ಧಃ ಕಥಮನ್ಯಾನ್ಮೋಚಯೇತ್, | ಪಾಷಾಣಾವಲಂಬಿನಾಂ ಸಮುದ್ರೆ ನಿಮಜ್ಜನಮಿವ ನೀಲಕಂಠ ತ್ರಿಲೋಚನ ಚಂದ್ರಾರ್ಧಶೇಖರ ಸ್ವರೂಪಾವಲಂಬಿ ನಾಂ ಸಂಸೃತ್ಯಬ್ಧ್ಯುಲ್ಲಂಘನಂನಸ್ಯಾತ್ | ತದುಕ್ತಂ | ಅಶರೀರೋಪಿ ಸರ್ವತ್ರ

ಉಪಾಸ್ಯವಲ್ಲ. ಹಾಗಾದರೆ ಈ ಮೂರ್ತಿಗೆ "ಉಪಾಸ್ಯಂ ಗುಣಮೂರ್ತಿಭಿಃ" ಎಂದು ಸಿದ್ಧಾಂತ ಶಿಖಾಮಣಿಯು ಚಂದ್ರಕಲಾಧಾರಿಯಾದ ಘೋರಮೂರ್ತಿಗೆ ಉಪಾಸ್ಯತ್ವವನ್ನು ಏಕೆ ಹೇಳುತ್ತದೆಯೆಂದರೆ. ಗುಣಮೂರ್ತಿಗಳಾದ ಬ್ರಹ್ಮಾದಿಗಳಿಂದ ಅದು ಉಪಾಸ್ಯವಾದರೂ ಈ ಕರ್ಮಭೂಮಿಯಲ್ಲಿ ಮೂರ್ತಿ ವಿಷಯಕವಾದ ಉಪಾಸನೆಯು ವೀರಶೈವರಿಗೆ ವಿಧಿಸಲ್ಪ ಡುವದಿಲ್ಲಾದ್ದರಿಂದಲೇ ಚಂದ್ರಕಲಾದಿ ವಿಶಿಷ್ಟ ಘೋರಮೂರ್ತಿಯು ಆ ಪರಮಾತ್ಮನ ಅಧೊ ಮಾಯಾಶಕ್ತಿಯಿಂದ ಪರಿಕಲ್ಪಿತವಾದಕಾರಣ, ಸಂಸಾರದಲ್ಲಿ ಬಿದ್ದಿರುವದು. ಆದಕಾರಣ ಮು ಮುಕ್ಷುಗಳಿಗೆ ಉಪಾಸ್ಯವಲ್ಲ. ತಾನೇ ಬದ್ಧನಾದಮೇಲೆ ಅನ್ಯರನ್ನು ಬಿಡುಗಡೆ ಮಾಡಿಸುವ ಬಗೆ ಹೇಗೆ? ಅಂಥ ಘೋರಮೂರ್ತಿಯನ್ನಾಶ್ರಯಿಸಿದರೆ ಕಲ್ಲನ್ನು ಹಿಡಿದುಕೊಂಡ ಮನುಷ್ಯನು ಸಮುದ್ರದಲ್ಲಿ ಮುಳಿಗಿಹೋಗುವಂತೆ ಸಂಸಾರ ಸಮುದ್ರವನ್ನು ಎಂದಿಗೂ ದಾಂಟಲಾರನು. ಆದ್ದರಿಂದಲೇ ಶ್ರೀ ಭಗವತ್ಪಾದ ರೇಣುಕ ಶಿವಾಚಾರ್ಯರು "ಅಶರೀರೋಪಿ ಸರ್ವತ್ರ ವ್ಯಾಪ ಕೋಪಿ ನಿರಂಜನಃ | ಆತ್ಮಾಮಾಯಾ ಶರೀರಸ್ಥಃ ಪರಿಭ್ರಮತಿ ಸಂಸೃತೌ" ಈ ಶ್ಲೋಕದ ಪದ, ವಾಕ್ಯ ಪ್ರಮಾಣಗಳನ್ನು ಬಲ್ಲ ಶ್ರೀ ಮರಿತೋಂಟದಾರ್ಯರು ವ್ಯಾಖ್ಯಾನಮಾಡಿರುವರೇ ನಂದರೆ: ಪರಮುಕ್ತಿಗೂ ಅಪರ ಮುಕ್ತಿಗೂ ಕಾರಣವಾದ ಶುದ್ಧವಿದ್ಯಾ ಸ್ವರೂಪವಾದ ಶರೀರ ವುಳ್ಳವನಾದರೂ ಶರೀರವಿಲ್ಲದವನಾಗಿಯೂ, ಅಪರಿಚ್ಛಿನ್ನನಾದ ಕಾರಣ ವ್ಯಾಪಕನಾಗಿಯೂ ದೋಷರಹಿತನಾದಕಾರಣ ನಿರಂಜನನಾಗಿಯೂ, ಪರಶಿವನು ಕಳೆ ಮೊದಲುಗೊಂಡು ಕ್ಷಿತಿಪರಿಯಂ

ವ್ಯಾಪಕೋಪಿ ನಿರಂಜನಃ | ಆತ್ಮಾ ಮಾಯಾಶರೀರಸ್ಥಃ ಪರಿಭ್ರಮತಿಸಂಸೃತೌ ||
ವ್ಯಾಖ್ಯಾತಂ ಚೈತತ್ಸರ್ವಂಪದವಾಕ್ಯಪ್ರಮಾಣಜ್ಞೇನ ಶ್ರೀಮರಿತೋಂಟದಾ
ರ್ಯೇಣ | ಪರಾಪರಮೋಕ್ಷಕಾರಣೀಭೂತ ಶುದ್ಧವಿದ್ಯಾ ಶರೀರವತ್ತ್ವೇನಾ
ಶರೀರೋಪಿ | ಅಪರಿಚ್ಛಿನ್ನತ್ವಾ ದ್ವ್ಯಾಪಕೋಪಿ | ದೋಷರಹಿತತ್ವಾನ್ನಿರಂಜ
ನೋಪಿ ಕಲಾದಿ ಕ್ಷಿತಿಪರ್ಯಂತ ತ್ರಿಂಶತ್ತತ್ವಕಾರಣೀಭೂತ ಸ್ವಕೀಯಾಧೋಮಾ
ಯಾಶಕ್ತಿ ಪರಿಕಲ್ಪಿತ ಚಂದ್ರಕಲಾದಿವಿಶಿಷ್ಟ ಶರೀರವಾನ್ಸನ್ ಸಂಸಾರೆ ಪರಿಭ್ರಮ
ತೀತ್ಯರ್ಥಃ || ಯದ್ಯಪಿ ತತ್ರತತ್ರ ನೀಲಕಂಠತ್ರಿಲೋಚನತ್ವಾದಿ ವಿಷಯರೂ
ಪೋಪಾಸನಂ ಚೋಕ್ತಂ | ಉಪನಿಷದ್ಯಪಿ| ಹೃತ್ಪುಂಡರೀಕಂ ವಿರಜಂ ವಿಶುದ್ಧ
ಮಿತ್ಯುಪಕ್ರಮ್ಯ ಉಮಾಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ ನೀ
ಲಕಂಠಂ ಪ್ರಶಾಂತಂ | ಇತ್ಯಂತೇನ ಚಿಜ್ಜ್ಯೋತೀರೂಪಾಂತರ್ಲಿಂಗಸ್ಯಾಪಿ
ತ್ರಿಲೋಚನತ್ವಾದಿಕಮುಕ್ತಂ| ತಥಾಪಿ ತತ್ಸ್ವರೂಪಂ ನ ಸ್ವಾಭಾವಿಕಂ. ಕಿಂತು
ಮಾಯಿಯಂ. ನಿಷ್ಕಲಂ ನಿರಾಕಾರಂ ಪದಂ ಬ್ರಹ್ಮಶಿವಾಭಿಧಂ | ನಿಧ್ಯಾತು
ಮಸಮರ್ಥೋಪಿ ತದ್ವಿಭೂತಿಂ ವಿಭಾವಯೇತ್ || ಇತ್ಯುಕ್ತರೀತ್ಯಾ ಸಚ್ಚಿದಾ
ನಂದ ಲಿಂಗಧ್ಯಾನಾಸಮರ್ಥೇನ ಲಿಂಗೇ ತನ್ಮಾಯಾಕಲ್ಪಿತಂ ಸ್ವರೂಪಂ ಪರಿಕ

ಕಗಳಾದ ೩೦ ತತ್ವಗಳಿಗೆ ಕಾರಣವಾದ ತನ್ನ ಅಧೋಮಾಯಾಶಕ್ತಿಯಿಂದ ಪರಿಕಲ್ಪಿತಮಪ್ಪ ಚಂ
ದ್ರಕಲಾದಿ ವಿಶಿಷ್ಟ ಶರೀರವುಳ್ಳವನಾಗಿ ಸಂಸಾರದಲ್ಲಿ ಭ್ರಮಿಸುತ್ತಾನೆ. ಎಂದು ಅರ್ಥವನ್ನು
ಬರೆದಿರುವರು. ಹಾಗಾದರೆ ಬೇರೆ ಬೇರೆ ಕಡೆಯಲ್ಲಿ ನೀಲಕಂಠ ತ್ರಿಲೋಚನ ಚಂದ್ರಕಲಾದಿ
ವಿಶಿಷ್ಟ ಮೂರ್ತಿಯ ಉಪಾಸನೆಯು ಹೇಳಲ್ಪಟ್ಟದೆಯಲ್ಲಾ! ಮತ್ತು ಹೃತ್ಪುಂಡರೀಕಂ ವಿರಜಂ
ವಿಶುದ್ಧಂ 'ಎಂದು ಉಪಕ್ರಮಿಸಿ | ಉಮಾಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ
ನೀಲಕಂಠಂ ಪ್ರಶಾಂತಂ | ಎಂಬುವ ಪರಿಯಂತರವಿರುವ ಉಪನಿಷತ್ತಿನ ವಾಕ್ಯಗಳಿಂದಲೂ ಅಂ
ತರ್ಲಿಂಗಕ್ಕೆ ತ್ರಿಲೋಚನ ಚಂದ್ರಕಲಾ ಧಾರಣ ಮೊದಲಾದ ಘೋರಮೂರ್ತಿಯ ಸ್ವರೂಪವು
ಹೇಳಲ್ಪಟ್ಟದೆ ಆದರೂ ವೀರಶೈವೋತ್ತಮಾಧಿಕಾರಿಗೆ ಹೇಳಿದ ಮಾತಲ್ಲಾ. ಮತ್ತು ಆ ನೀಲಕಂ
ಠತ್ವಾದಿ ಸ್ವರೂಪವು ಸ್ವಾಭಾವಿಕವೂ ಅಲ್ಲಾ. ಅಧೋಮಾಯಾಕಲ್ಪಿತವಾದದ್ದು 'ಆದ್ದರಿಂದಲೇ
ರೇಣುಕ ಭಗವತ್ಪಾದರು "ನಿಷ್ಕಲಂಕಂ ನಿರಾಕಾರಂ ಪರಂ ಬ್ರಹ್ಮ ಶಿವಾಭಿಧಂ" ನಿಧ್ಯಾತುಮ
ಸಮರ್ಥೋಪಿತದ್ವಿಭೂತಿಂ ವಿಭಾವಯೇತ್ "ಅಂದರೆ ನಿಷ್ಕಲಂಕನೂ, ನಿರಾಕಾರನೂ ಆದ
ಶಿವನಾಮಕ ಪರಬ್ರಹ್ಮ ವಸ್ತುವನ್ನು ಧ್ಯಾನಮಾಡಲು ಸಮರ್ಥನಾದವನು. ಆ ಶಿವನ ಚಂದ್ರಕ
ಲಾದಿ ವಿಶಿಷ್ಟಮೂರ್ತಿ ಸ್ವರೂಪವನ್ನು ಲಿಂಗದಲ್ಲಿ ಕಲ್ಪಿಸಿ ಉಪಾಸನೆಮಾಡಬೇಕೆಂದು ಹೇಳಿ
ದ್ದಾರೆ. ಇದೇ ತಾತ್ಪರ್ಯದಿಂದಲೇ "ಹೃತ್ಪುಂಡರೀಕಂ "ಎಂಬುವ ಶ್ರುತಿಯು ನೀಲಕಂಠತ್ವ
ತ್ರಿಲೋಚನತ್ವಾದಿ ವಿಶೇಷಗಳನ್ನು ಹೇಳಿದೆ 'ಅಲ್ಲದೆ ತ್ರಿಲೋಚನತ್ವಾದಿ ಮಾಯಿಕ ಧರ್ಮಗಳ

ಲ್ಪ್ಯ | ಉಪಾಸನೀಯಮಿತಿ ಶ್ರುತೇಸ್ತಾತ್ಪರ್ಯಂ | ಅನ್ಯಥಾಸದ್ರೂಪಂ ಭಾವ ಲಿಂಗಂಸ್ಯಾತ್ | ಚಿದ್ರೂಪಂ ಪ್ರಾಣಲಿಂಗಕಂ | ಆನಂದರೂಪಮಾಚಾರ್ಯೈರಿಷ್ಟಲಿಂಗಮುದಾಹೃತಂ || ಇತ್ಯನುಭವಸೂತ್ರಾದ್ಯುಕ್ತಂವಿರುಧ್ಯೇತ ||೫||

ಮೂ|| ಯಚ್ಚಕ್ಷುಷಾ ನಪಶ್ಯತಿ ಯೇನಚಕ್ಷೂಂಷಿಪಶ್ಯತಿ।
ತದೇವಬ್ರಹ್ಮತ್ವಂ ವಿದ್ಧಿನೇದಂ ಯದಿದಮುಪಾಸತೇ ||೬||

ಶಾಂ|| ಯತ್ ಪರಶಿವಲಿಂಗಂ ಚಕ್ಷುಷಾ ಚಕ್ಷುರಿಂದ್ರಿಯೇಣ ನಪಶ್ಯತಿ ನಾವಲೋಕಯತಿಜನಃ | ಯೇನ ಶಿವಲಿಂಗರೂಪೇಣ | ಚಕ್ಷೂಂಷಿ | ಚಕ್ಷುರಿಂದ್ರಿಯಂ| ಬಹುವಚನಂ ಛಾಂದಸಂ | ಪಶ್ಯತಿ, ರೂಪಗ್ರಾಹಕಂ ಭವತಿ | ತದೇವೇತ್ಯಾದಿಕಂ ಪೂರ್ವಮುಕ್ತಾರ್ಥಂ || ಏತೇನ ಚಕ್ಷುಃ ಕ ಉ ದೇವೋಯುನಕ್ತೀತ್ಯಸ್ಯೋತ್ತರಮುಕ್ತಂ ||೬||

ಮೂ|| ಯಚ್ಛ್ರೋತ್ರೇಣನಶೃಣೋತಿ ಯೇನಶ್ರೋತ್ರಮಿದಂಶ್ರುತಂ । ತದೇವ ಬ್ರಹ್ಮತ್ವಂ ವಿದ್ಧಿನೇದಂ ಯದಿದಮುಪಾಸತೇ ||೭||

ಶಾಂ|| ಯತ್ಪರಶಿವಲಿಂಗಂ ಶ್ರೋತ್ರೇಣ ಶ್ರೋತ್ರೇಂದ್ರಿಯೇಣ, ನಶೃಣೋತಿಜನಃ | ತನ್ನಶ್ರಾವಣಪ್ರತ್ಯಕ್ಷ ವಿಷಯಂ ಭವತೀತ್ಯರ್ಥಃ. ಯೇನಪ್ರಸಾ

ನ್ನು ವಾಸ್ತವವಾಗಿ ಪ್ರಾಣಲಿಂಗಕ್ಕೆ ಮಾನಿಸಿದರೆ "ಚಿದ್ರೂಪಂ ಪ್ರಾಣಲಿಂಗಕಂ ಅಂದರೆ ಪ್ರಾಣಲಿಂಗವು ಚಿದ್ರೂಪವಾದದ್ದು ಎಂದು ಹೇಳುವ ಅನುಭವಸೂತ್ರಕ್ಕೆ ವಿರೋಧವಾಗುವದು. " ಚಂದ್ರಕಲಾದಿ ವಿಶಿಷ್ಟರೂಪವು ಸಂಸಾರ ಬದ್ಧವಾದದ್ದು ಆದರೂ ಸ್ಥೂಲಾರುಂಧತೀ ನ್ಯಾಯದಂತೆ ಕನಿಷ್ಠಾಧಿಕಾರಿಗೆ ಕಿಂಚಿದುಪಯುಕ್ತವಾಗುವದು. ||೫||

ಯಾವ ಪರಶಿವಲಿಂಗವನ್ನು ಜನವು ಚಕ್ಷುರಿಂದ್ರಯದಿಂದ ನೋಡುವದಿಲ್ಲವೊ ? ಮತ್ತು ಯಾವ ಪರಶಿವಲಿಂಗದ ಅಂಶರೂಪವಾದ ಶಿವಲಿಂಗದಿಂದ ಚಕ್ಷುರಿಂದ್ರಿಯವು ರೂಪವನ್ನು ಗ್ರಹಿಸಲು ಸಮರ್ಥವಾಗುವದೊ ? ಅದುವೇ ಬ್ರಹ್ಮವು. ಅದುವೇ ಉಪಾಸ್ಯವು. ಉಳಿದ ಪದಗಳ ಅರ್ಥವನ್ನು ಹಿಂದೆ ಹೇಳಲ್ಪಟ್ಟ ಪ್ರಕಾರ ತಿಳಿಯತಕ್ಕದ್ದು. ||೬||

ಯಾವ ಪರಶಿವಲಿಂಗವು ಶ್ರವಣೇಂದ್ರಿಯದಿಂದುಂಟಾದ ಪ್ರತ್ಯಕ್ಷಕ್ಕೆ ವಿಷಯವಾಗುವದಿಲ್ಲವೊ? ಯಾವ ಪರಶಿವಲಿಂಗವು ಪ್ರಸಾದಲಿಂಗರೂಪದಿಂದ ಶ್ರವಣೇಂದ್ರಿಯಕ್ಕೆ ಶಬ್ದಗ್ರಹಣ ಸಾಮ

ದಲಿಂಗರೂಪೇಣ, ಇದಂ ಕರ್ಣಶಷ್ಕುಲ್ಯವಚ್ಛಿನ್ನಂ ಶ್ರೋತ್ರಂ. ಶ್ರೋತ್ರೇಂದ್ರಿಯಂಶ್ರುತಂ ಶಬ್ದಗ್ರಹಣಸಮರ್ಥಂ ಭವತಿ| ತದೇವೇತ್ಯಾದಿಕಂ ಪೂರ್ವಮುಕ್ತಾರ್ಥಂ ಏತೇನಶ್ರೋತ್ರಂ ಕ ಉದೇವೋಯುನಕ್ತೀತ್ಯಸ್ಯ ಪ್ರತಿವಚನಮುಕ್ತಂ ||

ಮೂ|| ಯತ್ಪ್ರಾಣೇನ ನಪ್ರಾಣಿತಿ ಯೇನಪ್ರಾಣಃಪಣೀಯತೇ । ತದೇವಬ್ರಹ್ಮತ್ವಂವಿದ್ಧಿ ನೇದಂ ಯದಿದ ಮುಪಾಸತೇ ||೮||

ಇತಿ ಪ್ರಥಮಖಂಡಃ,

ಯತ್ಪರಶಿವಲಿಂಗಂ ಪ್ರಾಣೇನ ನಪ್ರಾಣಿತಿ ನಪ್ರಾಣನಂಕರೋತಿ | ಯೇನಪ್ರಾಣಲಿಂಗರೂಪೇಣ ಪ್ರಾಣಃ ಪ್ರಾಣಾಪಾನಾದಿ ಪಂಚವೃತ್ತಿರೂಪಃ | ಶರೀರಧಾರಣರೂಪ ಸ್ವವ್ಯಾಪಾರಂ ವಿದಧಾತಿ. ತದೇವೇತ್ಯಾದಿಕಂ ಪೂರ್ವವತ್ ಬೋಧ್ಯಂ|| ಪ್ರಾಣಏವಮನುಷ್ಯಾಣಾಂ ದೇಹಧಾರಣಕಾರಣಂ ಇತ್ಯುಕ್ತೇಃ || ತದಾಧಾರಃ ಶಿವಃ ಪ್ರೋಕ್ತಃ ಸರ್ವಕಾರಣಕಾರಣಂ | ನಿರಾಧಾರಃ ಶಿವಃ

ರ್ಥ್ಯವನ್ನುಂಟುಮಾಡುತ್ತದೆಯೊ ? ಅದುವೆ ಪರಬ್ರಹ್ಮವು | ಅದನ್ನೇ ಉಪಾಸನೆಮಾಡಬೇಕು. ಈ ಮಂತ್ರದಿಂದ ಶ್ರೋತ್ರಕ್ಕೆ ಪ್ರೇರಕವಾವದು ? ಎಂಬ ಪ್ರಶ್ನಕ್ಕೆ ಉತ್ತರವು ಹೇಳಲ್ಪಟ್ಟಿತು. ಅಂದರೆ ಯಾವ ಪರಶಿವಲಿಂಗವು ಪ್ರಸಾದಲಿಂಗರೂಪದಿಂದ ಪ್ರೇರಿಸುತ್ತದೆಯೊ | ಆ ಪರಶಿವಲಿಂಗವು ಪರಂಪರಾ ಪ್ರೇರಕವು. ಪ್ರಸಾದಲಿಂಗವು ಸಾಕ್ಷಾತ್ ಪ್ರೇರಕವಾಗುತ್ತದೆಂಬದನ್ನು ತಿಳಿಯತಕ್ಕದ್ದು? ||೭||

ಯಾವ ಪರಶಿವಲಿಂಗವು ಪ್ರಾಣದಿಂದ ಜೀವಿಸಿಕೊಂಡಿರದೆ ಪ್ರಾಣವು ಮಾತ್ರ ಯಾವ ಪರಶಿವಲಿಂಗದ ಅಂಶರೂಪವಾದ ಪ್ರಾಣಲಿಂಗದಿಂದ ತನ್ನ ಶರೀರಧಾರಣ ವ್ಯಾಪಾರದಲ್ಲಿ ಸಮರ್ಥವಾಗುತ್ತದೆಯೊ ? ಆ ಪರಶಿವ ಲಿಂಗವೇ ಬ್ರಹ್ಮವೆಂದು ತಿಳಿದು ನೀನು ಉಪಾಸನೆಯನ್ನು ಮಾಡು ಇತರ ದೇವತೆಗಳನ್ನು ಉಪಾಸನೆಯಂ ಮಾಡಬೇಡ. |೮||

ಈ ಉಪನಿಷತ್ತಿನಲ್ಲಿ ಪ್ರಥಮ, ದ್ವಿತೀಯ ಮಂತ್ರಗಳ ಪ್ರಶ್ನೋತ್ತರ ವಾಕ್ಯಗಳಿಂದ ಪ್ರೇರಣೆಮಾಡುವವನಲ್ಲಿ ಒಂದಾನೊಂದು ಶಕ್ತಿವಿಶೇಷವನ್ನು ಸ್ವೀಕರಿಸದಿದ್ದರೆ ಅಶಕ್ತಃ ಕಿಂಕರಿಷ್ಯತಿ | ಎಂಬುಕ್ತಿಯಂತ ಶಕ್ತಿ ಶೂನ್ಯನಾದವನು. ಯಾವುದನ್ನೂ ಪ್ರೇರಿಸಲಾರನು ಆದುದರಿಂದ ಪರಬ್ರಹ್ಮವು ಶಕ್ತಿಯೆಂಬ ವಿಶೇಷದಿಂದ ಕೂಡಿರುವದರಿಂದ ಸವಿಶೇಷ ಬ್ರಹ್ಮವೇ ಈ ಉಪನಿಷತ್ತಿನಿಂದ ಹೇಳಲ್ಪಟ್ಟಿರುವದೆಂದು ತಿಳಿಯತಕ್ಕದ್ದು. ಬ್ರಹ್ಮದಲ್ಲಿ ಒಂದು ವಿಚಿತ್ರಶಕ್ತಿಯನ್ನು ಅಂಗೀಕರಿಸದಿದ್ದಲ್ಲಿ. ಆದು ಶ್ರೋತ್ರಾದಿಗಳಿಗೆ ಶ್ರೋತ್ರಾದಿ ರೂಪವಾಗಿ ಸೇರಿಸುತ್ತದೆಂಬುವ ಶ್ರುತಿಯು ಸಂಗತವಾಗಲಾರದು. ಮತ್ತು ದ್ವಿತೀಯ ಮಂತ್ರದಿಂದ ಲಿಂಗಾಂಗ ಸಾಮರಸ್ಯಜ್ಞಾ

ಸಾಕ್ಷಾತ್ ಪ್ರಾಣಸ್ತೇನಪ್ರತಿಷ್ಠಿತ, ಇತಿ ಅತ್ರಪ್ರಥಮದ್ವಿತೀಯಮಂತ್ರಾಭ್ಯಾಂ ಕೇನೇಷಿತ ಮಿತ್ಯಾದಿ ಪ್ರಶ್ನವಾಕ್ಯಾತ್ | ಶ್ರೋತ್ರಸ್ಯಶ್ರೋತ್ರಮಿತ್ಯಾದ್ಯುತ್ತರವಾಕ್ಯಾಚ್ಚ | ಪ್ರೇರಯಿತರಿ ಶಕ್ತಿವಿಶೇಷಾಭಾವೇ ಪ್ರೇಷಯಿತೃತ್ವಮನುಪಪನ್ನಂ | ಇತ್ಯತಸ್ತಸ್ಯಸವಿಶೇಷತ್ವಮುಕ್ತಂ | ಕಿಂಚ ದ್ವಿತೀಯಮಂತ್ರೇಣ ಸ್ವಕೀಯಶಕ್ತ್ಯಾ ಶ್ರೋತ್ರಾದ್ಯವಚ್ಛಿನ್ನ ಷಡ್ಲಿಂಗಸ್ಥಲರೂಪಂ ಜಾತಂ ಸತ್ ಶ್ರೋತ್ರಾದಿಕಂ ಪ್ರೇರಯತೀತ್ಯುಕ್ತಂ | ಉಕ್ತಂಚ ತಲ್ಲಿಂಗಾಂಗ ಸಾಮರಸ್ಯಜ್ಞಾನಿನಾಂ ಧೀರಾಣಾಂ ಮುಕ್ತಿಪ್ರಯೋಜನಂ | ತೃತೀಯಮಂತ್ರೇಣತು ವಾಙ್ಮನಸಾದ್ಯಗೋಚರತ್ವಮುಕ್ತಂ. ಸತುಸಾಮಾನ್ಯತೊ ಅವಿಷಯತ್ವಂ. ಅವಾಙ್ಮನಸಗೋಚರಮಿತಿ ಜ್ಞಾನಸ್ಯೈವ ವಿಷಯತ್ವಾತ್. ಯತ್ತು ನಿರ್ವಿಶೇಷಮೇವಬ್ರಹ್ಮ. ಸ್ವಸಾನ್ನಿಧ್ಯಮಾತ್ರೇಣ ಪ್ರೇಷಯಿತೃಭವತೀತಿ ಪ್ರೇಷಕಪ್ರಶ್ನಸ್ಯೋಪಪನ್ನತ್ವಾತ್. ನಿರ್ವಿಶೇಷಸ್ಯ ಮುಮುಕ್ಷು ಜಿಜ್ಞಾಸ್ಯತ್ವಂಯುಕ್ತಮಿತ್ಯಾಹುಃ. ತತ್ತುಚ್ಛಂ| ಅತ್ರತದ್ಬೋಧಕಸ್ಯಕಸ್ಯಚಿತ್ಪದಸ್ಯಾಭಾವಾತ್ ತತ್ಸತ್ವೇಮಾನಾಭಾವಾತ್ ಶ್ರುತೇರ್ಮಾನತ್ವೇ ತಸ್ಯಾ ಜಗದಂತಃಪಾತಿತ್ವೇನ ತತ್ಪ್ರತಿಪಾದ್ಯಬ್ರಹ್ಮಣೋಪಿ ಮಿಥ್ಯಾತ್ವಾಪತ್ತೇಃ | ವೇದಸತ್ಯತ್ವಾಂಗೀಕಾರೆ ಅದ್ವೈತಹಾನಿಃ, ತದಸತ್ಯತ್ವೆ

ನಿಗಳಾದ ಧೀರರಿಗೆ ಮುಕ್ತಿಪ್ರಯೋಜನವೂ ಕೂಡಾ ಹೇಳಲ್ಪಟ್ಟಿತು. ತೃತೀಯಮಂತ್ರದಿಂದ ಲಾದರೂ ಪರಶಿವ ಬ್ರಹ್ಮವು ವಾಕ್ಕುಮನಸುಗಳಿಗೆ ವಿಷಯವಲ್ಲವೆಂದು ಹೇಳಲ್ಪಟ್ಟಿತೇ ಹೊರತು ಸಾಮಾನ್ಯವಾಗಿ ಬ್ರಹ್ಮವು ವಿಷಯವೇ ಅಲ್ಲವೆಂದು ಹೇಳಲ್ಪಡಲಿಲ್ಲಾ. ಯಾಕಂದರೆ ಬ್ರಹ್ಮವು ವಾಙ್ಮನಸ್ಸುಗಳಿಗೆ ಗೋಚರವಲ್ಲವೆಂದು ಹೇಳುವವರೂ ಬ್ರಹ್ಮ ಅನಃ ಧ್ಯಾನ ಸಗೋಚರಂ | ಎಂಬ ಜ್ಞಾನಕ್ಕೆ ಆದರೂ ಬ್ರಹ್ಮವು ವಿಷಯವಾಗುತ್ತದೆಂದು ಒಪ್ಪಬೇಕಷ್ಟೆ? ಕೆಲವರು ಅಗ್ನಿಯ ಸಾನ್ನಿಧ್ಯದಿಂದ ಆಯಃ ಪಿಂಡವಲ್ಲಿ (ಕಬ್ಬಿಣದಲ್ಲಿ) ಸುಡುವತನವು ಬರುವಂತೆ ಸ್ವತಃ ಬ್ರಹ್ಮದಲ್ಲಿ ಪ್ರೇರಿಸುವ ತನವಿಲ್ಲದಿದ್ದರೂ ಮಾಯಾಸಾನ್ನಿಧ್ಯದಿಂದ ಬ್ರಹ್ಮವಲ್ಲಿ ಪ್ರೇರಣೆಮಾಡುವ ತನವು ಬರುತ್ತದೆ ಆದ್ದರಿಂದ ಪ್ರೇರಕನಾವನೆಂಬ ಪ್ರಶ್ನವು ಸಂಗತವೇ ಆಗುತ್ತದಾದ್ದರಿಂದ ಬ್ರಹ್ಮವು ನಿರ್ವಿಶೇಷವೇ ಆಗಿದೆ. ಆ ನಿರ್ವಿಶೇಷ ಬ್ರಹ್ಮವೆ ಮುಮುಕ್ಷುಗಳ ಜಿಜ್ಞಾಸೆಗೆ ಯೋಗ್ಯನಾದದ್ದೆಂದು ಉಪನಿಷತ್ತಿನ ತಾತ್ಪರ್ಯವೆಂದು ಹೇಳುವರು. ಹೀಗೆ ಮನಸ್ಸಿಗೆ ಬಂದಂತೆ ಕಲ್ಪನೆ ಮಾಡುವದು ಯೋಗ್ಯವಲ್ಲಾ? ಈ ಉಪನಿಷತ್ತಿನಲ್ಲಿ ಯಲ್ಲಿಯೂ ನಿರ್ವಿಶೇಷ ಬ್ರಹ್ಮಬೋಧಕ ಶಬ್ದಗಳೇ ಇಲ್ಲದುದರಿಂದ ಆ ನಿರ್ವಿಶೇಷ ಬ್ರಹ್ಮವು ಉಪನಿಷತ್ಪ್ರತಿಪಾದ್ಯವಾಗಿದೆ ಎಂಬುವಲ್ಲಿ ಪ್ರಮಾಣವೇ ಇಲ್ಲವು. ಶ್ರುತಿಯೇ ಪ್ರಮಾಣವೆಂದರೆ ಆ ಶ್ರುತಿಯೂ ಕೂಡಾ ಮಿಥ್ಯಾಭೂತವಾದ ಜಗತ್ತಿಗೊಳಗಾದುದೆಂದು ಹೇಳಬೇಕಾಗಿರುವುದರಿಂದ ಶ್ರುತಿಯೂ ಕೂಡಾ ಮಿಥ್ಯಾಭೂತವೇ ಆಯಿತು. ಇಂಥ ಶ್ರುತಿಯಿಂದ ಬ್ರಹ್ಮವು ಪ್ರತಿಪಾದಿಸಲ್ಪಡುತ್ತದೆಂದರೆ ಆ

ಬ್ರಹ್ಮಸತ್ವೇ ಸತ್ಪ್ರಮಾಣಾಂತರಾಭಾವಾತ್, ವಂಧ್ಯಾಪುತ್ರವತ್ ಬ್ರಹ್ಮಣೋಪಿ ಮಿಥ್ಯಾತ್ವಂ ಸ್ಯಾತ್, ನಚಸಾನ್ನಿಧ್ಯಮಾತ್ರೇಣ ಪ್ರೇರಯಿತೃತ್ವಂಸಂಭವತಿ | ಬ್ರಹ್ಮಾತಿರಿಕ್ತಸ್ಯಾಭಾವಾತ್. ತತ್ಸಾನ್ನಿಧ್ಯಸ್ಯೈವಾ ಸಂಭವಾತ್, ಸ್ವಗತಸಜಾತೀಯ ವಿಜಾತೀಯಭೇದರೂಪ ವಿಶೇಷಸ್ಯೈವಾಸಂಗೀಕಾರಾತ್, ಕಿಂಚಾಸ್ಯ ನಿರ್ವಿಶೇಷತ್ವೇ ಜನ್ಮಾದ್ಯಸ್ಯಯತಃ" ಇತಿ ಸೂತ್ರೋಕ್ತಬ್ರಹ್ಮಲಕ್ಷಣಮಸಂಗತಂಸ್ಯಾತ್, ತಸ್ಮಾದತ್ರಸರ್ವಶಕ್ತಿಕಮೇವ ಬ್ರಹ್ಮಪ್ರಶ್ನವಿಷಯೀಭೂತಂ. ಅತಏವ ಪ್ರತಿವಚನೇ ಶ್ರೋತ್ರಸ್ಯಶ್ರೋತ್ರಮಿತ್ಯಾದ್ಯುಕ್ತಂ ಸಂಗಚ್ಛತೇ, ಅನ್ಯಥಾ ಶ್ರೋತ್ರಾದಿರೂಪೇಣ ಶ್ರೋತ್ರೇಂದ್ರಿಯಾದಿ ಪ್ರೇಷಕತ್ವಂ ಶ್ರೋತಾದಿರೂಪತ್ವಂಚಾಸಂಗತಂಸ್ಯಾತ್. ನಚ "ನಿರ್ಗುಣಂ" ನಿರಂಜನಂ" ನಿಷ್ಕಲಂ" ನಿಷ್ಕ್ರಿಯಂಶಾಂತಂ" ಇತ್ಯಾದಿ ನಿರ್ವಿಶೇಷಪ್ರತಿಪಾದಕವಾಕ್ಯಾನಾಂ ವಿರೋಧಇತಿ ವಾಚ್ಯಂ: ತೇಷಾಂ ಪ್ರಾಕೃತ ಹೇಯಗುಣಾದಿ ರಾಹಿತ್ಯ ವಿಷಯಕತ್ವಾತ್, ನನು ಜ್ಞಾನಾದ್ಯಾಶ್ರಯತ್ವೇ "ಸತ್ಯಜ್ಞಾನ ಮನಂತಂ ಬ್ರಹ್ಮ" ಇತ್ಯಾದಿನಾ

ಬ್ರಹ್ಮಕ್ಕೂ ಮಿಥ್ಯಾತ್ವವನ್ನು ಹೇಳಬೇಕಾಗುವುದಲ್ಲವೆ? ಒಂದು ನಿಕ್ಷೇಪವಿದೆ ಎಂದು ವಂಧ್ಯಾಪುತ್ರನು (ಬಂಜೆಯ ಮಗನು) ನನಗೆ ಹೇಳಿದನೆಂದು ಯಾವನಾದರೂ ಹೇಳಿದರೆ ಅವನಮಾತನ್ನು ಕೇಳಿ ಆ ನಿಕ್ಷೇಪದಲ್ಲಿ ಯಾವನಾದರೂ ವಿಶ್ವಾಸವಿಟ್ಟು ಪ್ರವರ್ತಿಸುವದನ್ನು ಎಲ್ಲಿಯಾದರೂ ನೋಡಿರುವದುಂಟೆ? ಅಲ್ಲಿ ವಿಶ್ವಾಸವಿಟ್ಟು ಪ್ರವರ್ತಿಸುವವನಿಗೆ ಹುಚ್ಚನೆನ್ನಲಾರರೆ ? ಹ್ಯಾಗೆ ವಂಧ್ಯಾಪುತ್ರನೂ ಮಿಥ್ಯಾಭೂತನೊ ಅವನು ಹೇಳಿದ ನಿಕ್ಷೇಪವೂ ಮಿಥ್ಯಾಭೂತವೊ? ಹಾಗೆ ಶ್ರುತಿಯೂ ಮಿಥ್ಯೆಯೇ ಆಶ್ರುತಿಯು ಹೇಳಿದ ಬ್ರಹ್ಮವೂ ಮಿಥ್ಯಾಭೂತವೇ ಆಗುವದೆಂದು ಅವರಿಗೆ ಯಾಕೆ ಹೊಳೆಯುವದಿಲ್ಲವೊ ತಿಳಿಯದು. ಶ್ರುತಿಯು ಸತ್ಯವೆಂದರೆ ತಮ್ಮ ಅದ್ವೈತ ಹಾನಿಯೇ ಆಗುವದು. ಶ್ರುತಿಯು ಅಸತ್ಯವೆಂದರೆ ಬ್ರಹ್ಮಕ್ಕೂ ವಂಧ್ಯಾಪುತ್ರನು ಹೇಳಿದ ನಿಕ್ಷೇಪದಂತೆ ಮಿಥ್ಯಾತ್ವವು ಬಂದೇಬರುವದು. ಆದ್ದರಿಂದ ನಿರ್ವಿಶೇಷ ಬ್ರಹ್ಮವಿರುವುದೆಂಬುವಲ್ಲಿ ಪ್ರಮಾಣವಿಲ್ಲಾ. ಮತ್ತು ಅವರಮತದಲ್ಲಿ ಬ್ರಹ್ಮಾತಿರಿಕ್ತವಾಗಿ ಯಾವದೂ ಇಲ್ಲದ್ದರಿಂದ ಸಾನ್ನಿಧ್ಯವೇ ಸಂಗತವಾಗುವದಿಲ್ಲ? ತನ್ನಲ್ಲಿರುವ ತನಗೆ ಸಜಾತೀಯವಾದ ತನಗೆ ವಿಜಾತೀಯವಾದ ವಸ್ತುಗಳ ಭೇದವೆಂಬ ವಿಶೇಷವಿಲ್ಲದ್ದು ಬ್ರಹ್ಮವು ಎಂದು ಹೇಳುವವರು ಬ್ರಹ್ಮದ ಸಾನಿಧ್ಯವನ್ನು ಹೇಗೆಹೇಳುತ್ತಿರಬಹುದು? ಸಾನಿಧ್ಯವು ಎರಡು ವಸ್ತುಗಳಿಲ್ಲದಿದ್ದರೆ ಆಗುವದುಂಟೆ? ಬ್ರಹ್ಮವು ನಿರ್ವಿಶೇಷವಿದ್ದ ಪಕ್ಷದಲ್ಲಿ "ಜನ್ಮಾದ್ಯಸ್ಯಯತಃ| ಎಂದು ಬ್ರಹ್ಮಲಕ್ಷಣವನ್ನು ಹೇಳಿದ್ದು ಸಂಗತವಾಗಲಾರದು. ಆದ್ದರಿಂದ ಈ ಉಪನಿಷತ್ತಿನಲ್ಲಿ ಸರ್ವಶಕ್ತಿವಿಶಿಷ್ಟಪರಬ್ರಹ್ಮವೇ ಪ್ರಶ್ನಕ್ಕೆ ವಿಷಯವಲ್ಲದೆ ನಿರ್ವಿಶೇಷವಲ್ಲಾ| ಹಾಗಾದರೆ ಬ್ರಹ್ಮವು ನಿರ್ವಿಶೇಷವೆಂದು ಹೇಳುವ ನಿರ್ಗುಣಂ" ನಿಷ್ಕಲಂ" ನಿರಂಜನಂ" ನಿಷ್ಕ್ರಿಯಂ" ಶಾಂತಂ" ಬ್ರಹ್ಮವು ನಿರ್ವಿಶೇಷವೆಂದು ಹೇಳುವ ಈ ವಾಕ್ಯಗಳಿಗೆ ಗತಿ

ಜ್ಞಾನಸ್ವರೂಪತಾ ತಸ್ಯಕಥಂ ಸಂಗಚ್ಛತೆ? ಇತಿಚೇನ್ನ. ಜ್ಞಾನಸ್ವರೂಪಸ್ಯೈವ ಜ್ಞಾನಾಶ್ರಯತ್ವಾತ್" ಚೈತನ್ಯಮಾತ್ಮೇತಿ" ಶಿವೇನಸೂತ್ರಿತತ್ವಾತ್, ಪ್ರಭಾಸತಿರಿಕ್ತಸ್ಯ ಪ್ರಭಾಕರಸ್ಯ ಪ್ರಭಾಶ್ರಯತ್ವವತ್' ಜ್ಞಾನಾನತಿರಿಕ್ತಸ್ಯ ಜ್ಞಾನಾಶ್ರಯತ್ವಮಿತ್ಯಂಗೀಕರಣೀಯತ್ವಾತ್. ಸಿದ್ಧೋಕ್ತಂಚ. ಅದೃಶ್ಯಂ ನೇತ್ರವದ್ಬ್ರಹ್ಮ ದೃಷ್ಟೃತ್ವಂಚಾಸ್ತಿನೇತ್ರವತ್ | ಇತಿ ಶ್ರುತಯಶ್ಚ ತಸ್ಯಜ್ಞಾತೃತ್ವಂ ವದಂತಿ. "ಸಐಕ್ಷತಲೋಕಾನ್ನುಸೃಜಾ" "ತದೈಕ್ಷತ" ಸೇಯಂ ದೇವತೈಕ್ಷತ" ಯಃಸರ್ವಜ್ಞಃ ಸಸರ್ವವಿತ್" ಇತಿ "ವಿಜ್ಞಾತಾರಮರೇಕೇನವಿಜಾನೀಯಾ" ದಿತಿಚ ತದುಕ್ತಂ ವಿಜ್ಞಾನಭೈರವೆ. | ಜ್ಞಾನಂಪ್ರಕಾಶಕಂಲೋಕೇ ಆತ್ಮಾಚೈವ ಪ್ರಕಾಶಕಃ. ಅನಯೋರಪೃಥಗ್ಭಾವಾತ್, ಜ್ಞಾನೀ ಜ್ಞಾನೇ ಪ್ರಕಾಶತೆ || ಉಕ್ತಂ ಚಾನ್ಯತ್ರ, ಪ್ರಕಾಶಮಾನಂ ನಪೃಥಕ್ಪ್ರಕಾಶಾತ್ ಸಚಪ್ರಕಾಶೋನ ಪೃಥಗ್ವಿಮರ್ಶಾತ್ | ನಾನ್ಯೋ ವಿಮರ್ಶೋಽಹಮಿತಿ ಸ್ವರೂಪಾದಹಂ ಸ್ವರೂಪೋಽಸ್ಮಿ ಚಿದೇಕರೂಪಃ || ಪ್ರಕಾಶಮಾನೆ ಪರಮಾರ್ಥಭಾನೌ ನಶ್ಯತ್ಯವಿದ್ಯಾತಿಮಿರೆಸ

ಯೇನು? ಆ ವಾಕ್ಯಗಳು ಪ್ರಾಕೃತ ಹೇಯಗುಣಗಳನ್ನು ನಿಷೇಧಿಸುತ್ತವಲ್ಲದೆ ಕಲ್ಯಾಣಗುಣಗಳನ್ನು ನಿಷೇಧಿಸುವದಿಲ್ಲಾ. ಹಾಗಾದರೆ ಜ್ಞಾನಾದಿ ಗುಣಗಳನ್ನು ಬ್ರಹ್ಮದಲ್ಲಿಹೇಳಿದರೆ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬುವ ಶ್ರುತಿಯಿಂದ ಜ್ಞಾನಸ್ವರೂಪವೇ ಬ್ರಹ್ಮವಲ್ಲದೆ ಜ್ಞಾನಗುಣಕ್ಕೆ ಆಶ್ರಯವಲ್ಲೆಂದು ತಿಳಿಯಬರುತ್ತದಲ್ಲಾ? ಇದಕ್ಕೆಗತಿಯೇನು? ಅಂದರೆ ನಾವು ಬ್ರಹ್ಮವು ಜ್ಞಾನಸ್ವರೂಪವೆಂದೂ ಜ್ಞಾನಾಶ್ರಯವೆಂದೂ ಹೇಳುವದರಿಂದ ವಿರೋಧವಿಲ್ಲಾ "ಚೈತನ್ಯಮಾತ್ಮಾ" ಎಂಬ ಶಿವಸೂತ್ರವೂ ಕೂಡ ಜ್ಞಾನಸ್ವರೂಪವು, ಜ್ಞಾನಾಶ್ರಯವೂ ಎಂದು ಹೇಳುತ್ತದೆ. ಪ್ರಭಾಪುಂಜವೇ ಸೂರ್ಯನು. ಸೂರ್ಯನ ಪ್ರಭೆಯು ಎಂಬುವ ಪ್ರತೀತಿಯಿಂದ ಪ್ರಭಾಸ್ವರೂಪನಾದ ಸೂರ್ಯನಿಗೆ ಪ್ರಭಾಶ್ರಯತ್ವವು ಸಿದ್ಧಿಸುವಂತೆ ಜ್ಞಾನಕ್ಕೆ ಅಭಿನ್ನನಾದ ಪರಶಿವನಲ್ಲಿ ಜ್ಞಾನಾಶ್ರಯತನವು ಸಿದ್ಧಿಸುತ್ತದೆ. ಆದಕಾರಣ ಯಾವ ಶ್ರುತಿಗೂ ವಿರೋಧವಿಲ್ಲಾ. ಈ ವಿಷಯದಲ್ಲಿ ಬ್ರಹ್ಮವು ನೇತ್ರದಂತೆ ಅದೃಶ್ಯವಾಗಿದ್ದರೂ ನೇತ್ರದಂತೆ ಅದಕ್ಕೆ ದೃಷ್ಟೃತ್ವವು (ಜ್ಞಾನಾಶ್ರತ್ವವು) ಸಿದ್ಧಿಸುವದೆಂಬ ಸಿದ್ಧರ ಉಕ್ತಿಯೂ "ಜ್ಞಾನಕ್ಕೂ ಜ್ಞಾತೃವಾದ ಆತ್ಮನಿಗೂ ಅಭೇದವಿರುವದೆಂದು ಹೇಳುವ ವಿಜ್ಞಾನಭೈರವ ಎಂಬ ಗ್ರಂಥದ ಉಕ್ತಿಯೂ ಪ್ರಮಾಣಗಳಾಗಿವೆಯಲ್ಲದೆ ಪ್ರಕಾಶಮಾನವಾದ ವಿಷಯವು ಪ್ರಕಾಶಕ್ಕಿಂತಲೂ ಭಿನ್ನವಿಲ್ಲವು. ಆ ಪ್ರಕಾಶವು ವಿಮರ್ಶಶಕ್ತಿಗಿಂತಲೂ ಭಿನ್ನವಿಲ್ಲವು. ಆ ವಿಮರ್ಶಶಕ್ತಿಯು ನಾನು ಎಂಬ ಸ್ವರೂಪಕ್ಕಿಂತಲೂ ಭಿನ್ನವಲ್ಲಾ ನಾನು ಎಂಬ ಸ್ವರೂಪವು ಚಿದೇಕರೂಪವೇ ಆಗಿದೆ. ಎಂದು ಹೇಳುವ ಬೇರೆ ಪ್ರಮಾಣಗಳು ಇರುವವು. ಜ್ಞಾನವು ನಿನ್ನಿಂದ ಭಿನ್ನವಲ್ಲವು ಆ ಜ್ಞಾನಕ್ಕಿಂತಲೂ ಜ್ಞೇಯವು ಭಿನ್ನವಾಗಿಲ್ಲವು ಎಂದು ಹೇಳುವ ವಾಕ್ಯವು ಕೂಡಾ ಪ್ರಮಾಣವಾಗಿದೆ. ಇವೆಲ್ಲ ಪ್ರಮಾಣಗಳು ವ್ಯಾಖ್ಯಾನಕಾ

ಮಸ್ತೆ | ತದಾಬುಧಾಸಿರ್ಮಲದೃಷ್ಟಯೋಪಿ ಕಿಂಚಿನ್ನಪಶ್ಯಂತಿ ಭವಪ್ರಪಂಚ ಮಿತಿ || ಜ್ಞಾನಸಂಸಭವತೋಭಿನ್ನಂ ಜ್ಞೇಯಂ ಜ್ಞಾನಾತ್ಪೃಥಙ್ನಹಿ | ಇತಿ || ಯತ್ಕಾರ್ಯಂ ಯದಧೀನಂ ತತ್ತದಾತ್ಮಕಮೇವ ಯನ್ನೈವಂ ತನ್ನೈವಂ ಯಥಾ ಘಟಪಟಾವಿತಿ, ವ್ಯಾಪ್ತೇಃ, ಕಾರ್ಯಸ್ಯಬಾಹ್ಯಕರಣಾಧೀನತ್ವಾತ್ ತಸ್ಯಾಂತಃ ಕರಣಾಧೀನತ್ವಾತ್, ತಸ್ಯಕೃತ್ರಿಮಪ್ರಮಾತ್ರಧೀನತ್ವಾತ್, ಅತಏವ ಚಿನ್ಮಯಾ ತ್ಮೇತಿ ಸೂತ್ರಿತತ್ವಾತ್ ತಸ್ಯದೇಶಕಾಲಾದಿ ಪರತಂತ್ರತ್ವಾತ್, ಸ್ವತಂತ್ರಶಕ್ತಿ ಕಂ ಚಿತ್ಪರಕರ್ತಾರಂವಿನಾ ಕಸ್ಯ ಚಿದುಸ್ಮೇಷಾಸಂಭವಾತ್ | ಭಾವಾದೇರ್ವಿ ತ್ವಸ್ಯ ಪರಪ್ರಮಾತೃನಿಷ್ಠತಯಾ ತತ್ಸ್ವರೂಪತ್ವಾಭ್ಯುಪಗಮಾತ್, ಜ್ಞಾನಾದೇ ರಪಿವೃತ್ತೇಃ ಪರಮಜ್ಞಾತ್ರಭಿನ್ನತ್ವಂ ಸುತರಾಂ ಸಿದ್ಧಮಿತ್ಯಾಸ್ಮಕೀನಾ ಶಿವಾ ದ್ವೈತ ಸಿದ್ಧಾಂತಪದ್ಧತಿಃ | "ಯತ್ರಹಿ ದ್ವೈತಮಿವಭವತಿ" ನೇಹನಾನಾಸ್ತಿಕಿಂ ಚನ" "ಮೃತ್ಯೋಸ್ಸಮೃತ್ಯುಮಾಪ್ನೋತಿ ಯ ಇಹನಾನೇವಪಶ್ಯತಿ" ಯತ್ರತ್ವ ಸ್ಯಸರ್ವಮಾತ್ಮೈವಾಭವತ್ ತತ್ಕೇನಕಂಪಶ್ಯೇತ್" ಇತಿ ಭೇದನಿಷೇಧಪ್ರತಿಪಾ ದಕವಾಕ್ಯಾನಾಂತು | ಯಸ್ಮಾದೇತತ್ಸಮುತ್ಪನ್ನಂ ಮಹಾದೇವಾಚ್ಚರಾಚರಂ


ಶರು ಸ್ಪಷ್ಟವಾಗಿ ತೋರಿಸಿರುವರು. ಮತ್ತು ಯಾವ ಕಾರ್ಯವು ಯಾವದಕ್ಕೆ ಅಧೀನವಾಗಿದೆ ಯೋ ಅದು ಅದಕ್ಕೆ ಅಭಿನ್ನವಾದದ್ದು ಎಂಬುವ ವ್ಯಾಪ್ತಿಯ ಬಲದಿಂದಲೂ ಕೂಡಾ ಜ್ಞಾನಸ್ವ ರೂಪತ್ವವು ಆ ಪರಶಿವನಿಗೆ ಸಿದ್ಧವಾಗುತ್ತದೆ. ಹ್ಯಾಗೆಂದರೆ—ಜ್ಞೇಯವು ಪ್ರತ್ಯಕ್ಷಕ್ಕೆ ಅಧೀನವು. ಆ ಪ್ರತ್ಯಕ್ಷ ಜ್ಞಾನವೆಂಬ ಕಾರ್ಯವು ಚಕ್ಷುರಾದಿ ಬಾಹ್ಯಕರಣಗಳಿಗೆ ಅಧೀನವಾಗಿರುವುದರಿಂದ ಆ ಕಾರ್ಯವು ಬಾಹ್ಯಕರಣ ಸ್ವರೂಪವು. ಆ ಕರಣವು ಅಂತಃಕರಣಕ್ಕೆ ಅಧೀನವಾಗಿರುವುದರಿಂದ ಆ ಬಾಹ್ಯಕರಣವು ಅಂತಃಕರಣಸ್ವರೂಪವು. ಆ ಅಂತಃಕರಣವು ಜೀವಾತ್ಮನಿಗೆ ಅಧೀನವಾಗಿ ರುವುದರಿಂದ ಅದು ಆ ಜೀವಾತ್ಮದ ಸ್ವರೂಪವು ಆದ್ದರಿಂದಲೆ ಶಿವಸೂತ್ರವು ಚಿತ್ತವೇ ಆತ್ಮನೆಂದು ಹೇಳುತ್ತದೆ. ಆ ಜೀವಾತ್ಮನು ದೇಶಕಾಲಾದಿಗಳಿಗೂ ಆ ದೇಶಕಾಲಾದಿಗಳು ಸ್ವತಂತ್ರ ಶಕ್ತಿ ಯುಳ್ಳ ಪರಮಾತ್ಮನಿಗೂ ಅಧೀನಗಳಾದ್ದರಿಂದ ಸಮಸ್ತ ಪ್ರಪಂಚವು ಶಿವಸ್ವರೂಪವೇ ಆಗಿದೆ. ಆದ್ದರಿಂದ ಜ್ಞಾನಾದಿ ವೃತ್ತಿಗಳು ಪರಮ ಜ್ಞಾತೃವಾದ ಪರಶಿವನಿಗೆ ಅಭಿನ್ನಗಳೆಂದು ಸುತ ರಾಂ ಸಿದ್ಧವಾಗುವದು: ಈ ಪ್ರಕಾರವಾಗಿ ನಮ್ಮ ಶಿವಾದ್ವೈತ ಶಿದ್ಧಾಂತದ ಪದ್ಧತಿ ಎಂದು ತಿಳಿಯತಕ್ಕದ್ದು.

ಇನ್ನು "ವಿಜ್ಞಾತಾರಮರೆ ಕೇನಾವಿಜಾನೀಯಾತ್" ಮೊದಲಾದ ಶ್ರುತಿಗಳೂ ಕೂಡಾ ಆ ಪರಶಿವ ಬ್ರಹ್ಮವು ಜ್ಞಾನಾಶ್ರಯವೆಂದು ಹೇಳುತ್ತವೆ "ನೇಹನಾನಾಸ್ತಿಕಿಂಚನ" "ಯತ್ರತ್ವಸ್ಯ ಸರ್ವಮಾತ್ಮೈವಾಭೂತ್ತತ್ಕೇನಕಂ ಪಶ್ಯೇತ್" ಇವೇ ಮೊದಲಾದ ಭೇದವಿಲ್ಲೆಂ ದು ಹೇಳುವ ವಾಕ್ಯಗಳು ಸಮಸ್ತ ಪ್ರಪಂಚವು ಬ್ರಹ್ಮದ ಕಾರ್ಯವಾದುದರಿಂದ ಬ್ರಹ್ಮಕ್ಕೆ

ತಸ್ಮಾದೇತ ನ್ನಭಿದ್ಯೇತ ಯಥಾಕುಂಭಾದಿಕಂ ಮೃದಃ ‖ ಇತ್ಯುಕ್ತಪ್ರಕಾರೇಣ ಸರ್ವಸ್ಯವಿಶ್ವಸ್ಯ ಬ್ರಹ್ಮಕಾರ್ಯತಯಾ ತದಭಿನ್ನತ್ವೇನೈಕ್ಯಪ್ರತಿಪಾದಕತ್ವಂ. ನತು ಸ್ವಗತಭೇದ ನಿರಾಕರಣಪರತ್ವಂ. ತಸ್ಮಾದತ್ರಪ್ರಶ್ನವಿಷಯೀಭೂತಂ ಸರ್ವಶಕ್ತಿಕಂ ಪರಬ್ರಹ್ಮಲಿಂಗಮೇವೇತಿ ಸಂಕ್ಷೇಪಃ ‖

ಇತಿ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಸಿದ್ಧಲಿಂಗ ಶಿವಾಚಾರ್ಯಾಸ್ಥಾನ ಪಂಡಿತ ಶಂಕರಶಾಸ್ತ್ರಿ ವಿರಚಿತಾ ಕೇನೋಪನಿಷತ್ಪ್ರಥಮಖಂಡಸ್ಯ ಶಾಂಕರೀವ್ಯಾಖ್ಯಾ ಸಮಾಪ್ತಾಃ.

ಶಿವಂ ಶಿವಂ ಶಿವಂ ಭೂಯಾತ್.



ಶಾಂ‖ ಪ್ರಥಮಖಂಡೆ ಷಟ್‌ಸ್ಥಲರೂಪಂಬ್ರಹ್ಮ ಜಿಜ್ಞಾಸ್ಯತ್ವೇನೋಪದಿಷ್ಟಂ, ಯದ್ಯದ್ರೂಪಾವಚ್ಛಿನ್ನಾ ಮನ ಆದಿ ಷಡಿಂದ್ರಿಯಾಂಗಾನ್ಯತಮನಿರೂ

ಅಭಿನ್ನವಾಗಿರುವುದೆಂಬುದನ್ನು ಹೇಳುತ್ತವೆಯಲ್ಲದೆ ಸ್ವಗತ ಭೇದವೂ ಇಲ್ಲವೆಂದು ಹೇಳುವದಿಲ್ಲ. ಈ ವಿಷಯದಲ್ಲಿ ಯಸ್ಮಾದೇತತ್ಸಮುತ್ಪನ್ನಂ ಜಗದೇತಚ್ಚರಾಚರಂ ತಸ್ಮಾದೇತನ್ನಭಿದ್ಯೇತ ಯಥಾಕುಂಭಾದಿಕಂ ಮೃದಃ ".ಅಂದರೆ ಘಟವು ಮಣ್ಣಿನಿಂದ ಹುಟ್ಟಿದ ಕಾರಣ ಮಣ್ಣಿಗೆ ಅಭಿನ್ನವಾಗಿರುವಂತೆ ಈ ಚರಾಚರ ಪ್ರಪಂಚವು ಶಿವನಿಂದ ಹುಟ್ಟಿದಕಾರಣ ಶಿವನಿಗೆ ಅಭಿನ್ನವಾಗಿರುವುದು. ಎಂಬ ಶ್ರೀ ರೇಣುಕಭಗವತ್ಪಾದರ ಉಕ್ತಿಯೂ ಪ್ರಮಾಣವಾಗಿದೆ. ಆದ್ದರಿಂದ ಪ್ರಶ್ನಕ್ಕೆ ವಿಷಯವಾದದ್ದು ಸರ್ವಶಕ್ತಿಕವಾದ ಪರಶಿವ ಬ್ರಹ್ಮವೆ ಹೊರತು ನಿರ್ಗುಣ ನಿರ್ವಿಶೇಷವಲ್ಲವು.

ಶಿವಾದ್ವೈತ ವಿದ್ಯಾವಿಭೂಷಣನೆಂದು ಪ್ರಶಸ್ತಿಪಡೆದ ಸಿರಸಿ ಗುರುಶಾಂತಶಾಸ್ತ್ರಿಯಿಂದ ವಿರಚಿತಮಪ್ಪ ಕೇನೋಪನಿಷತ್ತಿನ ಪ್ರಥಮಖಂಡದ ಶಾಂಕರೀವ್ಯಾಖ್ಯೆಯ ಭಾವದರ್ಪವೆಂಬ ಕನ್ನಡ ತಾತ್ಪರ್ಯವು ಸಮಾಪ್ತವಾದುದು.



ತಾ‖ ಈ ಕೇನೋಪನಿಷತ್ತಿನ ಪ್ರಥಮಖಂಡದಲ್ಲಿ ಹೇಳಿದ ತಾತ್ಪರ್ಯವೇನಂದರೆ, ದೇಶಪರಿಚ್ಛೇದ ಕಾಲಪರಿಚ್ಛೇದ ವಸ್ತುಪರಿಚ್ಛೇದಗಳಿಲ್ಲದ ಪರಶಿವಬ್ರಹ್ಮವು ತನ್ನ ಲೀಲೆಯಿಂದ ಮನಸ್ಸೆಂಬಂಗವುಳ್ಳದ್ದಾಗಲು ಮಹಾಲಿಂಗರೂಪವಾಯಿತು. ಈ ಮಹಾಲಿಂಗವೇ ಮನಸ್ಸಿಗೆ ಸಂಕಲ್ಪವಿಕಲ್ಪ ಅಧ್ಯವಸಾಯ ರೂಪಗಳಾದ ಕಾರ್ಯಗಳಲ್ಲಿ ಪ್ರವೃತ್ತಿಯನ್ನುಂಟುಮಾಡತ್ತದೆ. ಶ್ರೋತ್ರವೆಂಬಂಗವುಳ್ಳದ್ದಾಗಲು ಪ್ರಸಾದಲಿಂಗರೂಪವಾಯಿತು. ಈ ಪ್ರಸಾದಲಿಂಗವು ಶ್ರೋತ್ರೇಂದ್ರಿಯವನ್ನು ಶಬ್ದವ ಕೇಳುವದರಲ್ಲಿ ಸಮರ್ಥವನ್ನಾಗಿ ಮಾಡುತ್ತದೆ. ತ್ವಗಿಂದ್ರಿಯವೆಂಬ

ಪಿತ ಪ್ರೇರಕತಾ. ತತ್ತದ್ರೂಪಸ್ಯ ಮಹಾಲಿಂಗಾದಿ ಷಡ್ಲಿಂಗಾಸ್ಯತಮಸ್ಯ, ತದೇವ ಬ್ರಹ್ಮ. ಇತ್ಯನೇನಬ್ರಹ್ಮತ್ವಮಿತಿ ನಿಶ್ಚೀಯಮಾನತ್ವಾತ್ |

ನನುದೃಕ್ಕಲಾದಿ ಗ್ರಾಹ್ಯಸ್ಯಾಪಿ ಬ್ರಹ್ಮತ್ವೇ ನಿಶ್ಚಿತೇ ತದೈಕ್ಯೈಕೋಪಾಸನಯೈವ ಮುಕ್ತಿಃ ಸ್ಯಾತ್, ಕಿಮರ್ಥಂ ಷಟ್‌ಸ್ಥಲಬ್ರಹ್ಮೋಪಾಸನಂ, ಕಿಮರ್ಥಂ ಚ ತಚ್ಛ್ರವಣಮಿತ್ಯಾಶಂಕ್ಯಾಹ ||

ಮೂ॥ ಯದಿಮನ್ಯಸೇ ಸುವೇದೇತಿ ದಭ್ರಮೇವಾಪಿನೂನಂ।
ತ್ವಂವೇತ್ಥ ಬ್ರಹ್ಮಣೋರೂಪಂ ಯದಸ್ಯತ್ವಂ ಯದಸ್ಯದೇವೇಷ್ವಥನು ಮೀಮಾಂಸ್ಯಮೇವ ತೇ ಮನ್ಯೇವಿದಿತಂ ॥೧॥೨॥

ಅಂಗವುಳ್ಳದ್ದಾಗಿ ಚರಲಿಂಗವಾಯಿತು. ಈ ಚರಲಿಂಗವು ತ್ವಗಿಂದ್ರಿಯಕ್ಕೆ ಸ್ಪರ್ಶನ ಶಕ್ತಿಯನ್ನುಂಟುಮಾಡುತ್ತದೆ. ಚಕ್ಷುರಿಂದ್ರಿಯವೆಂಬ ಅಂಗವುಳ್ಳದ್ದಾಗಿ ಶಿವಲಿಂಗವಾಯಿತು. ಈ ಶಿವಲಿಂಗವು ಚಕ್ಷುರಿಂದ್ರಿಯಕ್ಕೆ ರೂಪಗ್ರಹಣಸಾಮರ್ಥ್ಯವನ್ನುಂಟುಮಾಡುತ್ತೆ. ರಸನೇಂದ್ರಿಯವೆಂಬ ಅಂಗವುಳ್ಳದ್ದಾಗಲು ಗುರುಲಿಂಗವಾಯಿತು. ಈ ಗುರುಲಿಂಗವು ರಸನೇಂದ್ರಿಯಕ್ಕೆ ರಸಗ್ರಹಣಸಾಮರ್ಥ್ಯವನ್ನುಂಟುಮಾಡುತ್ತದೆ. ಘ್ರಾಣೇಂದ್ರಿಯವೆಂಬ ಅಂಗವುಳ್ಳದ್ದಾಗಿ ಆಚಾರಲಿಂಗವಾಯಿತು. ಈ ಆಚಾರಲಿಂಗವು ಘ್ರಾಣೇಂದ್ರಿಯಕ್ಕೆ ಗಂಧಗ್ರಹಣ ಸಾಮರ್ಥ್ಯವನ್ನುಂಟುಮಾಡುತ್ತದೆ. ವಾಗಿಂದ್ರಿಯ ಮೊದಲಾದ ಪಂಚಕರ್ಮೇಂದ್ರಿಯಗಳಿಗೆ ವಚನ ಆದಾನ ವಿಹರಣ ಉತ್ಸರ್ಗ ಆನಂದಗಳೆಂಬ ವೃತ್ತಿಗಳಲ್ಲಿ ಪ್ರೇರಣೆಯನ್ನುಂಟುಮಾಡಶಕ್ಕವುಗಳಾಗಿ ಮೇಲೆ ಹೇಳಿದ ಪ್ರಸಾದಲಿಂಗ ಮೊದಲಾದವುಗಳಾಗುತ್ತವೆ. ಯಾಕಂದರೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಭೇದವಿಲ್ಲೆಂದು ವೀರಶೈವಶಾಸ್ತ್ರವು ಹೇಳುತ್ತದೆ. ಆದಕಾರಣ ಈ ಪ್ರಥಮಖಂಡದ ಮಂತ್ರಗಳಲ್ಲಿರುವ ಯೇನ (ಯಾವದರಿಂದ) ಎಂಬುವ ತೃತೀಯಾಂತವಾದ ಯಚ್ಛಬ್ದದಿಂದ ಶ್ರೋತ್ರಸ್ಯ ಶ್ರೋತ್ರಂ | ಎಂಬ ಎರಡನೇ ಮಂತ್ರದಿಂದ ಮಹಾಲಿಂಗ, ಪ್ರಸಾದಲಿಂಗ, ಜಂಗಮಲಿಂಗ, ಶಿವಲಿಂಗ, ಗುರುಲಿಂಗ, ಆಚಾರಲಿಂಗಗಳೆಂಬ ಆರುಲಿಂಗಸ್ಥಲಗಳು. ಮುಮುಕ್ಷುಗಳಿಗೆ ಜಿಜ್ಞಾಸೆ ಮಾಡಲು ಯೋಗ್ಯವೆಂಬುವದು ಈ ಪ್ರಥಮಖಂಡದಲ್ಲಿ ಹೇಳಲ್ಪಟ್ಟಿತು. ಮತ್ತು "ತದೇವ ಬ್ರಹ್ಮ (ಅದುವೇ ಬ್ರಹ್ಮವು) ಎಂಬುವದರಿಂದ ಆಚಾರಲಿಂಗವೂ ಬ್ರಹ್ಮವೇ ಗುರುಲಿಂಗವೂ ಬ್ರಹ್ಮವೇ ಎಂದು ಆರು ಲಿಂಗಗಳಿಗೂ ಬ್ರಹ್ಮತ್ವವು ಹೇಳಲ್ಪಟ್ಟಿತು. ತ್ವಂ ವಿದ್ಧಿ (ನೀನು ತಿಳಿ) ಎಂಬುವದರಿಂದ ಷಟ್‌ಸ್ಥಲ ಬ್ರಹ್ಮೋಪದೇಶ ವಿಧಿಯೂ ಕೂಡಾ ಹೇಳಲ್ಪಟ್ಟಿತು. ಎರಡನೇಮಂತ್ರದಲ್ಲಿರುವ ಅತಿಮುಚ್ಯ (ಬಿಟ್ಟು) ಆ ಲಿಂಗಗಳನ್ನು ಬಿಟ್ಟು ಅಂದರೆ ಸಮರಸಮಾಡಿ ಎಂಬುವದರಿಂದ ಆರು ಅಂಗಸ್ಥಲಗಳು ಅರ್ಥಾತ್ ಹೇಳಲ್ಪಟ್ಟವು ಹಾಗಾದರೆ ದೃಕ್ಕಲೆಯಿಂದ

ಶಾಂ|| ಯದೀತಿ. ಯದಿತ್ವಂ ಮನ ಆದೀನಾಂ ಸಾಕ್ಷಾತ್ ಪ್ರೇರಕ ತ್ವೇನೋಕ್ತಂ ಬ್ರಹ್ಮ ಸುವೇದ ಸುಖೇನ ಅನಾಯಾಸೇನ ಮಾನಸಾದಿ ವಿಷಯ ತಯಾ ಜಾನಾಮೀತಿ ಮನ್ಯಸೇ. ತರ್ಹಿ ನೂನಂ ನಿಶ್ಚಿತಂ ಅಸ್ಯ ಬ್ರಹ್ಮಣಃ ಅಪ ರಿಚ್ಛಿನ್ನಸ್ಯ ಯದ್ರೂಪಂ ಮಹಾಲಿಂಗಾದ್ಯಾಚಾರಲಿಂಗಾಂತಂ ಷಟ್‌ಸ್ಥಲಾಸ್ಯ ತಮುಂ ತತ್ ದಭ್ರಮೇವ ಅಲ್ಪಮೇವ ಪರಿಚ್ಛಿನ್ನಮೇವ. ತ್ವಂವೇತ್ಥ || ಪರಂ

ಗ್ರಹಿಸಲು ಯೋಗ್ಯವಾದ ಇಷ್ಟಲಿಂಗದೊಳಗಣ ಆಚಾರಲಿಂಗ ಮೊದಲಾದವುಗಳೂ ಬ್ರಹ್ಮವೆ ಅಂದರೆ ಇಷ್ಟಲಿಂಗವೂ ಬ್ರಹ್ಮವಾಯಿತು, ಇದೊಂದು ಬ್ರಹ್ಮವನ್ನು ತಿಳಿದರೆ ಸಾಕು "ಬ್ರಹ್ಮ ವೇದ ಬ್ರಹ್ಮೈವ ಭವತಿ" (ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ. ಅಂದರೆ ಮುಕ್ತ ನಾಗುವನೆಂದು ಶ್ರುತಿಯು ಹೇಳುತ್ತಿರುವುದರಿಂದ ಇಷ್ಟಲಿಂಗವೆಂಬ ಬ್ರಹ್ಮದ ಜ್ಞಾನದಿಂದಲೇ ಮುಕ್ತಿಯಾಗುತ್ತಿರಲು ಅಂತರ್ಲಿಂಗ ಜ್ಞಾನ ಮತ್ತು ಅದರ ಧಾರಣ ಪೂಜನಗಳೇಕೆ ಬೇಕು (ಶಿವಲಿಂಗ ಚರಲಿಂಗಗಳ ಉಪಾಸನೆ ಯಾತಕ್ಕೆ ಬೇಕೆಂದು) ಶಂಕೆಯು ಪ್ರಾಪ್ತವಾಗಲು ಶ್ರುತಿಯು ಗುರುರೂಪದಿಂದ ಉತ್ತರವನ್ನು ಹೇಳುತ್ತದೆ. ಏನಂದರೆ ಎಲೈ ಶಿಷ್ಯನೆ ನೀನು ಚ ಕ್ಷುರಾದೀಂದ್ರಿಯಗಳಿಂದ ಆಚಾರಲಿಂಗ ಗುರುಲಿಂಗಗಳನ್ನೊಳಕೊಂಡ ಇಷ್ಟಲಿಂಗವನ್ನೇ ಆಗ ಲಿ ಅಥವಾ ಮತ್ತಾವದಾದರೊಂದು ಲಿಂಗವನ್ನೇ ಆಗಲಿ ತಿಳಿದಿರುವನೆಂದು ತಿಳಿದುಕೊಂಡಿದ್ದರೆ ನಿಶ್ಚಯವಾಗಿಯೂ ಆ ಪರಶಿವಬ್ರಹ್ಮದ ಪರಿಚ್ಛಿನ್ನಸ್ವರೂಪವನ್ನೇ ತಿಳಿದುಕೊಂಡಂತಾಯಿತು. ಮತ್ತು ನಿನ್ನಂತೆ ದೇವತೆಗಳ ಮಧ್ಯದಲ್ಲಿ ಯಾರಾದರೂ ತಿಳಿದಿಕೊಂಡಿದ್ದರೆ ಅವರೂಕೂಡಾ ಆ ಬ್ರಹ್ಮದ ಪರಿಚ್ಛಿನ್ನ ಸ್ವರೂಪವನ್ನೇ ತಿಳಿದಂತಾಯಿತು. ಆದರೆ ಆಚಾರಲಿಂಗದಲ್ಲಿ ಸಂಯ ಮವು ಸಿದ್ಧವಾಗಲು ಆ ಲಿಂಗವು ಪರಿಚ್ಛಿನ್ನವಾಗಿದ್ದರೂ ಆಚಾರಲಿಂಗದ ಪದವಿಯು (ಬ್ರಹ್ಮ ಪದವಿಯು) ಸಿಗುತ್ತದೆ. ಗುರುಲಿಂಗದಲ್ಲಿ ಸಂಯಮವು ಸ್ಥಿರವಾಗಲು ವಿಷ್ಣುಪದವಿಯೂ, ಶಿವಲಿಂಗದಲ್ಲಿ ಸ್ಥಿರವಾಗಲು ರುದ್ರಪದವಿಯೂ, ಚರಲಿಂಗದಲ್ಲಿ ಸಂಯಮವು ದೃಢವಾಗಲು ಈ ಶ್ವರಪದವಿಯೂ, ಪ್ರಾಪ್ತವಾಗುತ್ತದೆ "ತ್ರಯಮೇಕತ್ರ ಸಂಯಮಃ (ಧ್ಯಾನಧಾರಣ ಸಮಾಧಿ ಗಳು ಒಂದರಲ್ಲಿ ಆದರೆ ಅದಕ್ಕೆ ಸಂಯಮವೆನ್ನುವರು. ಒಂದೊಂದು ಲಿಂಗದುಪಾಸನೆಯಾದ ರೂ ನಿಷ್ಫಲವಾಗದಿದ್ದರೂ ಈ ಚತುರ್ವಿಧ ಪದವಿಗಳನ್ನು ದಾಂಟಿ ಹೋದರೇನೇ ಮುಕ್ತಿಯು (ಪುನರಾವೃತ್ತಿಯಿಲ್ಲದ್ದು) ಪ್ರಸಾದಲಿಂಗದಲ್ಲಿ ಸಂಯಮವು ಸ್ಥಿರವಾಗಲು ಆ ಪ್ರಸಾದಲಿಂಗದ (ಸದಾಶಿವನ) ಅನುಗ್ರಹನಾಗಿ ಈ ಮುಕ್ತಿಯು ಸಿದ್ಧಿಸುವುದು.(ಮಹಾಲಿಂಗದಲ್ಲಿ ಸಮರಸಭಾ ವನನ್ನು ಹೊಂದಿಬಿಡುವನು.) ಹ್ಯಾಗಂದರೆ ಕಾರಾಗೃಹದಲ್ಲಿ ಬದ್ಧನಾದ ಒಬ್ಬಾನೊಬ್ಬ ಮ ನುಷ್ಯನು ಕೈಕಾಲುಗಳಲ್ಲಿರುವ ಬೇಡಿಗಳಿಂದ ಅತಿ ಪೀಡಿತನಾಗಿ ಅತ್ಯಂತ ದುಃಖಪಡುತ್ತಾ ಉತ್ತಮ ಕೆಲಸಗಳನ್ನು ಮಾಡುತ್ತ ಆ ರಾಜ್ಯಕ್ಕೆ ಮುಖ್ಯ ಅಧಿಪತಿಯಾದ ಮಹಾರಾಜನನ್ನು ಅನೇಕ ವಿಧವಾಗಿ ಸ್ತುತಿಮಾಡುತ್ತಿರಲು ಆ ಮಹಾರಾಜನು ಗೂಢಚಾರನ ವೇಷವನ್ನು ಹಾಕಿ ಕೊಂಡು ಸಂಚಾರಮಾಡುವಕಾಲದಲ್ಲಿ ಅವನ ಆತರುದ ದೀನೋಕ್ತಿಯನ್ನೂ ತನ್ನ ಸ್ತುತಿಯನ್ನೂ

ಬ್ರಹ್ಮ ಮಹಾಲಿಂಗಂ ಪ್ರಪಂಚಾತೀತಮವ್ಯಯಂ | ತದೇವ ಸರ್ವಭೂತಾನಾ ಮಂತ ಸ್ತ್ರಿ ಸ್ಥಾನಗೋಚರಂ|| ಮೂಲಾಧಾರೇಚಹೃದಯೇ ಭ್ರೂಮಧ್ಯೇ ಸ ದೇಹಿನಾಂ | ಜ್ಯೋತಿರ್ಲಿಂಗಂ ಸದಾಭಾತಿ ಯದ್ಬ್ರಹ್ಮೇತ್ಯಾಹುರಾಗಮಾ ಅಪರಿಚ್ಛಿನ್ನಮವ್ಯಕ್ತಂ ಲಿಂಗಂ ಬ್ರಹ್ಮಸನಾತನಂ | ಉಪಾಸನಾರ್ಥಮಂತಸ್ಥ ಪರಿಚ್ಛಿನ್ನಂ ಸ್ವಮಾಯಯಾ || ಇತ್ಯುಕ್ತ ಪ್ರಕಾರೇಣಾ ಪರಿಚ್ಛಿನ್ನಾವ್ಯಕ್ತಸ್ಯೈ ಕಸ್ಯೈವ ಪರಶಿವಲಿಂಗಸ್ಯ. ಉಪಾಸಕಧ್ಯಾನಪೂಜಾರ್ಥಂ ಸ್ವಸ್ವಾತಂತ್ರ್ಯ ರಪರ್ಯಾಯೋರ್ಧ್ವ ಮಾಯಾಶಕ್ತ್ಯಾ. ಲಿಂಗತ್ರಯರೂಪತ್ವಾತ್ ಷಟ್‌ಸ್ಥ

ಕೇಳಿ ಅಕಸ್ಮಾತ್ ಕೃಪೆ ಹುಟ್ಟಿ ತನ್ನ ರಾಜಸ್ಥಾನಕ್ಕೆ ಹೋಗಿ ಆಸ್ಥಾನಕ್ಕೆ ಯೋಗ್ಯವಾ ವೇಷವನ್ನು ಹಾಕಿಕೊಂಡು ಆ ದೀನನಾದ ಅಪರಾಧಿಯನ್ನು ಕರೆಯಿಸಿ ಅವನ ಬೇಡಿಗಳನ್ನು ಕತ್ತರಿಸಿ ಹೋಗು? ಇನ್ನು ಮೇಲೆ ಕೆಟ್ಟಕೆಲಸಮಾಡಲಾರನೆಂಬುವದು ನಿನಗೆ ನಿಯಾಮಕರಾ ಅಧಿಕಾರಿಗಳಿಗೆ ಕಂಡುಬಂದರೆ ಅವರೇ ನಿನ್ನ ಉತ್ತಮವರ್ತನವನ್ನು ನೋಡಿ ಉತ್ತಮ ಕೆಲಸಕ್ಕೆ ಹಚ್ಚುವರು. ಎಂದು ಹೇಳಿ ಕಳಿಸುವನು. ಆಮೇಲೆ ಆ ಅಪರಾಧಿಯು ಕೈ ಕಾಲು ನಡುಗಳಲ್ಲಿ ರುವ ಮೂರು ಬೇಡಿಗಳು ಕತ್ತರಿಸಲ್ಪಟ್ಟದ್ದರಿಂದ ಅವನಿಗೆ ಉತ್ಸಾಹಬಂದು ಅವನು ಬಹು ಉ ತ್ತಮಕೆಲಸಗಳನ್ನು ಮಾಡುತ್ತಿರಲು ಆ ಕಾರಾಗ್ರಹದನಿಯಮವು ತಪ್ಪಿಹೋಗಿಬಿಟ್ಟು ಮೇಲ ಒಂದು ಸರಕಾರಿ ಅಧಿಕಾರವೇ ಅವನಿಗೆ ಸಿಕ್ಕುಬಿಡುತ್ತದೆ. ಆ ತನ್ನಧಿಕಾರದಲ್ಲಿ ಜಾಗರೂಕ ಯಿಂದ ಕೆಲಸಗಳನ್ನು ನಿರ್ವಹಿಸಿಲು ಅದಕ್ಕಿಂತಲೂ ಮೇಲಣ ಪದವಿಯು ಸಿಗುತ್ತದೆ. ಹೀ ಗೆ ಕಡೆಗೆ ಮಹಾರಾಜನ ಅನುಗ್ರಹವಾಗಿ ಬಹು ಸುಖಸಾಮ್ರಾಜ್ಯವನ್ನು ಹೊಂದುವಂತೆ ಜೀ ವನು ಮೂರು ಮಲಗಳೆಂಬ ಬೇಡಿಗಳಿಂದ ಪೀಡಿತನಾಗಿ ಸಂಸಾರವೆಂಬ ಕಾರಾಗ್ರಹದಲ್ಲಿ ಬದ್ಧ ನಾಗಿರುವನು. ಇವನು ಬಹುದಿವಸಗಳಿಂದ ಮಾಡುತ್ತ ಬಂದ ಸತ್ಕರ್ಮಗಳಿಂದ ಅಂತರ್ಯಾಮಿ ವೇಷದಿಂದ ಅವನ ಸತ್ಕರ್ಮವನ್ನು ನೋಡಿದ ಸದಾಶಿವನು ಆ ಅಂತರ್ಯಾಮಿ ವೇಷವನ್ನು ಬದ ಲಾಯಿಸಿ ಗುರುವಿನ ವೇಷದಿಂದ ಆ ಜೀವನ ಮೂರು ಮಲರೂಪವಾದ ಬೇಡಿಗಳನ್ನು ಮೂರುದೀ ಕ್ಷೆಗಳೆಂಬ ಬಾಣಗಳಿಂದ ಕತ್ತರಿಸಿ ಎಲೈ ಮಗನೆ ನೀನು ಪ್ರತಿನಿತ್ಯದಲ್ಲಿಯೂ, ಲಿಂಗಧಾರಣ ಭಸ್ಮ ಧಾರಣ ಮೊದಲಾದ ಸತ್ಕರ್ಮಗಳನ್ನು ಆಚರಿಸು ಎಂದು ಆಜ್ಞೆಯಂ ಮಾಡಿಬಿಡುವನು. ಆಮೇಲೆ ಅವನು ಅದೇ ಪ್ರಕಾರ ವರ್ತಿಸುತ್ತ ಶಿವಯೋಗಶಾಸ್ತ್ರದಲ್ಲಿ ಹೇಳಲ್ಪಟ್ಟ ಪ್ರ ಕಾರ ಅಭ್ಯಾಸಮಾಡುತ್ತಿರಲು ಬ್ರಹ್ಮ, ವಿಷ್ಣು, ರುದ್ರ. ಈಶ್ವರರುಗಳ ಚತುರ್ವಿದಪದವಿಗಳು ಪ್ರಾಪ್ತಗಳಾಗಿ ಕಡೆಗೆ ಸದಾಶಿವನ ಅನುಗ್ರಹವಾಗಿ ಮುಕ್ತನಾಗುವನು. ಅಂದರೆ ಆ ಪದವಿಗ ಳು ನಿತ್ಯಗಳಾಗಿದ್ದರೂ ಆ ಪದವೀಧರರು ಅನಿತ್ಯರಾಗಿರುವರು ಯಾಕೆಂದರೆ ಆ ಪದವಿಗಳನ್ನು ಬಿಟ್ಟು ಮುಂದೆ ಶಾಶ್ವತ ಮುಕ್ತಿಗೆ ಹೋಗುತ್ತಾರಲ್ಲವೆ? ಆದ್ದರಿಂದ ಎಲೈ ಶಿಷ್ಯನೆ ನೀನು ಅನಾಯಾಸದಿಂದ ತಿಳಿದುಕೊಂಡದ್ದು ಅಪರಿಚ್ಛಿನ್ನವಾದ ಪರಶಿವಬ್ರಹ್ಮವಲ್ಲಾ ಸಂಪೂರ್ಣವಾದ ಷಟ್‌ಸ್ಥಲಗಳ ಸಾಮರಸ್ಯವನ್ನು ತಿಳದರೇನೇ ನಿನಗೆ ಪರಮುಕ್ತಿಯು ಒಂದೊಂದನ್ನೇ ತಿಳಿದ

ರೂಪವತ್ತ್ವಾಚ್ಚ ಚಕ್ಷುರಾದಿಗ್ರಾಹ್ಯತ್ವ ಮತಏವ ಭವತಾವಿದಿತಂ ರೂಪಂ ಪರಿಚ್ಛಿನ್ನಮೇವೇತಿಜ್ಞಾಯತೆ ಏತತ್ಪರಿಚ್ಛಿನ್ನಾಚಾರಾದಿ ಲಿಂಗಾನತಿರಿಕ್ತೇಷ್ಟ ಲಿಂಗಜ್ಞಾನಸ್ಯ ತತ್ತದ್ಬ್ರಹ್ಮಾದಿ ಪದವೀಪ್ರಾಪಕತ್ವೇಪಿ ನತು ಪರಮುಕ್ತಿರಿತ್ಯರ್ಥಃ ಅಥ ಚತ್ವಮಿವದೇವೇಷು ಯಃಕಶ್ಚಿತ್ಸುವೇದೇತಿ ಮನ್ಯತೇಸ್ಯ ಬ್ರಹ್ಮಣೋರೂಪಂ ಯತ್. ತದಪ್ಯಲ್ಪಮೇವ ಸವೇತ್ತಿ ತಸ್ಮಾದೇವ ತೆ ತ್ವಯಾ ವಿದಿತಂ ಚಕ್ಷುರಾದಿನಾಜ್ಞಾತಂ ವಿಮಾವಮಾಂಸ್ಯಂನು ವಿಚಾರಣೀಯಂಖಲು ॥

ಮೂ॥ ನಾಹಂಮನ್ಯೇ ಸುವೇದೇತಿ ನೋನವೇದೇತಿವೇದ
ಚ । ಯೋನಸ್ತದ್ವೇದ ತದ್ವೇದ ನೋನ ವೇದೇತಿ
ವೇದಚ ॥೧೦॥ ೨॥

ಮಾತ್ರ ಆಯಾಯ ಪದವಿಗಳು ಮಾತ್ರ ಸಿಗಬಹುದು. ಆದಕಾರಣದಿಂದ ನೀನು ಇಷ್ಟಕ್ಕೇನೆ ತೃಪ್ತನಾಗದೆ ಇನ್ನು ಷಟ್‌ಸ್ಥಲರೂಪನಾದ ಸರ್ವಾತ್ಮಕವಾದ ಬ್ರಹ್ಮವನ್ನು ಶ್ರವಣಮನನಾದಿಗಳಿಂದ ಚನ್ನಾಗಿ ತಿಳಿದುಕೊಳ್ಳುವವನಾಗು ಎಂದು ಶ್ರುತಿದೇವಿಯು ಗುರುರೂಪದಿಂದ ಶಿಷ್ಯನನ್ನುದ್ದೇಶಿಸಿ ಹೇಳಿದಳು. ಮತ್ತು ಆ ಪರಶಿವ ಬ್ರಹ್ಮದ ಪರಿಚ್ಛಿನ್ನವಾದ ರೂಪವು ಪಾರಮಾರ್ಥಿಕವೆಂಬ ವಿಷಯದಲ್ಲಿ ಹಿಂದೆ ಶಾಂಕರೀಕಾರರು ಅನೇಕ ಯುಕ್ತಿಗಳಿಂದ ಸಿದ್ಧಮಾಡಿದ್ದಾರೆ. ಮತ್ತು ಶ್ರೀರೇಣುಕಭಗವತ್ಪಾದರ ಉಕ್ತಿಗಳನ್ನು ಕೊಟ್ಟಿದ್ದಾರೆ:ನಂತರೆ ಸರ್ವಜಗತ್ಸ್ವರೂಪವೂ ಸರ್ವ ಜಗತ್ತಿಗೆ ಅಧಿಪತಿಯಾಗಿಯೂ ಇರುವ ಪರಬ್ರಹ್ಮ ಮಹಾಲಿಂಗವೇ ಸರ್ವಪ್ರಾಣಿಗಳೊಳಿರುವ ಮೂರು ಸ್ಥಾನ (ಮೂಲಾಧಾರ ಹೃದಯ ಭ್ರೂಮಧ್ಯ) ಗಳಲ್ಲಿ ಗೋಚರಿಸುವದಾಗಿಯೂ ಜ್ಯೋತಿರ್ಲಿಂಗ ರೂಪವಾಗಿಯೂ ತನ್ನ ಊರ್ಧ್ವ ಮಾಯಾಶಕ್ತಿಯಿಂದ ಅಂತಸ್ಥವಾಗಿಯೂ. ಪರಿಚ್ಛಿನ್ನವಾಗಿಯೂ ಇರುತ್ತದೆ. ಎಂದು ಹೇಳಿರುವದರಿಂದ ಘಟಕಾಶಾದಿ ನ್ಯಾಯದಂತೆಯೂ. ಅಹಿಕುಂಡಲ ನ್ಯಾಯದಂತೆಯೂ. ಆ ಪರಿಚ್ಛಿನ್ನವಾದ ಬ್ರಹ್ಮದ ಸ್ವರೂಪವೂ ಪಾರಮಾರ್ಥಿಕವೆಂದೇ ಗೊತ್ತಾಗುತ್ತದೆ ಆದ್ದರಿಂದ ಶ್ರುತಿದೇವಿಯೂ ಕೂಡಾ ಕೇವಲ ಪರಿಚ್ಛಿನ್ನ ಬ್ರಹ್ಮಜ್ಞಾನದಿಂದ ಪರಮುಕ್ತಿಯು ಸಿಗುವದಿಲ್ಲಾದಕಾರಣ ಇನ್ನೂ ವಿಚಾರಿಸು ಎಂದು ಅಪ್ಪಣೆಮಾಡಿದಳು. ॥೯॥ ॥೨॥

ಎಲೈ ಶಿಷ್ಯನೇ ನೀನು ತಿಳಿದಿರುವ ಬ್ರಹ್ಮವು ಇಷ್ಟಲಿಂಗರೂಪವೇ ಆಗಲಿ ಪ್ರಾಣಲಿಂಗರೂಪವೇ ಆಗಲಿ ಆಚಾರಾದಿ ಲಿಂಗರೂಪವೇ ಆಗಲಿ ಆ ರೂಪವು ಪರಿಚ್ಛಿನ್ನವಾದದ್ದು ಬ್ರಹ್ಮದ ಅಪರಿಚ್ಛಿನ್ನ ಸ್ವರೂಪವನ್ನು ನೀನು ತಿಳಿದಂತಾಗಲಿಲ್ಲಾ? ಬ್ರಹ್ಮದ ಪರಿಚ್ಛಿನ್ನ ಅಪರಿಚ್ಛಿನ್ನ ರೂಪಗಳು ಪಾರಮಾರ್ಥಿಕಗಳೇ ಆಗಿರುವವು ಮತ್ತು ಬ್ರಹ್ಮವು ಸರ್ವಾತ್ಮಕವೇ ಸದಸದ್ರೂಪ ಪ್ರಪಂಚಸ್ವರೂಪವೇ ಆಗಿದೆ. ಆದ್ದರಿಂದ ನೀನು ಸದ್ರೂಪದಿಂದ ಬ್ರಹ್ಮವನ್ನು ತಿಳಿದರೂ ಬ್ರಹ್ಮದ

ಶಾಂ|| ಏವಮಾಚಾರ್ಯೇಣೋಕ್ತಃ ಶಿಷ್ಯಃ—ನಿರುಪದ್ರವಸ್ಥಲಮುಪಗಮ್ಯಪೂರ್ವೋಕ್ತಂ "ಅನ್ಯದೇವತದ್ವಿದಿತಾದಥೋ ಅವಿದಿತಾದಧಿ" ಇತ್ಯಾಚಾರ್ಯವಚನಮರ್ಥತಃ ಶ್ರವಣಮನನಾದಿನಾ| ನಿಶ್ಚಿತ್ಯ ಗುರುಮುಪಗಮ್ಯಾಹ|| ನಾಹಂಮನ್ಯೇ| ಇತಿ|| ಯದೇತದೇವ ವಸ್ತು ಸ್ವಸ್ವಾತಂತ್ರ್ಯ ಸ್ವಲೀಲಾದಿನಾ ಭಾವಾಭಾವಪ್ರಪಂಚರೂಪಂ| ಭಕ್ತಾನುಗ್ರಹಾರ್ಥಂ ಷಟ್ ಸ್ಥಲರೂಪಂವರ್ತತೆ. ತದಹಂ ಸುವೇದೇತಿ ಸುಖೇನ ಅನಾಯಾಸೇನ ಚಕ್ಷುರಾದಿನಾ ಘಟತದಭಾವವತ್ ವೇದೇತಿ ನೈವಮನ್ಯೇ ಘಟತದಭಾವಯೋರ್ಹಿ ಜ್ಞಾನಂ ತಯೋರ್ನಿಶ್ಚಿತಾಭ್ಯಾಂ ಭಾವತ್ವಾ ಭಾವತ್ವಾಭ್ಯಾಂ ಭವಿತುಂ ಶಕ್ಯಂ. ನಚತಥಾ ಭಾವಾಭಾವಕರ ಬ್ರಹ್ಮಣೋ ಜ್ಞಾನಂ ಯದಿಭಾವತ್ವೇನತಸ್ಯಜ್ಞಾನಂ ತದಪಿರೂಪಂ ದಭ್ರಮೇವ ನಸಂಪೂರ್ಣಂ. ಯದಿಚಅಬಾವತ್ವೇನ ತದಪಿ ತಥೈವೇತ್ಯಾಹ ಗುರುರಿತಿಜ್ಞಾತ್ವಾಹಶಿಷ್ಯಃ ನಾಹಂಮನ್ಯೇ ಇತಿ ತಥಾಚನೈವತ್ವಂ ಬ್ರಹ್ಮಜ್ಞಾನವಾನ್, ಇತಿ ಗುರುಣಾ. ಉಕ್ತೆ ಶಿಷ್ಯಃ ಪುನರಾಹ" ನೋನವೇದೇತಿ ವೇದಚೇತಿ. ನೋನವೇದೇತಿ ನ ಕಿಂತು ವೇದಚ ವೇದ್ಯೈವೇತ್ಯರ್ಥಃ. ನನ್ವಿದಂ ಕಥ ಮುಪಪನ್ನಂ ಭವತಿ

ಇನ್ನೊಂದು ಕಾರ್ಯರೂಪವಾದ ಅಸದ್ರೂಪವನ್ನು ತಿಳಿದಂತಾಗಲಿಲ್ಲಾ ಕಾರ್ಯರೂಪವಾದ ಅಸದ್ರೂಪವನ್ನು ತಿಳಿದರೂ ಕಾರಣರೂಪವಾದ ಸದ್ರೂಪವನ್ನು ತಿಳಿದಂತಾಗಲಿಲ್ಲಾದ್ದರಿಂದ ಇನ್ನೂ ಬ್ರಹ್ಮವನ್ನು ಚನ್ನಾಗಿ ವಿಚಾರಿಸು ಎಂದು ಗುರುವು ಹೇಳಲು ಶಿಷ್ಯನು ನಿರುಪದ್ರವಸ್ಥಲಕ್ಕೆ ಹೋಗಿ ಪೂರ್ವದಲ್ಲಿ "ಹೇಳಿದ" ಅನ್ಯದೇವತದ್ವಿದಿತಾದಥೊ ಅವಿದಿತಾದಧಿ" ಎಂಬುವ ಆಚಾರ್ಯರ ಉಕ್ತಿಯರ್ಥವನ್ನು ಶ್ರವಣಮನನಾದಿಗಳಿಂದ ನಿಶ್ಚಯಿಸಿಕೊಂಡು ಪುನಃ ತನ್ನ ಗುರುವಿನ ಸಮೀಪಕ್ಕೆ ಹೋಗಿ ಎಲ್ಲೆ ಗುರುವೆ ? ಯಾವ ವಸ್ತುವು ತನ್ನ ಸ್ವಾತಂತ್ರ್ಯಶಕ್ತಿಯಿಂದ ಅಥವಾ ತನ್ನ ಲೀಲಾಶಕ್ತಿಯಿಂದ ಸದಸದ್ರೂಪ ಪ್ರಪಂಚ ಸ್ವರೂಪವಾಗಿಯೂ ಪರಿಪಕ್ವಮಲರಾದ ಭಕ್ತರನ್ನುದ್ಧರಿಸುವವಕ್ಕೋಸ್ಕರ ಗುರುಲಿಂಗ ಜಂಗಮರ.ಬ ಭಾವ ಇಷ್ಟಪ್ರಾಣಲಿಂಗರೂಪವಾಗಿಯೂ ಷಟ್ ಸ್ಥಲರೂಪವಾಗಿಯೂ ಇರುತ್ತದೆಯೊ ಆ ವಸ್ತುವನ್ನು ನಾನು ಅನಾಯಾಸದಿಂದ (ಚಕ್ಷುರಾದಿಯಿಂದ) ಘಟ ಮತ್ತು ಘಟದ ಅಭಾವವನ್ನು ಹೇಗೆ ತಿಳಿಯುತ್ತೇನೆಯೊ ? ಹಾಗೆ ತಿಳಿಯಲಿಲ್ಲಾ ಯಾಕೆಂದರೆ ಘಟದ ಜ್ಞಾನವು ಘಟವಲ್ಲಿ ನಿಶ್ಚಯಿಸಲ್ಪಟ್ಟ ಘಟತ್ವ ಪುರಸ್ಕಾರದಿಂದ ಸಂಭವಿಸುತ್ತದೆ. ಮತ್ತು ಘಟಾಭಾವದ ಜ್ಞಾನವಾದರೂ ಅಲ್ಲಿರುವ ಘಟಾಭಾವತ್ವ ರೂಪದಿಂದ ಸಂಭವಿಸುವದು. ಈ ಪ್ರಕಾರ ಬ್ರಹ್ಮವನ್ನು ತಿಳಿಯಲು ಶಕ್ಯವಿಲ್ಲಾ. ಕೇವಲ ಸದ್ರೂಪವೆಂದು ತಿಳಿದರೆ ಆ ಜ್ಞಾನವೂ ಕೂಡ ಪರಿಚ್ಛಿನ್ನವಾದದ್ದು. ಕೇವಲ ಅಸದ್ರೂಪವೆಂದು ತಿಳಿದರೆ ಅದೂಕೂಡ ಪರಿಚ್ಛಿನ್ನವೆ? ಸಂಪೂರ್ಣ ವಸ್ತುವಿಷಯಕವಾದದ್ದಲ್ಲವೆಂದು ಗುರುವು ಹೇಳುತ್ತಾನಾದಕಾರಣ ನಾನು ಆ ವಸ್ತುವನ್ನೇ ತಿಳಿಯಲಿಲ್ಲಾ ಎಂದು

ಯಸ್ಯಾಪ್ಯಜ್ಞಾಯಮಾನತ್ವಂ ತಸ್ಯೈವ ಜ್ಞಾಯಮಾನತ್ವಮಿತಿಚೇದುಚ್ಯತೇ, ಪರಶಿವಲಿಂಗಸ್ಯ ಸರ್ವಾತ್ಮಕತ್ವಾತ್ ಸದಸತೋರ್ದೃಶ್ಯಮಾನತ್ವಾತ್ ತೇನ ತಜ್ಜ್ಞಾನಕಸ್ಯ ತದಾತ್ಮಕತ್ವಾತ್ ಜಗಜ್ಜನ್ಮಾದಿಕಾರಣತ್ವೇನೈವ ಪರಶಿವಲಿಂಗಂ ಜ್ಞಾತವ್ಯಮಿತಿ ಸೂತ್ರಕೃತಾದರ್ಶಿತತ್ವಾತ್, ಜಗತೋ ಭಾವಾಭಾವರೂಪಸ್ಯ ಜನ್ಮಾದಿಯತಃ ತಸ್ಯ ಭಾವಾಭಾವತ್ವಸ್ಯ ಸುತರಾಂ ಸಿದ್ಧತ್ವಾತ್, ಭಾವಾಭಾವರೂಪಂ ಪರಶಿವಲಿಂಗಮಿತಿ ವೇದ್ಯೈವ. ತಸ್ಮಾತ್ ಜ್ಞಾಯಮಾನತ್ವಂ ತಸ್ಯೈಕೇನ ಭಾವತ್ವೇನೈಕೇನಾಭಾವತ್ವೇನಾಪಾ ನವೇದ ತಸ್ಮಾದಜ್ಞಾಯಮಾನತ್ವಮಪಿ ಅತೋ ನಾಹಂಮನ್ಯೇ ಸುವೇದೇತಿ | ನೋನವೇದೇತಿವೇದಚ | ಇತ್ಯನಯೋರ್ವಾಕ್ಯಯೋಃ ಪರಸ್ಪರ ವಿರುದ್ಧಾರ್ಥ ಪ್ರತಿಪಾದಕತ್ವಂ | ಅತ್ರ ಪ್ರಥಮವಾಕ್ಯೇನ ದ್ವಿತೀಯವಾಕ್ಯೇನಚ ಅನ್ಯದೇವತದ್ವಿದಿತಾದಿತ್ಯಾಚಾರ್ಯೋಕ್ತಾರ್ಥೋದರ್ಶಿತಃ | ಅಹಮಿವ ನಃ ಶಿಷ್ಯಾಣಾಂ ಮಧ್ಯೇ ಯಃ ತದಾಚಾರ್ಯೋಕ್ತಂ ಸಂಶಯವಿಪರ್ಯಯಾದಿರಾಹಿತ್ಯೇನ ವೇದ ಜಾನಾತಿ, ಸಃ ತತ್ ಸರ್ವಾತ್ಮಕಂ ಪರಂಬ್ರಹ್ಮಲಿಂಗಂ ವೇದ. ಸೋಪಿನೋ ವೇದೇತಿನ. ಕಿಂತು ವೇದಚ ವೇದ್ಯೈವ ಇದಂಚ ಪರಶಿವಲಿಂ

ಹೇಳುವದೆ ಉತ್ತಮವೆಂದು ತಿಳಿದು, ಎಲೈ ಗುರುವೇ! ನಾನು ಆ ಬ್ರಹ್ಮವನ್ನು ಚನ್ನಾಗಿ ತಿಳದಿಲ್ಲಾ, ಎಂದು ಶಿಷ್ಯನು ಹೇಳಲಾಗಿ, ಹಾಗಾದರೆ ಎಲೈ ಶಿಷ್ಯನೇ! ನೀನು ಬ್ರಹ್ಮಜ್ಞಾನಿಯೇ ಆಗಲಿಲ್ಲವಲ್ಲಾ ಎಂದು ಗುರುವು ಹೇಳಲಾಗಿ, ಪುನಃ ಶಿಷ್ಯನು ಆ ಪರಶಿವ ಬ್ರಹ್ಮವನ್ನು ತಿಳಿದಿಲ್ಲವೆಂದಲ್ಲ ತಿಳದಿರುವೆನು ಎಂದು ಶಿಷ್ಯನು ಉತ್ತರ ಕೊಟ್ಟನು. ಆದರೆ ಯಾವ ಬ್ರಹ್ಮವನ್ನು ತಿಳದಿಲ್ಲವೆಂದು ಹೇಳಿದನೋ ಅದನ್ನೇ ಪುನಃ ತಿಳದಿರುವೆನೆಂದು ಹೇಳುವದು ಯುಕ್ತವಾಗಿ ತೋರುವದಿಲ್ಲ, ಅಂದಮೇಲೆ ಶ್ರುತಿಯು ಆ ರೀತಿಯಾಗಿ ಯಾಕೆ ಹೇಳಿರಬಹುದು? ಅಂದರೆ ಕಾಣುವ ಸದಸದ್ರೂಪವಾದ ಜಗತ್ತನ್ನು ಹುಟ್ಟಿಸಿದ ಶಿವನು ಕಾರ್ಯಕಾರಣರೂಪಗಳಾದ ಅಸತ್ತು ಮತ್ತು ಸತ್ತು ಇವುಗಳ ಸ್ವರೂಪನೆ ಇದ್ದಾನೆಂದು ತಿಳಿದುಬರುವಕಾರಣದಿಂದಲೂ, ಮತ್ತು ಶಿವನನ್ನು ಜಗತ್ತಿನ ಉತ್ಪತ್ತಿ ಸ್ಥಿತಿ ಲಯಾದಿಗಳಿಗೆ ಕಾರಣನನ್ನಾಗಿಯೇ ತಿಳಿದುಕೊಳ್ಳಬೇಕೆಂದು ಸೂತ್ರಕಾರರು (ವ್ಯಾಸರು) ತೋರಿಸಿರುವದರಿಂದಲೂ, ಪರಶಿವಬ್ರಹ್ಮವು ಸದಸದ್ರೂಪವೆಂದು ತಿಳಿದನು. ಕೇವಲ ಸದ್ರೂಪವೆಂತಲೂ, ಕೇವಲ ಅಸದ್ರೂಪವೆಂತಲೂ ತಿಳಿಯಲಿಲ್ಲವಾದಕಾರಣ ಮೇಲೆ ಹೇಳಿದ ಶ್ರುತಿ ವಾಕ್ಯಗಳಿಗೆ ವಿರೋಧವಿಲ್ಲಾ. ನನ್ನಂತೆ ದೇವತೆಗಳ ಮಧ್ಯದಲ್ಲಿ ಯಾವನಾದರೂ ಆ ಸರ್ವಾತ್ಮಕವಾದ ಪರಶಿವಲಿಂಗವನ್ನು ತಿಳಿಯುವನೋ? ಅವನೂ ಆ ಸದಸದ್ರೂಪವಾದ ಪರಶಿವ ಲಿಂಗವನ್ನು ತಿಳಿಯಲಿಲ್ಲವೆಂದಲ್ಲಾ ತಿಳಿದೇ ತಿಳಿದನು. ಆ ಪರಶಿವಬ್ರಹ್ಮವನ್ನು ತಿಳದಿರುವೆನು ಎಂಬುವ ಶಿಷ್ಯನ ವಾಕ್ಯದಿಂದ ಆ ಬ್ರಹ್ಮವು ಸರ್ವ ಜಗದ್ರೂಪ

ಗಂ ಪರಾಹಂತಾಸ್ಪದಂಭವತಿ ನಸ್ತ್ವತ್ಯಂತಮೇವಾಹಂಕಾರಾನಾಸ್ಪದಮಿತಿಜ್ಞಾ ಪನಾರ್ಥಂ ||೧೦||೨||

ಮೂ|| ಯಸ್ಯಾಮತಂ ತಸ್ಯಮತಂ ಮತಂ ಯಸ್ಯನವೇದಸಃ | ಅವಿಜ್ಞಾತಂ ವಿಜಾನತಾಂ ವಿಜ್ಞಾತಮ ವಿಜಾನತ್ರಾಂ ||೧೧||

ಶಾಂ|| ಶಿವೋಭೋಕ್ತಾ ಶಿವೋಭೋಗ್ಯಂ ಶಿವೋಭೋಗಃ ಶಿವೋಖಿಲಂ| ಶಿವಏವ ಶಿವೋಹಂತು | ತಸ್ಮಾದನ್ಯನ್ನವಿದ್ಯತೇ || ಇತ್ಯುಕ್ತಪ್ರಕಾರೇಣ ಸದಸದ್ವಿಶ್ವಾತ್ಮಕಃ ಶಿವೋಹಮಿತಿ ಭಾವದಾರ್ಢ್ಯೆ ಸಂತ್ಯಕ್ತದೇಹಕಲತ್ರ ಪುತ್ರಾದ್ಯಭಿಮಾನಸ್ಯ ಸರ್ವಂ ವಿಶ್ವಂ ಸ್ವದೇಹಂ ಮನ್ಯಮಾನಸ್ಯ ಭಕ್ತಸ್ಯ | ನರಃ ಸ್ವದೇಹಕಂಡೂತಿಂ ವಿಜಾನಾತಿ ಯಥಾತಥಾ | ಸರ್ವಸೂಕ್ಷ್ಮವ್ಯವಹಿತ ವಿಪ್ರಕೃಷ್ಟಾರ್ಥಜ್ಞಾನಂ ಭವತೀತ್ಯಾಹ|| ಯಸ್ಯೇತಿ. ಪರಶಿವಮಹಾಲಿಂಗಂ ಮತಂ ಮಯಾಜ್ಞಾತಮಿತಿ ಯಸ್ಯದೃಢಪ್ರತ್ಯಯೋಭವತಿ ಪೂರ್ವೋಕ್ತ ಲಿಂಗಾಂಗಸಾಮರಸ್ಯಾಪರಪರ್ಯಾಯ ಶಿವಯೋಗಪ್ರಶಮಿತ ಶಿವಜೀವೋ ಭಯಭ್ರಾಂತಿ ಸರ್ವತ್ರಾಭ್ಯ

ಪರಶಿವನೇ ನಾನು ಎಂಬುವ ಪರಾಹಂಕಾರಕ್ಕೆ ವಿಷಯವಾಗುತ್ತದೆ ಎಂದೂ; ಅದು ಅಹಂಕಾರಕ್ಕೆ ಎಂದೂ ವಿಷಯವಾಗದೆ ಇರುವದಿಲ್ಲೆಂದೂ ಸ್ಪಷ್ಟವಾಯಿತು. ||೧೦||೨||

ಕಾ|| ಯಾವನು ಭೋಕ್ತೃಭೋಗ್ಯಭೋಗರೂಪಗಳಾದ ಪದಾರ್ಥಗಳೂ ಸಮಸ್ತ ಪ್ರಪಂಚವೂ ನಾನೂ ಕೂಡಾ. ಶಿವನೇ ಆಗಿದ್ದೇನೆಂದು ದೃಢವಾಗಿ ಭಾವಿಸುವನೋ? ಅವನಿಗೆ ಶಿವಾತಿರಿಕ್ತವಾಗಿ ಯಾವದೂ ತೋರುವದಿಲ್ಲ ಎಂಬುವ ಪ್ರಾಚೀನರ ಉಕ್ತಿಯಂತೆ ಹೆಂಡರುಮಕ್ಕಳು ನನ್ನವರು ಎಂಬುವ ಮಮಕಾರವೂ ದೇಹದಲ್ಲಿರುವ ಅಹಂಕಾರ ಮಮಕಾರಗಳು ಯಾವನಿಗಿರುವದಿಲ್ಲವೋ? ಮತ್ತು ಸಮಸ್ತ ಜಗತ್ತನ್ನೇ ತನ್ನ ದೇಹವನ್ನಾಗಿ ಯಾವನು ತಿಳಿಯುತ್ತಾನೆಯೋ? ಅವನಿಗೆ ವಿಶ್ವಾತ್ಮಕ ಶಿವನೇ ನಾನೆಂಬ ಭಾವವು ದೃಢವಾಗಿ ಹೋಗುವದು. ಆ ಮೇಲೆ ಅವನು ಸದಾ ಶಿವನಂತೆ ಸಮಸ್ತ ಜಗತ್ತಿನ ಮೇಲೆ ನಾನು ನನ್ನದು ಎಂಬ ಪರಾಹಂಕಾರ ಮಮಕಾರಗಳನ್ನು ಮಾಡುತ್ತ ತನ್ನ ಮೂರೂವರೆ ಮೊಳದ ಶರೀರವನ್ನೇ ಮರೆತುಬಿಡಲಾಗಿ ಅವನಿಗೆ ಸರ್ವ ಪ್ರಪಂಚವೂ ಶರೀರವೇ ಆಗಿಬಿಡುವದು. ಅನಂತರದಲ್ಲಿ ನಮ್ಮ ಮೂರೂವರೆ ಮೊಳದ ಸ್ಥೂಲಶರೀರದಲ್ಲಿ ನಾನು ನನ್ನದು ಎಂಬ ಅಹಂಕಾರ ಮಮಕಾರಗಳು ಬಹುಕಾಲದಿಂದ ಅಭ್ಯಸ್ತಗಳಾಗಿ ದೃಢವಾಗಿರುವದರಿಂದ ಆ ಸ್ಥೂಲ ಶರೀರದ ಯಾವ ಭಾಗದಲ್ಲಿಯೇ ಆಗಲಿ ಕಂಡೂತಿ ಅಥವಾ ಮತ್ತಾವ ಚೇಷ್ಟೆಯಾಗಲಿ ಯಾರಾದರೂ ಸ್ಪರ್ಶವನ್ನೇ ಮಾಡಲಿ ಅವೆಲ್ಲ ಕ್ರಿಯೆಗಳನ್ನು ನಾವು ತಿಳಿದುಕೊಳ್ಳುವಂತೆ, ಆ ಪರಬ್ರಹ್ಮ ಸ್ವರೂಪಿಯಾಗಿಯೂ ನಾನೇ ಸರ್ವಾ

ಸ್ವಾತ್ಮವ್ಯಾಪ್ತೇರ್ಯಸ್ಯ ಭಾವಾಭಾವವಿಶ್ವಾತ್ಮಕ ಶಿವೋಹಮಿತಿಸ್ವಾಭಿನ್ನ ಬು
ದ್ಧಿಶಕ್ತಿರೂಪಾ ನಿತ್ಯಾವೃತ್ತಿರಾವಿರ್ಭವತಿ ತದಾತಸ್ಯ ತೇನ ಶಿವಾದ್ವೈತಜ್ಞಾ
ನಾತ್ಪ್ರಾಕ್. ಅಮತಮಪಿ ಸೂಕ್ಷ್ಮವ್ಯವಹಿತ ವಿಪ್ರಕೃಷ್ಟಾದಿಸರ್ವಮಪಿ ಸ್ವಶರೀರ
ಕಂಡೂತ್ಯಾದಿಕಮಿವ ಮತಂ ಸಮ್ಯಕ್ ಜ್ಞಾತಂಭವತಿ. ,,ಆತ್ಮನಿಖಲ್ವರೆದೃಷ್ಟೆ
ಶ್ರುತೆಮತೆ ವಿಜ್ಞಾತೆ ಇದಂ ಸರ್ವಂ ವಿದಿತಂ,, ,,ಮಾಂ ಯೋವೇದ ಸಸರ್ವಾ
ನ್‌ವೇದ,, ಇತ್ಯಾದಿಶ್ರುತೇಃ ಉಕ್ತಂಚೋಪದೇಶೇ. ಯದಿದಂದೃಶ್ಯತೆ ದೃ
ಷ್ಟ್ವಾತ್ವ ಗೃಹಾನ್ ಪುತ್ರಾಂಶ್ಚ ಸಂತ್ಯಜ | ಯೇನಪಶ್ಯಸಿತಂ ಪಶ್ಯ ಯಂ ದೃಷ್ಟ್ವಾತ್ವ
ಪಶ್ಯಸೇಖಿಲಂ || ಇತಿ. ಉಕ್ತಂಚ ತತ್ಸಯುಕ್ತೌ. ವಿಷಯಾಧಿಪತಿರ್ಯೋಹಿಯೇ
ನಜಾನಾತಿ ಪಾರ್ವತಿ | ತಸ್ಯಯೋವೇತ್ತಿತತ್ಸ್ವೇನ ತೇನಜ್ಞಾತಂ ಚರಾಚರಂ ||

ತ್ಮಕ ಶಿವನೆಂಬುವ ಶಿವಾದ್ವೈತ ಜ್ಞಾನವುಳ್ಳವನಾಗಿಯೂ ಸಮಸ್ತ ಜಗತ್ತೂ ತನ್ನ ಶರೀರವೆಂದು
ದೃಢವಾಗಿ ತಿಳಿದವನಾಗಿಯೂ, ಇರುವ ಭಕ್ತನಿಗೆ ಸರ್ವ ಪದಾರ್ಥಗಳ ಜ್ಞಾನವಾಗುತ್ತದೆ.
ಅತಿ ಸೂಕ್ಷ್ಮಗಳಾಗಿಯೂ, ವ್ಯವಹಿತಗಳಾಗಿಯೂ, ಅತಿ ದೂರಸ್ಥಗಳಾಗಿಯೂ ಇರುವ
ಪದಾರ್ಥಗಳ ಜ್ಞಾನವಾಗುವದಲ್ಲದೆ ಅಲ್ಲಲ್ಲಿ ಏನೇನು ಸಮಾಚಾರವೆಂಬುವದೂ ಕೂಡಾ ತಿಳಿ
ದುಬರುತ್ತದೆ. ಆದರೆ ಭಕ್ತನಾಗದಿದ್ದವನಿಗೆ ಮಾತ್ರ ಯಾವದೂ ತೋರುವದಿಲ್ಲಾ "ಭಕ್ತನೆಂದರೆ
ದೇಹಾದಿಗಳಲ್ಲಿ ಅಭಿಮಾನವಂ ಬಿಟ್ಟು ಕೇವಲ ಜಗದ್ರೂಪನಾದ ಶಿವನಲ್ಲಿ ತನ್ನ ಅಭಿಮಾನವ
ನ್ನು (ಪ್ರೀತಿಯನ್ನು) ಇಟ್ಟಿರತಕ್ಕವನೆಂದರ್ಥ. ಈ ವಿಷಯದಲ್ಲಿ ತ್ಯಕ್ತಾಭಿಮಾನೊ ದೇಹಾ
ದೌಭಕ್ತ ಇತ್ಯುಚ್ಯತೆ ಬುಧೈಃ | ತಚ್ಚಿತ್ತಮಚಲಂ ಯಸ್ಯಸ ವೈಮಾಹೇಶ್ವರಃ ಸ್ಮೃತಃ | ಎಂ
ಬುವ ಶಿವಾಗಮೋಕ್ತಿಯಿರುವುದು. ಯಾವ ಮನುಷ್ಯನು ನಾವು ಹಿಂದೆ ಹೇಳಿದ ಪ್ರಕಾರ ತನಗೆ
ಸಂಬಂಧಪಟ್ಟ ಸರ್ವವಿಷಯಗಳಲ್ಲಿ ನಿವೃತ್ತಿ ಕಲೆಯುಳ್ಳವನಾಗುವನೊ? ಅವನೇ ಭಕ್ತನು. ಆದ್ದ
ರಿಂದಲೆ ಭಕ್ತಸ್ಥಲಕ್ಕೆ ನಿವೃತ್ತಿಕಲೆಯೇ ವೀರಶೈವಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಅರ್ಥಾತ್ ತಾನು
ಭಕ್ತನಾಗಿ ವಿಶ್ವಾತ್ಮಕನಾದ ಶಿವನೇ ನಾನು ಎಂಬುವ ಅಂತಃಕರಣ ವೃತ್ತಿಯೂ ಶಿವನಲ್ಲಿ
ಅಚಲವಾಗಲು ತಾನು ಮಾಹೇಶ್ವರನೆನಿಸಿ,, ಚಿತ್ತಶುದ್ಧಿರ್ಭವೇದ್ಯಸ್ಯಸಪ್ರಸಾದೀ ಉದಾಹೃತಃ||
ಎಂಬಂತೆ ಅಂತಃಕರಣವು ಶುದ್ಧವಾಗಲು ಪ್ರಸಾದಿಯಾಗಿ ಅನಂತರದಲ್ಲಿ "ತ್ಯಕ್ತ ಜೀವ
ಭ್ರಮಶ್ಚಾಯಂ ಲಿಂಗಾತ್ಮಾ ಪ್ರಾಣಲಿಂಗಕಃ,, ಎಂಬಂತೆ ನಾನು ಸುಖಿಯು ನಾನು ದುಃಖಿ
ಯು, ನಾನು ಕಿಂಚಿಜ್ಞನು, ನಾನು ಪೂರ್ಣನಲ್ಲಾ, ನಾನು ಜೀವನು. ಪರಶಿವನಲ್ಲಾ ಎಂಬುವ
ಜೀವಭ್ರಮವು ಲಯಹೊಂದಲಾಗಿ ಅಂದರೆ ಸೂಕ್ಷ್ಮಶರೀರದಭಿಮಾನವಡಗಿ ಪ್ರಾಣಲಿಂಗದಲ್ಲಿ
ಪ್ರೀತಿಯು ಬಲಿತು ಪ್ರಾಣಲಿಂಗಿಯಾಗಿ ಅನಂತರ "ಶಿವನಿತ್ಯತ್ವ ನಿಶ್ಚಿಂತಃ ಸಾನಂದಃ ಶರಣೋಥ
ವೇತ,, ಎಂಬಂತೆ ನಾನು ಶಿವಸ್ವರೂಪನೇ ಆಗಿದ್ದೇನೆ ಶಿವನು ನಿತ್ಯನೆಂದಮೇಲೆ ನಾನೂ ನಿತ್ಯ
ನು. ನನಗೆ ಜನನಮರಣಗಳಿಲ್ಲವೆಂದು ತಿಳಿದು ಅವುಗಳಿಗೋಸ್ಕರವಾಗಿ ಚಿಂತಿಸದೆ ಯಾವಾಗಲೂ

ಇತಿ. ಉಕ್ತಂಚಾಸ್ಯತ್ರ, ಏಕೋಭಾವಃ ಸರ್ವಭಾವಸ್ವಭಾವಃ | ಸರ್ವೇಭಾವಾಃ ಏಕಭಾವಃ ಸ್ವಭಾವಾಃ || ಏಕೋಭಾವಸ್ತತ್ವತೋಯೇನ ದೃಷ್ಟಃ ಸರ್ವೇ ಭಾವಾಸ್ತತ್ವತಸ್ತೇನದೃಷ್ಟಾಃ || ಇತಿ. ಯಸ್ಯಯೇನಪ್ರಾಕ್ ಮತಮಭಿಮತಂ ಪುತ್ರಕಲತ್ರಾದಿಕಂ ಸಂಕುಚಿತಾಹಂಕಾರಾದ್ಯಾಸ್ಪದಂ ಯತ್ ವರ್ತತೇ ತತ್ಸನವೇ ದಸಏವ ಸರ್ವಾತ್ಮಕಃ ಶಿವೋಹಮಿತಿ ಶಿವಾದ್ವೈತಜ್ಞಾನಾನಂತರಂ ತಥಾನಜಾನಾತಿ. ಕಿಂತು ಸರ್ವಮಪಿ ಪರಾಹಂತಾವಗಾಹಿತ್ವೇನಜಾನಾತೀತ್ಯರ್ಥಃ. ಬ್ರಹ್ಮ ವಿಜ್ಞಾನತಾಂ ಸತ್ವಮಾತ್ರೇಣಾ ಸತ್ವಮಾತ್ರೇಣ ವಿದಿತವತಾಂ ತದವಿಜ್ಞಾತಂ ತಸ್ಯ ಸದಸದ್ರೂಪವತ್ವಾತ್ "ಸತ್ಯಂಚಾನೃತಂಚ" ಇತಿಶ್ರುತೇಃ ಸದಸಚ್ಚಾಹ

ಆನಂದಪರವಶನಾಗಿ ಶರಣನೆನಿಸಿಕೊಂಡು 'ಶಿವಜೀವೋ ಭಯಭ್ರಾಂತಿ ರಹಿತ ಕ್ಯೈಕ್ಯಮುಚ್ಯತೇ ಎಂಬಂತೆ ಆ ಸರ್ವಾತ್ಮರ ಶಿವನೇ ನಾನು ಎಂಬ ಶಿವಾದ್ವೈತ (ಲಿಂಗಾಂಗ ಸಾಮರಸ್ಯ) ಜ್ಞಾನವು ದೃಢವಾಗಲು ದ್ವೈತ ಜ್ಞಾನವಡಗಿ ಮುಕ್ತನಾಗುವನು. ಇಂಥ ಶಿವಾದ್ವೈತಜ್ಞಾನವು ಯಾವನಿಗದೆಯೊ? ಅವನಿಗೆ ದೇಹಪಾತಾನಂತರದಲ್ಲಿ ಸರ್ವಜ್ಞತ್ವಾದಿ ಶಕ್ತಿಗಳು ಉದಯವಾಗುವವು. ಜೀವನ್ಮುಕ್ತಾವಸ್ಥೆಯಲ್ಲಿಯೂ ಕೂಡಾ ಎಲ್ಲರಿಗಿಂತಲೂ ವಿಲಕ್ಷಣಗಳಾದ ಕೆಲವು ಗುಣಗಳು ಕಂಡುಬರುವವು. ಅರ್ಥಾತ್ ಶಿವಜ್ಞಾನಿಗೆ ತನಗೆ ಪೂರ್ವದಲ್ಲಿ ತಿಳಿಯದಿದ್ದ ಸಮಸ್ತ ಪದಾರ್ಥಗಳೂ ಸೂಕ್ಷ್ಮ ವ್ಯವಹಿತ ವಿಪ್ರಕೃಷ್ಟ ವಸ್ತುಗಳೂ ತಿಳಿಯಲ್ಪಡುತ್ತವೆಂದು 'ಯಸ್ಯಾಮತಂ' ಎಂಬುವ ಮಂತ್ರವು ಹೇಳುತ್ತದೆ. ಎಲ್ಲ ಕಡೆಯಲ್ಲಿಯೂ ನಾನೇ ಇದ್ದೇನೆಂದು ತನ್ನ ವ್ಯಾಪ್ತಿಯ ಅಭ್ಯಾಸವುಳ್ಳವನಾಗಿಯೂ ಲಿಂಗಾಂಗ ಸಾಮರಸ್ಯವೆಂಬ ಎರಡನೇ ಹೆಸರುಳ್ಳ ಶಿವಯೋಗದಿಂದ ಶಿವಜೀವರುಗಳ ದ್ವೈತಭ್ರಾಂತಿಯನ್ನು ಕಳೆದವನಾಗಿಯೂ ಇರುವ ಮಹಾ ಪುರುಷನಿಗೆ ಮಾತ್ರ ಸರ್ವ ಪ್ರಪಂಚರೂಪನಾದ ಶಿವನೇ ನಾನೆಂಬುವ ಶಿವನಿಗೆ ಅಭಿನ್ನವಾದ ಬುದ್ಧಿಶಕ್ತಿ ರೂಪವಾದ ಸತ್ವವಾದ ಶಿವಾದ್ವೈತ ಜ್ಞಾನರೂಪವಾದ ಅಂತಃಕರಣ ವೃತ್ತಿಯು ಯಾವಾಗ ಆವಿರ್ಭವಿಸುತ್ತದೆಯೊ ? ಆಗ ಆ ಶಿವಾದ್ವೈತ ಜ್ಞಾನಿಗೆ ಪೂರ್ವದಲ್ಲಿ ತನ್ನಿಂದ ತಿಳಿಯಲ್ಪಡದೆ ಇದ್ದ ಅತಿ ಸೂಕ್ಷ್ಮಗಳಾಗಿಯೂ, ಅತಿದೂರದಲ್ಲಿರುವವುಗಳಾಗಿಯೂ ಇರುವ ಪದಾರ್ಥಗಳ ಜ್ಞಾನವಾಗುವದಲ್ಲದೆ ತನಗೆ ವ್ಯಹಿತಗಳಾದ ಪದಾರ್ಥಗಳ ಜ್ಞಾನವೂ ಕೂಡಾ ಆಗುತ್ತದೆ. ಅಂದರೆ ಪುರುಷನು ತನ್ನ ಶರೀರದ ಕಂಡೂತಿ (ನವೆ) ಮೊದಲಾದದ್ದನ್ನು ಹ್ಯಾಗೆ ತಿಳಿಯುವನೊ? ಹಾಗೆ ಪರಶಿವ ಬ್ರಹ್ಮಸ್ವರೂಪಿಯಾದ ಶಿವಜ್ಞಾನಿಯು ಸರ್ವಜಗತ್ತಿನ ಚೇಷ್ಟೆಯನ್ನು ತಿಳಿಯುತ್ತಾನೆಂಬುವ ವಿಷಯದಲ್ಲಿ "ನಷಃ, ಸ್ವದೇಹ, ಕಂಡೂತಿಂ, ವಿಜಾನಾತಿ, ಯಥಾತಥಾ, ಪರಬ್ರಹ್ಮಸ್ವರೂಪೀಚವೇತ್ತಿ ವಿಶ್ವವಿಚೇಷ್ಟಿತಂ,, ಎಂದು ಶಿವಯೋಗಶಾಸ್ತ್ರದಲ್ಲಿ ಹೇಳಲ್ಪಟ್ಟದೆ ಯಲ್ಲದೆ ಶ್ರುತಿಯೂ ಕೂಡಾ "ಆತ್ಮನಿಖಲ್ವರೆ ದೃಷ್ಟೆ ಶ್ರುತಿ ಮತೆವಿಜ್ಞಾತೆ ಇದಂಸರ್ವಂ ವಿದಿತಂ" ಅಂದರೆ ಪರಮಾತ್ಮನ ಜ್ಞಾನವಾಗಲು ಈ ಸಮಸ್ತ ಪ್ರಪಂಚವೂ ತಿಳಿಯಲ್ಪಡುತ್ತ ಎಂದು ಹೇ

ಮರ್ಜುನೇತಿ ಸ್ಮೃತೇಶ್ಚ. ಅವಿಜಾನತಾಂ ತದ್ಬ್ರಹ್ಮಸತ್ತಯಾ ಅಸತ್ತಯಾವಾ
ಅವಿದಿತವತಾಂ ವಿಜ್ಞಾತಂ ವಿದಿತಂ ಸತ್ತ್ವಾಸತ್ತ್ವಾಭ್ಯಾಂ ತದ್‌ಜ್ಞಾನಾವಿರ್ಭಾ
ವಾತ್ | ನನುಸತ್ತ್ವಾಸತ್ತ್ವೋಭಯರೂಪೇಣ ತಜ್ಜ್ಞಾನಸ್ಯಸ್ವೀಕಾರೇ ,,ಭಾವಗ್ರಾ
ಹ್ಯ" ಮಿತ್ಯಾದಿಶ್ವೇತಾಶ್ವತರಶ್ರುತಿ ವಿರೋಧಃ ಸ್ಯಾದಿತಿ ಚೇನ್ನ. ಭಾವಗ್ರಾ
ಹ್ಯಮಿತ್ಯತ್ರಭಾವಪದಸ್ಯ ಸದಸದ್ವಿಶ್ವಾತ್ಮಕ ಶಿವೋಽಹಮಿತಿ ಪರಾಹಂತಾವಗಾ
ಹಿ ನಿತ್ಯಶುದ್ಧ ಚಾದ್ಧಶಕ್ತಿರೂಪವೃತ್ತಿಪರತ್ವಾತ್, ನಚಾಸ್ತೀತ್ಯೇವೋಪಲಬ್ಧ
ವ್ಯಃ ಇತಿ ಶ್ರುತೇರನುರೋಧಾತ್ ಭಾವಪದಸ್ಯ ಸತ್ತಾಪರತ್ವಂ ಯುಕ್ತಮಿತಿ

ಳುತ್ತದೆ. ಮತ್ತು ನನ್ನನ್ನು ಯಾವನು ತಿಳದಿರುವನೋ ಅವನು ಸಮಸ್ತ ದೇವತೆಗಳನ್ನೂ ತಿಳಿ
ದವನು ಎಂದು ಅಥರ್ವ ಶ್ರುತಿಯೂ ಹೇಳುತ್ತದೆ. ಮತ್ತು ಇಷ್ಟೋಪದೇಶವೆಂಬ ಗ್ರಂಥದಲ್ಲಿ—
ಮನೆ ಹೊಲ ಪುತ್ರ ಕಲತ್ರ ಮೊದಲಾದ ಅಸ್ಥಿರ ಪದಾರ್ಥಗಳನ್ನು ನಿನ್ನೊಳಗಿರುವ ಯಾವ
ವಸ್ತುವಿನಿಂದ ನೋಡುತ್ತಿರುವಿಯೋ ಅಂಥಾ ಅಂತರ್ಯಾಮಿಯಾದ ಪರಮಾತ್ಮನೊಬ್ಬನನ್ನೇ
ನೋಡು. ಆ ನನ್ನ ಮನೆ, ನನ್ನ ಹೊಲ, ನನ್ನ ಹೆಂಡರು, ನನ್ನ ಮಕ್ಕಳುಗಳು ಎಂದು
ಹಂಬಲಿಸುತ್ತಾ ಅವುಗಳನ್ನೇ ನೋಡಬೇಡ. ಮನೆ ಹೊಲ ಹೆಂಡರು ಮಕ್ಕಳ ಅಭಿಮಾನವ
ನ್ನು ಬಿಟ್ಟುಬಿಡು. ಆ ಅಭಿಮಾನವನ್ನು ಬಿಟ್ಟು ಕೇವಲ ಪರಶಿವಮೂರ್ತಿಯನ್ನೇ ನೀನು ನೋ
ಡಿದೆಯಾದರೆ ಸಾಕು, ಎಲ್ಲವನ್ನೂ ನೋಡಿ ಬಿಟ್ಟಂತಾಗುವದು, ಎಂದು ಹೇಳಲ್ಪಟ್ಟಿದೆ. ಮತ್ತು
ಎಲೈ ಪಾರ್ವತೀದೇವಿಯೆ ! ವಿಷಯಗಳಿಗೆ ಅಧಿಪತಿಯಾಗಿರುವ ಯಾವನು ಯಾವನಿಂದ ಆ ವಿಷ
ಯಗಳನ್ನು ತಿಳಿಯುತ್ತಾನೆಯೊ ಅಂಥ ಪರಶಿವ ಬ್ರಹ್ಮವನ್ನು ಯಾವನು ಯಥಾರ್ಥವಾಗಿ ತಿಳಿ
ಯುತ್ತಾನೆಯೋ ಅವನು ಸಮಸ್ತ ಚರಾಚರ ಪ್ರಪಂಚವನ್ನು ತಿಳಿಯುತ್ತಾನೆ ಎಂದು ತತ್ತ್ವಯು
ಕ್ತಿಎಂಬ ಗ್ರಂಥವೂ ಕೂಡ ಹೇಳುತ್ತದಲ್ಲದೆ, ಒಂದೇ ವಸ್ತು ಸರ್ವ ವಸ್ತುಗಳ ಸ್ವರೂಪವು ಆ
ಸಮಸ್ತ ಪದಾರ್ಥಗಳು ಒಂದು ಪದಾರ್ಥದ ಸ್ವರೂಪಗಳು. ಒಂದು ವಸ್ತುವನ್ನು ಯಾವನು
ತತ್ತ್ವತಃ ತಿಳಿಯುತ್ತಾನೆಯೋ ಅವನು ಸಮಸ್ತ ಪದಾರ್ಥಗಳನ್ನೂ ತತ್ತ್ವತಃ ತಿಳಿಯುತ್ತಾನೆಂದೂ
ಹೇಳುವ ಪ್ರಮಾಣಗಳಿಂದ ಶಿವಾದ್ವೈತಜ್ಞಾನವಾದರೆ ಸಮಸ್ತ ಜಗತ್ತಿನ ಜ್ಞಾನವಾಗುತ್ತದೆಂದು
ತಿಳಿದುಬರುವಕಾರಣ, ಶಿವಾದ್ವೈತಜ್ಞಾನಕ್ಕಿಂತ ಮೊದಲು ಅಮತವಾದ (ತಿಳಿಯಲ್ಪಡದೆಇದ್ದ)
ಪದಾರ್ಥಗಳು ಮತವಾಗುವದು. (ಶಿವಾದ್ವೈತಜ್ಞಾನವಾದಮೇಲೆ ತಿಳಿಯಲ್ಪಡುವದೆಂದು)
ಶ್ರುತಿ ದೇವಿಯು ಚನ್ನಾಗಿ ನಿರೂಪಿಸಿರುವಳು. ಶಿವಾದ್ವೈತಜ್ಞಾನವಾಗುವದಕ್ಕಿಂತಲೂ ಹೆಂಡ
ರು ಮಕ್ಕಳು ನನ್ನವರು ಎಂದೂ, ದೇಹವೇ ನಾನು ಎಂದೂ ಅಭಿಮಾನವಿಟ್ಟು, ಅವುಗಳ ಸುಖ
ದುಃಖಾದಿಗಳು ತನ್ನವೇ ಎಂದು ಹಂಬಲಿಸುವವನಾಗಿರುವ ಮನುಷ್ಯನಿಗೆ ಶಿವಾದ್ವೈತಜ್ಞಾನ
ವಾಗಲು ಆ ಹೆಂಡರು ಮಕ್ಕಳು ಮುಂತಾದವುಗಳನ್ನು ಆ ಪ್ರಕಾರವಾಗಿ ತಿಳಿಯದೇ ಸರ್ವ
ಪ್ರಪಂಚವನ್ನೂ ನಾನು ನನ್ನದು ಎಂದು ತಿಳಿದು ನಿಶ್ಚಿಂತನಾಗಿ ಸುಖಿಯಾಗುವನು.

ವಾಕ್ಯಂ ಅಗ್ರಿಮಭಾವಾಭಾವಕರಮಿತ್ಯಸ್ಯ ವಿರೋಧಾತ್ ಭಾವಾಭಾವಪ್ರಪಂಚಕರಸ್ಯ ಶಿವಸ್ಯ ಭಾವಾಭಾವಯೋರಭ್ಯುಪಗಮಾತ್ | "ಸನ್ನಸ್ತೀತ್ಯೇವೋಪಲಬ್ಧವ್ಯಃ" ಸತ್ವೇತರಸತ್ವ ವ್ಯವಚ್ಛೇದಾಪಗಮಾತ್ ತದ್ಜ್ಞಾನಸ್ಯ ಸತ್ವಮಾತ್ರಾವಚ್ಛಿನ್ನ ವಿಷಯತಾಕತ್ವಸ್ಯೈವ ಸ್ವೀಕಾರ್ಯತ್ವಾತ್ ಕಥಂ ಸತ್ವಾಸತ್ವಗ್ರಾಹ್ಯತ್ವಂ' ಪರಶಿವಸ್ಯಬ್ರಹ್ಮಣಃ| ಇತಿಚೇನ್ನ' ತಸ್ಯಸತ್ವೇನೈವಗ್ರಾಹ್ಯತ್ವೇ. 'ಸತ್ಯಂ ಜ್ಞಾನಮನಂತಂಬ್ರಹ್ಮ ಯೋವೇದನಿಹಿತಂ ಗುಹಾಯಾಂ ಪರಮೇವ್ಯೋಮನ್ ಸೋಶ್ನುತೆ ಸರ್ವಾನ್ ಕಾಮಾನ್ ಸಹವಿಪಶ್ಚಿತಾ | ಇತಿ ಶ್ರುತಿವಿರೋಧಃಸ್ಯಾತ್ | ತತ್ರಕಥಂ ವಿದ್ಯಾತು ತ್ರಕಿಂಫಲಂ ಇತ್ಯಾಕಾಂಕ್ಷಾ ಶಾಂತ್ಯರ್ಥಂಹಿ ಏತದ್ವಾಕ್ಯಂ. ತಥಾಚಾತ್ರ ಸತ್ಯತ್ವೇನ ಆತ್ಮತ್ವೇನ ಸರ್ವಾತ್ಮಕತ್ವೇನ ಬ್ರಹ್ಮವಿದ್ಯಾ

ಯಾರು ಬ್ರಹ್ಮವನ್ನು ಕೇವಲ ಸದ್ರೂಪವೆಂದು ತಿಳಿಯುತ್ತಾರೆಯೊ? ಅಥವಾ ಕೇವಲ ಅಸದ್ರೂಪವೇ ಬ್ರಹ್ಮವೆಂದು ತಿಳಿಯುತ್ತಾರೆಯೊ? ಅವರಿಂದ ಬ್ರಹ್ಮವು ತಿಳಿಯಲ್ಪಟ್ಟಿಲ್ಲವೆಂದು ತಿಳಿಯತಕ್ಕದ್ದು. ಯಾಕೆಂದರೆ ಬ್ರಹ್ಮವು ಕೇವಲ ಸದ್ರೂಪವೂ ಅಲ್ಲ, ಕೇವಲ ಅಸದ್ರೂಪವೂ ಅಲ್ಲ. ಸದಸದ್ರೂಪವಾಗಿರುವದಷ್ಟೆ ? "ಸತ್ಯಂಚಾನೃತಂಚ' (ಬ್ರಹ್ಮವು ಸದಸದ್ರೂಪವಾಗಿದೆ) ಎಂಬ ಶ್ರುತಿಯೂ, "ಸದಸಚ್ಚಾಹಮರ್ಜುನ' (ಎಲೈ ಅರ್ಜುನ! ನಾನು ಸದಸದ್ರೂಪನಾಗಿರುವೆನು) ಎಂಬ ಕೃಷ್ಣಗೀತೆಯೂ ಕೂಡ ಬ್ರಹ್ಮವು ಸದಸದ್ರೂಪವೆಂದು ಹೇಳುತ್ತದೆ. ಮತ್ತೆ ಆ ಬ್ರಹ್ಮವನ್ನು ಒಂದೇ ಸದ್ರೂಪದಿಂದಾಗಲಿ ಒಂದೇ ಅಸದ್ರೂಪದಿಂದಾಗಲಿ ತಿಳಿಯದಿದ್ದವರಿಂದ ಆ ಬ್ರಹ್ಮವು ತಿಳಿಯಲ್ಪಟ್ಟಿದೆ ಎಂದು ತಿಳಿಯತಕ್ಕದ್ದು. ಯಾಕೆಂದರೆ ಸದ್ರೂಪ ಮತ್ತು ಅಸದ್ರೂಪ ಇವೆರಡರಿಂದ ಆ ಸರ್ವರೂಪವಾದ ಬ್ರಹ್ಮದ ಜ್ಞಾನವು ಆಗಿಯೇ ಆಗುತ್ತದೆ. ಆದುದರಿಂದ ಯಾವನು ಸದ್ರೂಪ ವಂದರಿಂದಲೇ ತಿಳಿದೆನೆನ್ನುವನೋ ಅಥವಾ ಅಸದ್ರೂಪ ಒಂದರಿಂದಲೇ ತಿಳಿದೆನೆನ್ನುವನೋ ಅವನು ಬ್ರಹ್ಮಜ್ಞಾನಿಯೇ ಅಲ್ಲ. ಯಾವನು ಒಂದೇ ಸದ್ರೂಪದಿಂದಲೂ ಒಂದೇ ಅಸದ್ರೂಪದಿಂದಲೂ ನಾನು ಬ್ರಹ್ಮವನ್ನು ತಿಳಿಯಲಿಲ್ಲವೆನ್ನುವನೋ ಅವನಿಗೆ ಬ್ರಹ್ಮಜ್ಞಾನಿಯನ್ನಬೇಕೆಂದು ಶ್ರುತಿಯು ಚಮತ್ಕಾರದಿಂದ ಹೇಳಿರುವದು. ಎಲೈ ಶಿವಾದ್ವೈತಿಯೆ! ಸದಸತ್ಸರ್ವರೂಪದಿಂದ ಬ್ರಹ್ಮವನ್ನು ತಿಳಿಯತಕ್ಕದ್ದೆಂದು ನೀನು ಈ ಶ್ರುತ್ಯರ್ಥವನ್ನು ಮಾಡಿದ ಪಕ್ಷದಲ್ಲಿ "ಭಾವಗ್ರಾಹ್ಯಂ" (ಬ್ರಹ್ಮವು ಸದ್ರೂಪದಿಂದ ಗ್ರಹಿಸಲು ಯೋಗ್ಯವಾಗಿದೆ) ಎಂದು ಹೇಳುವ ಶ್ವೇತಾಶ್ವತರ ಶ್ರುತಿಗೆ ಗತಿ ಏನು? ಅಂದರೆ ಬ್ರಹ್ಮಾದ್ವೈತಿಯೆ! ಭಾವಗ್ರಾಹ್ಯವೆಂಬಲ್ಲಿ ಭಾವಪದಕ್ಕೆ ಸದ್ರೂಪವೆಂದು ಮೊದಲು ಅರ್ಥಮಾಡಿ ಅಥವಾ ಎಂದು ಭಾವಶಬ್ದಕ್ಕೆ ವಿಶುದ್ಧಚಿತ್ತವೆಂದು ಅರ್ಥಮಾಡಿಲ್ಲವೆ? ವಿಶುದ್ಧಚಿತ್ತವೆಂದು ಭಾವಶಬ್ದಕ್ಕೆ ಅರ್ಥಮಾಡಿದರೆ "ಭಾವಗ್ರಾಹ್ಯಂ" ಎಂಬ ಶ್ವೇತಾಶ್ವತರ ಶ್ರುತಿಯು ಸಂಗತವಾಗುತ್ತದೆ ಯಾಕೆಂದರೆ ಸದಸತ್ಪ್ರಪಂಚರೂಪ ಶಿವನೇ ನಾನು ಎಂಬುವ ಅಂತಃಕರ

ದಿತಿಜ್ಞಾಯತೇ ತಸ್ಯ ಸತ್ತ್ವೈಕರೂಪೇಣ ಜ್ಞಾಯಮಾನತ್ವೇ ತನ್ನ ಸ್ಯಾತ್. ನಚ
..ಅಸನ್ನೇವಸಭವತಿ ಅಸದ್ಬ್ರಹ್ಮೇತಿ ವೇದಚೇತ್ ಇತ್ಯನೇನೋಕ್ತಾತ್ ಜನಿಂದಾ
ತಸ್ಯಾಸತ್ತ್ವೇನ ಜ್ಞಾನಸ್ವೀಕಾರೇ. ಸ್ಯಾದಿತಿವಾಚ್ಯಂ. ತಸ್ಯಾ ಅಸತ್ತ್ವೈಕಧರ್ಮಾ
ವಗಾಹಿ ಬ್ರಹ್ಮಜ್ಞಾನವದ್ವಿಷಯಕತ್ವಾತ್. ಸದಸತ್ತ್ವರ್ಧಾತ್ಮಕತ್ವೇನ ತದ್ಜ್ಞಾ
ನಸ್ವೀಕಾರೇ ನ ಕುತ್ರಚಿನ್ನಿಂದಾಶ್ರೂಯತೇ, ಅನ್ಯಥಾಸರ್ವೋವೈರುದ್ರಃ,, ಸರ್ವಂ
ಖಲ್ವಿದಂಬ್ರಹ್ಮ ತಜ್ಜಲಾನಿಶಾಂತಉಪಾಸೀತ ಇತ್ಯಾದಿಶ್ರುತಿವಿರೋಧ ಆಪ
ದ್ಯೇತ. ನನುಕಿಮಿದಮುಕ್ತಂ ಅಸತ್ತ್ವಂನಾಮ ಮಿಥ್ಯಾತ್ವಂ ತಚ್ಚ ತ್ರೈಕಾಲಿ
ಕನಿಷೇಧಪ್ರತಿಯೋಗಿತ್ವಂ | ಸತ್ತ್ವಂನಾಮ ತ್ರೈಕಾಲಿಕ ನಿಷೇಧಾಪ್ರತಿಯೋಗಿ
ತ್ವಂ, ಕಥಮನಯೋರ್ಗೋತ್ವ ಗೋತ್ವಾಭಾವಯೋರಿವಸ್ಥಿತಯೋರೇಕತ್ರಸ
ಮಾವೇಶಂಬ್ರವೀಷಿ | ತತ್ಸಮಾವೇಶೇಚ ತದುಭಯರೂಪೇಣ ಬ್ರಹ್ಮಜ್ಞಾನಂ

ಣದ ನಿತ್ಯಶುದ್ಧವಾದ ವೃತ್ತಿಯೇ ಭಾವವೆಂದು ಶ್ರೀಮದ್ರೇಣುಕ ಭಗವತ್ಪಾದ ಮೊದಲಾದ
ಶಿವಾಚಾರ್ಯರು ಹೇಳಿರುವರು. ಅಲ್ಲದೆ ಶ್ವೇತಾಶ್ವತರೋಪನಿಷತ್ತಿಗೆ ಹೊಸದಾಗಿ ಭಾಷ್ಯವ
ನ್ನು ಬರೆದ ಶ್ರೀಮಚ್ಛಿವಾಚಾರ್ಯರೂ ಕೂಡಾ ಭಾವವೆಂದರೆ ವಿಶುದ್ಧಚಿತ್ತವೆಂದು ಅರ್ಥಮಾಡಿ
ರುವರು. ಎಲೈ ಶಿವಾದ್ವೈತಿಯೆ! "ಅಸ್ತೀತ್ಯೇವೋಪಲಬ್ಧವ್ಯಃ" (ಆ ಬ್ರಹ್ಮವು ಅಸ್ತಿತ್ವ
ಧರ್ಮದಿಂದಲೇ ತಿಳಿಯಲು ಯೋಗ್ಯವಾಗಿದೆ) ಎಂಬ ಛಾಂದೋಗ್ಯ ಶ್ರುತಿಗನುಸಾರವಾಗಿ,
ಕೇವಲ ಸದ್ರೂಪದಿಂದಲೇ ಬ್ರಹ್ಮವನ್ನು ತಿಳಿಯತಕ್ಕದ್ದು ಉಚಿತವಲ್ಲವೆ? ಮತ್ತು ಈ ಛಾಂದೋ
ಗ್ಯಶ್ರುತಿಯಂತೆ ಭಾವಪದಕ್ಕೆ ಸದ್ರೂಪವೆಂದು ಯಾಕೆ ಅರ್ಥ ಮಾಡಬಾರದು. ಅಂದರೆ ಅದೇ
ಶ್ವೇತಾಶ್ವತರ ಶ್ರುತಿಯಲ್ಲಿ ಮುಂದೆ "ಭಾವಾಭಾವಕರಂ" (ಸದಸದ್ರೂಪವಾದ ಪ್ರಪಂಚವ
ನ್ನು ಮಾಡುವವನನ್ನು) ಎಂದು ಹೇಳುವ ವಾಕ್ಯಕ್ಕೆ ವಿರುದ್ಧವಾಗುತ್ತದೆ. ಯಾಕೆಂದರೆ ಭಾವಾ
ಭಾವ ಪ್ರಪಂಚಕ್ಕೆ ಕಾರಣನಾದ ಶಿವನು ಭಾವಾಭಾವ ಪ್ರಪಂಚ ಸ್ವರೂಪನೇ ಇರಬೇಕಾಗು
ತ್ತದಲ್ಲವೆ? ಕಾರ್ಯಕಾರಣಗಳಿಗೆ ಅಭೇದವಿರುವದರಿಂದ ಕಾರಣನಾದ ಶಿವನು ಕಾರ್ಯವಾದ
ಭಾವಾಭಾವ ಪ್ರಪಂಚಸ್ವರೂಪನಾಗುವನು. ಭಾವಗ್ರಾಹ್ಯವೆಂಬಲ್ಲಿ ಭಾವಪದಕ್ಕೆ ಸತ್ತಾ
ಎಂದು ಅರ್ಥ ಮಾಡಿದರೆ ಮುಂದಣ ಭಾವಾಭಾವಕರಂ ಎಂಬುದಕ್ಕೆ ಸಂಗತಿಯಾಗುವದಿಲ್ಲವಾ
ದಕಾರಣ, ಭಾವವೆಂದರೆ ವಿಶುದ್ಧಚಿತ್ತವೆಂದೂ, ಆ ಚಿತ್ತವಾದ ಶಿವಾಕಾರವೃತ್ತಿಗೆ ವಿಷಯನೆಂ
ದೂ ಹೇಳುತ್ತೇವೆ. "ಅಸ್ತೀತ್ಯೇವೋಪಲಬ್ಧವ್ಯಃ" ಎಂಬ ಛಾಂದೋಗ್ಯಶ್ರುತಿಯಲ್ಲಿರುವ ಏವ
ಎಂಬ ಶಬ್ದದಿಂದ ಸದ್ರೂಪದಿಂದಲೇ ಶಿವನನ್ನು ತಿಳಿಯತಕ್ಕುದೆಂದೂ, ಸದ್ರೂಪಕ್ಕೆ ಇತರವಾದ
ಧರ್ಮದಿಂದ ತಿಳಿಯತಕ್ಕದ್ದಲ್ಲವೆಂದೂ ತಿಳಿಯುತ್ತದಲ್ಲಾ? ಅಂದರೆ; ಅಲ್ಲಿರುವ ಏವ ಎಂಬ
ಶಬ್ದದಿಂದ ಸದ್ರೂಪಕ್ಕೆ ಭಿನ್ನವಾದ ಧರ್ಮದಿಂದ ತಿಳಿಯತಕ್ಕದ್ದು ಬ್ರಹ್ಮವಲ್ಲೆಂದು ಅರ್ಥ ಮಾ
ಡಬಾರದು. ಆದರೆ ಕೇವಲ ಶೂನ್ಯವೆ ಬ್ರಹ್ಮವೆಂದು ತಿಳಿಯಬಾರದೆಂಬರ್ಥವು ಹೀಗೆ ಅರ್ಥ

ಸ್ಯಾತ್ | ಇತಿ ಚೇತ್ತ್ವಮನವಗಚ್ಛಸಿ ಶಿವಾದ್ವೈತಸಿದ್ಧಾಂತರಹಸ್ಯಂ ಅಚಿಂ
ತ್ಯಶಕ್ತಿಕೇ ಪರಮಶಿವೇ ಕಿನ್ನಸಮಾವಿಶತಿ ಸತ್ವಾಸತ್ವಯೊರವಿರೋಧಶ್ಚ ಪೂರ್ವ
ಮುಕ್ತ ಏವ | ಕಿಂಚಾಸತ್ವಂನಾಮ ನತ್ರೈಕಾಲಿಕನಿಷೇಧಪ್ರತಿಯೋಗಿತ್ವಂ |
ತಸ್ಯಾಪ್ರಸಿದ್ಧತ್ವಾತ್ | ನಹಿಘಟಕಾಲೆ. ಮೃದಿಘಟೋನಾಸ್ತೀತಿ ನಿಷೇಧಃ ಸಂ
ಭವತಿ ನಹಿಚ ಪ್ರಪಂಚಕಾಲೆ ಬ್ರಹ್ಮಣಿ ತನ್ನಿಷೇಧಃ | ನೇಹನಾನಾಸ್ತಿಕಿಂಚನ''
ವಾಚಾರಂಭಣಂ ವಿಕಾರೊ ನಾಮಧೇಯಂ ಮೃತ್ತಿಕೇತ್ಯೇವಸತ್ಯಂ'' ಇತ್ಯಾದಿ
ನಾ ಕಾರ್ಯಕಾರಣಯೋರಭಿನ್ನತ್ವಮುಚ್ಯತೆ. ಸತ್ರುತ್ವದಭಿಮತಮಸ್ಯತತ್ವಂ |
ತಸ್ಮಾದನ್ಯತತ್ವಂ ನಾಮ ಸ್ವಸಮಾನಕಾಲವೃತ್ತ್ಯಭಾವಪ್ರತಿಯೋಗಿತ್ವಮಿತಿವ
ಕ್ತವ್ಯಂ. ತಚ್ಚಪ್ರಪಂಚೋತ್ಪತ್ತೇಃ ಪ್ರಾಕ್ ಪ್ರಪಂಚಸ್ಯ ಕಾರ್ಯಸ್ವರೂಪತಾ
ತ್ಯಾಗಕಾಲೇಚ ಬ್ರಹ್ಮಣಿ ಪ್ರಪಂಚೋನಾಸ್ತೀತಿ ಸ್ವಾಸಮಾನಕಾಲವೃತ್ತ್ಯಭಾ

ಮಾಡದೆ ಇದ್ದರೆ ''ಸತ್ಯಂ ಜ್ಞಾನಮನಂತಂ ಯೋವೇದನಿಹಿತಂಗುಹಾಯಾಂ ಪರಮೆ ವ್ಯೋಮನ್
ಸೋಶ್ನುತೆ ಸರ್ವಾನ್ ಕಾಮಾನ್ ಬ್ರಹ್ಮಣಾವಿಪಶ್ಚಿತಾ'' ಎಂಬುವ ಶ್ರುತಿಗೆ ವಿರುದ್ಧವಾ
ಗುತ್ತದೆ. ಯಾಕಂದರೆ ಈ ಶ್ರುತಿಯಲ್ಲಿ ಆ ಬ್ರಹ್ಮವನ್ನು ಹೇಗೆ ತಿಳಿಯಬೇಕು ಎಲ್ಲಿ ತಿಳಿಯ
ಬೇಕು ಅದನ್ನು ತಿಳಿದರೆ ಫಲವೇನು ? ' ಎಂಬ ಪ್ರಶ್ನೆಗೆ ಸಮಾಧಾನವು (ಉತ್ತರವು) ಹೇಳಲ್ಪ
ಡುತ್ತದೆ ''ಸತ್ಯಂ ಜ್ಞಾನಮನಂತಂ'' ಎಂಬ ಮೂರು ಪದಗಳಿಂದ ಆ ಬ್ರಹ್ಮವನು ಸದ್ರೂಪ
ದಿಂದಲೂ ಚಿದ್ರೂಪದಿಂದಲೂ ಸರ್ವಾತ್ಮತ್ವದಿಂದಲೂ (ಸದಸದ್ರೂಪದಿಂದಲೂ) ತಿಳಿಯತಕ್ಕ
ದ್ದೆಂದು ಅರ್ಥವಾಗುತ್ತದೆ. ಆದರೆ ''ಅಸ್ತೀತ್ಯೇವೋಪಲಬ್ಧವ್ಯಃ'' ಎಂಬುವ ಶ್ರುತಿಯಲ್ಲಿರುವ
ಏವ ಎಂಬ ಪದದಿಂದ ಸದ್ರೂಪವೊಂದರಿಂದಲೇ ತಿಳಿಯಬೇಕೆಂದು ಅರ್ಥಮಾಡಿದರೆ ಆ ಮೂರು
ಪದಗಳಿಗೆ ಗತಿ ಏನು? ಹಾಗಾದರೆ ''ಅಸನ್ನೇವಸಭವತಿ ಅಸದ್ಬ್ರಹ್ಮೇತಿ ವೇದಚೇತ್'' (ಯಾ
ವನು ಬ್ರಹ್ಮವನ್ನು ಅಸದ್ರೂಪದಿಂದ ತಿಳಿಯುವನೋ ಅವನು ಅಸತ್ಪುರುಷಾರ್ಥವನ್ನು ಹೊಂ
ದುತ್ತಾನೆ) ಎಂಬುವ ಶ್ರುತಿಯಿಂದ ಹೇಳಲ್ಪಡುವ ನಿಂದೆಗೆ ಯೋಗ್ಯರಾರು ಅಂದರೆ, ಬ್ರಹ್ಮವು
ಕೇವಲ ಶೂನ್ಯವೇ (ಅಸದ್ರೂಪವೆ) ಎಂದು ಯಾರು ಹೇಳುವರೋ ಅವರೇ ನಿಂದೆಗೆ ಯೋಗ್ಯರು.
ವೀರಶೈವರಾದರೂ ಕಾರಣಕಾರ್ಯರೂಪಗಳಾದ ಸದಸತ್ತುಗಳನ್ನು ಹೇಳುವರು. ಇವರು ಕೇ
ವಲ ಸದ್ವಾದವನ್ನೇ ಅಂಗೀಕರಿಸಿರುವರಾದಕಾರಣ ಇವರಿಗೆ ಯಾವ ಶ್ರುತಿಯಿಂದಲೂ ನಿಂದೆಯು
ಹೇಳಲ್ಪಡುವದಿಲ್ಲಾ. ಆದಕಾರಣದಿಂದ, ''ಅಸ್ತೀತ್ಯೇವ'' ಎಂಬಲ್ಲಿ ಸದ್ರೂಪ ಒಂದರಿಂದಲೇ
ಬ್ರಹ್ಮವನ್ನು ತಿಳಿಯಬೇಕೆಂದು ಅರ್ಥ ಮಾಡಬಾರದು. ಸದಸತ್ಸರ್ವರೂಪದಿಂದ ತಿಳಿಯತಕ್ಕದ್ದೇ
ಶ್ರುತಿಸಮ್ಮತವು ಆದ್ದರಿಂದಲೇ ''ಸರ್ವೋವೈರುದ್ರಃ'' ''ಸರ್ವಂಖಲ್ವಿದಂಬ್ರಹ್ಮ'' (ಸದಸ
ದ್ರೂಪ ಸರ್ವಪ್ರಪಂಚವೂ ರುದ್ರಸ್ವರೂಪವಾಗಿದೆ. ಈ ಕಾಣುವ ಜಗತ್ತೆಲ್ಲವೂ ಬ್ರಹ್ಮವೇ ಆಗಿದೆ)
ಎಂಬುವ ಶ್ರುತಿಗಳು ಸಂಗತಗಳಾಗುವವು. ಆದ್ದರಿಂದ ಬ್ರಹ್ಮವು ಸದಸದ್ರೂಪವೆಂದೇ ನಾನು

ವಪ್ರತಿಯೋಗಿತ್ವ ರೂಪಮನ್ಯತತ್ವಂ ಪ್ರಪಂಚೆವರ್ತತೆಯಥಾ ಘಟೋತ್ಪತ್ತೇಃ ಪ್ರಾಕ್ ಮುದ್ಗರಪ್ರಹಾರಾದಿನಾ ಘಟಸ್ಯಕಾರ್ಯಸ್ವರೂಪತಾ ತ್ಯಾಗಕಾಲೇಚ ಮೃದಿಘಟೋನಾಸ್ತೀತಿ ಘಟಾಸಮಾನಕಾಲವೃತ್ತ್ಯಭಾವಪ್ರತಿಯೋಗಿತ್ವಂ ಘಟೇ ತಸ್ಮಾದ್ಘಟಕಾರ್ಯಮಸತ್ ಕಾರಣಂತು ಮೃತ್ಸ್ವರೂಪಂ ನಜಹಾತೀತಿಕಾರಣಂ ಸತ್ | ಏಕಂಹಿವಸ್ತುಕಾರ್ಯರೂಪೇಣ ಕಾರಣರೂಪೇ ನಿಶ್ಚಿತಂ| ಸದ್ರೂಪಂ ದ್ವಿವಿಧಮನಾಪೇಕ್ಷಿಕಂ ಸಾಪೇಕ್ಷಿಕಂಚ ಮೃದಾದಿ ಸದ್ರೂಪಮ್ ಸಾಪೇಕ್ಷಿಕಂ ಬ್ರಹ್ಮಣಸ್ತು. ಅನಾಪೇಕ್ಷಿಕಂ ತಸ್ಯ ಸದಾ ಸತ್ವಾತ್ ತಥಾಚ. ಅವಿಜ್ಞಾತಂ ವಿಜಾನತಾಮಿತ್ಯಾದಿನಾ ಕಾರಣಕಾರ್ಯರೂಪೇಣ ತತ್ಪರಂ ಬ್ರಹ್ಮ

ಹೇಳುತ್ತೇನೆ. ಒಳ್ಳೇದು ಶಿವಾದ್ವೈತಿಯೆ! ಅಸತ್ಯವೆಂದರೆ ಯಾವದು ಭೂತ ಭವಿಷ್ಯದ್ವರ್ತಮಾನಕಾಲಗಳಲ್ಲಿ ಲ್ಲವೋ ಅದುವೇ ಅಸತ್ಯವು. ಈ ಮೂರೂ ಕಾಲಗಳಲ್ಲಿ ಯಾವದು ಅದೆಯೋ ಅದುವೇ ಸತ್ಯವು. ಅಂದಮೇಲೆ ಈ ಸತ್ಯತ್ವ ಅಸತ್ಯತ್ವಗಳು ಒಂದು ಬ್ರಹ್ಮದಲ್ಲಿರುತ್ತವೆನ್ನುವದು ಗೋತ್ವ ಗೋತ್ವಾಭಾವಗಳನ್ನು ಒಂದು ಗೋವಿನಲ್ಲಿ ಹೇಳಿದಂತೆ ಆಗುವದಿಲ್ಲವೆ? ಅಂದರೆ ಸತ್ವಾಸತ್ವಗಳಿಗೆ ವಿರೋಧವಿಲ್ಲೆಂದು ಹಿಂದೆ ಹೇಳಿದ್ದೇವೆ. ಆದರೂ ಅಚಿಂತ್ಯಶಕ್ತಿಯುಳ್ಳ ಶಿವನಲ್ಲಿ ಯಾವ ಧರ್ಮಗಳೂ ಸಮಾವೇಶವಾಗುವದಿಲ್ಲಾ. ಕಾರಣಾವಸ್ಥೆಯಲ್ಲಿ ಸತ್ಯತ್ವ ಧರ್ಮವೂ ಕಾರ್ಯಾವಸ್ಥೆಯಲ್ಲಿ ಅಸತ್ಯತ್ವ ಧರ್ಮವೂ ಅವನಲ್ಲಿ ಸಂಭವಿಸುತ್ತದೆ. ಆದ್ದರಿಂದ ಎಲೈ ಬ್ರಹ್ಮಾದ್ವೈತಿಯೆ! ಅಸತ್ಯತ್ವವೆಂದರೆ ನೀನು ಮಾಡಿದ ಅರ್ಥವು ಸಂಗತವಾಗುವದಿಲ್ಲಾ. ಮೂರುಕಾಲದಲ್ಲಿ ಇಲ್ಲದ್ದು ಅಸತ್ತು ಎಂದರೆ, ಇದು ಲೋಕದಲ್ಲಿ ಅಪ್ರಸಿದ್ಧವು. ಪ್ರಪಂಚಕಾಲದಲ್ಲಿ ಪ್ರಪಂಚವಿಲ್ಲವೆಂದು ಯಾವನೂ ಹೇಳಲಾರನು. ಘಟವಿರುವಕಾಲದಲ್ಲಿ ಘಟವಿಲ್ಲೆಂದು ಯಾವನೂ ಅನ್ನಲಾರನು. ಆದ್ದರಿಂದ ಮೂರುಕಾಲದಲ್ಲಿಲ್ಲದ್ದು ಅಸತ್ತು ಎಂದು ಹೇಳಲಿಕ್ಕೆ ಬರುವದಿಲ್ಲಾ. ಆದರೆ ತನಗೆ ಸಮಾನವಾಗದ ಕಾಲದಲ್ಲಿ ತೋರದಿರುವುದೇ ಅಸತ್ಯವೆಂದು ಹೇಳತಕ್ಕದ್ದು. ಘಟಕ್ಕೆ ಸಮಾನವಾಗದಿರುವಕಾಲವೆಂದರೆ, ಘಟೋತ್ಪತ್ತಿಗಿಂತಲೂ ಮೊದಲಿನ ಕಾಲವು ಅಥವಾ ಘಟವಿಲಯಕಾಲವು ಈ ಕಾಲಗಳಲ್ಲಿ ಘಟವು ತೋರದಿರುವದರಿಂದ ಘಟವು ಅಸತ್ಯವು. ಆ ಘಟಕ್ಕೆ ಕಾರಣವಾದ ಮಣ್ಣು ತನ್ನ ಸ್ವರೂಪವನ್ನು ಬಿಡದಿರುವದರಿಂದ ಕಾರಣವಾದ ಮಣ್ಣು ಘಟಕ್ಕಿಂತಲೂ ಸತ್ಯವಾಯಿತು. ಇದರಂತೆ ಪ್ರಪಂಚೋತ್ಪತ್ತಿಗಿಂತಲೂ ಪೂರ್ವದಲ್ಲಿ ಅಥವಾ ಮುಂದೆ ಪ್ರಪಂಚದ ವಿಲಯಕಾಲದಲ್ಲಿ ಪ್ರಪಂಚವು ತೋರದಿರುವಕಾರಣ ಪ್ರಪಂಚವು ಅಸತ್ತು. ಬ್ರಹ್ಮವು ಸದಾ ಇರುವದರಿಂದ ಸತ್ಯವು. ಆದ್ದರಿಂದ ಬ್ರಹ್ಮಾದ್ವೈತಿಯೇ ನಮ್ಮ ಮತದಲ್ಲಿ ಸತ್ಯತ್ವವು ಅನಾಪೇಕ್ಷಿತವೆಂತಲೂ, ಸಾಪೇಕ್ಷಿತವೆಂತಲೂ ಎರಡು ಪ್ರಕಾರವಾಗಿದೆ. ಮಣ್ಣು ಮೊದಲಾದ ಕಾರಣದ ಸತ್ಯತ್ವವು ಸಾಪೇಕ್ಷಿಕವಾದದ್ದು ಪರಮ ಕಾರಣವಾದ ಬ್ರಹ್ಮವು ಯಾವಾಗಲೂ ಇದ್ದು ತೋರುವದರಿಂದ ಆ ಬ್ರಹ್ಮದ ಸತ್ಯತ್ವವು ನಿರಪೇಕ್ಷಿಕ

ಜ್ಞಾತವ್ಯಂ ಸತ್ವೇಕೇನಕಾರಣರೂಪೇಣೈಕೇನ ಕಾರ್ಯರೂಪೇಣೇತಿ ಸೂಚಿತ ಮಿತಿ ಸೂಕ್ಷ್ಮದೃಶಾವಧೇಯಂ ||೧೧||

ಮೂ|| ಪ್ರತಿಭೋಧವಿದಿತಂ ಮತಮಮೃತತ್ವಂಹಿವಿಂದ
ತೇ । ಆತ್ಮನಾವಿಂದತೇವೀರ್ಯಂ ವಿದ್ಯಯಾವಿಂದ
ತೇಮೃತಂ ||೧೨||

ಶಾಂ|| ಗುರುಕೃತ ಲಿಂಗಧಾರಣಾ. ಅಭ್ಯಾಸವಶೇನ ಜಲಪತಿತತೈಲವತ್ ಪ್ರಕರ್ಷಮಾದಧಾನಾ ಸತೀ ದರ್ಶನರೂಪಾಭವತಿ ತೇನಸಾಕ್ಷಾತ್ಕಾರಾತ್ಮಕೇ ನಪ್ರತಿಭೋಧೇನ ವಿದಿತಮೇವ ಬ್ರಹ್ಮಸಮ್ಯಗ್‌ಜ್ಞಾತಂ ನಾನ್ಯಥೇತ್ಯಾಹ ಪ್ರತಿ ಬೋಧವಿದಿತಮಿತಿ|| ಪ್ರತಿಬೋಧೋನಾಮ ಲಿಂಗಾಂಗಸಾಮರಸ್ಯರೂಪ ಶಿವಾ ದ್ವೈತಜ್ಞಾನಂ ತಸ್ಯದ್ವೈತಜ್ಞಾನಾತ್ಮಕ ಸುಖದುಃಖಮೋಹ ಸಂಕಲ್ಪ ವಿಕಲ್ಪಾ

ವಾದದ್ದು. (ಆದ್ದರಿಂದ "ಅವಿಜ್ಞಾತಂ ವಿಜಾನತಾಂ ವಿಜ್ಞಾತಮ ವಿಜಾನಾತಾಂ" ಎಂಬಲ್ಲಿ ನಾನು ಮೊದಲು ಆ ರೀತಿಯಾಗಿ ವ್ಯಾಖ್ಯಾನ ಮಾಡಿರುವದು ಯುಕ್ತವೇ ಆಗಿದೆ ಎಂಬುವದು ಸೂಕ್ಷ್ಮದೃಷ್ಟಿಯುಳ್ಳವರಿಗೆ ತೋರದೇ ಇರಲಾರದು. ||೧೧||

ಒಂದಾನೊಂದು ನೀರಿನ ಮಡುವಿನಲ್ಲಿ ಬಿದ್ದ ಎಣ್ಣೆಯು ಮೆಲ್ಲಮೆಲ್ಲನೆ ಆ ಮಡುವೆಲ್ಲ ವನ್ನು ವ್ಯಾಪಿಸಿಕೊಳ್ಳುವಂತೆ ಎಲೈ ಶಿಷ್ಯನೇ! ಇಗೋ ಈ ನಿನ್ನ ಸೂಕ್ಷ್ಮಶರೀರದಲ್ಲಿರುವ ಪ್ರಾಣಲಿಂಗವು ಸರ್ವಜಗತ್ಸ್ವರೂಪನಾದ ಪರಶಿವಲಿಂಗವು. ಆ ಲಿಂಗವೇ ನೀನಾಗಿದ್ದಿ. ಆ ಲಿಂಗ ಕ್ಕಿಂತಲೂ ನೀನು ಬೇರೆಯಲ್ಲ ಎಂದು "ತತ್ವಮಸಿ" ಮೊದಲಾದ ವಾಕ್ಯಗಳಿಂ ಉಪದೇಶಿಸಿ ಆ ಶಿಷ್ಯನ ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗವನ್ನು ಧಾರಣೆಮಾಡಿದಮೇಲೆ ಶಿಷ್ಯನೂ ಕೂಡಾ ಆ ಸರ್ವಾತ್ಮ ಶಿವನೇ ನಾನು ಎಂದು ಸರ್ವರೂ ಪರಶಿವಾಕಾರ ವೃತ್ತಿಯನ್ನು ಅಭ್ಯಾಸಮಾಡು ತ್ತಬರಲು ಇವನ ಆ ವೃತ್ತಿಯು ಸರ್ವಾತ್ಮ ಶಿವನನ್ನು ವ್ಯಾಪಿಸಿಬಿಡುವದು. ಈ ಪ್ರಕಾರ ತ್ರಿಪು ಟಿಯೂ ಕೂಡಾ ಅಡಗಿ ಆ ಶಿವನನ್ನು ವ್ಯಾಪಿಸಿಕೊಂಡಿರುವ ಚಿತ್ತವೃತ್ತಿಯೇ ಶಿವಸಾಕ್ಷಾತ್ಕಾ ರವೆನಿಸುವದು ಅದುವೆ ಚಿಚ್ಛಕ್ತಿಯನಿಸುವದು ಅದುವೇ ಶಿವನ ಅಂತಃಕರಣವೆನಿಸುವದು. ಅದ ಕ್ಕೇನೇ ಅನಾದಿ ಬೋಧವೆನ್ನುವರು ಅದಕ್ಕೇನೆ ಭಾಂಡಸ್ಥಲವೆನ್ನುವರು ಇಂಥ ಅಪರೋಕ್ಷಜ್ಞಾ ನಕ್ಕೆ ಆ ಪರಶಿವ ಬ್ರಹ್ಮವಿಷಯವಾಗುವದು ಈ ಜ್ಞಾನಕ್ಕೆ ಸಮ್ಯಜ್ಞಾನವೆನ್ನುವರು. ಅಲ್ಲದೆ ಬೇರೆ ಜ್ಞಾನಕ್ಕೆ ಬ್ರಹ್ಮಜ್ಞಾನವೆಂದು ಹೇಳುವದಿಲ್ಲ ಎಂಬುವ ಮೊದಲಾದ ವಿಷಯಗಳನ್ನು ಹೇಳುತ್ತದೆ. ಈ ಹನ್ನೆರಡನೇ ಮಂತ್ರದಲ್ಲಿರುವ ಪ್ರತಿ ಬೋಧವೆಂದರೆ ಲಿಂಗಾಂಗ ಸಾಮರಸ್ಯ ರೂಪವಾದ ಶಿವಾದ್ವೈತ ಜ್ಞಾನವು. ಇದು ದ್ವೈತಜ್ಞಾನರೂಪಗಳಾದ ಸುಖದುಃಖ ಮೋಹ ಮೊದಲಾದ ಬಂಧಗಳಿಗೆ ನಿವರ್ತಕವಾಗಿರುವ ಕಾರಣ ಇದಕ್ಕೆ ಪ್ರತಿಕೂಲವಾದ ಬೋಧವೆಂ

ಧ್ಯವಸಾಯಾದಿರೂಪ ಬಂಧನಿವರ್ತಕತ್ವಾತ್ ತೇನ ಪರಾಹಂತಾಮಯಾಪರೋಕ್ಷವಿಮರ್ಶಾಪರಪರ್ಯಾಯಭಾಂಡಸ್ಥಾನೀಯ ಚಿಚ್ಛಕ್ತಿರೂಪೇಣವಿದಿತಂ ವಿಷಯೀಕೃತಂ ಯತ್, ತನ್ಮತಂ ಸಮ್ಯಗ್ದೃಷ್ಟಂಬ್ರಹ್ಮ. ಯೇನ ಸ ಪ್ರತಿಬೋಧವಾನ್ ಅಮೃತತ್ವಂ ಮರಣಾದ್ಯಭಾವಂ ಮುಕ್ತಿಂ ವಿಂದತೆ ಪ್ರಾಪ್ನೋತಿ. ತದುಕ್ತಂ ಶಿವಸೂತ್ರೆ "ವಿದ್ಯಾವಿನಾಶೆ ಜನ್ಮವಿನಾಶಃ" ಇತಿ, ಉಕ್ತಂಚ ಶ್ರೀಮದ್ರೇಣಕ ಭಗವತ್ಪಾದೈಃ | ಶಿವಏವಜಗತ್ಸರ್ವಂ ಶಿವಏವಾಹಮಿತ್ಯಪಿ | ಭಾವಯನ್ ಪರಮೋ ಯೋಗೀ ಭವದೋಷೈರ್ನಲಿಪ್ಯತೆ || ಇತಿ, ಉಕ್ತಂಚ ಶ್ರೀಕಂಠ್ಯಾಂ| ಸಪ್ರಪಂಚಂಪರಿತ್ಯಜ್ಯ ಹೇಯೋಪಾದೇಯಲಕ್ಷಣಂ | ತೃಣಾದಿಕಂ ತಥಾಪರ್ಣಂ ಪಾಷಾಣಂ ಸಚರಾಚರಂ || ಶಿವಾದ್ಯವನಿಪರ್ಯಂತಂ ಭಾವಾಭಾವೋಪಬೃಂಹಿತಂ | ಸರ್ವಂ ಶಿವಮಯಂಧ್ಯಾತ್ವಾ ಭೂಯೋಜನ್ಮನವಾಪ್ನುಯಾತ್||

ದು ಶ್ರುತಿಯು ಹೇಳುತ್ತದೆ ಈ ಜ್ಞಾನವುಳ್ಳವನು ಅಮೃತತ್ವವನ್ನು (ಮುಕ್ತಿಯನ್ನು) ಹೊಂದುತ್ತಾನೆ. ಈ ವಿಷಯದಲ್ಲಿ ಶಿವಾದ್ವೈತವಿಧಿಯು ದೃಢವಾಗಲು ಜನನ ಮರಣಗಳ ನಾಶವಾಗುತ್ತದೆಂದು ಹೇಳುವ ಶಿವಸೂತ್ರವೂ, ಸಮಸ್ತ ಜಗತ್ತು ಶಿವರೂಪವಾಗಿದೆ. ಆ ಶಿವನೇ ನಾನಾಗಿದ್ದೇನೆಂದು ಭಾವಿಸುವ ಶ್ರೇಷ್ಠಯೋಗಿಯು ಜನನ ಮರಣ ರೂಪಗಳಾದ ಭವದೋಷಗಳಿಂದ ಲೇಪಿಸಲ್ಪಡುವದಿಲ್ಲವೆಂಬ ಸಿದ್ಧಾಂತ ಶಿಖಾಮಣಿಯ ವಚನವೂ, ಹೇಯ ಮತ್ತು ಉಪಾದೇಯಗಳಾದ ವಸ್ತುಗಳಿಂದ ಕೂಡಿದ ಸಮಸ್ತ ಪ್ರಪಂಚವನ್ನು ಪರಿತ್ಯಜಿಸಿ, ತೃಣ, ಕಾಷ್ಟ, ಪರ್ಣ, ಪಾಷಾಣ ಮೊದಲಾದ ಚರಾಚರ ಪ್ರಪಂಚವೂ, ಶಿವಾದಿ ಭೂಮ್ಯಂತ ತತ್ವಗಳೂ, ಭಾವಾಭಾವಗಳೂ ಶಿವರೂಪಗಳೇ ಆಗುವವು ಆ ಶಿವನೇ ನಾನು ಎಂದು ಧ್ಯಾನತತ್ಪರನಾದವನಿಗೆ ಪುನರ್ಜನ್ಮವೇ ಇಲ್ಲಾ. ಜನನ ಮರಣಗಳ ಬಾಧೆಯೇ ತಪ್ಪಿಹೋಗುವದೆಂಬುವ ಶ್ರೀಕಂಠಿ ಎಂಬ ಗ್ರಂಥವೂ ಪ್ರಮಾಣಗಳಾಗಿರುವವು. ಮತ್ತು ಆ ಅಂತರ್ಲಿಂಗಾನುಸಂಧಾನರೂಪವಾದ ಲಿಂಗಧಾರಣೆಯು ಬಲಿತು, ಅಪರೋಕ್ಷರೂಪವಾಗುತ್ತದೆಂಬವಿಷಯದಲ್ಲಿ ಧ್ಯೇಯವಸ್ತುವಿನಲ್ಲಿ ಚಿತ್ತವು ಯಾವಾಗ ಲೀನವಾಗುವದೊ? ಆಗ ಅದು ಧ್ಯಾನವೆನಿಸುವದು. ಅನಂತರದಲ್ಲಿ ಧ್ಯೇಯವಸ್ತುವಿನ ಸಾಕ್ಷಾತ್ಕಾರವಾಗುವದು. ಆಮೇಲೆ ಧ್ಯಾತೃವು ಧ್ಯೇಯಸ್ವರೂಪನೇ ಆಗುವನು! ಎಂಬರ್ಥವುಳ್ಳ ವಿಶ್ವಸಂಹಿತೆ ಎಂಬ ಗ್ರಂಥವೂ, ಎಲೈ ಪರಶಿವನೆ ನಿನ್ನ ಸ್ವರೂಪನೇ ನಾನು ಎಂದು ಯಾವನು ಭಾವನಾಭ್ಯಾಸವನ್ನು ಮಾಡಿ ಅಹಂಕಾರ ಮಮಕಾರಗಳೆಂಬ ಗಂಟುಗಳನ್ನು ಲೀನಗೊಳಿಸಿಬಿಡುವನೋ ಅವನು ನಿನ್ನ ಸ್ವರೂಪವನ್ನು ಪ್ರತ್ಯಕ್ಷವಾಗಿಯೇ ನೋಡಿಬಿಡುವನೆಂದು ಹೇಳುವ ಷಾಡ್ಗುಣ್ಯ ವಿವೇಕವೆಂಬ ಗ್ರಂಥವೂ, ಪ್ರಮಾಣಗಳಾಗಿರುವವು. "ಪ್ರತಿಬೋಧವಿದಿತಂಮತಂ" ಎಂಬ ಮಂತ್ರದಲ್ಲಿರುವ ಪ್ರತಿಬೋಧಶಬ್ದಕ್ಕೆ ಲಿಂಗಾಂಗ ಸಾಮರಸ್ಯರೂಪವಾದ ಶಿವಾದ್ವೈತ ಜ್ಞಾನವೆಂದು ಅರ್ಥಮಾಡಿರುವ ವಿಷಯದಲ್ಲಿ ವ್ಯಾಪಕವಾದ

ಇತಿ. ಅತ್ರ ಶಿವಸೂತ್ರಾದಿಷೂಕ್ತಾಯಾ ಭಾವನಾರೂಪವಿದ್ಯಾಯಾ ಅವಿನಾ ಶೇ ಸತತೋನ್ಮಗ್ನತ್ವೇ ತಸ್ಯಾಃ ಸಾಕ್ಷಾತ್ಕಾರರೂಪ ಪ್ರತಿಬೋಧರೂಪತ್ವಾತ್ ಉಕ್ತಂಹಿ ವಿಶ್ವಸಂಹಿತಾಯಾಂ | ಧ್ಯೇಯೇಚಿತ್ತಂ ಯದಾಲೀನಂ ತದಾಧ್ಯಾನ ಮುದಾಹೃತಂ | ಧ್ಯೇಯಃ ಪ್ರತ್ಯಕ್ಷತಾಂಯಾತಿ ಧ್ಯಾತಾ ತನ್ಮಯತಾಂವ್ರಜೇತ್ || ಉಕ್ತಂಚ ಷಾಡ್ಗುಣ್ಯವಿವೇಕೇ | ಏವಂ ತನ್ಮಯಏವಾಹಮಿತಿಭಾವನ ಯಾಯದಿ | ಪ್ರಲೀನಾಹಂಕೃತಿಗ್ರಂಥಿಃ ಪಶ್ಯತ್ಯೇವತ್ವದಾತ್ಮತಾಂ || ಇತಿ. ಉಕ್ತಂಚ ಮಾಲಿನೀವಿಜಯೆ | ಅಕಿಂಚಿಚ್ಚಿಂತಕಸ್ಯೈವ ಗುರುಣಾಪ್ರತಿಬೋಧತಃ | ಜಾಯತೇ ಯಃ ಸಮಾವೇಶಃ ಶಾಂಭವೋ ಸಾವುದೀರಿತಃ|| ಇತಿ. ಅತ್ರ ಸಮಾವೇಶಃ ಸಂಯೋಗಃ ಸಾಮರಸ್ಯಂ ಸದ್ಭ್ಯೋಃಬ್ಧೌ ತಾದಾತ್ಮ್ಯಮಿವಗಚ್ಛಂತಿಪರಪದಂ ತಾದೃಶಶಾಂಭವ ವಿದ್ಯಾರಸಿಕಾಃ ಕರಕಸ್ಯಮಂಡಂಮಂದಂ ಜಲ ರೂಪಂಗತಸ್ಯ ಸಮುದ್ರಪತಿತಸ್ಯ, ತಾಮ್ರಸ್ಯ ಸುವರ್ಣಭಾವಮಾಪನ್ನಸ್ಯ, ನವ

ಪರಶಿವಲಿಂಗವನ್ನು ಧ್ಯಾನಮಾಡುವ ಶಿಷ್ಯನಿಗೆ ಗುರುಮುಖದಿಂದ ಮಹಾವಾಕ್ಯಗಳ ಶ್ರವಣವಾದಮೇಲೆ ಪ್ರತಿಬೋಧೆಯುಂಟಾಗಿ, ಯಾವ ಸಮಾವೇಶವಾಗುವದೊ, ಅದಕ್ಕೆ ಶಾಂಭವೋಪಾಯವೆಂದು ಹೇಳುವರೆಂಬುವ ಮಾಲಿನೀ ವಿಜಯಗ್ರಂಥವು ಪ್ರಮಾಣವಾಗಿದೆ. ಈ ಶಾಂಭವೋಪಾಯಕ್ಕೇನೆ ಶಾಂಭವೀದೀಕ್ಷೆಯೆಂತಲೂ, ವೇಧಾದೀಕ್ಷೆಯೆಂತಲೂ ಹೆಸರು. ಶಿವನಲ್ಲಿ ಜೀವನ ಸಮಾವೇಶವೆಂದರೆ ಲಿಂಗಾಂಗ ಸಾಮರಸ್ಯವೆಂದೇ ಅರ್ಥವು. ಇಂಥ ಸಾಮರಸ್ಯ ವಿದ್ಯಾರಸಿಕರಾದ ವೀರಶೈವರು ನದಿಗಳು ಸಮುದ್ರದಲ್ಲಿ ಕೂಡಿ ತಾದಾತ್ಮ್ಯವನ್ನು (ಐಕ್ಯವನ್ನು) ಹೊಂದುವಂತೆ ಪರಶಿವಲಿಂಗದ ಅಭಿನ್ನತ್ವವನ್ನು ಹೊಂದುವರು. ಆಮೇಲೆ ಇವರಿಗೆ ಪಶುತ್ವ (ಜೀವ) ಭಾವವು ತಪ್ಪಿ ಶಿವಭಾವವುಂಟಾಗುವದು. ಎಲೈ ಶಿವಾದ್ವೈತಿಯೆ! ನಿನ್ನ ಮತದಲ್ಲಿ ಬಂಧವೂ ಕೂಡಾ ಸತ್ಯವೆಂದು ಹೇಳುವುದರಿಂದ, ಜೀವನಿಗೆ ಜೀವಭಾವದ ನಿವೃತ್ತಿಯು ಹೇಗೆ? ಅಂದರೆ ಬ್ರಹ್ಮಾದ್ವೈತಿಯೇ! ಕೇಳು; ಆಲೀಕಲ್ಲು ಸತ್ಯವಾದರೂ ಅದು ನೀರಾಗಿ ಸಮುದ್ರಕ್ಕೆ ಕೂಡಿದ ಕಾಲದಲ್ಲಿ ಆ ಆಲಿಕಲ್ಲಿನ ನಿವೃತ್ತಿಯೂ, ತಾಮ್ರವು ಸತ್ಯವಾದರೂ ಅದು ರಸಯೋಗದಿಂದ ಸುವರ್ಣವಾದಕಾಲದಲ್ಲಿ ಆ ತಾಮ್ರದ ನಿವೃತ್ತಿಯೂ, ತುಪ್ಪವಾದ ಕಾಲದಲ್ಲಿ ಸತ್ಯವಾದ ಬೆಣ್ಣೆಯ ನಿವೃತ್ತಿಯೂ, ಮುತ್ತಾದ ಕಾಲದಲ್ಲಿ ಸತ್ಯವಾದ ಜಲದ ನಿವೃತ್ತಿಯು ಸತ್ಯವಾದ ಸ್ಥೂಲ ಘಟವು ಬುದ್ಧಿಯನ್ನು ಹೊಂದಿ, ಸೂಕ್ಷ್ಮರೂಪದಿಂದಿರುವ ಕಾಲದಲ್ಲಿ ಆ ಸ್ಥೂಲ ಘಟದ ನಿವೃತ್ತಿಯೂ ಲೋಕದಲ್ಲಿ ಕಂಡುಬರುವದಲ್ಲವೆ? ಪುನಃ ಆ ತಾಮ್ರಾದಿಗಳಿಗೆ ಸುವರ್ಣಾದಿ ಭಾವವು ತಪ್ಪಿ, ತಾಮ್ರಾದಿ ಭಾವ ಬರುವದನ್ನು ಯಾರು ತಾನೇ ಹೇಳುವರು? ಯಾರೂ ಹೇಳಲಾರರು. ಅದರಂತೆ ಶಿವಯೋಗದಿಂದ ಜೀವನಿಗೆ ಪ್ರಾಪ್ತವಾದ ಶಿವಭಾವವು ತಪ್ಪಿಹೋಗಿ, ಪುನಃ ಜೀವಭಾವವು ಎಂದೂ ಬರುವದಿಲ್ಲಾ. ಜಲದಲ್ಲಿರುವ

ಸೀತಸ್ಯಪ್ರತ್ರಭಾವಂಗತಸ್ಯ, ಜಲಸ್ಯವೋಕ್ತಿಕತ್ವಂಗತಸ್ಯ, ಘಟಸ್ಯಸ್ಥೂಲಸ್ಯಬುದ್ಧಿಂಗತಸ್ಯ ಸೂಕ್ಷ್ಮಭಾವಮಾಪನ್ನಸ್ಯ, ಚ ನ ಯಥಾ ಪೂರ್ವರೂಪತಾ, ತಥಾ ಅಗ್ನಿಸಂಯುಕ್ತ ಸಲಿಲಶೈತ್ಯಸ್ಯ ಶನೈಃಶನೈರ್ವಿನಾಶವತ್ | ಸಮನಾಂತಪಾಶಜಾಲಸ್ಯವಿನಾಶೇ. ಪ್ರತಿಬೋಧತಃ ಶಿವಭಾವಮಾಪನ್ನಸ್ಯ ಸ ಪುನಃ ಪಶುತ್ವಂ | ತತ್ವತ್ರಯವಿನಿರ್ಮುಕ್ತಃ ಶಾಶ್ವತಂ ತ್ವಪಲಂ ಧ್ರುವಂ| ದಿವ್ಯೇನಯೋಗಮಾರ್ಗೇಣದೃಷ್ಟ್ವಾ ಭೂಯೋನಜಾಯತೇ || ಪಾಶಯುಕ್ತೋಭವೇಜ್ಜೀವಃ ಪಾಶಮುಕ್ತೋಭವೇಚ್ಛಿವಃ || ಇತ್ಯುಕ್ತತ್ವಾತ್ | ಸಮನಾಂತಂ ಪಾಶಜಾಲಮುನ್ಮನ್ಯಾಂತೇಪರಃ ಶಿವಃ | ಇತ್ಯುಕ್ತತ್ವಾಚ್ಚ | ಉನ್ಮನೀ ಶಿವವ್ಯಾಪ್ತಿರೂಪಾ ಶಿವಾದ್ವೈತವಿದ್ಯಾ ದ್ವಾದಶಾಂತಾ ಪರಪರ್ಯಾಯಾ | ಉಕ್ತಂಚಸ್ವಚ್ಛಂದೆ | ಸಾರ್ವಜ್ಞ್ಯಾದಿಗುಣಾಯೇರ್ಥಾ ವ್ಯಾಪಕಾನ್ ಭಾವಯೇದ್ಯದಾ | ಶಿವವ್ಯಾಪ್ತಿರ್ಭವತ್ಯೇಷಾ ಚೈತನ್ಯೇಹೇತುರೂಪಿಣೀ || ಉನ್ಮನಾಸಾತುವಿಜ್ಞೇಯಾ | ಇತಿಚ.

ಶೈತ್ಯಗುಣವು ಜಲಕ್ಕೆ ಅಗ್ನಿಸಂಯೋಗವಾದಮೇಲೆ ಮೆಲ್ಲಮೆಲ್ಲನೆ ನಷ್ಟವಾಗಿ ಬಿಡುವಂತೆ,
ಪಶುರೂಪನಾದ ಜೀವನೆಂಬಂಗಕ್ಕೆ ಶಿವಲಿಂಗದ ಸಂಯೋಗವಾದಮೇಲೆ, ಆ ಯೋಗಾಭ್ಯಾಸ
ದಿಂದ ಸಮನಾಂತವಾದ ಪಾಶಜಾಲವೆಲ್ಲ ನಷ್ಟವಾಗಿಬಿಡುವದಲ್ಲದೆ ಶಿವತ್ವಪ್ರಾಪ್ತಿಯಾಗುವ
ದು. ಅಂದಮೇಲೆ ಜೀವನಿಗೆ ಪಶುತ್ವವು ಉಳಿಯುವದಿಲ್ಲ. ಈ ವಿಷಯದಲ್ಲಿ ಪಾಶಗಳಿಂದ
ಕೂಡಿದವನೇ ಜೀವನು ಪಾಶಗಳಿಂದ ಬಿಡಲ್ಪಟ್ಟವನೇ ಶಿವನೆಂಬುವ ಆಗಮವಾಕ್ಯವೂ. ದಿವ್ಯ
ವಾದ ಯೋಗಮಾರ್ಗವೆಂಬ ಶಿವಾದ್ವೈತದೃಷ್ಟಿಯಿಂದ ಧ್ಯಾತೃ ಧ್ಯಾನ ಧ್ಯೇಯಗಳೆಂಬ ತ್ರಿಪು
ಟಿಗಳನ್ನು ಅಡಗಿಸಿ, ಶಾಶ್ವತವಾದ ಶಿವಪದವನ್ನು ಹೊಂದಿ. ಪುನಃ ಹುಟ್ಟುವದಿಲ್ಲವೆಂಬ ಬೇರೆ
ಗ್ರಂಥವೂ ಪ್ರಮಾಣಗಳಾಗಿವೆಯಲ್ಲದೆ ಸಮನಾಂತವಾದ ಪಾಶಗಳ ಸಮೂಹವು. ಉನ್ಮನ್ಯಂತ
ದಲ್ಲಿ ಪರಶಿವಸ್ವರೂಪನಾಗುವನೆಂಬ ವಿಷಯದಲ್ಲಿ "ಸಮನಾಂತಂ ಪಾಶಜಾಲಂ ಉನ್ಮನ್ಯಂತೆ
ಪರಃ ಶಿವಃ" ಎಂಬಾಗಮವಾಕ್ಯವು ಪ್ರಮಾಣವಾಗಿದೆ. ಉನ್ಮನೀಯಂದರೆ ಶಿವಾದ್ವೈತವಿದ್ಯೆ
ಯು ಇದಕ್ಕೆ ಶಿವವ್ಯಾಪ್ತಿಯೆಂತಲೂ, ದ್ವಾದಶಾಂತವೆಂತಲೂ ಪರ್ಯಾಯನಾಮಗಳು. ಈ
ವಿಷಯದಲ್ಲಿ ಸರ್ವಜ್ಞತ್ವಾದಿ ಗುಣಗಳನ್ನು ಯಾವಾಗ ನನ್ನವೆಂದು ಭಾವಿಸುವನೋ ಆ ಭಾವ
ನೆಯೇ ಶಿವವ್ಯಾಪ್ತಿಯೆನಿಸುವದೆಂಬ ಸ್ವಚ್ಛಂದ ಗ್ರಂಥವು ಪ್ರಮಾಣವಾಗಿದೆ. ಈ ಶಿವಾದ್ವೈತ
ಜ್ಞಾನಾವಸ್ಥೆಗೇನೇ ಉನ್ಮನ್ಯವಸ್ಥೆಯೆಂದು ಹೆಸರು. ಈ ವಿಷಯದಲ್ಲಿ ಆ ಶಿವವ್ಯಾಪ್ತಿಯೇ
ಉನ್ಮನಿಯು ಎಂದು ಹೇಳುವರು. ಅದೇ ಸ್ವಚ್ಛಂದವೇ ಪ್ರಮಾಣವು. ಸಮನಾ ಎಂಬುವ ಕಲೆ
ಗಳವರೆಗಿರುವ ಹನ್ನೆರಡು ಪಾಶಗಳ ಹೆಸರನ್ನು ಶ್ರೀ ಶಾಂಕರೀಕಾರನು ತೋರಿಸಿದ್ದಾನೆ ನೋ
ಡಿಕೊಳ್ಳತಕ್ಕದ್ದು. ಈ ಎಲ್ಲಾ ಪಾಶಗಳನ್ನು ನಾಶಮಾಡಲು ಸಮರ್ಥವಾದ ಉಪಾಯವೆಂ
ದರೆ, ಮಂತ್ರದಲ್ಲಿ ಹೇಳಲ್ಪಟ್ಟ ಪ್ರತಿಬೋಧಶಬ್ದವಾಚ್ಯವಾದ ಶಿವಾದ್ವೈತಜ್ಞಾನವು; ಈ ಶಿವಾ

ಅಕಾರಶ್ಚ ಉಕಾರಶ್ಚ ಮಕಾರೋ ಬಿಂದುರೇವಚ | ಅರ್ಧಚಂದ್ರೋನಿರೋಧೀಚನಾದೋನಾದಾಂತಏವಚ || ಶಕ್ತಿಶ್ಚ ವ್ಯಾಪಿನೀಚೈವ ವ್ಯೋಮರೂಪಾತ್ಪನಂತರಂ | ಅಥಾನಾಶ್ರಿತಾಚೈವ ಸಮನಾ ಉನ್ಮನಾತಥಾ ಸಮನಾಂತಃ ಪಾಶಜಾಲ ಮುನ್ಮನ್ಯಂತೆಪರಃಶಿವಃ || ಇತ್ಯುಕ್ತೇಃ ಸ್ವಸ್ವರೂಪಪ್ರಕಾಶ ರೂಪಾತ್ಮಶಕ್ತಿ ಪ್ರತಿರೋಧಕ ಬಾಹ್ಯವಿಷಯಾಕಾರ ದ್ವೈತವೃತ್ತಿ ಪ್ರಾತಿಕೂಲ್ಯಪ್ರಯುಕ್ತಾಂತರ್ಧೇಯಾಭಿಮುಖಾದ್ವೈತಾವಿಚ್ಛಿತ್ತಿ ಚಿತ್ತವೃತ್ತಿರೂಪಧ್ಯಾನ ನಿರ್ಮಥನಾಭ್ಯಾಸ ಪ್ರಾಪ್ತಬೋಧಏವಪ್ರತಿಬೋಧಃ ಪಾಶವಿಚ್ಛೇದನಸಮರ್ಥಃ «ಧ್ಯಾನನಿರ್ಮಥನಾಭ್ಯಾಸಾತ್ಪಾಶಂದಹತಿಪಂಡಿತಃ» ಇತಿಶ್ರುತೇಃ. «ತಸ್ಯಾಭಿಧ್ಯಾನಾದ್ಯೋಜನಾತ್ತತ್ವಭಾವಾತ್. ಭೂಯಸ್ಯಾಂತೆ ವಿಶ್ವಮಾಯಾನಿವೃತ್ತಿಃ» ಇತಿಶ್ರುತೇಶ್ಚ | ಸರ್ವಮೇತತ್ಪರಿತ್ಯಜ್ಯ ಶಿವಏವಶಿವಂಕರಃ | ಧ್ಯೇಯಇತ್ಯಾಹ ಪರಮಾಶ್ರುತಿರಾಥರ್ವಣೀಖಲು || ಇತ್ಯುಕ್ತತ್ವಾಚ್ಚ. ಉಕ್ತಂಚ ರೇಣುಕಭಗ

ದ್ವೈತಜ್ಞಾನಕ್ಕೆ ಪ್ರತಿಬೋಧವೆಂದು ಹೆಸರು ಬರಲಿಕ್ಕೆ ಕಾರಣವೇನಂದರೆ—ತನ್ನ ಸರ್ವಜ್ಞತ್ವಾದಿ ಸ್ವರೂಪ ಪ್ರಕಾಶಕ್ಕೆ ಪ್ರತಿಬಂಧಕಗಳಾದ ಬಾಹ್ಯವಿಷಯಾಕಾರ ಚಿತ್ತವೃತ್ತಿಗಳಿಗೆ ಪ್ರತಿಕೂಲವಾಗಿರುವ ಅಂತರ್ಧ್ಯೇಯಾಭಿಮುಖವಾಗಿರುವ ಚಿತ್ತವೃತ್ತಿಯೆಂಬ ಧ್ಯಾನದ ಅಭ್ಯಾಸದಿಂದ ಆ ಶಿವಾದ್ವೈತಜ್ಞಾನವು ದೃಢವಾಗಿ ಸಾಕ್ಷಾತ್ಕಾರವೆನಿಸುವದು. ಆದಕಾರಣ ಈ ಶಿವಾದ್ವೈತ ಸಾಕ್ಷಾತ್ಕಾರಕ್ಕೆ ಪ್ರತಿಬೋಧವೆಂದು ರೂಢಿಯುಂಟು. ಈ ಪ್ರತಿಬೋಧವೇ ಪಾಶಗಳ ನಾಶ ಮಾಡುವದರಲ್ಲಿ ಸಮರ್ಥವಾಗುತ್ತಿದೆ ಎಂಬುವ ವಿಷಯದಲ್ಲಿ ಧ್ಯಾನಮಥನಾಭ್ಯಾಸದಿಂದ ಪಂಡಿತನು ಪಾಶಗಳನ್ನು ಸುಡುವನು ಎಂಬ ಶ್ರುತಿಯೂ, ಇಷ್ಟಲಿಂಗದ ಯೋಜನೆಯಿಂದಲೂ, ಪ್ರಾಣಲಿಂಗ ಅಭಿಧ್ಯಾನದಿಂದಲೂ, ಭಾವಲಿಂಗದ ಭಾವನೆಯಿಂದ ಎಲ್ಲಾ ಮಾಯೆಗಳ ನಿವೃತ್ತಿಯು ಎಂಬ ಶ್ರುತಿಯೂ, ಮಿಕ್ಕ ದೇವತೆಗಳನ್ನು ಬಿಟ್ಟು ಶಿವನೊಬ್ಬನನ್ನೇ ಧ್ಯಾನಿಸಬೇಕು. ಅವನೇ ಪಾಶಗಳನ್ನು ನಾಶಮಾಡಿ, ಮಂಗಲಪ್ರದ ಮೋಕ್ಷವನ್ನುಂಟುಮಾಡುವನೆಂಬ ಶ್ರುತಿಯೂ, ಇದೇ ಅರ್ಥವನ್ನೇ ಕೊಡುವ ಉಪಬೃಂಹಣವಾಕ್ಯವೂ ಪ್ರಮಾಣಗಳಾಗಿವೆಯಲ್ಲದೆ, ಆತ್ಮನೆಂಬ ಅರಣಿ (ಕಟ್ಟಿಗೆ) ಯು ಅನಂತ ಘನನಾದ ಶಿವನ ಧ್ಯಾನವೆಂಬ ಮಥನದಿಂದುಂಟಾದ ಶಿವಾದ್ವೈತ ಜ್ಞಾನವೆಂಬಗ್ನಿಯಿಂದ, ಜ್ಞಾನಿಯು ಜಗದ್ರೂಪವಾದ ಪಾಶಗಳ ಜಾಲವನ್ನೇ ಸುಡಬೇಕೆಂಬದಾಗಿಯೂ, ಕರ್ಮವೆಂಬ ಬುಡವುಳ್ಳ ಅಜ್ಞಾನ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶಗಳೆಂಬ ಐದು ಫಲಗಳುಳ್ಳ ಸಂಸಾರವೆಂಬ ವಿಷವೃಕ್ಷದ ಛೇದನದಲ್ಲಿ ಆ ಪರಶಿವಭಾವನೆಯೇ ಕೊಡಲಿಯು ಎಂಬದಾಗಿಯೂ, ಅಜ್ಞಾನ ರಾಕ್ಷಸನ ಆವಿರ್ಭಾವಕ್ಕೆ ಕಾರಣವಾಗಿಯೂ, ಆ ಪರಮಾತ್ಮನ ಸ್ವರೂಪ ಪ್ರಕಾಶಕ್ಕೆ ಆಚ್ಛಾದಕವಾಗಿಯೂ ಇರುವ ಸಂಸಾರವೆಂಬ ಕಾರ್ಗತ್ತಲೆಗೆ ಶಿವಧ್ಯಾನವೇ ಚಂಡಮಾರ್ತಂಡನೆಂಬದಾಗಿಯೂ ಇರುವ ಶ್ರೀಮದ್ಭಗವ

ವತ್ಪಾದೈಃ | ಆತ್ಮಾರಣಿಸಮುತ್ಥೇನ ಪ್ರಮೋದಮಥನಾತ್ಸುಧೀಃ | ಜ್ಞಾನಾಗ್ನಿನಾ ದಹೇತ್ಸರ್ವಂ ಪಾಶಜಾಲಂ ಜಗನ್ಮಯಂ|| ಸಂಸಾರವಿಷವೃಕ್ಷಸ್ಯ ಪಂಚಕ್ಲೇಶ ಫಲಾಶಿನಃ ಛೇದನೆ ಕರ್ಮಮೂಲಸ್ಯ ಪರಶುಃ ಶಿವಭಾವನಾ || ಅಜ್ಞಾನರಾಕ್ಷಸೋನ್ಮೇಷ ಕಾರಣಂ ಸಂವೃತಾತ್ಮನಃ | ಶಿವಧ್ಯಾನಂತು ಸಂಸಾರತಮಸ್ಚಂಡಭಾಸ್ಕರಃ || ಇತಿ. ನತು ತತ್ವಮಸ್ಯಾದಿವಾಕ್ಯಜನ್ಯವೃತ್ತ್ಯವಿಷಯತ್ವೇನ ಜ್ಞಾನಂ ಪ್ರತಿಬೋಧಃ ಪ್ರತ್ಯಯಪತ್ಯಗಾತ್ಮಾ | ತಸ್ಯಾಪ್ರಸಿದ್ಧತ್ವಾತ್ | ನಿರ್ವಿಷಯಸ್ಯಜ್ಞಾನತ್ವೆ ಘಟಾದೀನಾಮಪಿತತ್ವಪ್ರಸಂಗಾತ್ | ನಸುಜಡಾನಾಂ ವೃತ್ತೀನಾಂ ಸ್ವಾಭಾವಿಕಪ್ರಕಾಶಾಸತ್ವಾತ್ ತತ್ವಮಸ್ಯಾದಿ ವಾಕ್ಯಜನ್ಯ ಚಿತ್ತವೃತ್ತೇರಪಿಜಡತ್ವಾದ ಜ್ಞಾನನಿವರ್ತಕತ್ವಾಭಾವಾತ್ | ಕಥಮಮೃತತ್ವಂವಿಂದತೆ ಇತಿಚೇತ್ತ್ವಂ ನಜಾನಾಸಿ ಶಿವಾದ್ವೈತ ಸಿದ್ಧಾಂತರಹಸ್ಯಂ | ಕೋಹಮಿತ್ಯಬ್ರವೀದ್ದೇಹಿ ಗುರುಂ ಪರಮಕಾರಣಂ | ಇತಿ ಶರಣಾಗತಶಿಷ್ಯೇಣ ಪೃಷ್ಟೊ

ತ್ಪಾದ ರೇಣುಕ ಶಿವಾಚಾರ್ಯರ ವಾಕ್ಯಗಳೂ ಕೂಡಾ ಪ್ರಮಾಣಭೂತಗಳಾಗಿವೆ. ಆದ್ದರಿಂದ ಪ್ರತಿಬೋಧಶಬ್ದಕ್ಕೆ ನಾವು ಮಾಡಿದ ಅರ್ಥವೇ ಶ್ರುತಿ ಸ್ಮೃತಿ ಪುರಾಣ ಶಿವಾಗಮಾನುಕೂಲವಾಗಿರುವದು. ಬೇರೆ ಭಾಷ್ಯಕಾರರು ಮಾಡುವ ಅರ್ಥವು ಶ್ರುತ್ಯಾದಿಗಳಿಗೆ ವಿರುದ್ಧವಾಗಿರುವದು. ಅವರು ಮಾಡುವದು ಹೇಗಂದರೆ–ಬೋಧಂಬೋಧಂಪ್ರತಿ ವರ್ತತೇಯಃ ಸಪ್ರತಿಬೋಧಃ| ಅಂದರೆ ಸರ್ವ ಅಂತಃಕರಣದ, ಇದು ಘಟವು ಇದು ಮಠವು ಎಂಬುವ ವೃತ್ತಿರೂಪಗಳಾದ ಪ್ರತ್ಯಯಗಳಲ್ಲಿ ಅನುಗತವಾದ ಯಾವ ವೃತ್ತಿಗೂ ವಿಷಯವಾಗದಿದ್ದ ಪ್ರತ್ಯಗಾತ್ಮ ಅಪರೋಕ್ಷ ಬ್ರಹ್ಮವೇ ಪ್ರತಿಬೋಧವೆಂದು ಹೇಳುವರು. ಶಾಂಕರೀಕಾರನು "ಪ್ರತಿಕೂಲೋಬೋಧಃ" ಅಂದರೆ ದ್ವೈತಜ್ಞಾನಗಳಿಗೆ ಪ್ರತಿಕೂಲವಾದ ಶಿವಾದ್ವೈತ ಜ್ಞಾನವೇ ಪ್ರತಿಬೋಧವೆಂದು ಹೇಳಿದನು. ಇನ್ನು ತಾನು ಮಾಡಿದ ಅರ್ಥವೇ ಸಂಗತವಾದದ್ದೆಂದು ಸಿದ್ಧಾಂತಮಾಡುವನು. ಹೇಗಂದರೆ–ಎಲೈ ಬ್ರಹ್ಮಾದ್ವೈತಿಯೆ! ಆ ಪ್ರತ್ಯಗ್ಬೋಧರೂಪಜ್ಞಾನವು ಸವಿಷಯವೋ? ನಿರ್ವಿಷಯವೋ? ಸವಿಷಯವೆಂದರೆ ನಿನ್ನ ಜ್ಞಾನರೂಪಬ್ರಹ್ಮವು ಜಡವಾಗಬೇಕಾಗುವದು. ನಿರ್ವಿಷಯವೆಂದರೆ–ಘಟ ಮೊದಲಾದ ಪದಾರ್ಥಗಳೂ ಕೂಡ ಜ್ಞಾನಗಳಾದಾವು. ಆದ್ದರಿಂದ ನಿರ್ವಿಷಯವಾದ ಜ್ಞಾನರೂಪ ಬ್ರಹ್ಮವು ಲೋಕದಲ್ಲಿ ಅಪ್ರಸಿದ್ಧವು. ಹಾಗಾದರೆ ಜಡಗಳಾದ ಚಿತ್ತವೃತ್ತಿಗಳಂತೂ ಸ್ವಸ್ವರೂಪ ಬ್ರಹ್ಮ ಪ್ರಕಾಶ ಸ್ವರೂಪಗಳೇ ಅಲ್ಲವು. ಅವುಗಳಿಗೆ ಸ್ವಾಭಾವಿಕ ಪ್ರಕಾಶವು ಸಂಭವಿಸುವದಿಲ್ಲಾ. ತತ್ವಮಸ್ಯಾದಿ ವಾಕ್ಯಗಳಿಂದುಂಟಾದ ನಾನು ಬ್ರಹ್ಮನು ಎಂಬ ವೃತ್ತಿಯೂ ಕೂಡ ಜಡವಾಗಿರುವದರಿಂದದಕ್ಕೆ ಅಜ್ಞಾನವನ್ನು ನಾಶಮಾಡಲು ಸಾಮರ್ಥ್ಯವೂ ಇಲ್ಲಾ. ಆದುದರಿಂದ ಪ್ರತಿಬೋಧವುಳ್ಳವನಿಗೆ ಮುಕ್ತಿಯಾಗುವದೆನ್ನುವ ಮಾತು ಹೇಗೆ ಸಂಗತವಾಗುತ್ತದೆ. ಅಂದರೆ ಎಲೈ ಬ್ರಹ್ಮಾದ್ವೈತಿಯೆ! ನಿನಗೆ ಶಿವಾದ್ವೈತ ಸಿದ್ಧಾಂತದ ರಹಸ್ಯಜ್ಞಾ

LIBRARY
Jangamawadi Math, Varanasi

ಗುರುಃ ತಸ್ಯ ಸ್ಥೂಲಸೂಕ್ಷ್ಮಕಾರಣಾ ಪರಪರ್ಯಾಯ ತ್ಯಾಗಾಂಗ ಭೋಗಾಂಗ ಯೋಗಾಂಗೇಷು ಕ್ರಿಯಾ ಮನು ವೇಧಾದೀಕ್ಷಾತ್ರಯೇಣ | ಇಷ್ಟಾದಿಲಿಂಗತ್ರಯಂ ಸಂಯೋಜ್ಯ| ತತ್ತ್ವಮಸೀತ್ಯಾಹ ಸತ್ಯಾರ್ಥಂ ಕರುಣಾಸಿಧಿಃ|| ತತಶ್ಚ ಶಿಷ್ಯಸ್ತದ್ವಿಚಾರಸ್ವಾನುಭವಾಭ್ಯಾಂ. ಸರ್ವಾತ್ಮಕ ಬ್ರಹ್ಮೈವಾಹಮಸ್ಮೀತಿ ನಿಶ್ಚಿತ್ಯ ಷಡಂಗಸ್ಥಲ ಯೋಗಾಭ್ಯಾಸೇ ಪ್ರವರ್ತತೆ | ಅಭ್ಯಾಸೆ ದಾರ್ಢ್ಯೇಚ ಸದಾಶಿವವತ್ | ತಸ್ಯ ಸರ್ವಾತ್ಮಕ ಶಿವಏವಾಹಮಿತಿ ಚಿಚ್ಛಕ್ತಿರಾವಿರ್ಭವತಿ | ತದಾ ವಿಗಲಿತ ಚಿತಿಶಕ್ತಿಸಂಕೋಚಾಖ್ಯಾತ್ಯಾತ್ಮಕಮಲತ್ವಾತ್ | ಚಿತ್ತಶಕ್ತಿ ವಿಕಾಸರೂಪಾಪರೋಕ್ಷ ಚಿತಿ ಶಕ್ತೇರ್ಜಡತ್ವಾಭಾವಾತ್. ಬಂಧನಿವರ್ತಕತ್ವಾತ್ ತಾದೃಶ ಶಕ್ತಿರೂಪ ಪ್ರತಿಬೋಧವಾನ್ ಪ್ರಾಣಲಿಂಗೀ ತುರ್ಯಾದ್ಯವಸ್ಥಾಪನ್ನಃ ಸ್ವತಂತ್ರಂವಿಂದತ ಏವಾಮೃತತ್ವಂ. ಉಕ್ತಂಚಶಕ್ತಿಸೂತ್ರೆ "ಚಿತಿರೇವಚೇತನಪದಾದವರೂಢಾಚ್ಛೈತ್ಯಸಂಕೋಚಿನೀಚಿತ್ತಂ" "ತತ್ಪರಿಜ್ಞಾನೇಚ

ನವಿಲ್ಲದುದರಿಂದ ಈಪ್ರಕಾರವಾಗಿ ಪ್ರಶ್ನೆ ಮಾಡುವಿಯಲ್ಲವೆ? ಶರಣಾಗತನಾದ ಶಿಷ್ಯನು ಗುರುವಿನ ಹತ್ತರ ಬಂದು ಭೋ ಗುರುಮೂರ್ತಿಯೆ! ನಾನು ಯಾರು ಎಂಬುವದನ್ನು ತಿಳಿಸು. ಕೃಪೆಯಾಗಬೇಕೆಂದು ಕೇಳಲಾಗಿ, ಗುರುಮೂರ್ತಿಯು ಶಿಷ್ಯನ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಲ್ಲಿರುವ ಮಲಗಳನ್ನು ಮೂರು ದೀಕ್ಷೆಗಳಿಂದ ಕಳೆದು, ಆ ಮೂರು ಶರೀರಗಳಲ್ಲಿ ಇಷ್ಟಾದಿಲಿಂಗಗಳ ಯೋಜನೆಯನ್ನು ಮಾಡಿ, ಎಲೈ ಶಿಷ್ಯನೆ! ನೀನು ಆ ಲಿಂಗಸ್ವರೂಪನೇ ಇರುವಿ ಎಂದು ಆ ಕರುಣಾಸಿಧಿಯಾದ ಗುರುಮೂರ್ತಿಯು ಅಪ್ಪಣೆ ಮಾಡಲು ಶಿಷ್ಯನು ಆ ಲಿಂಗದ ವಿಚಾರ ಮತ್ತು ಸ್ವಾನುಭವಗಳಿಂದ ಆ ಸರ್ವರೂಪನಾದ ಪರಶಿವನೇ ನಾನೆಂದು ನಿಶ್ಚಯಿಸಿ ಷಟ್‌ಸ್ಥಲ ಯೋಗಾಭ್ಯಾಸದಲ್ಲಿ ಪ್ರವರ್ತಿಸುವನು. ಆ ಅಭ್ಯಾಸವು ದೃಢವಾಗಲು, ಶಿಷ್ಯನಿಗೆ ಚಿಚ್ಛಕ್ತಿರೂಪವಾದ ಶಿವನೇ ನಾನೆಂಬುವ ಜ್ಞಾನವಾಗುತ್ತದೆ

ಅನಂತರದಲ್ಲಿ ಚಿತಿಶಕ್ತಿಸಂಕೋಚರೂಪವಾದ ಅಖ್ಯಾತಿಯು (ಅಜ್ಞಾನದ) ನಾಶವಾಗಿ ಚಿತ್ತಶಕ್ತಿಯ ವಿಕಾಸರೂಪವಾದ ಅಪರೋಕ್ಷ ಸ್ವರೂಪ ಚಿಚ್ಛಕ್ತಿಯುಂಟಾಗುವದು. ಈ ಚಿಚ್ಛಕ್ತಿಯು ಜಡವಾಗದಿರುವದರಿಂದ ಬಂಧದ ನಾಶವನ್ನುಂಟುಮಾಡಲು ಸಮರ್ಥವಾಗುತ್ತದೆ. ಈ ಚಿಚ್ಛಕ್ತಿಯೆಂಬ ಪ್ರತಿಬೋಧವುಳ್ಳ ಪ್ರಾಣಲಿಂಗಿಯು ತುರ್ಯ ಮೊದಲಾದ ಅವಸ್ಥೆಯುಳ್ಳವನಾಗಿಯೂ ಸ್ವತಂತ್ರನಾಗಿಯೂ ಇರುವದರಿಂದ ಅಮೃತತ್ವವನ್ನು (ಮೋಕ್ಷವನ್ನು) ಹೊಂದುವನು. ಶಿವನ ಚಿಚ್ಛಕ್ತಿಯೇ ಚಿತ್ತರೂಪವಾಗಿದೆಯೆಂಬ ವಿಷಯದಲ್ಲಿಯೂ, ಆ ಚಿತ್ತವು ಪುನಃ ಚಿಚ್ಛಕ್ತಿರೂಪವಾಗುತ್ತದೆಂಬ ವಿಷಯದಲ್ಲಿಯೂ, ಶಕ್ತಿ ಸೂತ್ರಗಳೆರಡನ್ನೂ ಶಾಂಕರೀಕಾರನು ಪ್ರಮಾಣಗಳನ್ನಾಗಿ ತೋರಿಸಿರುವನು. ಅವುಗಳ ಅರ್ಥವೇನಂದರೆ—ಆ ಸರ್ವವನ್ನೂ ತನ್ನಲ್ಲಿರಿಸಿಕೊಂಡ ಚಿತಿಶಕ್ತಿ (ಚಿಚ್ಛಕ್ತಿ)ಯು ಆ ಚೇತನರೂಪನಾದ ಶಿವನ ಪದದಿಂದಿಳಿಯುತ್ತ ಕ್ರಮೇಣ

ಚಿತ್ತಮೇವಾಂತರ್ಮುಖೀಭಾವೇನ ಚೇತನಪದಾಧ್ಯಾರೋಹಾಚ್ಚಿತಿಃ" ಇತಿ ಉಕ್ತಂಚ ಪದವಾಕ್ಯಪ್ರಮಾಣಜ್ಞೇನ ಮರಿ ತೋಂಟದಾರ್ಯೇಣಾಪಿ | ಚಿತಿಸಂಕೋಚಚಿತ್ತವಿಶಿಷ್ಟೋಜೀವ ಇತಿ. ವಿಷಯವಾಸನಾವಿಶಿಷ್ಟತ್ವಾಚ್ಚಿತ್ತಸ್ಯ ತದ್ವಿಷಯ ನಿಶ್ಚಯಾಭಿಮಾನಸಂಕಲ್ಪ ವಿಕಲ್ಪಾದಿ ವೃತ್ತಿರೂಪವ್ಯಾಪಾರವತ್ವಾತ್. ತದ್ವಿಶಿಷ್ಟಸ್ಯಬಂಧಃ ಯದಾತು ತಚ್ಚಿತ್ತಂ ಪರಿತ್ಯಕ್ತ ಬಹಿರ್ಮುಖೀಭಾವಂಸದಂತರ್ಮುಖೀಭಾವೇನಾರೂಢ ಶಿವಪದಂಭವತಿ. ಮಧ್ಯಭೂತಸುಷುಮ್ನಾಮಾರ್ಗೇಣ ತತ್ತತ್ತತ್ವಾತ್ಮಕಾಚಾರಾದಿ ಲಿಂಗಗ್ರಂಥೀನ್ನಿಭಿದ್ಯ, ಸೋಪಾನಾಕ್ರಮಣಕ್ರಮೇಣಾಕ್ರಾಂತ ತತ್ತದೂರ್ಧ್ವಲಿಂಗಂ ಸತ್ ಚಿಚ್ಛಕ್ತಿರೂಪಂ ಭವತಿ. ತದಾಯಂ ಜೀವೋ ಜೀವಭಾವಂಪರಿತ್ಯಜ್ಯ, ಪರಶಿವಮಹಾಲಿಂಗ ಸಮರಸೋಭವತಿ, ಜೀವಭಾವಸ್ಯ ಚಿತ್ತಹೇತುಕತ್ವಾತ್ ಚಿತ್ತಭಾವಸ್ಯಸ್ಯಚ ಚಿಚ್ಛಕ್ತಿಸಂಕೋಚನಿಮಿತ್ತಕತ್ವಾತ್ ಸಾಕ್ಷಾತ್ಕೃತ ಸ್ವಸ್ವರೂಪ ಮಹಾರುದ್ರವಿದ್ರಾವಿತ ನಿಖಿಲಕ್ಷ್ನ

ನೀಲಪೀತಾದಿ ವಿಷಯಗಳನ್ನು ಹೊಂದಿ ಸಂಕೋಚ ಸ್ಥಿತಿಯಿಂದ ಚಿತ್ತರೂಪವಾಗಿದೆ. ಆ ಸರ್ವಾತ್ಮಕ ಶಿವನೇ ನಾನೆಂಬುವ ಜ್ಞಾನವು ದೃಢವಾಗಲು ಚಿತ್ತವು ಅಂತರ್ಮುಖವಾಗಿ ಅಭ್ಯಾಸಕ್ರಮದಿಂದ ಚೇತನ ರೂಪನಾದ ಶಿವಪದವನ್ನು ಹತ್ತಲು ಚಿತಿಶಕ್ತಿರೂಪವೇ ಆಗುತ್ತದೆಂದು ಆ ಸೂತ್ರಗಳಭಿಪ್ರಾಯವು. ವಟ್ಟನಮೇಲೆ ಚಿತ್ತಶಕ್ತಿಯಿಂದ ಕೂಡಿದವನು ಜೀವನು. ಚಿತಿಶಕ್ತಿಯಿಂದ ವಿಶಿಷ್ಟನು ಶಿವನು. ಇವರುಗಳಿಗೆ ಅದ್ವೈತಮತವನ್ನು ಹೇಳುವ ಮತವೇ ಶಿವಾದ್ವೈತಮತವು. ಚಿತ್ತಶಕ್ತಿಯ ವಿಕಾಸವೆಂದರೆ— ತನ್ನ ಸ್ಥೂಲಾವಸ್ಥೆಯನ್ನು ಬಿಟ್ಟು ಸೂಕ್ಷ್ಮವಾಗುವಿಕೆಯು. ಶಿವಯೋಗಾಭ್ಯಾಸದಿಂದ ಚಿತ್ತವು ಸೂಕ್ಷ್ಮ (ಶಿವಾವಸ್ಥೆಯಲ್ಲಿರುವ ಚಿಚ್ಛಕ್ತಿರೂಪ) ವಾಗಲಾಗಿ ಜೀವನು ಶಿವನಾಗುವನು. ಈ ಅದ್ವೈತವನ್ನು ಬೋಧಿಸತಕ್ಕವುಗಳೇ ತತ್ವಮಸ್ಯಾದಿ ವಾಕ್ಯಗಳು. ನಮ್ಮ ಶಿವಾದ್ವೈತ ಮತದಲ್ಲಿ ಮಹಾ ವಾಕ್ಯಗಳಿಗೆ ಲಕ್ಷಣಾರ್ಥವನ್ನು ಹೇಳುವದಿಲ್ಲ. ಪರಂತು ಮುಕ್ತಿಯಲ್ಲಿ ಅಭೇದವು ಸಂಗತವಾಗುತ್ತದಾದಕಾರಣ ಆ ಕಾಲದ ಅಬೇಧವನ್ನು ಮಹಾ ವಾಕ್ಯವು ಹೇಳುತ್ತದೆ. ಪ್ರತ್ಯಕ್ಷಾದಿ ಪ್ರಮಾಣಗಳಿಂದ ಜೀವ ಶಿವರುಗಳ ಅಭೇದವು ವಿರುದ್ಧವಾಗುತ್ತದೆ. ಆದಕಾರಣ ಜೀವದಶೆಯಲ್ಲಿ ಭೇದವನ್ನು ಹೇಳುತ್ತೇವೆಯಾದಕಾರಣ, ಭೇದ ಶ್ರುತಿಗಳಿಗೆ ವಿರೋಧವಿಲ್ಲ. ಒಳ್ಳೇದು ಶಿವಾದ್ವೈತಿಯೇ! ಚಿತಿಶಕ್ತಿಸಂಕೋಚವಿಶಿಷ್ಟನೇ ಜೀವನೆನ್ನುವದು ಯಾರ ಮತವು? ನಿಮ್ಮ ಶಿವಾದ್ವೈತ ಮತದಲ್ಲಿ ಯಾವ ಪೂರ್ವಿಕರು ನಿನ್ನಂತೆ ಹೇಳಿರುವರು? ಅಂದರೆ ಎಲೈ ಬ್ರಹ್ಮಾದ್ವೈತಿಯೆ! ನಮ್ಮ ಮತದಲ್ಲಿ ಆಚಾರ್ಯರ ಅಭಿಪ್ರಾಯವೂ ಇರುತ್ತದೆ. ಇಲ್ಲದಿದ್ದರೆ ಶಿವಾದ್ವೈತವೇ ಸಂಭವಿಸಲಾರದು. ಇಗೋ ನೋಡು. ಮರಿತೋಂಟದಾರ್ಯರೆಂಬ ಉದ್ದಾಮ ಪಂಡಿತರೂ ಕೂಡ "ಚಿತಿಶಕ್ತಿಸಂಕೋಚ ಚಿತ್ತವಿಶಿಷ್ಟೋಜೀವಃ" ಎಂದು ಹೇಳಿರುವರು.

ದ್ರುಪಾಶರಾಶೇಃ ಭರ್ಗರುದ್ರಸ್ಯ ಪರಮಮಾಹೇಶ್ವರಸ್ಯ ಚಿಚ್ಛಕ್ತಿವಿಶಿಷ್ಟಸ್ಯ ಜೀವನ್ಮುಕ್ತಸ್ಯ ಸ್ವಶಕ್ತಿಸಂಕೋಚಕಲಾಯಾಮಪಿ ವಿಲೀನತ್ವಾತ್ ಕಥಮಸ್ಯಜೀವತ್ವಂ ಪುನಃ ಪ್ರತ್ಯವತಿಷ್ಠತೇ, ನಚಾಂತಃಕರಣವೃತ್ತೀನಾಮನಿತ್ಯತ್ವಾತ್ ವೃತ್ತೇಃ ಸ್ವವಿರೋಧಿವೃತ್ತಿ ಜನನಪರ್ಯಂತಂ ಸ್ಥಾಯಿತ್ವಾಭ್ಯುಪಗಮಾಚ್ಚ ಘಟಾದಿವೃತ್ತೇಶ್ಚ ನಿತ್ಯತ್ವೇ ಚಕ್ಷುಸ್ಸಂಯೋಗಾದೀನಾಂ ವೈಯರ್ಥ್ಯಾಪಾತಾಚ್ಚ | ಘಟಂ ದೃಷ್ಟ್ವಾ ಪಟಂಪಶ್ಯತಃ ಪುರುಷಸ್ಯ | ಪಟಜ್ಞಾನಕಾಲೇ ಘಟಜ್ಞಾನಪ್ರಸಂಗಾಚ್ಚಾನಿತ್ಯತ್ವಂ ವಕ್ತವ್ಯಂ. ತಥಾಚ ವೃತ್ತಿತ್ವ ವ್ಯಾಪ್ಯಬ್ರಹ್ಮಾಕಾರ ವೃತ್ತಿತ್ವಾವಚ್ಛಿನ್ನಸ್ಯಾಪ್ಯನಿತ್ಯತ್ವಾತ್ ಸಚ್ಚಿದಾನಂದಾ ದ್ವಿತೀಯಬ್ರಹ್ಮಾ ಹಮಸ್ಮೀತ್ಯಾಕಾರಕ ಬುದ್ಧಿಶಕ್ತಿ ವಿಶಿಷ್ಟತ್ವೇ ಬ್ರಹ್ಮಭೂತಸ್ಯಾಪ್ಯನಿತ್ಯತ್ವಂ ಸ್ಯಾತ್. ಸ್ಯಾಚ್ಚ ಭವದಭಿಮತ ಶಿವಾದ್ವೈತಸ್ಯಾಪಿ ಹಾನಿಸ್ತಸ್ಮಾದ್ಭವತಾಪಿ ತಾದೃಶವೃತ್ತೇರನಿತ್ಯತ್ವಂ ವಾಚ್ಯಮಿತಿಚೇನ್ನ | ಘಟಾದ್ಯಂತಃಕರಣವೃತ್ತೀನಾಂ ನಿತ್ಯತ್ವಾತ್ ಸ್ವವಿರೋಧಿ-

---

ಚಿತ್ತವು ವಿಷಯವಾಸನೆಯಿಂ ಕೂಡಿದುದರಿಂದ ಆಯಾಯ ವಿಷಯಗಳ ಸಂಕಲ್ಪ, ವಿಕಲ್ಪ, ನಿಶ್ಚಯ, ಅಭಿಮಾನ ರೂಪಗಳಾದ ವ್ಯಾಪಾರಗಳುಳ್ಳದ್ದಾಗುವದು. ಇಂಥ ವ್ಯಾಪಾರಗಳುಳ್ಳ ಚಿತ್ತದಿಂದ ಕೂಡಿದವನಾದಕಾರಣ, ಜೀವನಿಗೆ ಬಂಧವು. ಚಿತ್ತವು ಬಾಹ್ಯ ವಿಷಯಗಳ ಕಡೆಗೆ ಹೋಗುವ ತನ್ನ ಸ್ವಭಾವವನ್ನು ಬಿಟ್ಟು, ಅಂತರ್ಮುಖವಾಗಿ ಶಿವಪದಾರೋಹಣಮಾಡಲು ಪಕ್ರಮಿಸುತ್ತದೆ ಅಂದರೆ ಚಿತ್ತವನ್ನು ಒಳ್ಳೇ ಪ್ರಯತ್ನಪೂರ್ವಕವಾಗಿ ಸುಷುಮ್ನಾ ಮಾರ್ಗದಲ್ಲಿ ನಿಲ್ಲಿಸಿ ಆಮೇಲೆ ಆಚಾರ ಲಿಂಗದಲ್ಲಿರುವ ಆರು ಲಿಂಗಗಳಿಗೆ ಪೃಥಿವೀತತ್ವದೊಳಗಣ ಆರು ಭೂತಗಳ ಅಂಶಗಳನ್ನು ಸಮರಸಗೊಳಿಸಿ (ಅರ್ಪಣಮಾಡಿ) ಇವರಂತೆ ಮುಂದಣ ಐದು ಲಿಂಗಗಳಲ್ಲಿರುವ ಆರು ಲಿಂಗಗಳಿಗೆ ಜಲ ಮೊದಲಾದ ಐದು ಪದಾರ್ಥಗಳಲ್ಲಿರುವ ಆರು ಭಾಗಗಳನ್ನು ಅರ್ಪಣೆಮಾಡಿ ಆಮೇಲೆ ಉಳಿದ ಶುದ್ಧಗಳಾದ ಆರು ಪೃಥಿವೀಮೊದಲಾದ ತತ್ವಗಳೆಂಬ ಆಚಾರಾದಿ ಲಿಂಗ ಗ್ರಂಥಿಗಳನ್ನು ಭೇದಿಸಿ (ಅವುಗಳು ನಾನು ನನ್ನವೆಂಬಭಿಮಾನವನ್ನು ಬಿಟ್ಟು) ಅಂದರೆ ಮೊದಲು ನಿವೃತ್ತಿಕಲೆಯುಳ್ಳವನಾಗಲು ಸರ್ವಜ್ಞ ಬ್ರಹ್ಮನಾಗುವನು. ಆಗ ಆಚಾರಲಿಂಗದ ಪೂಜಕನಾಗಿರುವನು. ಇವನೇ ಭಕ್ತನು. ಈ ಭಕ್ತನೇ ಆಚಾರಲಿಂಗಪೂಜೆಗೆ ಅಧಿಕಾರಿಯು. ಈ ವಿಷಯವು ಮುಂದೆ ಮೋಕ್ಷಕಾಂಡದ ಷಡಂಗ ಯೋಗವಿಧಿಯನ್ನು ಹೇಳುವ ಕಾಲಕ್ಕೆ ವಿಸ್ತಾರವಾಗಿ ತಿಳಿಸುವೆವೆಂದು ಹೇಳಿರುವರು. ಅರ್ಥಾತ್ ಚಿತ್ತವು ಸುಷುಮ್ನಾ ಮಾರ್ಗದಿಂದ ಪ್ರಯಾಣಮಾಡುತ್ತ ಮಧ್ಯದಲ್ಲಿ ಬರುವ ಆಚಾರಲಿಂಗದ ಪೃಥಿವೀಯೆಂಬುವ ಕಗ್ಗಂಟನ್ನೂ, ಗುರುಲಿಂಗದ ಜಲವೆಂಬ ಗ್ರಂಥಿಯನ್ನೂ, ಶಿವಲಿಂಗದ ತೇಜಸ್ಸೆಂಬ ಗ್ರಂಥಿಯನ್ನೂ, ಚರಲಿಂಗದ ವಾಯು ಎಂಬ ಗ್ರಂಥಿಯನ್ನೂ, ಪ್ರಸಾದಲಿಂಗದ ಆಕಾಶವೆಂಬ ಗ್ರಂಥಿಯನ್ನೂ, ಮಹಾಲಿಂಗದ ಆತ್ಮರೂಪವಾದ ಚಿತ್ತವೆಂಬ ಗ್ರಂಥಿಯನ್ನೂ ಭೇದಿಸಿ, ದಾಂಟಿ, ಮೇಲಕ್ಕೇರಿ, ಇಷ್ಟಾದಿ

ವೃತ್ತ್ಯುತ್ಪತ್ತಿಕಾಲೆ ಸ್ವಸ್ಯಾಃ ಸಂಕುಚಿತತ್ವಾತ್ ಪಟವೃತ್ತ್ಯುತ್ಪತ್ತಿಕಾಲೇ ಘಟವೃತ್ತ್ಯಾವರಣನಾಶಾಭಾವಾತ್ ತನ್ನಾಶಕೇಂದ್ರಿಯವೃತ್ತ್ಯಭಾವಾತ್ ಸತತಕಾಲೆ ಘಟಜ್ಞಾನಪ್ರಸಂಗಃ | ಇಂದ್ರಿಯಸಂಯೋಗಾದೀನಾಮಪ್ಯಾವರಣಾಭಿಭವಾರ್ಥತ್ವಾಚ್ಚ ನಚಾನರ್ಥಕ್ಯಂ | ತೇಷಾಂ ಬ್ರಹ್ಮಣ್ಯಜ್ಞಾನನಾಶಾಯ ವೃತ್ತಿವ್ಯಾಪ್ತಿರಪೇಕ್ಷಿತಾ | ಇತ್ಯುಕ್ತ ಪ್ರಕಾರೇಣ ಭವತಾ ಯಥಾ ಬ್ರಹ್ಮಗತಾಜ್ಞಾನನಾಶಾಯ ವೃತ್ತಿವ್ಯಾಪ್ತಿರಪೇಕ್ಷ್ಯತೆ ತಥೈವ ಘಟಪ್ರಕಾಶಾವರಣನಾಶಾಯೈವಾಪೇಕ್ಷ್ಯತಾ ಮಿಂದ್ರಿಯವೃತ್ತಿರನ್ಯಥಾ ತತ್ಸ್ಮೃತೇರನುಪಪತ್ತಿಃ ಸ್ಯಾತ್ ಪೂರ್ವಾನುಭವಸ್ಯ ನಷ್ಟತ್ವಾತ್. ನಚಸಂಸ್ಕಾರೇಣೈವ ಸಾ ಉಪಪದ್ಯತ ಇತಿವಾಚ್ಯಂ

ಲಿಂಗಗಳ ಮೂರು ಶರೀರಗಳೆಂಬ ಗ್ರಂಥಿಗಳನ್ನು ಕೂಡಾ ಕತ್ತರಿಸಿ, ಸರ್ವಕ್ಕೂ ಊರ್ಧ್ವದೇಶದಲ್ಲಿರುವ ಊರ್ಧ್ವಲಿಂಗಾಯನಮಃ | ಎಂಬ ಶ್ರುತಿ ಪ್ರತಿಪಾದಕವಾದ ಭಾವಲಿಂಗದ ಊರ್ಧ್ವಾಯನಮಃ | ಎಂಬ ಶ್ರುತಿಯಿಂದ ಹೇಳಲ್ಪಡುವ ಚಿಚ್ಛಕ್ತಿ ಸ್ಥಾನವನ್ನು ಹೊಂದಿದಮೇಲೆ ಚಿಚ್ಛಕ್ತಿರೂಪವಾಗಿ ಬಿಡುವದು. ಆಗ ಈ ಜೀವನು ಜೀವಭಾವವನ್ನು ಬಿಟ್ಟು ಪರಶಿವ ಮಹಾಲಿಂಗದಲ್ಲಿ ಸಮರಸವನ್ನು ಹೊಂದುವನು. ಒಬ್ಬಾನೊಬ್ಬ ಮನುಷ್ಯನು ಆರು ಅಂತಸ್ತಿನಮೇಲ ಮಾಡಿಯನ್ನು ಹತ್ತುವದಕ್ಕೆ ಆ ಮಾಡೆಯ ಅಧಿಕಾರಿಯಿಂದ ಹುಕುಂ ಪಡೆದು, ಒಂದೊಂದು ಅಂತಸ್ತಿನ ಪಾವುಟಣಿಗೆಗಳನ್ನು ದಾಟ ಸಮೀಪಕ್ಕೆ ಹೋಗಿ ಅಲ್ಲಲ್ಲಿರುವ ಅಧಿಕಾರಿಯನ್ನೂ ವಿಚಿತ್ರ ಸಾಮಾನುಗಳನ್ನೂ ನೋಡಿ ಆನಂದಪಡುತ್ತಾ ಆರು ಅಂತಸ್ತಿನ ಮೇಲಿರುವ ಮೇಲು ಮಾಡೆಯೊಳಗೆ ಹೋಗಿ ಅಲ್ಲಿರುವ ದೊಡ್ಡದಾದ, ಸಣ್ಣದಾದ, ಅತಿ ಸಣ್ಣದಾದ ಮೂರು ಮನೆಯೊಳಗೆ ಹೊಕ್ಕು, ಅತಿ ಸಣ್ಣಗಿರುವ ಮನೆಯಲ್ಲಿ ವಾಸಮಾಡಿರುವ ಮಹಾರಾಜನನ್ನು ನೋಡಿ, ಅಲ್ಲಿರುವ ವಿಚಿತ್ರ ಪದಾರ್ಥಗಳಿಂದ ಅತ್ಯಾನಂದವನ್ನು ಹೊಂದುವಂತೆ, ಜೀವನಿಂದ ಕೂಡಿದ ಚಿತ್ತವು ಸುಷುಮ್ನಾ ಮಾರ್ಗದಿಂದ ಆರು ಚಕ್ರಗಳನ್ನು ದಾಟ, ಮೇಲು ಮಾಡಿಯಂತಿರುವ ಉತ್ತಮಾಂಗದಲ್ಲಿರುವ ಮೂರು ಸ್ಥಾನಗಳಲ್ಲಿರುವ ಮೂರು ಲಿಂಗಗಳಿಗೆ ತನ್ನ ಸ್ಥೂಲ ಸೂಕ್ಷ್ಮ ಕಾರಣ ಶರೀರಗಳೆಂಬ ಆವರಣಗಳನ್ನೂ ಕೂಡಾ ಭೇದಿಸಿ ದಾಟಹೋದಮೇಲೆ ಭಾವಲಿಂಗದ ಚಿತ್ತಸ್ಥಾನವು ಸಿಗುವದು. (ಚಿತ್ತವು ಸದಾಶಿವನ ಅಂತಃಕರಣ ಸ್ವರೂಪವಾಗುವದು.) ಅನಂತರದಲ್ಲಿ "ಅಸ್ಮಿನ್‌ಪ್ರಕಾಶೇನಂದಾಮಿ" ಎಂಬ ಶ್ರುತಿಯಂತೆ ನಿತ್ಯಾನಂದ ಭೋಗಪರವಶನಾಗಿ ಬಿಡುವನು. ಆಗ ಜೀವಭಾವವು ತೊಲಗಿಹೋಗಿಬಿಡುವದು. ಯಾಕೆಂದರೆ ಜೀವಭಾವಕ್ಕೆ ಚಿತ್ತವೇ ಕಾರಣವು. ಆ ಚಿತ್ತಕ್ಕೆ ಚಿತಿಶಕ್ತಿ ಸಂಕೋಚವು ಕಾರಣವು. ಈ ಚಿಚ್ಛಕ್ತಿ ಸಂಕೋಚವೆಂಬ ಅಜ್ಞಾನ ಅಥವಾ ಅಖ್ಯಾತಿ ಎಂಬ ಕಳೆಯು ಕೂಡಾ ನಷ್ಟವಾಗಿ ಹೋದಮೇಲೆ ಆ ತನ್ನ ಸ್ವರೂಪನಾದ ಪರಶಿವನ ಸಾಕ್ಷಾತ್ಕಾರವಾದನಂತರ ಸಮಸ್ತ ಕ್ಷುದ್ರ ಪಾಶಗಳ ರಾಶಿಯು ಉಳುವು ಇಲ್ಲದಂತೆ ನಷ್ಟವಾಗಿ ಹೋದಮೇಲೆ ಆ ಭೂರುದ್ರನಾದ ವೀರಮಾಹೇಶ್ವರನಿಗೆ ಪುನಃ ಬಂಧನೆಲ್ಲಿ? ಅವನು ಮುಕ್ತನೇ ಆಗಿ

ಸಮಾನ ವಿಷಯಯೋಃ ಸಂಸ್ಕಾರಾನುಭವಯೋರೇಕಸ್ಯ ವಿನಾಶೋ ಪರಸ್ಯ ತದಭಾವ ಇತಿ ವಕ್ತವ್ಯತ್ವೇ ವಿನಿಗಮನಾವಿರಹಾತ್ । ನಿಷ್ಪಕ್ಷಪಾತಿನಾ ಭವತಾ ತದುಭಯಸ್ಯಾಪಿ ಸ್ವವಿರೋಧಿವಸ್ತೂತ್ಪತ್ತೌ ನಾಶಃ ಸ್ವೀಕಾರ್ಯಃ ಖಲು ತತ್ಸ್ವೀಕಾರೇ ಸ್ಮೃತೇರಾಕಸ್ಮಿಕತ್ವಾಪತ್ತಿಃ ಸ್ಯಾತ್ । ಸಚ ಫಲಬಲಕಲ್ಪ್ಯಂ ಸಂಸ್ಕಾರಸ್ಯ ಕಾರಣತ್ವಮಿತಿ ಚೇದನುಭವಸ್ಯೈವ ತತ್ಕಲ್ಪ್ಯತಾಂ । ಅವಾಂತರಸಂಸ್ಕಾರಕಲ್ಪನಸ್ಯಾಕಿಂಚಿತ್ಕರತ್ವಾತ್ । ಸಂಸ್ಕಾರಾಸತ್ವೇಪ್ಯುದ್ಬೋಧಕವಶಾದನುಭವಸ್ಯೈವ ಸ್ಮೃತಿಸಂಭವೇ ತಸ್ಯ ಕಾರಣತಾಗ್ರಾಹಕಸಾಮಗ್ರ್ಯಭಾವಾತ್ ತಸ್ಮಾದ್ವೃತ್ತ್ಯನಿತ್ಯತ್ವವಾದೋಯುಕ್ತಃ । ಕಿಂಚ ಭೋ ವೃತ್ತ್ಯನಿತ್ಯತ್ವವಾದಿನ್ ।

ಬಿಡುವನು. ಒಳ್ಳೇದು ವೀರಶೈವಾ! ಸರ್ವಾತ್ಮಕನಾದ ಶಿವನೇ ನಾನು ಎಂಬ ಚಿಚ್ಛಕ್ತಿಯೆಂಬ ವೃತ್ತಿಯು ನಿತ್ಯವಾದದ್ದು ಇದುವೇ ಸ್ವರೂಪಾನಂದದ ಅನುಭವಕ್ಕೆ ಕಾರಣವಾದದ್ದು ಎಂದು ಹೇಳುವೆಯಲ್ಲವೆ? ಅಂತಃಕರಣದ ಎಲ್ಲಾ ವೃತ್ತಿಗಳೂ ಅನಿತ್ಯಗಳೇ ಆಗಿರುವುವು. ಇದು ಆಬಾಲವೃದ್ಧರ ಅನುಭವಕ್ಕೂ ಬರುವ ಮಾತು. ಯಾಕಂದರೆ, ಇದು ಘಟವು ಎಂಬ ವೃತ್ತಿಯು. ಇದು ಪಟವು ಎಂಬ ವೃತ್ತಿಯು ಹುಟ್ಟುವವರಿಗೂ ಇದ್ದು ತನಗೆ ವಿರೋಧಿಯಾದ ಪಟವೃತ್ತಿಯು ಹುಟ್ಟಿದ ಕೂಡಲೆ ನಾಶವಾಗುವದು ಎಂದು ನಮ್ಮ ಬ್ರಹ್ಮಾದ್ವೈತಮತವು ನಿನ್ನೀ ಶಿವಾದ್ವೈತಮತದಲ್ಲಿ ನೀನು ವೃತ್ತಿಗಳು ನಿತ್ಯಗಳೆಂದರೆ, ಚಕ್ಷುಃ ಸಂಯೋಗಾದಿಗಳು ಯಾತಕ್ಕೆ ಬೇಕು? ಅವುಗಳು ವ್ಯರ್ಥಗಳು ಆಗಬೇಕು. ಮತ್ತು ಘಟವನ್ನು ನೋಡಿ ಪಟವನ್ನು ನೋಡುವ ಪುರುಷನಿಗೆ ಪಟಜ್ಞಾನಕಾಲದಲ್ಲಿ ಘಟಜ್ಞಾನವಾದರೂ ಆಗಬೇಕು. ಘಟಜ್ಞಾನವು ನಿತ್ಯವಾಗಿದ್ದ ಮೇಲೆ ಪಟಜ್ಞಾನಕಾಲದಲ್ಲಿಯೇ ಘಟಜ್ಞಾನವು ಯಾಕೆ ಆಗಬಾರದು. ಅದು ಆದದ್ದು ಸರ್ವರ ಅನುಭವಕ್ಕೆ ಯಾಕೆ ಬರಬಾರದು. ಅಂದರೆ ವೃತ್ತಿಗಳೆಲ್ಲವೂ ತಮಗೆ ವಿರೋಧವೃತ್ತಿಗಳುಹುಟ್ಟುವವರಿಗೂ (ಎರಡು ಕ್ಷಣದವರಿಗೂ) ಇದ್ದು ಆಮೇಲೆ ನಾಶಹೊಂದುತ್ತವೆಂದು ಸಿದ್ಧವಾಗುತ್ತದೆ. ವೃತ್ತಿಗಳೆಲ್ಲಕ್ಕೂ ಈ ಪ್ರಕಾರವಾಗಿ ಅನಿತ್ಯತ್ವವು ಸಿದ್ಧವಾಗಲು ಬ್ರಹ್ಮಾಕಾರವೃತ್ತಿಯಾದರೂ ಅನಿತ್ಯವೆಂದು ಸುತರಾಂ ಸಿದ್ಧವಾಯಿತು. ಇಂಥ ಅನಿತ್ಯವಾದ ಸಚ್ಚಿದಾನಂದೋಹಂ' ಎಂಬುವ ಬ್ರಹ್ಮಾಕಾರವಾದ ಬುದ್ಧಿ ಶಕ್ತಿಯ ವಿಶಿಷ್ಟತನವನ್ನು ಬ್ರಹ್ಮಭೂತನಾದ ಜೀವನ್ಮುಕ್ತನಿಗೆ ಹೇಳಿದರೆ, ಅವನಿಗೂ ಅನಿತ್ಯನೆನ್ನಬೇಕಾದೀತು. ಮತ್ತು ಆ ಮುಕ್ತಿಯ ಅವಸ್ಥೆಯಲ್ಲಿ ಅದೊಂದು ವೃತ್ತಿಯು ನಿತ್ಯವಾಗಿದ್ದರೆ ನಿನ್ನ ಶಿವಾದ್ವೈತವಾದರೂ ಎಲ್ಲಿ ಉಳಿಯಿತು! ಅದಕ್ಕೆ ಹಾನಿಯಾಗಲಿಲ್ಲವೆ? ಆದ್ದರಿಂದ ನಿನ್ನ ಶಿವಾದ್ವೈತ ಮತವನ್ನಾದರೂ ಉಳಿಸಿಕೊಳ್ಳಲಿಕ್ಕೆ ವೃತ್ತಿಗೆ ಅನಿತ್ಯವೆಂದು ಹೇಳಬೇಕಷ್ಟೆ? ಅಂದರೆ ಎಲೈ ಬ್ರಹ್ಮಾದ್ವೈತಿಯೇ! ಅಂತಃಕರಣ ವೃತ್ತಿಗಳೆಲ್ಲವೂ ನಮ್ಮ ಮತದಲ್ಲಿ ನಿತ್ಯಗಳಾಗಿರುವುವು. ವೃತ್ತಿಗಳು ತಮಗೆ ವಿರೋಧಿವೃತ್ತಿಗಳುದಯವಾದ ಕಾಲಕ್ಕೆ ಸಂಕುಚಿತಗಳಾಗಿರುವುವು. ನಷ್ಟಗಳೇ ಆಗಿರುವದಿಲ್ಲಾ. ಇನ್ನು ಪಟಜ್ಞಾನಕಾಲದಲ್ಲಿ ಘಟಜ್ಞಾನವಾಗುವದಿಲ್ಲವೇಕೆ? ನಿನ್ನ ಘಟವೃತ್ತಿ

ಅಹಂಬ್ರಹ್ಮಾಸ್ಮೀತಿವೃತ್ತೇ ರ್ವಿರೋಧಿವೃತ್ತೇರಭಾವಾತ್ಕಥಂ ತನ್ನಾಶಂಬ್ರವೀಷಿ । ನಚಸ್ವಾತ್ಮನಾಶೋ ಸ್ವಸ್ಯೈವಭವತೀತಿವಾಚ್ಯಂ । ನಾಶಸ್ಯರೂಪಿತ್ರ ಕಾರಣತಾಯಾಃ ನಾಶಪ್ರತಿಯೋಗ್ಯತಿರಿಕ್ತೇಽಪಿ ನಿಯಮೇನ ವಿದ್ಯಮಾನತ್ವಾತ್ । ನಹಿಘಟಾದೀನಾಂ ನಾಶೋ ಘಟಾದಿಸ್ಯೈವ ಭವತಿ ನಚಕಾಷ್ಠಾದಿಜನಿತೋಗ್ನಿಃ ಕಾಷ್ಠಾದಿಕಂದಗ್ಧ್ವಾ ಸ್ವಯಮೇವೋಪಶಾಮ್ಯತೀತಿವಾಚ್ಯಂ । ತತ್ರಾಪಿ ವಾಯುಕಾಲಾದೀನಾಂ ನಿಯಮೇನಕಾರಣತ್ವಸ್ಯವಕ್ತವ್ಯತ್ವಾತ್ । ನಹಿ ತ್ವನ್ಮತೇ ಸಕಾರ್ಯಾಜ್ಞಾನನಾಶೋತ್ತರಂ ಚೈತನ್ಯಮಂತರಾ ಕಶ್ಚಿದ್ವಾಕ್ಯಜನ್ಯವೃತ್ತ್ಯತಿರಿಕ್ತಪದಾರ್ಥೋ ವಿದ್ಯತೇ । ಕಿಂಕೃತಂ ಭವತಾ ಶ್ರವಣಾದಿ ಪ್ರಯಾಸೇನ, ಯದರ್ಥಂ ಶ್ರವಣಾನುಷ್ಠಾನಂ, ತನ್ನಾಶೇ ನಿಷ್ಫಲಶ್ರಮೋಭವೇತ್। ಅನೇಕಸಾಧನಸಂಪತ್ತ್ಯಾ

ಯು ನಿತ್ಯವೆಂದು ಕೇಳುತ್ತಿಯಲ್ಲವೆ? ನೋಡು, ಪಟವೃತ್ತಿಯ ಉದಯಕಾಲದಲ್ಲಿ ಘಟವೃತ್ತಿಯ ಆವರಣವು ನಾಶವಾಗದಿರುವದುಮೂಲಕ ಘಟವೃತ್ತಿಯು ಅನುಭವಕ್ಕೆ ಬರುವದಿಲ್ಲಾ. ಆ ಆವರಣ ನಾಶವನ್ನುಂಟುಮಾಡುವ ಘಟೇಂದ್ರಿಯ ಸಂಯೋಗವು ಪಟಜ್ಞಾನಕಾಲದಲ್ಲಿ ಇಲ್ಲದಿರುವದರಿಂದ ಘಟವೃತ್ತಿಯು ನಿತ್ಯವಾಗಿದ್ದರೂ ಪಟವೃತ್ತಿಯ ಕಾಲದಲ್ಲಿ ಘಟವೃತ್ತಿಯ ಅನುಭವವಾಗುವದಿಲ್ಲಾ. ಇಂದ್ರಿಯ ಸಂಯೋಗ ಮೊದಲಾದವುಗಳು ಆಯಾಯ ಅಂತಃಕರಣ ವೃತ್ತಿಗಳ ಆವರಣವನ್ನು ನಾಶಮಾಡತಕ್ಕವುಗಳಾದುದರಿಂದ ಅವುಗಳಿಗೆ ಆವರಣ ನಾಶರೂಪವಾದ ಪ್ರಯೋಜನವುಂಟು. ಆದ್ದರಿಂದ ಇಂದ್ರಿಯ ಸಂಯೋಗಾದಿಗಳು ನಿರರ್ಥಕಗಳಾಗುವದಿಲ್ಲಾ. ವೃತ್ತಿಗಳು ಅನಿತ್ಯಗಳೆನ್ನುವ ಎಲೈ ಅದ್ವೈತವಾದಿಯೆ! ಅಪರೋಕ್ಷರೂಪವಾದ ಬ್ರಹ್ಮದ ಆವರಣವಾದ ಅಜ್ಞಾನದ ನಾಶಕ್ಕಾಗಿ ತತ್ತ್ವಮಸ್ಯಾದಿ ವಾಕ್ಯಜನ್ಯವೃತ್ತಿಯನ್ನು ಸ್ವೀಕರಿಸುವಂತೆ ಘಟ ಪ್ರಕಾಶಕ್ಕೆ ಆವರಕವಾದ ಆವರಣ ನಾಶಕ್ಕಾಗಿ ಇಂದ್ರಿಯ ವೃತ್ತಿಯನ್ನು ಸ್ವೀಕರಿಸಬೇಕಾಗುತ್ತದೆನ್ನುವ ಮಾತು ನಿನಗೆ ಯಾಕೆ ತಿಳಿಯಬಾರದು? ಘಟ ಮೊದಲಾದ ಅಂತಃಕರಣವೃತ್ತಿಗಳು ನಿತ್ಯಗಳಿದ್ದರೂ ಅವುಗಳ ಆವರಣ ನಾಶಕ್ಕಾಗಿ ಇಂದ್ರಿಯ ವೃತ್ತಿಗಳು ಬೇಕೇ ಬೇಕೆಂದು ತಿಳಿಯದೇ. ಇಂದ್ರಿಗಳೂ ಇಂದ್ರಿಯ ಸಂಯೋಗಗಳೂ ಯೇಕಕ್ಕೆ ಬೇಕೆಂದು ಕೇಳುವದು ಹುಚ್ಚತನವಲ್ಲವೇ? ಎಲೈ ವೃತ್ತನಿತ್ಯವಾದಿಯೆ! ಘಟಾನುಭವ ಪಟಾನುಭವ ರೂಪಗಳಾದ ವೃತ್ತಿಗಳು ಅನಿತ್ಯಗಳು. ಅವು ಮುಂದೊಂದು ಬೇರೆ ವೃತ್ತಿಯು ಹುಟ್ಟಿದ ಕೂಡಲೆ ನಷ್ಟಗಳಾಗುವವು ಎಂದು ನೀನು ಒಪ್ಪಿಕೊಂಡರೆ ಆ ಘಟಾದಿಗಳ ಸ್ಮೃತಿಯ ಉತ್ಪತ್ತಿಯನ್ನು ಯಾವದರಿಂದ ಹೇಳುವಿ? ಅಂದರೆ ಶಿವಾದ್ವೈತಿಯೆ! ಘಟಾನುಭವವು ನಷ್ಟವಾದರೂ ಆ ಅನುಭವದಿಂದುಂಟಾದ ಸಂಸ್ಕಾರದಿಂದ ಹೇಳುವೆನು. ಇದರಂತೆ ತಾರ್ಕಿಕರೂ ಕೂಡಾ ಹೇಳುತ್ತಾರಲ್ಲವೆ? ಎಲೆ ಬ್ರಹ್ಮಾದ್ವೈತಿಯೆ! ನೀನು ನಿಷ್ಪಕ್ಷಪಾತಿಯಲ್ಲವೆ? ಆ ಘಟಾನುಭವಕ್ಕೂ ಘಟಾನುಭವದಿಂದುಂಟಾದ ಸಂಸ್ಕಾರಕ್ಕೂ ವಿಷಯವು ಯಾವುದು ಹೇಳು; ಘಟವೇ-ಅಲ್ಲವೆ? ಘಟವಿಷಯಕವಾದ ಅನುಭವವು ತನಗೆ ವಿರೋಧಿಯಾದ ಮತ್ತೊಂದು ವೃತ್ತಿ

ಪ್ರಾಂತಿಮ ಸಚ್ಚಿದಾನಂದಾದಿ ಬುದ್ಧಿಶಕ್ತಿರೂಪವೃತ್ತೇರಪಿನಾಶಸ್ವೀಕಾರೇಸ್ವಸ್ಯ ಸಚ್ಚಿದಾನಂದಾದಿ ಸ್ವರೂಪಸದ್ಭಾವೇಪಿಕಿಂಫಲಂ | ನಹಿಕಿಂಚಿತ್ಫಲಂ ರಮಣೀವಿರಹಿತತ್ವೇರಮಣೀಯಕೇಳೀಗೃಹರಾಮಣೀಯಕತಾಯಾಃ | ನಹ್ಯಸ್ಮತ್ತ್ರಜನಸ್ಯ ವಿವೇಕಬುದ್ಧಿಶೂನ್ಯಸ್ಯ ಸದುಪದೇಶಾದಿನಾ ಕಿಂಚಿತ್ಫಲಂ ಪಶ್ಯಾಮಃ | ಕಿಂಬಧಿರಸ್ಯ ಸಂಗೀತಶ್ರವಣೇನ ಕಿಂವಾಪ್ರಯೋಜನಮಂಧಸ್ಯ ಸ್ವಸ್ವರೂಪಲಾವಣ್ಯಾದಿನಾ, ಪಾಷಾಣಾದೇಃ ಸ್ವಸ್ವರೂಪಾಕಾರಾನುಭವರೂಪ ವೃತ್ತ್ಯಭಾವಾಜ್ಜಡತ್ವಮಿವ ಜೀವನ್ಮುಕ್ತಸ್ಯ ಸ್ವಸ್ವರೂಪಾನಂದಾದಿವೃತ್ತಿನಾಶೆ ಜಡತ್ವಂಸ್ಯಾತ್ ಸ್ಯಾಚ್ಚ ಕೈವಲ್ಯೋಪನಿಷದುಕ್ತಸ್ಯ ''ಚಿನ್ಮಾತ್ರೋಹಂ ಸದಾಶಿವಃ'' ಇತ್ಯ

ಯು ಹುಟ್ಟಲಾಗಿ ನಾಶವಾಗುವದೆಂತಲೂ, ಆ ಘಟ ವಿಷಯಕವಾದ ಸಂಸ್ಕಾರವು ನಾಶವಾಗುವದಿಲ್ಲವೆಂತಲೂ ಹೇಳುವದು ಪಕ್ಷಪಾತವಾಗುವದಿಲ್ಲವೇ ? ಆ ಘಟಾನುಭವವು ಮಾಡಿದ ತಪ್ಪೇನು ? ಘಟಾನುಭವವು ನಷ್ಟವಾಗುತ್ತದೆ. ಘಟಸಂಸ್ಕಾರವು ನಷ್ಟವಾಗುವದಿಲ್ಲವೆನ್ನುವಲ್ಲಿ ಯಾವ ಯುಕ್ತಿಯನ್ನು ಹೇಳುವಿ ? ಯಾವ ಯುಕ್ತಿಯೂ ಇಲ್ಲವೆಂದರೆ ಆ ಅನುಭವ ಸಂಸ್ಕಾರಗಳೆರಡಕ್ಕೂ ನಾಶವನ್ನು ಹೇಳಬೇಕಾಗುವದು. ಹೇಳಿದರೆ ತಂದೆಯಿಲ್ಲದೇ ಮಗನು ಹುಟ್ಟಿದನೇನು? ಹಾಗೆ ಕಾರಣವಿಲ್ಲದೇ ಸ್ಮೃತಿಯೂ ಹುಟ್ಟಬೇಕಾದೀತು. ಎಲೈ ವೃತ್ತಿನಿತ್ಯತ್ವವಾದಿಯೇ ಕೇಳು. ಆ ಸ್ಮೃತಿಯೆಂಬ ಕಾರ್ಯವು ಕಂಡುಬರುವದರಿಂದ ಅದಕ್ಕೆ ಕಾರಣವಂದನ್ನು ಹೇಳಲೇಬೇಕು. ಸಂಸ್ಕಾರ ವಂದನ್ನು ಬಿಟ್ಟರೆ ಮತ್ತಾವ ಗತಿಯೂ ಇಲ್ಲದಕಾರಣ ಸಂಸ್ಕಾರವೇ ಕಾರಣವೆಂದು ಹೇಳುವೆನು. ಇದಕ್ಕೆ ನಿನ್ನ ಆಕ್ಷೇಪಣೆ ಏನು ಹೇಳು? ಅಂದರೆ— ಅನುಭವಕ್ಕೇನೇ ಕಾರಣವೆಂದು ಏಕೆ ಹೇಳಬಾರದು ? ಎಲೈ ಶಿವಾದ್ವೈತಿಯೆ! ಅನುಭವವು ಮೊದಲೇ ನಷ್ಟವಾಗಿದೆ. ಅದು ಸ್ಮೃತಿ ಹುಟ್ಟುವ ಪೂರ್ವಕ್ಷಣದಲ್ಲಿ ಇಲ್ಲವೇ ಇಲ್ಲ. ತಂದೆಯು ಸತ್ತಮೇಲೆ ಮಗನು ಹುಟ್ಟಿದರೆ ವ್ಯಭಿಚಾರದೋಷವನ್ನು ಹೇಳುವಂತೆ, ನಿನ್ನ ಅನುಭವವು ಸತ್ತ ಮೇಲೆ ಸ್ಮೃತಿಯೆಂಬ ಕಾರ್ಯವನ್ನು ಹೇಗೆ ಹೇಳುವಿ. ಅಂದರೆ ಎಲೈ ಬ್ರಹ್ಮಾದ್ವೈತಿಯೇ! ಸಂಸ್ಕಾರವೂ ಕೂಡ ನಷ್ಟವಾಗಿದೆ. ಅದಕ್ಕಾದರೂ ನೀನು ಹೇಗೆ ಹೇಳುವಿ ? ಇದೆಂಥ ನಿನ್ನ ಪಕ್ಷಪಾತವು. ಒಳ್ಳೇದು ಶಿವಾದ್ವೈತಿಯೇ! ಸ್ಮೃತಿಯನ್ನು ಹೇಗೆ ಯುಕ್ತವನ್ನಾಗಿ ಮಾಡುವಿ? ನಿನ್ನ ಅಭಿಪ್ರಾಯವನ್ನಾದರೂ ಹೇಳು ಅಂದರೆ ಬ್ರಹ್ಮಾದ್ವೈತಿಯೇ! ನೋಡು. ಪೂರ್ವಾನುಭವದಿಂದಲೇ ಸ್ಮೃತಿಯು ಆಗುತ್ತದೆಂದು ನಾನು ಹೇಳುವೆನು. ಪರಂತು ಆ ಪೂರ್ವಾನುಭವವು ಬೇರೆ ವೃತ್ತಿ ಹುಟ್ಟಿದ ಕಾಲಕ್ಕೆ ಸಂಕುಚಿತವಾಗಿದ್ದು ಮುಂದೆ ಕೆಲವು ಕಾಲದ ಮೇಲೆ ಯಾವದಾದರೊಂದು ಉದ್ಬೋಧಕ ವಶದಿಂದ ತಾನೇ ಸ್ಮೃತಿರೂಪವಾಗಿ ಪರಿಣಮಿಸುವದು ಎಂದು ಹೇಳಿದರೆ ಸಾಕು. ಇದರ ಮೇಲೆ ಯಾವ ಆಕ್ಷೇಪಣೆಯೂ ಇಲ್ಲ. ಆ ಸ್ಮೃತಿ ನಿರ್ವಾಹಕ್ಕಾಗಿ ಬೇರೆ ಮತ್ತೊಂದು ಅವಾಂತರ ಸಂಸ್ಕಾರವನ್ನು ಕಲ್ಪಿಸಬೇಕು. ಪೂರ್ವಾನು

ಭಿನಯಪುರಃಸರಂ ಮುಕ್ತೌ ಪರಮೇಶ್ವರೇ ವ್ಯವಹಾರಸ್ಯಾಸಂಗತ್ವಂ । ಸಹಜಶರೀರಪಾತಾನಂತರಂ ತಾದೃಶವೃತ್ತಿನಾಶಾಭ್ಯುಪಗಮಾತ್ । ನ ತದ್ವ್ಯವಹಾರಸ್ಯಾಸಂಗತಿರಿತಿ ವಾಚ್ಯಂ । ಪುನಸ್ತಾದೃಶವೃತ್ತಿ ಸಂಪಾದನಾಯ ಪೂರ್ವಸ್ಮಿನ್ನಿವ ಕರ್ಮಾದ್ಯನುವರ್ತನ ಪ್ರಸಂಗಾತ್ ತಸ್ಮಾನ್ನಾನಿತ್ಯತ್ವಂ ವೃತ್ತೀನಾಂ ವಕ್ತವ್ಯಂ । ತಥಾಚ ಬುದ್ಧಿ ಶಕ್ತೇರ್ನಿತ್ಯತ್ವಾತ್ ನ ತದ್ವಿಷಯಸ್ಯಾನಿತ್ಯತ್ವಂ । ಪರಾಹಂತಾಮಯ ಸ್ವರೂಪಾನಂದಾದಿ ಕಲ್ಯಾಣಗುಣರತ್ನರತ್ನಾಕರವಿಷಯಿಣೀಂ ಪ್ರತ್ಯಕ್ಷಾನುಭವರೂಪಾಂ ಬುದ್ಧಿಶಕ್ತಿ ವಿಕಾಸರೂಪಚಿಚ್ಛಕ್ತಿಂ ಪಾರಮೇಶ್ವರೀಂ ಪ್ರವಿಷ್ಟಃ ಪ್ರತಿಬುದ್ಧೋಽಮೃತತ್ವಂ ವಿಂದತೇ । ಉಕ್ತಂಚ ರೇಣುಕಾಗಸ್ತ್ಯಸಂವಾದೇ ॥
ಗಳಿತೇ ಮಮತಾಕಂಠೇ ಸಂಸಾರಭ್ರಮಕಾರಣೇ ಪರಾಹಂತಾಂ ಪ್ರವಿಷ್ಟಸ್ಯ ಶಿ

ಭವದ ನಾಶವನ್ನು ಹೇಳಬೇಕು. ಮುಂದೆ ಬೇರೊಂದು ಸ್ಮೃತಿರೂಪಕಾರ್ಯವನ್ನು ಒಪ್ಪಲೇಬೇಕು. ಇಷ್ಟೆಲ್ಲಾ ಗೌರವವು ಯಾತಕ್ಕೆ ಬೇಕು? ಪೂರ್ವವೃತ್ತಿಗೇನೇ ನಿತ್ಯವೆಂದು ಹೇಳಿದರೆ ಯಾವ ತೊಂದರೆಯೂ ಇಲ್ಲಾ. ಆದ್ದರಿಂದ ನಮ್ಮ ಶಿವಾದ್ವೈತ ಮತದಲ್ಲಿ ಎಲ್ಲಾ ಅಂತಃಕರಣವೃತ್ತಿಗಳು ನಿತ್ಯಗಳು. ಸರ್ವಾತ್ಮಕ ಶಿವನೇ ನಾನೆಂಬ ವೃತ್ತಿಯೂ ಕೂಡಾ ನಿತ್ಯವಾದದ್ದು ಎಂದು ಹೇಳುವದು ಯುಕ್ತವಾಗಿದೆ. ಸಂಸ್ಕಾರವಿಲ್ಲದಿದ್ದರೂ ಸ್ಮೃತಿಯು ಸಂಭವಿಸುತ್ತದೆಂದಮೇಲೆ ಸಂಸ್ಕಾರವು ಕಾರಣವೆನ್ನುವಲ್ಲಿ ಯಾವ ಯುಕ್ತಿಯೂ ಇಲ್ಲಾ. ಆದುದರಿಂದ ವೃತ್ತಿಗಳು ಅನಿತ್ಯವೆನ್ನುವದು ಸಮಂಜಸವಲ್ಲಾ.

ಎಲೈ ವೃತ್ತ್ಯನಿತ್ಯತ್ವವಾದಿಯೇ! ಬಹುದಿವಸ ಶ್ರಮ ವಹಿಸಿ ಪಡೆದ ಅಂತಿಮವಾದ ತತ್ತ್ವಮಸ್ಯಾದಿ ವಾಕ್ಯಜನ್ಯವಾದ ನಾನು ಬ್ರಹ್ಮನೆಂಬುವ ಅಖಂಡಾಕಾರವಾದ ವೃತ್ತಿಗೆ ಮತ್ತೊಂದು ವಿರೋಧಿವೃತ್ತಿಯು ಇಲ್ಲದಿರುವದರಿಂದ ಅದರ ನಾಶವನ್ನು ಹೇಗೆ ಹೇಳುತ್ತಿ? ಅದು ನಷ್ಟವಾಗದಿದ್ದರೆ ನಿನ್ನ ಅದ್ವೈತಕ್ಕೆ ಹಾನಿಯಾಗುವದಿಲ್ಲವೆ? ಆ ಬ್ರಹ್ಮಾಕಾರವೃತ್ತಿಯು ತನ್ನಿಂದ ತಾನೇ ನಷ್ಟವಾಗಲಾರದು. ನಾಶವೆಂಬ ಕಾರ್ಯಕ್ಕೆ ಬೇರೆ ಕಾರಣಗಳು ಬೇಕೇಬೇಕು. ಘಟ ನಾಶವಾಗಬೇಕಾದರೆ ಘಟಕ್ಕಿಂತಲೂ ಬೇರೆಯಾದ ದಂಡಾದಿ ಕಾರಣಗಳು ಇದ್ದೇ ಇರಬೇಕು. ಕೇವಲ ಘಟದಿಂದಲೆ ಘಟದ ನಾಶವಾಗಲಾರದು. ಅದರಂತೆ ಆ ಅಂತಿಮವೃತ್ತಿಯ ನಾಶಕ್ಕೆ ಬೇರೆ ಕಾರಣವನ್ನು ತೋರಿಸಬೇಕಲ್ಲವೆ? ಅರಣ್ಯದಲ್ಲಿ ಕಾಷ್ಠಗಳಿಂದ ಹುಟ್ಟಿದ ಅಗ್ನಿಯು ಆ ಕಾಷ್ಠವನ್ನೇ ನಾಶಮಾಡಿ ತನ್ನಿಂದ ತಾನೇ ನಷ್ಟವಾಗುವಂತೆ, ನಾನು ಬ್ರಹ್ಮನೆಂಬುವ ವೃತ್ತಿಯು ಅಜ್ಞಾನದಿಂದ ಹುಟ್ಟಿ, ಆ ಅಜ್ಞಾನವನ್ನೇ ನಾಶಮಾಡಿ, ತನ್ನಿಂದ ತಾನೇ ನಾಶವಾಗುತ್ತದೆ, ಅಂದರೆ ಇದು ಲೋಕಾನುಭವವಿರುದ್ಧವು. ಅರಣ್ಯದಲ್ಲಿ ಅಗ್ನಿಯ ನಾಶವಾದರೂ ಕಾರಣವಿಲ್ಲದೇ ಆಗುವದೆಂದು ಹೇಳಲಿಕ್ಕೆ ಬರುವದಿಲ್ಲಾ. ಕಾರಣವಿಲ್ಲದೆ ಕಾರ್ಯವಾಗಲಾರದು. ಅಲ್ಲಿಯಾದರೂ ವಾಯುಕಾಲಾದಿಗಳು ಕಾರಣವೆಂದು ಹೇಳುತ್ತೇವೆಂದಮೇಲೆ

ಕೋದೇಹಃ ಕುತೋಽಗತಿಃ| ಇತಿ. ಉಕ್ತಂಚ ಭಟ್ಟ ಶ್ರೀಕಲ್ಲಟಾಚಾರ್ಯೇಣಾಪಿ|| ಇಯಮೇವಾಮೃತಪ್ರಾಪ್ತಿರಿಯಮೇವಾತ್ಮನೋಗ್ರಹಃ | ಇಯಂ ನಿರ್ವಾಣ ದೀಕ್ಷಾಚ ಶಿವಸದ್ಭಾವದಾಯಿನೀ || ಇತಿ ಉಕ್ತಂಚೈತತ್ ಟೀಕಾಕಾರೇಣೋತ್ಪಲಾಚಾರ್ಯೇಣ || ಯೇಯಂಸ್ವರೂಪಸಂವಿತ್ತಿಃ ಸಾಮೃತಾಪ್ತಿರಿಹಾತ್ಮನಃ | ಜರಾಮರಣವಿಚ್ಛೇದಾತ್ ....ನಿರ್ವಾಣದೀಕ್ಷಾ ತಚ್ಛೇಯಂ ಪರಮಾತ್ಮನಿ ಯೋಜಿಕಾ || ಉಕ್ತಂಚಮೋಕ್ಷಧರ್ಮೇಷು || ಹಿತ್ವಾತು ಸರ್ವಸಂಕಲ್ಪಾನ್ ಸತ್ತ್ವೇಚಿತ್ತಂ ನಿವೇಶಯೇತ್ | ಸತ್ತ್ವೇಚಿತ್ತಂ ಯದಾಲೀನಂ ತದಾಕಾಲಂ ಜಯೋ ಭವೇತ್ || ಇತಿ ದೀಕ್ಷಾರ್ಥೋಽಯಂ || ದದಾತಿಜ್ಞಾನಸದ್ಭಾವಂಕ್ಷಪಯತ್ಯ

ಈ ನಿನ್ನ ವೃತ್ತಿಯ ನಾಶಕ್ಕೆ ಬೇರೆ ಕಾರಣವನ್ನು ತೋರಿಸಬೇಕಾಗುತ್ತದೆ. ಆಗ ಕಾರ್ಯದಿಂದ ಸಹಿತನಾಗಿ ಅಜ್ಞಾನವು ನಷ್ಟವಾದಮೇಲೆ ಬ್ರಹ್ಮವಂಶವನ್ನು ಬಿಟ್ಟು, ಬೇರೆ ಯಾವ ಪದಾರ್ಥವೂ ಆ ವೃತ್ತಿನಾಶವನ್ನುಂಟುಮಾಡುವುದಿಲ್ಲವು. ಎಲೈ ವ್ಯಕ್ತನಿತ್ಯತ್ವವಾದಿಯೆ! ಯಾವ ವೃತ್ತಿಗೋಸ್ಕರವಾಗಿ ಶ್ರವಣಾದಿ ಅನುಷ್ಠಾನವು ಮಾಡಲ್ಪಟ್ಟಿತೋ ಅಂಥ ವೃತ್ತಿಯೇ ನಷ್ಟವಾದಲ್ಲಿ ಆ ಶ್ರವಣಾದಿಗಳಿಗೆ ಪ್ರಯೋಜನವೇನು? ಆದುದರಿಂದ ನಿನ್ನ ಶ್ರಮವು ವ್ಯರ್ಥವಾಯಿತಲ್ಲವೆ? ಅನೇಕ ಸಾಧನ ಸಾಮಗ್ರಿಗಳಿಂದ ಪಡೆದುಕೊಂಡ ಅಂತಿಮ ಸಚ್ಚಿದಾನಂದ ಬ್ರಹ್ಮವೇ ನಾನು ಎಂಬುವ ಬುದ್ಧಿಶಕ್ತಿರೂಪವಾದ ವೃತ್ತಿಗೂ ಕೂಡಾ ನಾಶವನ್ನು ಸ್ವೀಕರಿಸಿದ ಪಕ್ಷದಲ್ಲಿ ತನಗೆ ಸಚ್ಚಿದಾನಂದಾದಿ ಸ್ವರೂಪಗಳಿದ್ದರೂ ಅವು ವ್ಯರ್ಥಗಳೇ ಎಂದು ಹೇಳಬೇಕಾಗುವದು. ಯಾಕೆಂದರೆ ತನ್ನ ಆನಂದಭೋಗಕ್ಕೆ ಸಾಧಕನಾದ ಅನಾದಿಬೋಧರೂಪನಾದ ಅಂತಃಕರಣವೇ ನಷ್ಟವಾದಮೇಲೆ ಆ ತನ್ನ ಆನಂದಾದಿ ಸ್ವರೂಪಗಳಿಂದ ಪ್ರಯೋಜನವೇನು? ಒಳ್ಳೇ ರಮಣೀಯವಾದ ಕೇಲೀಗೃಹದಲ್ಲಿ ರಮಣಿಯೋರ್ವಳಿಲ್ಲದಿದ್ದರೆ ಆ ಗೃಹದ ಸೌಂದರ್ಯಸ್ವರೂಪವು ವ್ಯರ್ಥವಲ್ಲವೆ? ವಿವೇಕ ಬುದ್ಧಿಯಿಲ್ಲದ ಉನ್ಮತ್ತನಿಗೆ ಸತ್ಪುರುಷರು ಮಾಡುವ ಸದುಪದೇಶವು ವ್ಯರ್ಥವಲ್ಲವೆ? ಬಧಿರನಿಗೆ ಸಂಗೀತ ಶ್ರವಣದಿಂದ ಪ್ರಯೋಜನವೇನು? ಅತಿ ರೂಪಲಾವಣ್ಯಗಳಿದ್ದರೂ ನೇತ್ರಗಳಿಲ್ಲದಿದ್ದರೆ ಅವುಗಳು ವ್ಯರ್ಥಗಳಾಗುವಂತೆ ಬ್ರಹ್ಮಕ್ಕೊಂದು ತನ್ನ ಆನಂದಾದಿ ಭೋಗಕ್ಕೆ ಸಾಧಕವಾದ ಬುದ್ಧಿಶಕ್ತಿಯಿಲ್ಲದಿದ್ದರೆ ಆ ಸ್ವರೂಪಗಳು ವ್ಯರ್ಥಗಳೆಂದೇ ಹೇಳಬೇಕು. ಇದಲ್ಲದೆ ಬ್ರಹ್ಮವು ಪಾಷಾಣದಂತೆ ಜಡವಾಗಬೇಕು. ಪಾಷಾಣಕ್ಕೆ ತನ್ನ ಸ್ವರೂಪವಿಂಥಾದ್ದು ಎಂದು ತಿಳಿಯುವ ಸಾಮರ್ಥ್ಯವಿಲ್ಲದಿರುವದರಿಂದದು ಜಡವೆನಿಸುವದು. ಅದರಂತೆ ಬ್ರಹ್ಮಕ್ಕೂ ಅಹಂಬ್ರಹ್ಮಭೂತನಾದ ಜೀವನ್ಮುಕ್ತನಿಗೂ ತನ್ನ ಆನಂದಾದಿ ಸ್ವರೂಪದ ಅನುಭವವೊಂದಿಲ್ಲದಿದ್ದರೆ ಬ್ರಹ್ಮಕ್ಕೆ ಜಡತ್ವವನ್ನು ಏಕೆ ಹೇಳಬಾರದು? ಇದಲ್ಲದೇ ಕೈವಲ್ಯೋಪನಿಷತ್ತಿನಲ್ಲಿ ಹೇಳಲ್ಪಟ್ಟ ಮುಕ್ತನಾದ ಪರಮೇಷ್ಠಿಯ "ಚಿನ್ಮಾತ್ರೋಽಹಂ ಸದಾಶಿವಃ" ಎಂಬುವ ವ್ಯವಹಾರಕ್ಕೂ ಕೂಡಾ ಸಂಗತಿಯಾಗಲಾರದು. ಆ ಮುಕ್ತನಾದ ಪರಮೇ

ಖಿಲಂಮಲಂ | ಬೋಧಾನುವೇಧಾದ್ದೀಕ್ಷೋಕ್ತಾದಾಸಕ್ಷಪಣಧರ್ಮಿಣೀ ||
ಇತಿ. ಉಕ್ತಂಚಾಯಮೇವಾರ್ಥೋ ರೇಣುಕಾಗಸ್ತ್ಯಸಂವಾದೇಪಿ || ದೀಯ
ತೇಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಂ | ಯಸ್ಮಾದತಃ ಸಮಾಖ್ಯಾತಾದಿ
ಕ್ಷೇಸೇಯಂವಿಚಕ್ಷಣೈಃ|| ಇತಿ. ನಚ ಶಿವಾದ್ವೈತಹಾನಿಸ್ತಸ್ಯಾ ಆತ್ಮರೂಪತ್ವಾ
ತ್ | ಮಣಿದ್ಯುಮಣಿಪ್ರಕಾಶವತ್ | ನನು ಪ್ರಕಾಶಸ್ಯತದಂಶಾತ್ಮಕತ್ವಾತ್
ಪ್ರಭಾಕರ ಪ್ರಭಯೋರಭೇದಃ | ತದ್ವದೇವ ಬ್ರಹ್ಮಣಅಂಶರೂಪಾಶಕ್ತಿರಿತಿವದ
ಸಿಕಿಂ. ವದಾಮಿ ತೇನ ಕಿಸ್ನಶ್ಛಿನ್ನಮ್ ನಿರವಯತ್ವಶ್ರುತ್ಯಾಕೋಪ ಇತಿ
ಸಭ್ರಮಿತವ್ಯಂ | ತಸ್ಯಾಃ ಪ್ರಾಕೃತಾಂಶ ನಿಷೇಧಪರತ್ವಾತ್. ತೈಜಸಾಂಶೇನ

ಕ್ತಿಯು ತತ್ವಜ್ಞಾನದಿಂದ ಅಜ್ಞಾನವನ್ನು ನಾಶಮಾಡಿಕೊಂಡು ತನ್ನ ಆ ತತ್ವಜ್ಞಾನರೂಪವಾದ
ವೃತ್ತಿಯನ್ನೂ ಕೂಡಾ ನಾಶಮಾಡಿಕೊಂಡಮೇಲೆ ಪುನಃ ಆ ವೃತ್ತಿಯು ಹುಟ್ಟದೆ ಇರುವದ
ರಿಂದ ಆ ಪ್ರಕಾರವಾಗಿ ವ್ಯತ್ಯಭಿನಯಪೂರ್ವಕವಾಗಿ ಹೇಳುವದೇಕೆ? ಇದರಿಂದ ಆ ವೃತ್ತಿಯು
ನಾಶಹೊಂದದೆ ಇರುತ್ತದೆಂಬು ಸಿದ್ಧವಾಗುವದಿಲ್ಲವೆ? ಎಲೈ ಶಿವಾದ್ವೈತಿಯೆ! ಶರೀರಪಾತಾ
ನಂತರದಲ್ಲಿ ಆ ವೃತ್ತಿಗೆ ನಾಶವನ್ನು ಹೇಳುತ್ತೇವೆ. ಆದ್ದರಿಂದ ಆ ಪರಮೇಷ್ಟಿಯ ವ್ಯವಹಾ
ರಕ್ಕೆ ಅಸಂಗತಿಯಾಗಲಾರದು. ಅಂದರೆ ಪುನಃ ಅಂಥ ವೃತ್ತಿಯ ಲಾಭಕ್ಕಾಗಿ ಪೂರ್ವದಂತೆ
ಕರ್ಮಾನುಷ್ಠಾನ ಮಾಡಬೇಕಾಗುವದು. ಮತ್ತು ಶ್ರವಣಾದಿಗಳನ್ನು ಆಚರಿಸಬೇಕಾದೀತು.
ಆದುದರಿಂದ ವೃತ್ತಿಗಳು ಅನಿತ್ಯಗಳೆನ್ನುವದು ಶುದ್ಧ ತಪ್ಪು. ವೃತ್ತಿಗಳು ನಿತ್ಯಗಳಾಗಲು ಬ್ರ
ಹ್ಮಾಕಾರವಾದ ವೃತ್ತಿಯೂ ಕೂಡ ನಿತ್ಯವು. ಇಂಥ ಬುದ್ಧಿ ಶಕ್ತಿಯಿಂದ ಕೂಡಿದ ಆತ್ಮನೂ
ಕೂಡ ನಿತ್ಯನು. ಆದ್ದರಿಂದ ಅಪರಾಹಂತಾಮಯವಾದ ಮತ್ತು ತನ್ನ ಆನಂದಾದಿ ಕಲ್ಯಾ
ಣಗುಣಗಳು ವಿಷಯಗಳಾಗಿವುಳ್ಳ ಬುದ್ಧಿ ಶಕ್ತಿ ವಿಕಾಸರೂಪವಾದ ಅಪರೋಕ್ಷಾನುಭವಸ್ವರೂ
ಪವಾದ ಪರಮೇಶ್ವರನ ಸಂಬಂಧಿಯಾದ ಚಿಚ್ಛಕ್ತಿಯನ್ನು ಪ್ರವೇಶಿಸಿದಂಥ ಪ್ರತಿ ಬುದ್ಧನು ಶಿವ
ಸ್ವರೂಪವಾದ ಅಮೃತತ್ವವನ್ನು ಹೊಂದಿಬಿಡುವನು. ಈ ವಿಷಯದಲ್ಲಿ ಅಹಂಕಾರ ಮಮಕಾ
ರಗಳಿಂದ ಹುಟ್ಟಿದ ಸಂಸಾರವು ಪರಾಹಂತಾಮಯವಾದ ಚಿಚ್ಛಕ್ತಿಯನ್ನು ಪ್ರವೇಶಮಾಡಿದಕೂ
ಡಲೇ ಅಹಂಕಾರ ಮಮಕಾರಗಳ ನಾಶವಾಗಿ, ಆಮೇಲೆ ಸಂಸಾರವು ನಾಶವಾಗಿಬಿಡುವದೆಂಬ
ಭಗವತ್ಪಾದ ರೇಣುಕರ ವಾಕ್ಯವು ಪ್ರಮಾಣವಾಗಿದೆ. ಇದಲ್ಲದೆ ಭಟ್ಟ ಶ್ರೀಕಲ್ಲಟಾಚಾರ್ಯ
ರೂ ಕೂಡಾ ಹಿಂದೆ ಹೇಳಿದ ಚಿಚ್ಛಕ್ತಿಗೇನೇ ಅಮೃತಪ್ರಾಪ್ತಿಯೆಂತಲೂ, ಇದುವೇ ಆತ್ಮಜ್ಞಾ
ನವೆಂತಲೂ, ಇದುವೇ ನಿರ್ವಾಣದೀಕ್ಷೆಯೆಂತಲೂ, ಇದುವೇ ಶಿವತ್ವವನ್ನು ಕೊಡುವಂಥಾ
ದ್ದೆಂತಲೂ ಹೇಳಿರುವರು. ಅಲ್ಲದೆ ಆ ಶ್ಲೋಕದ ಟೀಕಾಕಾರರಾದ ಉತ್ಪಲಾಚಾರ್ಯರೂ
ಕೂಡಾ ಯಾವ ಚಿದಾನಂದಾದಿ ಬ್ರಹ್ಮವೇ ನಾನು ಎಂಬ ಜ್ಞಾನವಿದೆಯೋ, ಈ ಜ್ಞಾನ
ವಾದಮೇಲೆ ಪುನಃ ಜರಾಮರಣಗಳಲ್ಲದಿರುವದರಿಂದ ಈ ಜ್ಞಾನವೇ ಅಮೃತಪ್ರಾಪ್ತಿಯು.

ಚಕ್ಷುರಿಂದ್ರಿಯೇಣ ತೈಜಸಸೂರ್ಯಾದಿಗ್ರಹಣಮಿವ ತಚ್ಛಕ್ತ್ಯೈವ ಪರಶಿವಬ್ರಹ್ಮಣೋ ಗ್ರಹಣಮಿತಿವಕ್ತವ್ಯತ್ವಾತ್ | ತಾದೃಶಾತ್ಮಶಕ್ತಿ ಪ್ರಾಪ್ತಿರೇವಾದೌ ಸಂಪಾದನೀಯಾ | ಅತಏವೋಪನಿಷದಿ || ತೇಧ್ಯಾನಯೋಗಾನುಗತಾ ಅಪಶ್ಯನ್ ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ'' ಇತಿ ಶ್ರೂಯತೆ. ಶ್ರೂಯತೇಚ ''ನಾಯಮಾತ್ಮಾ ಬಲಹೀನೇನಲಭ್ಯ'' ಇತಿ, ವಿದ್ವದ್ಭಿಃ ಶಕ್ತಿಪಾತಪವಿತ್ರಿತಹೃದಯೈರಿಯಮೇವ ಚಿಚ್ಛಕ್ತಿಃ ಪ್ರತಿಬೋಧಶಬ್ದವಾಚ್ಯೇತಿ ವಿಮರ್ಶನೀಯಂ. ಗುರುಲಿಂಗಜಂಗಮಪ್ರಸಾದವಿರಹಾತ್ ಅನಭಿಭೂತಗಾಢಾಜ್ಞಾನ ನಿದ್ರಾಬದ್ಧಬೌದ್ಧಶಕ್ತೀನ್ ಗುಣಮಹದಹಂಕಾರ ಭೂತಭೌತಿಕವಿಷಯಜಾತಾನಿ ಘೋರಸಂ

ಇದುವೇ ಪರಮಾತ್ಮನಲ್ಲಿ ಜೀವವನ್ನು ನಿವೇಶಗೊಳಿಸುವಕಾರಣ, ನಿರ್ವಾಣದೀಕ್ಷೆಯು ಎಂಬದಾಗಿಯೂ, ಸರ್ವಸಂಕಲ್ಪಗಳನ್ನು ಬಿಟ್ಟು ಶುದ್ಧ ಸದ್ರೂಪ ಬ್ರಹ್ಮದಲ್ಲಿ ಚಿತ್ತವನ್ನು ನಿವೇಶಗೊಳಿಸಿ, ಅಲ್ಲಿಯೇ ಲೀನಮಾಡಿದರೆ ಮೃತ್ಯುವಿನ ಜಯವಾಗುತ್ತದೆಂಬುವ ಮೋಕ್ಷ ಧರ್ಮದ ಶ್ಲೋಕವನ್ನು ಹೇಳಿರುವರು. ಇದಲ್ಲದೆ ಬೋಧರೂಪ ಶಿವತ್ವವನ್ನು ಸ್ಥಾಪಿಸಿ ಜೀವಭಾವವನ್ನು ಕಳೆದುಬಿಟ್ಟಕಾರಣ, ಜ್ಞಾನದಾನ ಮತ್ತು ಮಲನಾಶಗಳೆಂಬ ಧರ್ಮವುಳ್ಳದ್ದೇ ದೀಕ್ಷೆಯು. ಯಾಕೆಂದರೆ ಇದು ಶಿವತತ್ವಜ್ಞಾನವನ್ನು ಕೊಡುವದಾಗಿ ಎಲ್ಲಾ ಮಲಗಳನ್ನು ನಾಶಮಾಡುವದಾಗಿಯೂ ಇರುವ ಕಾರಣ ಇದಕ್ಕೆ ದೀಕ್ಷೆಯೆಂದು ಹೆಸರು ಬಂದಿದೆ. ಇದೇ ಅರ್ಥಕ್ಕೆ ಅನುಕೂಲವಾಗಿ ರೇಣುಕ ಭಗವತ್ಪಾದರೂ ಕೂಡಾ ಶಿವಜ್ಞಾನವನ್ನು ಕೊಡುವ ಪಾಶಗಳ ಬಂಧವನ್ನು ನಾಶಮಾಡುವಂಥಾದ್ದೆ ದೀಕ್ಷೆಯೆಂದು ಹೇಳಿರುವರು. ಆದಕಾರಣ ಎಲೈ ಬ್ರಹ್ಮಾದ್ವೈತಿಯೇ! ಜ್ಞಾನಕ್ರಿಯಾಸಮರಸರೂಪವಾದ ಯಾವ ವಿಮರ್ಶಶಕ್ತಿಯುಂಟೋ ಅದಕ್ಕೇನೆ ಚಿಚ್ಛಕ್ತಿಯೆಂತಲೂ, ಶಿವಾದ್ವೈತಜ್ಞಾನನೆಂತಲೂ, ದೀಕ್ಷೆಯೆಂತಲೂ. ನಮ್ಮ ಶಿವಾದ್ವೈತ ಶಾಸ್ತ್ರದಲ್ಲಿ ವ್ಯವಹಾರವಿರುವಕಾರಣ ಒಂದು ಕಡೆಯಲ್ಲಿ ದೀಕ್ಷೆಯಿಂದ ಮುಕ್ತಿಯೆಂದೂ, ಮತ್ತೊಂದು ಕಡೆಯಲ್ಲಿ ಶಿವಾದ್ವೈತಜ್ಞಾನದಿಂದ ಮುಕ್ತಿಯೆಂದೂ ಹೇಳುವೆಯಲ್ಲಾ; ಎಂದು ಭ್ರಮಿಸಬೇಡ. ಈ ಚಿಚ್ಛಕ್ತಿರೂಪವಾದ ಶಿವಾದ್ವೈತಜ್ಞಾನವೆಂಬ ವೃತ್ತಿಯು ನಿತ್ಯವಾಗಿದ್ದರೂ ಅದು ಪರಮಾತ್ಮನ ಸ್ವರೂಪವೇ ಆಗಿದೆ. ಆದ್ದರಿಂದ ಶಿವಾದ್ವೈತಕ್ಕೆ ಹಾನಿ ಇಲ್ಲವು. ರತ್ನಕ್ಕೂ ರತ್ನದ ಪ್ರಕಾಶಕ್ಕೂ, ಸೂರ್ಯನಿಗೂ ಸೂರ್ಯನ ಪ್ರಕಾಶಕ್ಕೂ ಅಭೇದವಿರುವಂತೆ, ಶಕ್ತಿಗೂ ಶಕ್ತನಾದ ಶಿವನಿಗೂ ಅಭೇದವಿರುವಕಾರಣ, ಶಿವಾದ್ವೈತಕ್ಕೆ ಭಂಗವಿಲ್ಲವೆಂಬುವದೇ ನಮ್ಮ ಸಿದ್ಧಾಂತವು. ಸೂರ್ಯನ ಪ್ರಕಾಶವು ಸೂರ್ಯನ ಅಂಶರೂಪವಾಗಿದೆ. ಆದ್ದರಿಂದ ಅಂಶರೂಪವಾದ ಪ್ರಕಾಶಕ್ಕೂ ಅಂಶಿಯಾದ ಸೂರ್ಯನಿಗೂ ಅಭೇದವಿರುವಂತೆ ಶಕ್ತಿಗೂ ಶಿವನಿಗೂ ಅಂಶಾಂಶಿಭಾವವನ್ನು ಹೇಳಿದ್ದಾದರೆ ನಿರವಯವ. ನಿಷ್ಕಲ, ನಿರ್ಗುಣ ಎಂದು ಶ್ರುತಿಯು ಏಕೆ ಹೇಳುತ್ತದೆ? ಶಿವಾದ್ವೈತಿಯೇ! ಶಕ್ತಿಯೆಂಬ ಅಂಶವನ್ನು ಶಿವನಿಗೆ ಹೇಳಿದ್ದಾದರೆ ಶಿವನು ನಿರಂಶನೆಂಬ ಶ್ರುತಿವಾಕ್ಯಕ್ಕೆ ವಿರುದ್ಧವಾಗುವದಿಲ್ಲವೇ? ಬ್ರಹ್ಮಾದ್ವೈತಿಯೇ ಕೇಳು—ಶ್ರುತಿಯು

ಸಾರೆಪಾತಯಂತಿ. ಅಪ್ರತಿಬೋಧಪ್ರಾಪ್ತೇಃ. ತಸ್ಮಾತ್ಕಥಂ ನರಃ ಪ್ರತಿಬೋಧಂ ತಚ್ಛಕ್ತಿಂ ವಿಂದತ ಇತ್ಯತಆಹ ಆತ್ಮನಾವಿಂದತೆ ವೀರ್ಯಮಿತಿ ಆತ್ಮನಾಶುದ್ಧೇನ ಸ್ವವಶೀಕೃತ ಭೂತಭೌತಿಕೇನ ವೀರ್ಯಂ ಶಕ್ತಿಂ ಪೂರ್ವೋಕ್ತಾಂ ಪ್ರತಿಬೋಧಶಬ್ದವಾಚ್ಯಾಂವಿಂದತೆ ನಹ್ಯಶುದ್ಧಾತ್ಮಾ ದೇಹಾದಿಕಮೇವಾತ್ಮತ್ವೇನ ಮನ್ಯಮಾನಸ್ತಾಂವಿಂದತೆ ತಸ್ಮಾದಾತ್ಮನಃ ಶುದ್ಧಿರಪೇಕ್ಷ್ಯತೆ. ಸಾಚದ್ವಿವಿಧಾ ಜೀವಸ್ಯ ಶಿವಭಾವಾಪಾದನರೂಪಾ ಜೀವಶುಧ್ಯಾತ್ಮಿಕಾ ಪೂಜಕಜೀವಸ್ಯ ಶಿವದೇಹತ್ವಾಪಾದನಾತ್ಮಿಕಾ ದೇಹಶುದ್ಧಿರೂಪಾಚ. ಏತಚ್ಛುದ್ಧಿದ್ವಯಪ್ರಕಾರಸ್ಯಾಪಿ ಕ್ರಿಯಾಸಾರೆ ಚತುರ್ದಶೋಪದೇಶೇ ವಿಸ್ತರೇಣಾಭಿಹಿತತ್ವಾತ್ತತಏವಾವಗಂತವ್ಯಂ | ಶಿವಸೂತ್ರೇಷ್ವಪ್ಯುಕ್ತಂ ‹‹ಶರೀರೇಸಂಹಾರಃಕಲಾನಾಂ›› ಇತಿ

ಪ್ರಾಕೃತಗಳಾದ ಅಂಶಗಳು ಶಿವನಲ್ಲಿಲ್ಲವೆಂದು ಹೇಳುತ್ತದೆಯಲ್ಲದೆ ಅಪ್ರಾಕೃತ ಶಕ್ತಿರೂಪವಾದ ಅಂಶವೂ ಕೂಡಾ ಇಲ್ಲವೆಂದು ಹೇಳುವದಿಲ್ಲ. ಆ ಪರಶಿವ ಬ್ರಹ್ಮಕ್ಕೆ ನಿತ್ಯವಾದ ಒಂದು ಅಂಶವನ್ನು ಹೇಳದಿದ್ದರೆ ಅದರ ಸಾಕ್ಷಾತ್ಕಾರವೇ ಆಗಲಿಕ್ಕಿಲ್ಲ. ಹೇಗಂದರೆ ವಾಯುವಿನ ಅಂಶರೂಪವಾದ ತ್ವಗಿಂದ್ರಿಯದಿಂದ ವಾಯುವಿನ ಪ್ರತ್ಯಕ್ಷವೂ ತೇಜಸ್ತತ್ವದ ಅಂಶರೂಪವಾದ ಚಕ್ಷುರಿಂದ್ರಿಯದಿಂದ ಸೂರ್ಯನ ಪ್ರತ್ಯಕ್ಷವೂ ಆಗುತ್ತದೆಯಲ್ಲದೆ ಬೇರೆ ಇಂದ್ರಿಯಗಳಿಂದಾಗದಿರುವಂತೆ ಚಿಚ್ಛಕ್ತಿಯು ಪರಶಿವಬ್ರಹ್ಮಕ್ಕೆ ಭಿನ್ನವಾದದ್ದು. ಆ ಬ್ರಹ್ಮದ ಅಂಶವಲ್ಲವು ಯೆಂದು ಸ್ವೀಕರಿಸಿದ್ದಾದರೆ ಆ ಬ್ರಹ್ಮದ ಸಾಕ್ಷಾತ್ಕಾರವಾಗದೆ ಹೋದೀತು. ಸಾಕ್ಷಾತ್ಕಾರವಾಗದಿದ್ದರೆ ಮುಕ್ತಿಯಂತೂ ದೂರೇ ಉಳಿಯಿತು. ಅಂದಮೇಲೆ ಶಾಸ್ತ್ರವಿಚಾರವು ವ್ಯರ್ಥವಾಗಬೇಕು. ಆದ್ದರಿಂದ ಚಿಚ್ಛಕ್ತಿಯು ಪರಶಿವ ಬ್ರಹ್ಮದ ಅಂಶವೆಂದೇ ಶಿವಾದ್ವೈತಿಗಳು ಒಪ್ಪುತ್ತಾರೆ. ಅದಕ್ಕೋಸ್ಕರ ಆ ಚಿಚ್ಛಕ್ತಿಯೆಂಬ ತನ್ನ ಶಕ್ತಿಯ ಪ್ರಾಪ್ತಿಯನ್ನೇ ಮೊದಲು ಸಂಪಾದಿಸತಕ್ಕದ್ದು. ಆದ್ದರಿಂದಲೇ ಉಪನಿಷತ್ತಿನಲ್ಲಿ ಆ ಧ್ಯಾನಯೋಗಿಗಳು ಇಚ್ಛಾಜ್ಞಾನಕ್ರಿಯಾಶಕ್ತಿಗಳೆಂಬ ಗುಣಗಳಿಂದ ಮುಚ್ಚಲ್ಪಟ್ಟ ಚಿದ್ರೂಪವಾದ ತಮ್ಮ ಶಕ್ತಿಯನ್ನು ನೋಡಿದರೆಂದು ಕೇಳಲ್ಪಡುತ್ತದೆ. ಇದಲ್ಲದೆ ಆತ್ಮಶಕ್ತಿಯೆಂಬ ಬಲವಿಲ್ಲದವನು ಆ ಪರಮಾತ್ಮನನ್ನು ಹೊಂದಲಿಲ್ಲವೆಂದು ಮತ್ತೊಂದು ಉಪನಿಷತ್ತು ಹೇಳುತ್ತದೆ. ಆದಕಾರಣ ಶಿವದೀಕ್ಷೆಯಿಂದ ಪವಿತ್ರವಾದ ಹೃದಯ ಉಳ್ಳವರೂ ವಿದ್ವಾಂಸರೂ ಆದ ಶಿಷ್ಯರು ಪ್ರತಿಬೋಧಶಬ್ದಕ್ಕೆ ನಾವು ಹಿಂದೆ ಹೇಳಿದ ಚಿಚ್ಛಕ್ತಿಯೆಂಬ ಅರ್ಥವನ್ನೇ ತಿಳಿಯತಕ್ಕದ್ದು. ಅಲ್ಲದೇ ಬೇರೆಯವರು ತಮ್ಮ ಮನಸ್ಸಿಗೆ ಬಂದಹಾಗೆ ಬರೆದ ಅರ್ಥವನ್ನು ಗ್ರಹಿಸಕೂಡದೆಂದು ಶ್ರೀ ಶಾಂಕರೀಕಾರನ ಅಭಿಪ್ರಾಯವು.

ಗುರುಲಿಂಗಜಂಗಮರುಗಳ ಪ್ರಸಾದ ವಿರಹಿತರಾದ ಕಾರಣದಿಂದ ವಾರಣಮಾಡಲಶಕ್ಯವಾದ ಗಾಢವಾದ ಅಜ್ಞಾನವೆಂಬ ನಿದ್ರೆಗೆ ಪರತಂತ್ರವಾದ ಬುದ್ಧಿಶಕ್ತಿಯುಳ್ಳ ಜನಗಳನ್ನು ಗುಣವೆಂಬ ತತ್ವವೂ, ಅಹಂಕಾರವೂ, ಭೂತಭೌತಿಕಗಳಾದ ವಿಷಯ ಸಮೂಹಗಳು ಭಯಂಕರ

ಸ್ಥೂಲಸೂಕ್ಷ್ಮಕಾರಣಶರೀರತ್ರಯ ತದ್ಗತ ಪೃಥಿವ್ಯಾದಿ ಶಿವಾಂತ ತತ್ವಾನಿ ವೀರ ಶೈವಸಾಂಪ್ರದಾಯಾನುಸಾರೇಣ ಪರಶಿವಲಿಂಗೆ ಸಮರ್ಪ್ಯ ಶುಷ್ಕಸ್ಥಾಣುಮಿವ ಕಾಲಾಗ್ನಿನಾದಗ್ಧ್ವಾ ತೇಷಾಂ ದಾಹಾದಿ ಭಾವನಾಂಕೃತ್ವಾ ಶಿವಂಧ್ಯಾಯೇತ್. ಧ್ಯಾನದಾರ್ಢ್ಯೇಚ ಶಿವಪ್ರಸಾದಾತ್ ಆವಿರ್ಭೂತಾಂ ಚಿಚ್ಛಕ್ತಿಂ ಸರ್ವಾತ್ಮಕ ಶಿವೋಹಮಿತಿ ಶುದ್ಧವಿದ್ಯಾರೂಪಾಂವಿಂದತೇ ಇತ್ಯರ್ಥಃ, ತತ್ಸೂತ್ರಿತಂ ಶಿವೇನ "ಮೋಹಜಯಾದನಂತಾ ಭೋಗಾತ್ಸಹಜ ವಿದ್ಯಾಜಯಃ" ಇತಿ. ತದನಂತರಂ ವೀರ್ಯರೂಪಯಾ ವಿದ್ಯಯಾ ಸಹಜಾಪರೋಕ್ಷ್ಯರೂಪಯಾ "ಯತ್ಸಾಕ್ಷಾದಪರೋಕ್ಷಾದ್ಬ್ರಹ್ಮ" ಇತಿ ಶ್ರುತೇಃ ಅಮೃತಂ ಶಾಶ್ವತಂ ಪರ ಶಿವಲಿಂಗರೂಪಂ ಪರಪದಂ ವಿಂದತೇ "ಭಾವಗ್ರಾಹ್ಯಮನೀಡಾಖ್ಯಂ ಭಾವಾ

ವಾದ ಸಾರವಿಲ್ಲದಿರುವ ಸಂಸಾರ ಸಮುದ್ರದಲ್ಲಿ ಮುಳುಗಿಸಿ ಬಿಡುತ್ತವೆ. ಹಿಂದೆ ಹೇಳಿದ ಪ್ರತಿಬೋಧವೆಂಬ ಶಕ್ತಿಯನ್ನು ಪಡೆದುಕೊಂಡ ಜನಗಳು ಆ ವಿಷಯಗಳಿಗೆ ಅಧೀನರಾಗದೆ ಆ ಸಂಸಾರ ಸಮುದ್ರವನ್ನು ದಾಟಿಹೋಗುವರು. ಅಂದಮೇಲೆ ಆ ಪ್ರತಿಬೋಧವೆಂಬ ಶಕ್ತಿಯನ್ನು ಪಡೆದುಕೊಳ್ಳುವ ಬಗೆ ಹೇಗೆ ಎಂದು ಆಶಂಕೆಯು ಹುಟ್ಟಲಾಗಿ, ಭಗವತೀಶ್ರುತಿದೇವಿಯು ಆ ಶಕ್ತಿಯನ್ನು ಪಡೆದುಕೊಳ್ಳುವ ಉಪಾಯವಾವುದೆಂಬುದನ್ನು "ಆತ್ಮನಾವಿಂದತೇವೀರ್ಯಂ" ಎಂಬುವದರಿಂದ ತೋರಿಸುವಳು. ಆತ್ಮನ ಶುದ್ಧಿಯೇ ಆ ಶಕ್ತಿಯನ್ನು ಒದಗಿಸಿಕೊಡುವ ಉಪಾಯವು. ಯಾವನು ಪ್ರಕೃತಿತತ್ವವನ್ನೂ, ಮಾಯಾತತ್ವವನ್ನೂ, ಮಹತ್ತತ್ವ, ಅಹಂಕಾರ ತತ್ವಗಳನ್ನೂ, ಇಂದ್ರಿಯಗಳನ್ನೂ, ಸೂಕ್ಷ್ಮಸ್ಥೂಲಭೂತಗಳನ್ನೂ ಶುದ್ಧಿಗೊಳಿಸಿರುವನೋ (ತನ್ನ ವಶಗಳನ್ನಾಗಿ ಮಾಡಿಕೊಂಡಿರುವನೋ) ಅವನೇ ಶುದ್ಧಾತ್ಮನು. ಅವನಿಗೇನೇ ಪೂರ್ವೋಕ್ತವಾದ ಪ್ರತಿಬೋಧಶಬ್ದವಾಚ್ಯವಾದ ಶಕ್ತಿಯ ಲಾಭವಾಗುವದಲ್ಲದೆ, ದೇಹಾದಿಗಳನ್ನೇ ನಾನೆಂದು ಅಭಿಮಾನಿಸಿಕೊಳ್ಳುವ ಅಶುದ್ಧಾತ್ಮನಿಗೆ ಆ ಚಿಚ್ಛಕ್ತಿಯ ಲಾಭವಾಗಲಾರದು ಆದುದರಿಂದ ಮೊದಲು ಆತ್ಮಶುದ್ಧಿಯನ್ನು ಸಂಪಾದಿಸಿಕೊಳ್ಳಬೇಕು. ಆ ಶುದ್ಧಿಯು ಶಾಸ್ತ್ರದಲ್ಲಿ ಎರಡು ಪ್ರಕಾರವೆಂದು ಹೇಳಿದೆ ಮೊದಲನೇದು ಜೀವನಿಗೆ ಶಿವತ್ವವನ್ನುಂಟುಮಾಡುವ ಜೀವಶುದ್ಧಿಯು. ಎರಡನೇದು ಪೂಜಕನಾದ ಜೀವನಿಗೆ ಶಿವದೇಹವನ್ನುಂಟುಮಾಡುವ ದೇಹಶುದ್ಧಿರೂಪವಾದದ್ದು. ಎಲ್ಲಿಯವರಿಗೆ ಜೀವನಿಗೂ ಜೀವನ ಶರೀರಕ್ಕೂ ಶಿವತ್ವವೂ ಶಿವನ ಶರೀರತ್ವವೂ ಇಲ್ಲವೋ ಅಲ್ಲಿಯವರಿಗೆ ಜೀವನು ಶಿವಪೂಜೆಗಧಿಕಾರಿಯಾಗುವದಿಲ್ಲವು ಆದಕಾರಣದಿಂದಲೇ "ಶಿವೋಭೂತ್ವಾ ಶಿವಂಯಜೇತ್" ಎಂದು ಶ್ರುತಿಯು ಸಾರುತ್ತದೆ. ಇದಲ್ಲದೆ "ನಾಶಿವಸ್ಯಶಿವೋಪಾಸ್ತಿರ್ಘಟತೆ ಜನ್ಮಕೋಟಿಭಿಃ | ಶಿವಸ್ಯೈವ ಶಿವೋಪಾಸ್ತಿರಿತಿ ನಾನಾಶ್ರುತಿಸ್ಥಿತಿಃ ||" ಎಂದು ಅನುಭವಸೂತ್ರವೂ ಕೂಡ ಹೇಳುತ್ತದೆ ಅದ್ದರಿಂದ ಪುರುಷನು ಮೊದಲು ತನ್ನನ್ನೂ ತನ್ನ ಶರೀರವನ್ನೂ ಶುದ್ಧಿಮಾಡಿಕೊಳ್ಳತಕ್ಕದ್ದು ವಿಹಿತವಾಗಿದೆ. ಈ ಜೀವಶುದ್ಧಿ ಶರೀರಶುದ್ಧಿ

ಭಾವಕರಂ ಶಿವಂ ಕಲಾಸರ್ಗಕರಂ ದೇವಂ ಯೇ ವಿದುಸ್ತೇಜಹುಸ್ತನುಂ'' ಇತಿ ಶ್ವೇತಾಶ್ವತರಶ್ರುತೇಃ ಶುದ್ಧವಿದ್ಯೋದಯಾಚ್ಚ ಕ್ರೇಶತ್ವ ಸಿದ್ಧಿರಿತ್ಯಪಿ ಶಿವೇನಸೂತ್ರಿತಂ ಉಕ್ತಂಚಸ್ವಚ್ಛಂದೇ ''ವೇದನಾದಿರ್ಧರ್ಮಸ್ಯ ಪರಮಾತ್ಮತ್ವಬೋಧನಾ | ವರ್ಜನಾಪರಮಾತ್ಮತ್ವೇ ತಸ್ಮಾದ್ವಿದ್ಯೇತಿಸೂಚ್ಯತೇ ‖ ತತ್ರಸ್ಥೋವ್ಯಂಜಯೇತ್ತೇಜಃ ಪರಂಪರಮಕಾರಣಂ | ತಸ್ಮಿಂಶ್ಚ ತೇಜಸಿವ್ಯಕ್ತೇ ತತ್ರಸ್ಥಃ ಶಿವತಾಂವ್ರಜೇತ್ ‖ ಇತಿ. ಇದಮತ್ರ ಶಿವಯೋಗರಹಸ್ಯಂ ಕಿಂಚಿತ್ಪ್ರದರ್ಶ್ಯತೇ ''ಊರ್ಧ್ವಾರ್ಯಸಮಃ ಊರ್ಧ್ವಲಿಂಗಾಯಸಮಃ'' ಇತ್ಯಾದಿ ಶ್ರುತ್ಯುಕ್ತಾನಿ ಲಿಂಗಾನಿ ಶಿವಯೋಗ ಶಾಸ್ತ್ರೋಕ್ತಪ್ರಕಾರೇಣ ''ಉಚ್ಚಾರಕರಣಧ್ಯಾನ ವರ್ಣಸ್ಥಾನಪ್ರಕಲ್ಪನೈಃ | ಶುದ್ಧೇನಮನಸೈವ ಸಮ್ಯಗವಗಾಹ್ಯ, ತತ್ರ ಊರ್ಧ್ವಶಬ್ದವಾಚ್ಯಾಂ

ಗಳೆರಡರ ರೀತಿಯು ಕ್ರಿಯಾಸಾರದ ಹದಿನಾಲ್ಕನೇ ಉಪದೇಶದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟ ಕಾರಣ ಇಲ್ಲಿ ಆ ವಿಷಯವನ್ನು ನಾವು ಹೆಚ್ಚಿಗೆ ಪ್ರಸ್ತಾಪಿಸುವದಿಲ್ಲ. ಈ ಶುದ್ಧಿಯ ವಿಷಯವನ್ನು ಅದೇ ಗ್ರಂಥದಿಂದಲೇ ತಿಳಿಯತಕ್ಕದ್ದು. ಅರ್ಥಾತ್ ಕ್ರಿಯಾ ಮೊದಲಾದ ದೀಕ್ಷೆಗಳಿಲ್ಲದಿದ್ದರೆ ದೇಹಶುದ್ಧಿ ಜೀವಶುದ್ಧಿಗಳಾಗಲಾರವೆಂದು ಶಾಂಕರೀಕಾರನ ಅಂತರ್ಗತಾಶಯವು. ಈ ಶುದ್ಧಿ ವಿಷಯವು ಶಿವಸೂತ್ರಗಳಲ್ಲಿಯೂ ಹೇಳಲ್ಪಟ್ಟಿದೆ. ಏನಂದರೆ ಸ್ಥೂಲಸೂಕ್ಷ್ಮಕಾರಣ ಶರೀರಗಳನ್ನೂ ಆ ಶರೀರಗಳಲ್ಲಿರುವ ಭೂಮಿ ಮೊದಲುಗೊಂಡು ಶಿವಾಂತ ತತ್ವಗಳನ್ನೂ ವೀರಶೈವ ಸಂಪ್ರದಾಯಾನುಸಾರವಾಗಿ ಪರಶಿವಲಿಂಗದಲ್ಲಿ ಸಮರ್ಪಣಮಾಡಿ (ಲೀನಗೊಳಿಸಿ) ಅಥವಾ ಒಣಗಿದ ಒಂದು ಮರವನ್ನು ಬುಡದಲ್ಲಿ ಬೆಂಕಿ ಹಚ್ಚಿ ಬೂದಿಯನ್ನಾಗಿ ಮಾಡುವಂತೆ, ತನ್ನ ಪಾದಾಂಗುಷ್ಠದಲ್ಲಿ ಹುಟ್ಟಿದ ಕಾಲಾಗ್ನಿಯಿಂದ ದಹನ ಭಾವನೆಯನ್ನು ಮಾಡಿದಮೇಲೆ ಎಲ್ಲಾ ಪ್ರಾಕೃತ ಪದಾರ್ಥಗಳು ಸುಟ್ಟು ಬೂದಿಯಾಗುವವು (ಶುದ್ಧಗಳಾಗುವವು) ಆಮೇಲೆ ಶಿವನನ್ನು ಪೂಜಿಸುವದನ್ನೂ ಧ್ಯಾನಿಸುವದನ್ನೂ ಮಾಡಬೇಕು. ಆತ್ಮಶುದ್ಧಿ ದೇಹಶುದ್ಧಿಗಳಿಲ್ಲದೇ ಶಿವನನ್ನು ಪೂಜಿಸಿದರೆ ಪ್ರತ್ಯವಾಯವು ಹೇಳಲ್ಪಟ್ಟಿರುವದು. ಆದಕಾರಣ ಮೊದಲು ಶಿವದೀಕ್ಷೆಗಳಿಂದ ಆತ್ಮಶುದ್ಧಿ ಶರೀರಶುದ್ಧಿಗಳನ್ನು ಮಾಡಿಕೊಂಡು ಶಿವಲಿಂಗಪೂಜಾಧ್ಯಾನಗಳನ್ನು ಮಾಡುತ್ತ, ಧ್ಯಾನವು ದೃಢವಾಗಲು ಶಿವಾನುಗ್ರಹವಾಗಿ ಆ ಶಿವಾನುಗ್ರಹ ಮಹಿಮೆಯಿಂದ ಆವಿರ್ಭವಿಸಿದ ಚಿಚ್ಛಕ್ತಿಯನ್ನು ಹೊಂದಿಕೊಳ್ಳುವನು. ಈ ವಿಷಯದಲ್ಲಿ ಅಪರಿಮಿತ ಕಾರ್ಯಗಳ ವಿಸ್ತಾರವುಳ್ಳ ಮೋಹದ ಜಯವಾಗಲು, ತನ್ನ ಸಹಜವಾದ ವಿದ್ಯಾಜಯವು (ಪ್ರಾಪ್ತಿಯು) ಆಗುವದೆಂಬ ಶಿವಸೂತ್ರವು ಪ್ರಮಾಣವಾಗಿದೆ ಈ ಚಿಚ್ಛಕ್ತಿ ರೂಪವಾದ ವಿದ್ಯಾಪ್ರಾಪ್ತಿಯಾಗಲು, ಸರ್ವಾತ್ಮಕ ಶಿವನೇ ನಾನೆಂಬ ಅಪರೋಕ್ಷರೂಪವಾದ ಶುದ್ಧ ವಿದ್ಯೆಯೆಂಬ ವೀರ್ಯದಿಂದ ಅಮೃತವನ್ನು (ಸರ್ವೋತ್ಕೃಷ್ಟವಾದ ಪರಶಿವ ಪದವೆಂಬ ಮುಕ್ತಿಯನ್ನು) ಹೊಂದುತ್ತಾನೆ. ಈ ವಿಷಯದಲ್ಲಿ ಭಾವದಿಂದ ಗ್ರಹಿಸಲು ಯೋಗ್ಯವಾದ ತನಗೆ ಬೇರೊಂದು ಆಶ್ರಯವಿ

ಪಶ್ಚಿಮಚಕ್ರಾಂತರ್ಗತಾಂ ಚಿಚ್ಛಕ್ತಿಂ ಶುದ್ಧವಿದ್ಯಾಂ ಚಿತ್ತೇನಸಹ ಸಮಾರುಹ್ಯ ಶಕ್ತಿವಿಶಿಷ್ಟಂ ಊರ್ಧ್ವಲಿಂಗಶಬ್ದಿತಂ ಪರಶಿವಮಂತರರ್ಚಯೇತ್ | ಅಂತರಾರ್ಚನಾಂಗತ್ವೇನ ತದಾವಾಹನಸ್ಥಾಪನಾಭಿಮುಖೀಕರಣ ಸನ್ನಿರೋಧನಾವಕುಂಠನ ಸಕಲೀಕರಣ ಪರಮೀಕರಣಾಮೃತೀಕರಣಾನಿ ಕಾರ್ಯಾಣಿ ವೀರಶೈವಶಾಸ್ತ್ರೋಕ್ತಕ್ರಮೇಣ | ಅನ್ಯಥಾ ಸರ್ವವ್ಯಾಪಕಸ್ಯ ತಸ್ಯ ಮಹಾದೇವಸ್ಯ ಆವಾಹನಾದ್ಯಸಂಭವಃ ಸ್ಯಾತ್ | ಏವಮಭ್ಯಸ್ತಯೋಗೇನ ಸಾಕ್ಷಾತ್ಕಾರರೂಪಾಂ ಚಿಚ್ಛಕ್ತಿಂ ಪ್ರಾಪ್ಯಸ್ವಚಿತ್ತದಶಾಂವಿಗಮಯ್ಯ ದೇಹಕಲಾಸ್ಥಿತಿಪರ್ಯಂತಂ ತತ್ಸದೃಶೋಭೂತ್ವಾ ತದ್ವಿಲಯೇ ಅಹಿಕುಂಡಲನ್ಯಾಯೇನ ಅಮೃತಂಪದಂವಿಂದತೇ | ಪರಶಿವಾನಂದಸಮುದ್ರ ಸಮರಸಏವಭವತಿ | "ಯಥಾನದ್ಯಃ ಸ್ಯಂದಮಾನಾಃ

ಲ್ಲದಿರುವ ಭಾವಾಭಾವ ಪ್ರಪಂಚವನ್ನುಂಟುಮಾಡುವ ಕಲೆಗಳ ಸೃಷ್ಟಿಯನ್ನು ಮಾಡುವ ಮಹಾದೇವನಾದ ಶಿವನನ್ನು ಯಾರು ತಿಳಿವರೋ ಅವರು ಪುನಃ ಶರೀರವನ್ನು ಹೊಂದದೆ ಮುಕ್ತರಾಗುವರೆಂಬ ಶ್ವೇತಾಶ್ವತರ ಶ್ರುತಿಯು ಪ್ರಮಾಣವಾಗಿದೆ. ಇದಲ್ಲದೆ ಶುದ್ಧವಿದ್ಯೆಯ ಆವಿರ್ಭಾವವಾಗಲು ಚಕ್ರೇಶತ್ವಸಿದ್ಧಿಯು (ಶಿವತ್ವಪ್ರಾಪ್ತಿಯು) ಆಗುವದೆಂಬ ಶಿವಸೂತ್ರವೂ ಆ ಶುದ್ಧವಿದ್ಯೆಯೆಂಬ ಚಿಚ್ಛಕ್ತಿಯಲ್ಲಿದ್ದುಕೊಂಡು ಆ ಪರಮಕಾರಣವಾದ ಶಿವತೇಜಸ್ಸನ್ನು ಪ್ರಕಾಶಗೊಳಿಸಬೇಕು. ಆ ತೇಜಸ್ಸು ತನಗೆ ಅಭಿವ್ಯಕ್ತವಾಗಲು, ಆ ಅಭಿವ್ಯಕ್ತವಾದ ತೇಜಸ್ಸಿನಲ್ಲಿದ್ದು ನಿಬ್ಬೆರಗಾಗಿ ಶಿವತ್ವವನ್ನು ಹೊಂದುವನೆಂಬ ಸ್ವಚ್ಛಂದಗ್ರಂಥವೂ ಪ್ರಮಾಣವಾಗಿದೆ. ಇಲ್ಲಿ ಈ ಶಿವಯೋಗರಹಸ್ಯವನ್ನು ಸ್ವಲ್ಪ ತೋರಿಸುತ್ತೇವೆ. "ಊರ್ಧ್ವಾಯನಮಃ" ಎಂದು ಮೊದಲ್ಗೊಂಡು "ವಿಶತ್ಸೂಮಸ್ಕ" ಎಂಬುವವರಿವಿಗೂ ಇರುವ ಶ್ರುತಿ ಮಂತ್ರದಲ್ಲಿ ಹೇಳಲ್ಪಟ್ಟ ಲಿಂಗಗಳನ್ನು ಶಿವಯೋಗಶಾಸ್ತ್ರಪ್ರಕಾರವಾಗಿ ಉಚ್ಚಾರಕರಣ ಧ್ಯಾನವರ್ಣಸ್ಥಾನಗಳ ಕಲ್ಪನೆಯಿಂದ ಅಂದರೆ ಸ್ಥೂಲಸೂಕ್ಷ್ಮಪ್ರಾಣಾಯಾಮವೆಂಬ ಉಚ್ಚಾರದಿಂದಲೂ, ಖೇಚರ್ಯಾದಿ ಮುದ್ರಾಕರಣದಿಂದಲೂ, ಧ್ಯಾನದಿಂದಲೂ, ಆಯಾಯ ಲಿಂಗವಾಚಕ ವರ್ಣಗಳಿಂದಲೂ ಆಧಾರಾದಿ ಸ್ಥಾನಗಳಿಂದಲೂ, ಶುದ್ಧವಾದ ಮನಸ್ಸಿನಿಂದಲೇ ಅವಗಾಹನೆ ಮಾಡಿ ಅನಂತರದಲ್ಲಿ "ಊರ್ಧ್ವಾಯನಮಃ" ಎಂಬ ಶ್ರುತಿವಾಕ್ಯದಲ್ಲಿರುವ ಊರ್ಧ್ವಶಬ್ದವಾಚ್ಯವಾದ ಯಾವ ಪಶ್ಚಿಮ ಚಕ್ರದಲ್ಲಿರುವ ಚಿಚ್ಛಕ್ತಿಯುಂಟೋ ಅಂಥ ಶುದ್ಧ ವಿದ್ಯಾಶಕ್ತಿಯನ್ನು ಚಿತ್ತದೊಡನೆ ಚನ್ನಾಗಿ ಆರೋಹಣಮಾಡಿ ಆ ಶಕ್ತಿವಿಶಿಷ್ಟವಾದ "ಊರ್ಧ್ವಲಿಂಗಾಯನಮಃ" ಎಂಬ ಶ್ರುತಿವಾಕ್ಯದಲ್ಲಿರುವ ಊರ್ಧ್ವಲಿಂಗಶಬ್ದವಾಚ್ಯವಾದ ಭಾವಲಿಂಗವೆಂಬ ಪರಶಿವನನ್ನು ಅಂತರರ್ಚಿಸತಕ್ಕದ್ದು.

ಈ ಅಂತಃಪೂಜೆಗೆ ಅಂಗಭೂತವಾಗಿ ವೀರಶೈವ ಶಾಸ್ತ್ರದಲ್ಲಿ ಹೇಳಲ್ಪಟ್ಟಪ್ರಕಾರ ಆವಾಹನಾದಿ ಎಂಟು ಕಾರ್ಯಗಳನ್ನು ಮಾಡತಕ್ಕದ್ದು. ಈ ಪ್ರಕಾರವಾಗಿ ಯಾವನು ಅಂತರಂಗದಲ್ಲಿ ಶಿವಯೋಗಾಭ್ಯಾಸವನ್ನು ಮಾಡಿ ಆ ಸಾಕ್ಷಾತ್ಕಾರರೂಪವಾದ ಚಿಚ್ಛಕ್ತಿಯನ್ನು ಹೊಂದಿ

ಸಮುದ್ರೇ ಅಸ್ತಂಗಚ್ಛಂತಿ ನಾಮರೂಪೆ ವಿಹಾಯ ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರಷಮುಪೈತಿ ದಿವ್ಯಂ" ಇತಿ ಶ್ರುತೇಃ. ಕೀಟೋಭ್ರಮರಯೋಗೇನ ಭ್ರಮರೋಭವತಿಧ್ರುವಂ | ಮಾನವಃ ಶಿವಯೋಗೇನ ಶಿವೋಭವತಿಸರ್ವದಾ || ಇತಿಸ್ಮೃತೇಶ್ಚ. ಪಾಶಾಶ್ರಯತ್ವಾತ್ ಪಶುಕರ್ಮಣಾಂ ತಾನಿ ಸಂತ್ಯಜ್ಯ ಪತಿಕರ್ಮಾನುಷ್ಠಾನತಃ ಬುದ್ಧಿಪ್ರಸಾದಾನಂತರಂ ಸತ್ವಶುದ್ಧಿಂಪ್ರಾಪ್ಯ ಶಿವೋಹಮಿತಿ ಬುದ್ಧಿಶಕ್ತಿ ಐಕ್ಯಾನಂತರಂ ಪರಶಿವಏವಭವತಿ | "ಜ್ಞಾನಪ್ರಸಾದೇನವಿಶುದ್ಧಸತ್ವಃ ತತಸ್ತುತಂಪಶ್ಯತೇ ನಿಷ್ಕಲಂಧ್ಯಾಯಮಾನಃ" ಆತ್ಮಾನಮರಣಿಂಕೃತ್ವಾ ಪ್ರಣವಂಚೋತ್ತರಾರಣಿಂ ಧ್ಯಾನನಿರ್ಮಥನಾಭ್ಯಾಸಾದ್ದೇವಂ ಪಶ್ಯೇನ್ನಿಗೂಢವತ್| ಇತಿಶ್ರುತೇಃ. ನನುಧ್ಯಾನಾದೀನಾಂ ಚಿತ್ತಶುದ್ಧಿಮಾ

ತನ್ನ ಚಿತ್ತದಶೆಯನ್ನು ಕಳೆದುಕೊಂಡಿರುವನೋ ಅವನು ದೇಹದ ಕಲೆಯು ಇರುವವರಿವಿಗೂ ಶಿವನಿಗೆ ಸಮಾನನಾಗಿದ್ದು ಆ ದೇಹ ಕಲೆಯೂ ಕೂಡ ವಿಲಯವಾದಮೇಲೆ ಸರ್ಪವು ತನ್ನ ಕುಂಡಲಾಕಾರವನ್ನು ಬಿಟ್ಟು ದೀರ್ಘಾಕಾರವನ್ನು ಹೊಂದುವಂತೆ ಪರಶಿವನ ಆನಂದ ಸಮುದ್ರದಲ್ಲಿ ಸಮರಸನಾಗಿ ಮುಕ್ತನಾಗುವನು. ಈ ವಿಷಯದಲ್ಲಿ ನದಿಗಳು ರುಜು ಕುಟಿಲಗಳಾಗಿ ಹರಿದು ಹೋಗಿ ಸಮುದ್ರವನ್ನು ಕೂಡಿ ಸಮುದ್ರದಲ್ಲಿ ಸಮರಸಗಳಾಗುವಂತೆ ಈ ಚಿಚ್ಛಕ್ತಿಯೆಂಬ ವಿದ್ಯೆಯುಳ್ಳ ಶಿವಯೋಗಿಯು ತನ್ನ ನಾಮರೂಪಗಳಂ ಬಿಟ್ಟು ಆ ಸರ್ವೋತ್ಕೃಷ್ಟವಾದ ಪರಶಿವಪದವನ್ನೈದುವನು. ಎಂಬರ್ಥವುಳ್ಳ ಶ್ರುತಿಯು ಪ್ರಮಾಣವಾಗಿದೆ ಅಂದರೆ ನದಿಗಳು ಕೃಷ್ಣಾಗೋದಾವರಿ ಕಾವೇರಿ ಗಂಗಾ ಎಂಬ ತಮ್ಮ ನಾಮಗಳನ್ನು ಬಿಟ್ಟು ಸಮುದ್ರದಲ್ಲಿ ಸಮರಸಗಳಾಗುವವು. ಕೂಡಿಹೋದಮೇಲೆ ಇದು ಕೃಷ್ಣಾನದಿಯು ಇದು ಗೋದಾವರಿ ನದಿಯು ಎಂದು ಬೇರೆ ಬೇರೆ ಮಾಡಿ ತೋರಿಸಲಿಕ್ಕೆ ಬರುವದಿಲ್ಲ. ಅದರಂತೆ ಶಿವಯೋಗಾಭ್ಯಾಸದಿಂದ ಪಡೆದುಕೊಂಡ ಶಿವತತ್ವಜ್ಞಾನವುಳ್ಳ ಶಿವಯೋಗಿಗಳು ಆ ಪರಶಿವನ ಆನಂದ ಸಮುದ್ರದಲ್ಲಿ ಮುಳುಗಿಹೋದಮೇಲೆ ಆ ಶಿವಯೋಗಿಗಳ ಮೊದಲಿನ ನಾಮಗಳು ರೂಪಗಳು ಉಳಿಯುವದಿಲ್ಲವಾದಕಾರಣ ಆ ನಾಮಗಳಿಂದಲೂ, ರೂಪಗಳಿಂದಲೂ ಭೇದವು ತೋರಿಕೆಯಾಗದೆ ಶಿವಸ್ವರೂಪವೇ ಆಗುವದು ಇದು ಅಲ್ಲದೆ ಕೀಡಿಯು ಭ್ರಮರದ ಯೋಗದಿಂದ ಭ್ರಮರವೇ (ಕುರುಡಿಕುಕ್ಕಾರಿಯೆ) ಆಗಿಬಿಡುವಂತೆ ಮನುಷ್ಯನು ಶಿವಯೋಗದಿಂದ ಶಿವನೇ ಆಗುವನೆಂಬ ಆಗಮಸ್ಮೃತಿಯೂ ಕೂಡ ಪ್ರಮಾಣವಾಗಿದೆ.

ಪಶುಕರ್ಮಗಳೆಲ್ಲವೂ ಅಸ್ಥಿರ ಫಲಗಳುಳ್ಳವಗಳಾದ ಕಾರಣ ಪಾಶಗಳನ್ನು ಆಶ್ರಯ ಮಾಡಿಕೊಂಡಿರುವವು. ಆದಕಾರಣ ವೀರಶೈವನು ಆ ಪಶುಕರ್ಮಗಳನ್ನನುಷ್ಠಿಸದೆ ಪತಿಕರ್ಮಗಳಾದ ಶಿವಪೂಜಾ ಮೊದಲಾದ ಕರ್ಮಾಚರಣೆಯಿಂದ ಬುದ್ಧಿನೈರ್ಮಲ್ಯವನ್ನು ಹೊಂದಿ ಸತ್ವಶುದ್ಧಿಯನ್ನು ಪಡೆದುಕೊಂಡು ನಾನು ಶಿವನೆಂಬದಾಗಿ ಬುದ್ಧಿಶಕ್ತಿ ಏಕಾಸವಾಗಿ ಪರಶಿವನೇ

ತ್ರಪ್ರಯೋಜಕತ್ವಾತ್ ಬ್ರಹ್ಮಾಪರೋಕ್ಷಾಮೃತ ಪದಾನುಪಯುಕ್ತತ್ವಾತ್ ಅಪರೋಕ್ಷಸ್ಯಾಜ್ಞಾನಗ್ರಂಥೇರಪರೋಕ್ಷಜ್ಞಾನನಿವರ್ತ್ಯತ್ವೌಚಿತ್ಯಾತ್ | ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ| ಕ್ಷೀಯಂತೇ ಚಾಸ್ಯಕರ್ಮಾಣಿತಸ್ಮಿನ್ ದೃಷ್ಟೇಪರಾವರೇ" | ಇತಿಶ್ರುತೇಃ. ಕಿಂಚಸರ್ವವ್ಯಾಪಕಸ್ಯ ನಿರಾಲಂಬಸ್ಯ ಬ್ರಹ್ಮಣಃ ಮೂರ್ತತ್ವಾಭಾವಾತ್ ಹೃದಯಾದೌ ಕಿಂಚಿದುಪಾಸ್ಯಮಾಲಂಬನೀಕೃತ್ಯ ತದುಪಾಸನಸಾಧ್ಯತ್ವೆ ಅಮೃತತ್ವಸ್ಯ ಅನಿತ್ಯತ್ವಾಪತ್ತೇಃ ಅತಏವ ಶಂಕರಾಚಾರ್ಯೇಣ ಭಗವತಾಪಿ ಆತ್ಮವಿಜ್ಞಾನೇನ ಕಿಮಮೃತತ್ವ ಮುತ್ಪಾದ್ಯತೆ ನ ಆತ್ಮನಾವಿಂದತೆಸ್ವೇನೈವ ನಿತ್ಯಾತ್ಮಸ್ವಭಾವೇನಾಮೃತತ್ವಂ ವಿಂದತೆ ನಾಲಂಬನಪೂರ್ವಕಂ ವಿಂದತೆ ಇತ್ಯುಕ್ತಂ ನಿತ್ಯಶುದ್ಧಬದ್ಧಮುಕ್ತ ಸ್ವಭಾವಸ್ಯಾತ್ಮನ

ಆಗುತ್ತಾನೆ ಈ ವಿಷಯದಲ್ಲಿ ಬುದ್ಧಿಶುದ್ಧಿಯಿಂದ ಶುದ್ಧವಾದ ಸತ್ವವುಳ್ಳವನಾಗಿ ಆ ನಿಷ್ಕಲವಾದ ಭಾವಲಿಂಗವನ್ನು ಧ್ಯಾನಮಾಡುವಂಥವನಾಗಿ ಆ ಪರಶಿವನನ್ನು ನೋಡುತ್ತಾನೆ. ಎಂಬರ್ಥವುಳ್ಳ ಶ್ರುತಿಯೂ, ಪ್ರಣವವನ್ನು ಆತ್ಮನನ್ನು ಮೇಲೆ ಕೆಳಗಿರುವ ಕಟ್ಟಿಗೆಗಳೆಂದು ತಿಳಿದು ಧ್ಯಾನವೆಂಬ ಮಥನಾಭ್ಯಾಸದಿಂದ ಮಹಾದೇವನನ್ನು ನೋಡುವನು. ಎಂಬರ್ಥವುಳ್ಳ ಶ್ರುತಿಯೂ ಪ್ರಮಾಣವಾಗಿರುವವು. ಈ ಯಲ್ಲ ಶ್ರುತಿಗಳನ್ನು ವಿಚಾರಿಸುತ್ತಿರಲಿಕ್ಕೆ ಸಾಕ್ಷಾತ್ಕಾರರೂಪವಾದ ತನ್ನ ಶಕ್ತಿ ವಿಕಾಸವೆಂಬ ಮುಕ್ತಿಗೆ ಧ್ಯಾನಾದಿಗಳೇ ಸಾಧನಗಳೆಂದು ತಿಳಿದುಬರುತ್ತದೆ. ಇಲ್ಲಿ ಕೆಲವರು ಪೂರ್ವಪಕ್ಷಮಾಡುವದೇನಂದರೆ–ಧ್ಯಾನಾದಿಗಳು ಚಿತ್ತಶುದ್ಧಿಗೆ ಮಾತ್ರ ಪ್ರಯೋಜಕಗಳಾಗಿರುವದರಿಂದಲೂ, ಆ ಬ್ರಹ್ಮದ ಅಪರೋಕ್ಷರೂಪವಾದ ಅಮೃತಪದಕ್ಕೆ ಉಪಯುಕ್ತಗಳಾಗದಿರುವದರಿಂದಲೂ ಮುಕ್ತಿಯನ್ನು ಕುರಿತು ಸಾಧನಗಳಲ್ಲವು. ಯಾಕೆಂದರೆ–ಅಜ್ಞಾನಗ್ರಂಥಿಯು ಅಪರೋಕ್ಷವಾಗಿರುವದರಿಂದ ಅಪರೋಕ್ಷಜ್ಞಾನದಿಂದಲೇ ಅದರ ನಾಶವನ್ನು ಹೇಳಬೇಕೇ ಹೊರತು ಪರೋಕ್ಷಧ್ಯಾನದಿಂದ ಹೇಳಕೂಡದು. ಹೇಳಿದ್ದಾದರೆ ಯುಕ್ತವಾಗುವದಿಲ್ಲ. ಈ ವಿಷಯದಲ್ಲಿ ವಿಷ್ಣ್ವಾದಿಪದಗಳು ಯಾವ ಶಿವನ ಪದದಿಂದ ನ್ಯೂನಗಳಾಗಿರುವವೋ ಆ ಶಿವನ ಸಾಕ್ಷಾತ್ಕಾರವಾಗಲು ಹೃದಯಗ್ರಂಥಿಯು (ಅಜ್ಞಾನವು) ಭೇದಿಸಲ್ಪಡುತ್ತದೆ. ಸಮಸ್ತ ಸಂಶಯಗಳೂ ವಿಚ್ಛಿನ್ನಗಳಾಗುವವು. ಸಮಸ್ತ ಕರ್ಮಗಳು ಕ್ಷಯವಾಗುವವು. ಎಂಬ ತಾತ್ಪರ್ಯವುಳ್ಳ ಶ್ರುತಿಯು ಪ್ರಮಾಣವಾಗಿದೆ. ಇದರಿಂದ ಅಪರೋಕ್ಷಜ್ಞಾನವೇ ಅಜ್ಞಾನಗ್ರಂಥಿಗೆ ನಾಶಕವೆಂದು ತಿಳಿದುಬರುತ್ತದಲ್ಲದೆ, ಪರೋಕ್ಷಧ್ಯಾನವು ನಾಶಕವೆಂದು ತಿಳಿದುಬರುವದಿಲ್ಲ. ಎಲೈ ಶಿವಾದ್ವೈತಿಯೇ! ಇದಲ್ಲದೆ ನಿರಾಲಂಬವಾಗಿಯೂ ಸರ್ವವ್ಯಾಪಕವಾಗಿಯೂ ಇರುವ ಬ್ರಹ್ಮವು ಮೂರ್ತಪದಾರ್ಥವಾಗದಿರುವದರಿಂದ ಹೃದಯಾದಿ ಸ್ಥಾನದಲ್ಲಿ ಬ್ರಹ್ಮವನ್ನು ಉಪಾಸ್ಯವನ್ನಾಗಿ ಕಲ್ಪಿಸಿ, ಅದನ್ನು ಅವಲಂಬನ ಮಾಡಿಕೊಂಡು ಉಪಾಸನೆ ಮಾಡುತ್ತಾ ಹೋಗುತ್ತಿರಲಿಕ್ಕೆ ಆ ಉಪಾಸನೆಯಿಂದ ಅಮೃತತ್ವವು (ಮುಕ್ತಿಯು) ಸಾಧ್ಯವಾಗುವದೆಂದರೆ

ಶ್ಚಾಜ್ಞಾನಾದ್ಯಶುದ್ಧೇಃ ಸತ್ಯತ್ವಾಭಾವಾತ್ ತಸ್ಯಾಃ ಜ್ಞಾನಮಾತ್ರಬಾಧ್ಯತ್ವಾತ್ ತಸ್ಮಾತ್ಸತ್ಯತ್ವೇಽಪಿ ಭವದಭಿಮತಧ್ಯಾನಾದಪಿ ನಾಶಾಯೋಗಾತ್. ಕಿಂಚಧ್ಯಾನಂ ನಾಮ ಚಿಂತಾ, ಚಿಂತಾಚಸ್ಮೃತಿಃ ಧ್ಯೈ ಚಿಂತಾಯಾಂ ಚಿತಿಸ್ಮೃತ್ಯಾಮಿತ್ಯನುಶಾಸನಾತ್ ಸ್ಮರಣಂಚ ಪೂರ್ವಾನುಭೂತಸ್ಯ ಸಂಭವತಿನಚತತ್ಸಂಭವೋಽಸ್ತಿ ನಿರ್ಗುಣ ನಿರಂಜನಾನಂದೈಕರಸಸ್ಯ ಪರಂಜ್ಯೋತೇರಸನಿರ್ದೇಶಸ್ಯಾನುಪಮಸ್ಯ ಪೂರ್ವಾನನುಭೂತಸ್ಯ ಪರಬ್ರಹ್ಮಣಃ ಶಿವಲಿಂಗಸ್ಯ | ಅನ್ಯಥಾ ಸಾ ಗಂಗಾ ಸಾಮಾತಾ. ಇತ್ಯಾದಿವತ್ ಕಾಲಾಂತರದೇಶಾಂತರವರ್ತಿತ್ವಸ್ಯಾವಶ್ಯಕತ್ವಾಪರಿಚ್ಛಿನ್ನತ್ವಂ ಸ್ಯಾತ್ ಸ್ಯಾಚ್ಚ "ಸರ್ವವ್ಯಾಪೀಚ ಭಗವಾನ್ ತಸ್ಮಾತ್ಸರ್ವಗತಃ ಶಿವಃ" ಇತ್ಯಾದ್ಯನೇಕ ಶ್ರುತೀತಿಹಾಸಪುರಾಣಾದೇರ್ವಿರೋಧಃ ಕಿಂ

ಆ ಮುಕ್ತಿಯು ನಿತ್ಯವಾಗಲಾರದು. ಮೊದಲು ಆ ಅಮೂರ್ತವಾದ ಬ್ರಹ್ಮವನ್ನು ಚಿಕ್ಕದಾದ ಹೃದಯದಲ್ಲಿ ತರುವುದೇ ಅಸಂಭವವು. ಅಂದಮೇಲೆ ಅದರ ಅವಲಂಬನ ಉಪಾಸನೆಗಳಂತೂ ದೂರೇ ಉಳಿದವು. ಆ ಉಪಾಸನೆಯಿಂದ ಮುಕ್ತಿಯುಂಬುವ ಮಾತಂತೂ ಗಗನ ಪುಷ್ಪದಂತಾಯಿತು. ಆದುದರಿಂದಲೇ ಆತ್ಮೋಪಾಸನೆಯಿಂದ ಅಮೃತತ್ವವು ಹುಟ್ಟುವದೇನು ? ಇಲ್ಲ. ಕಿಂತು ನಿತ್ಯಾತ್ಮ ಸ್ವಭಾವದಿಂದಲೇ ಅಮೃತತ್ವವನ್ನು ಹೊಂದುತ್ತಾನೆ ಅಲ್ಲದೆ ಆಲಂಬನಪೂರ್ವಕವಾಗಿ ಹೊಂದುವದಿಲ್ಲ ಎಂದು ಶಂಕರ ಭಗವತ್ಪಾದಾಚಾರ್ಯರು ಹೇಳಿರುವರು. ಅಂದರೆ ಹೃದಯಾದಿ ಸ್ಥಾನದಲ್ಲಿ ಯಾವದಾದರೊಂದು ಮೂರ್ತಿಯನ್ನು ಅವಲಂಬಿಸಿ ಅದರಧ್ಯಾನದಿಂದ ಮುಕ್ತಿಯು ಹುಟ್ಟುವದಿಲ್ಲ. ಕಿಂತು ಕೇವಲ ತನ್ನ ನಿತ್ಯವಾದ ಆತ್ಮಸ್ವಭಾವದಿಂದಲೇ ಅಮೃತತ್ವಪ್ರಾಪ್ತಿಯಾಗುವದು. (ಅಮೃತತ್ವವು ಸ್ವತಃ ಸಿದ್ಧವಾದದ್ದೇ) ಎಂದು ಇವರ ತಾತ್ಪರ್ಯವು ಇರುವದು ಆದಕಾರಣ ಎಲೈ ಶಿವಾದ್ವೈತಿಯೇ! ನಿತ್ಯನೂ ಶುದ್ಧನೂ ಬುದ್ಧನೂ ಮುಕ್ತಸ್ವಭಾವವುಳ್ಳವನೂ ಆದ ಆತ್ಮನ ಅಜ್ಞಾನರೂಪ ಅಶುದ್ಧಿಯು ಪರಮಾರ್ಥತಃ ಇಲ್ಲದಿರುವದರಿಂದ ಅದು ಕೇವಲ ಜ್ಞಾನವೊಂದರಿಂದಲೇ ನಶ್ವರವಾದದ್ದೆಂದು ಹೇಳಬೇಕು. ಆ ಅಜ್ಞಾನವೆಂಬ ಅಶುದ್ಧಿಯು ವಸ್ತುತಃ ಸತ್ಯವೆಂದರೆ ನೀನು ಹೇಳುವ ಧ್ಯಾನದಿಂದಲಾದರೂ ಅದರ ನಾಶವಾಗಲಾರದು. ಮತ್ತು ಧ್ಯಾನವೆಂದರೆ ಚಿಂತನೆಯು. ಚಿಂತನೆಯೆಂದರೆ ಸ್ಮೃತಿಯು. ಈ ವಿಷಯದಲ್ಲಿ "ಧ್ಯೈ ಚಿಂತಾಯಾಂ" (ಧ್ಯೈ ಎಂಬ ಧಾತುವು ಚಿಂತೆಯೆಂಬರ್ಥದಲ್ಲಿರುವದು) "ಚಿತಿ ಸ್ಮೃತ್ಯಾಂ" (ಚಿಂತೆಯೆಂಬ ಅರ್ಥವುಳ್ಳ ಚಿತ್ ಎಂಬ ಧಾತುವು ಸ್ಮೃತಿಯೆಂಬರ್ಥದಲ್ಲಿರುವದು.) ಅಂದಮೇಲೆ ಶಿವಧ್ಯಾನದಿಂದ ಮುಕ್ತಿಯೆನ್ನುವ ಎಲೈ ಶಿವಾದ್ವೈತಿಯೇ ! ಧ್ಯಾನವೆಂದರೆ ಸ್ಮರಣವೆಂದರ್ಥವಾಯಿತಲ್ಲವೆ. ಈ ಸ್ಮರಣವು ಪೂರ್ವಾನುಭವವಿಲ್ಲದಿದ್ದರೆ ಆಗಲಾರದು. ಶಿವನ ಪೂರ್ವಾನುಭವವಂತೂ ಇಲ್ಲವೇ ಇಲ್ಲ. ನಿರ್ಗುಣನೂ, ನಿರಂಜನನೂ, ಆನಂದವೇ ಮುಖ್ಯವಾದ ರಸವುಳ್ಳವನೂ, ಪರಂಜ್ಯೋತಿಸ್ಸ್ವರೂಪನೂ ಯಾವದರಿಂದಲೂ ತೋರಿಸಲಶಕ್ಯನೂ ಅಸದೃ

ಚ ನೀರೂಪಸ್ಯ ಪರಬ್ರಹ್ಮಣ ಶ್ಚಾಕ್ಷುಷಾದ್ಯಯೋಗಾತ್” ಅರೂಪಮದ್ಭುತ
ಮಿತಿಶ್ರುತೇಃ ನಚಮನಸಾಪ್ಯವಗಾಹನೀಯತ್ವಂ ಸಂಭವತಿ | ಏತಸ್ಮಿನ್‌ದೃಷ್ಟೇ
ಅಪರಸ್ಯ ತತ್ಸಜಾತೀಯಸ್ಯ ಮನಸಾವಗಾಹನಸ್ಯಯುಕ್ತತ್ವಾತ್ ದೃಷ್ಟೇ ಕಲಭೆ
ಗಜರಾಜಸ್ಯ ಮಹೇಂದ್ರ ವಾಹನಸ್ಯಾಪಿ ಮನಸಾವಗಾಹನಂಯುಜ್ಯತೆ | ನೀ
ರೂಪಸ್ಯ ಸಮಧಿಕ ಶೂನ್ಯಸ್ಯ ಮನಸಾವಗಾಹನಸ್ಯಾಯುಕ್ತತ್ವಾತ್ ಯದಪಿಸ
ಗುಣಧ್ಯಾನಂ ತದಪ್ಯಯುಕ್ತಂ ಧ್ಯಾನಸ್ಯ ಸ್ಮರಣರೂಪಸ್ಯಾನುಭವಮಂತರೇಣಾ
ಪ್ರವೃತ್ತೇಃ | ಅನುಭೂತೇಪಿತಸ್ಮಿನ್, ಕರಚರಣಾದಿವಿಶಿಷ್ಟೆ ಚಂದ್ರಚೂಡೆ ಮಾ
ಯಾಪಾಶವಿಶಿಷ್ಟ ತತ್ಪೂಜಾಧ್ಯಾನಾದಿಸಾಧನ ಸಮುದಾಯಸ್ಯ ಅಸತ್ಫಲಪ
ರ್ಯವಸಾಯಿತ್ವಾಪತ್ತೇಃ ಶಶಶೃಂಗಾಯತೆ ಸಗುಣ ನಿರ್ಗುಣೆ ಧ್ಯಾನೋಪವ

ತನೂ ಪೂರ್ವದಲ್ಲಿ ಅನುಭವಿಸಲ್ಪಡದೆ ಇದ್ದವನೂ ಆದ ಪರಬ್ರಹ್ಮ ಪರಶಿವಲಿಂಗದ ಸ್ಮರಣರೂಪ
ಧ್ಯಾನವನ್ನು ಮುಕ್ತಿಗೆ ಸಾಧನವನ್ನಾಗಿ ಹೇಳುವದು ಅಯುಕ್ತವಲ್ಲವೇ ? ಇಂಥ ಪರಶಿವನಿಗೆ
ಆ ಸ್ಮರಣರೂಪಧ್ಯಾನವನ್ನು ಕಲ್ಪಿಸಿದರೆ ಆ ಗಂಗೆಯು ಆ ತಾಯಿಯು ಎಂಬಂತೆ ಪರಶಿವನಿಗೆ
ಕಾಲಾಂತರದಲ್ಲಿರುವಿಕೆಯನ್ನೂ ದೇಶಾಂತರದಲ್ಲಿರುವಿಕೆಯನ್ನೂ ಹೇಳಬೇಕಾಗುವದಲ್ಲದೆ,
ಬೇರೆ ಕಾಲ ಬೇರೆ ದೇಶಗಳಲ್ಲಿ ಇಲ್ಲದೆ ಇರುವಿಕೆಯನ್ನು ಹೇಳಬೇಕಾಗುವದು. ಆದಕಾರಣ
ಪರಶಿವಬ್ರಹ್ಮವು ಪರಿಚ್ಛಿನ್ನವಾಗಬೇಕಾಗುವದು. ಅದು ಪರಿಚ್ಛಿನ್ನವಾದಲ್ಲಿ ಸರ್ವವ್ಯಾಪಕನೂ
ಸರ್ವಕಡೆಯಲ್ಲಿರುವವನೂ ಭಗವಂತನೂ ಶಿವನು ಎಂಬರ್ಥವುಳ್ಳ ಶ್ರುತ್ಯಾದಿಗಳಿಗೆ ವಿರುದ್ಧವಾ
ಗುವದು. ಮತ್ತು ಆ ಪರಶಿವಬ್ರಹ್ಮದ ಪೂರ್ವಾನುಭವವು ಪ್ರತ್ಯಕ್ಷರೂಪವೆಂದು ಹೇಳಲಿಕ್ಕೆ
ಆಗುವದಿಲ್ಲಾ. ಯಾಕೆಂದರೆ ಅದಕ್ಕೆ ನೀಲಪೀತಾದಿ ರೂಪಗಳಿರುವದಿಲ್ಲಾ. “ಅರೂಪಮದ್ಭು
ತಂ” ಎಂದು ಶ್ರುತಿ ಇರುವದು. ಮತ್ತು ಮಾನಸ ಪ್ರತ್ಯಕ್ಷರೂಪ ಪೂರ್ವಾನುಭವವನ್ನೂ ಹೇಳ
ಲಿಕ್ಕೆ ಆಗುವದಿಲ್ಲಾ. ಒಂದು ಪದಾರ್ಥವು ಪ್ರತ್ಯಕ್ಷವಾಗಿ ನೋಡಲ್ಪಡುತ್ತಿರಲಿಕ್ಕೆ ಮತ್ತೊಂ
ದು ಅವರ ಸಜಾತೀಯವಾದ ಪದಾರ್ಥಕ್ಕೆ ಮನಸ್ಸಿನಿಂದ ಅವಗಾಹನೆಯು ಯುಕ್ತವಾಗುವ
ದು. ಒಂದು ಆನೆಯು ನೋಡಲ್ಪಡುತ್ತಿರಲಿಕ್ಕೆ ಅದಕ್ಕೆ ಸಜಾತೀಯವಾದ ಗಜರಾಜವಾದ
ಮಹೇಂದ್ರನ ವಾಹನಕ್ಕೆ ಮನಸ್ಸಿನಿಂದ ಅವಗಾಹನೆಯು ಯುಕ್ತವಾಗುವದು. ರೂಪಯಿಲ್ಲದಿ
ರುವ ತನಗಿಂತಲೂ ಅಧಿಕ ವಸ್ತುವು ಸಮಾನ ವಸ್ತುವು ಇಲ್ಲದಿರುವ ಪರಬ್ರಹ್ಮಕ್ಕೆ ಮನಸ್ಸಿನಿಂದ
ಅವಗಾಹನೆಯು (ಪ್ರತ್ಯಕ್ಷವು) ಯುಕ್ತವಾಗುವದಿಲ್ಲಾ. ಸಗುಣಮೂರ್ತಿಯ ಧ್ಯಾನವು ಕೂಡ
ಯುಕ್ತವಾಗುವದಿಲ್ಲಾ. ಆ ಸ್ಮರಣ ರೂಪವಾದ ಧ್ಯಾನವು ಆ ಸಗುಣಮೂರ್ತಿಯ ಪೂರ್ವಾ
ನುಭವವಿಲ್ಲದೆ ಆಗಲಾರದಷ್ಟೆ ಕರಚರಣಾದಿ ಅವಯವಗಳಿಂದ ಕೂಡಿದ ಮಾಯಾಪಾಶವಿಶಿಷ್ಟ
ವಾದ ಚಂದ್ರಚೂಡನಾದ ನೀಲಕಂಠಮೂರ್ತಿಯು ಪೂರ್ವಾನುಭವಕ್ಕೆ ವಿಷಯವಾದರೂ
ಆ ಮೂರ್ತಿಯ ಪೂಜಾಧ್ಯಾನ ಮೊದಲಾದ ಸಾಧನೆಗಳು ಅಸತ್ಫಲವುಳ್ಳವುಗಳಾಗುವವು.

ರ್ಣನಂ ಇತಿ ಪೂರ್ವಪಕ್ಷವಿಕ್ಷೇಪೇಪ್ರಾಪ್ತೇ ಬ್ರೂಮಃ| ಸ್ಮೃತಿರೂಪಸ್ಯ ಧ್ಯಾನಸ್ಯದಾರ್ಢ್ಯೇ ತಸ್ಯದರ್ಶನರೂಪತ್ವಾಭ್ಯುಪಗಮಾತ್ | ನ "ತಸ್ಮಿನ್‌ದೃಷ್ಟೇಪರಾವರೇ" ಇತಿ ಶ್ರುತಿವಿರೋಧಃ | ಅನ್ಯಥಾ "ಆಹಾರಶುದ್ಧೌ ಸತ್ವಶುದ್ಧಿಃ ಸತ್ವಶುದ್ಧೌಧ್ರುವಾಸ್ಮೃತಿಃ ಸ್ಮೃತಿ ಲಂಭೆ (ಸ್ಮೃತಿಧ್ರೌವ್ಯೇ) ಸರ್ವಗ್ರಂಥೀನಾಂ ವಿಪ್ರಮೋಕ್ಷಃ" ಇತ್ಯಾದಿಶ್ರುತಿವಿರೋಧಃಸ್ಯಾತ್. ಯದಪ್ಯುಕ್ತಂ ಸರ್ವವ್ಯಾಪಕಸ್ಯಾಖಂಡಸ್ಯ ಮೂರ್ತತ್ವಾಭಾವಾದಿತಿ ತದಪಿಶ್ರುತಿವಿರುದ್ಧಂ | "ಇಷ್ಟಮೂರ್ಜಂತಪಸಾಸುಯಚ್ಛತಿ ಸರ್ವದಾ" "ತತ್ಪ್ರಾಣೇಷ್ವಂತರ್ಮನಸೋಲಿಂಗಮಾಹುಃ" "ಭಾವಗ್ರಾಹ್ಯಮನೀಡಾಖ್ಯಂ ಭಾವಾಭಾವಕರಂ ಶಿವಂ ಕಲಾಸರ್ಗಕರಂದೇವಂಯೇವಿದುಸ್ತೇಜಹುಸ್ತನುಂ" ಇತ್ಯಾದಿಶ್ರುತ್ಯಾ ಸಚ್ಚಿದಾನಂ

ಯಾಕಂದರೆ ತಾನೇ ಮಾಯಾಪಾಶದಿಂ ಬಿಗಿಯಲ್ಪಟ್ಟಿರುವವರಿಂದ ತನ್ನನ್ನು ಅವಲಂಬಿಸಿರುವ ಅನ್ಯರ ಪಾಶಗಳನ್ನು ಛೇದಿಸಲಾರದು. ಆದುದರಿಂದ ಸಗುಣ ನಿರ್ಗುಣ ಧ್ಯಾನವು ಮುಕ್ತಿಯ ಸಾಧನವೆಂದು ಹೇಳುವದು ಅತ್ಯಂತ ಅಯುಕ್ತವಾದದ್ದು ಎಂಬದಾಗಿ ಅನೇಕ ಆಕ್ಷೇಪಗಳನ್ನು ಬ್ರಹ್ಮಾದ್ವೈತಿಯು ಶಿವಾದ್ವೈತಿಯ ಮೇಲೆ ಮಾಡಲು ಶಿವಾದ್ವೈತಿಯು ಬಹು ಸರಸವಾಗಿ ಸಮಾಧಾನವನ್ನು ಹೇಳುವನು. ಏನಂದರೆ—ಎಲೈ ವಿವರ್ತವಾದಿಯಾದ ಬ್ರಹ್ಮಾದ್ವೈತಿಯೆ! ಧ್ಯಾನವು ಸ್ಮರಣರೂಪವಾಗುವದು. ಆದ್ದರಿಂದ ಅದು ಮುಕ್ತಿಗೆ ಕಾರಣವಲ್ಲವು. "ತಸ್ಮಿನ್‌ದೃಷ್ಟೇಪರಾವರೇ" ಎಂಬುವ ಶ್ರುತಿಯಿಂದ ಪ್ರತ್ಯಕ್ಷವೇ ಮುಕ್ತಿಗೆ ಕಾರಣವೆಂದು ಹೇಳುವೆಯಲ್ಲವೆ? ಸ್ಮೃತಿರೂಪವಾದ ಧ್ಯಾನವು ಅಭ್ಯಾಸವಶದಿಂದ ಪ್ರತ್ಯಕ್ಷರೂಪವೇ ಆಗುವದು. ಆದಕಾರಣದಿಂದ "ತಸ್ಮಿನ್‌ದೃಷ್ಟೇಪರಾವರೇ" ಎಂಬ ಶ್ರುತಿಗೆ ವಿರೋಧವಿಲ್ಲವು. ಆದ್ದರಿಂದ ಅಬ್ರಹ್ಮದ ಪ್ರತ್ಯಕ್ಷವೇ ಮುಕ್ತಿಗೆ ಕಾರಣವಲ್ಲದೆ ಧ್ಯಾನವು ಕಾರಣವಲ್ಲವೆಂಬ ವಿಷಯದಲ್ಲಿ ಮೇಲೆ ಹೇಳಿದ ಶ್ರುತಿಯನ್ನೇ ನೀನು ಪ್ರಬಲಪ್ರಮಾಣವಾಗಿಟ್ಟುಕೊಂಡು ಉದ್ಘೋಷಿಸುವದು ಸರಿಯಲ್ಲವು ಎಲೈ ಶಿವಾದ್ವೈತಿಯೇ! ಧ್ಯಾನವೇ ಅಭ್ಯಾಸವಶದಿಂದ ಪ್ರತ್ಯಕ್ಷರೂಪವಾಗುವದೆನ್ನುವ ನಿನ್ನಮಾತನ್ನೇ ವೇದಪ್ರಮಾಣವನ್ನಾಗಿ ತಿಳಿಯಬೇಕೇನು; ಸ್ಮೃತಿಯು ಪ್ರತ್ಯಕ್ಷರೂಪವಾಗುವದೆನ್ನುವಲ್ಲಿ ಯಾವ ಪ್ರಮಾಣವನ್ನು ಹೇಳುವಿಯೆ ಅಂದರೆ ಆಹಾರದ ಶುದ್ಧಿಯಾಗಲು ಸತ್ವಶುದ್ಧಿಯು. ಸತ್ವಶುದ್ಧಿಯಾಗಲು ದೃಢವಾದ ಸ್ಮೃತಿಯು. ಸ್ಮೃತಿಯು ದೃಢವಾಗಲು ಸರ್ವ ಅಜ್ಞಾನಾದಿ ಗ್ರಂಥಿಗಳ ಬಿಡುಗಡೆಯು. ಎಂಬರ್ಥವುಳ್ಳ ಪ್ರಸಿದ್ಧವಾದ ಶ್ರುತಿಯೇ ಪ್ರಮಾಣವಾಗಿರುವದು. ಬ್ರಹ್ಮಾದ್ವೈತಿಯೇ ಈಗ ಸ್ವಲ್ಪ ವಿಚಾರಿಸು. ನಿನ್ನ ಪಕ್ಷಕ್ಕೆ ಅನುಕೂಲವೆಂದು ತಿಳಿದುಕೊಂಡು ನೀನು ತೆಗೆದುಕೊಂಡ "ತಸ್ಮಿನ್‌ದೃಷ್ಟೇಪರಾವರೇ" ಎಂಬ ಶ್ರುತಿಯು ಬ್ರಹ್ಮಾತ್ಮೈಕ್ಯಪ್ರತ್ಯಕ್ಷವೇ ಸರ್ವ ಅಜ್ಞಾನಾದಿ ಗ್ರಂಥಿಗಳ ನಾಶಕ್ಕೆ ಕಾರಣವೆಂದು ಹೇಳುತ್ತದೆ. ನನ್ನ ಪಕ್ಷಕ್ಕೆ ಅನುಕೂಲವೆಂದು ತೆಗೆದುಕೊಂಡ 'ಸ್ಮೃತಿಧ್ರೌವ್ಯೇ, ಸರ್ವಗ್ರಂಥೀನಾಂ ವಿಪ್ರಮೋ

ದಾತ್ಮಕಸ್ಯ ಘೃತಕಾಠಿಣ್ಯನ್ಯಾಯೇನ ಲಿಂಗಮೂರ್ತಿತ್ವಾವಗಮಾತ್ | ಅಚಿಂತ್ಯಾನಂತಶಕ್ತಿಕಸ್ಯ ಪರಶಿವಸ್ಯ. "ಮನಃಪ್ರತ್ಯಕ್ಚಿತ್ತೇ ಸವಿಧಮವಧಾರ್ಯಾತ್ತಮರುತಃ | ಪ್ರಹೃಷ್ಯದ್ರೋಮಾಣಃ ಪ್ರಮದಸಲಿಲೋತ್ಸಂಗಿತದೃಶಃ || ಯದಾಲೋಕ್ಯಾಹ್ಲಾದಂ ಹ್ರದಇವ ನಿಮಜ್ಜ್ಯಾಮೃತಮಯೆ | ದಧತ್ಯಂತಸ್ತತ್ತ್ವಂ ಕಿಮಪಿಯಮಿನಸ್ತತ್ಕಿಲಭವಾನ್ || ಉಪಾಸನಾರ್ಥಮಂತಸ್ಥಂ ಪರಿಚ್ಛಿನ್ನಂ ಸ್ವಮಾಯಯಾ | ಇತ್ಯುಕ್ತಪ್ರಕಾರೇಣ ವಾಸ್ತವಪರಿಚ್ಛೇದಸಂಭವಾತ್. ಹೃದಯಪುಂಡರೀಕಾದ್ಯುಪಾಸನಂ ಸಂಗಚ್ಛತೆ. "ಅಣೋರಣೀಯಾನ್ಮಹತೋಮಹೀಯಾನ್" ಇತಿಶ್ರುತೇಃ ನಚಾಮೃತತ್ವಸ್ಯಾನಿತ್ಯತ್ವಾಪತ್ತಿಃ | ಸರ್ವಸ್ಯಾಪಿ ಸತ್ಯತ್ವಾಭ್ಯುಪಗಮಾತ್ ತಸ್ಯನಿತ್ಯತ್ವೇಪಿ ತದಾವರಕಸಂಕೋಚ ಕಲಾಭಿಭವಾರ್ಥತ್ವಾತ್

ಕ್ಷಃ" ಎಂಬ ಶೃತಿಯು ದೃಢವಾದ ಸ್ಮೃತಿಯೇ ಸರ್ವ ಅಜ್ಞಾನಾದಿ ಗ್ರಂಥಿಗಳ ನಾಶಕ್ಕೆ ಕಾರಣವೆಂದು ಹೇಳುತ್ತದೆ. ಈ ಎರಡು ಶ್ರುತಿಗಳ ವಿರೋಧವನ್ನು ವೈದಿಕನಾದ ನೀನು ಪರಿಹರಿಸಬೇಕಲ್ಲವೇ ? ದೃಢವಾದ ಸ್ಮೃತಿಯು ಪ್ರತ್ಯಕ್ಷರೂಪವಾಗುವದು. ಎನ್ನುವ ನನ್ನ ಮಾತನ್ನು ಬಿಟ್ಟು ನೀನು ವಿರೋಧ ಹೇಗೆ ಪರಿಹರಿಸುವಿಯೆ ? ಆದ್ದರಿಂದ ಸ್ಮೃತಿಯು ದೃಢವಾಗಲು ಪ್ರತ್ಯಕ್ಷರೂಪವಾಗುವದು. ಧ್ಯಾನವು ಮುಕ್ತಿಗೆ ಕಾರಣವಲ್ಲವೆನ್ನುವ ನಿನ್ನ ಪಕ್ಷವು ದುರ್ಬಲವಾದದ್ದು. ಆದುದರಿಂದ ಆ ನಿನ್ನ ಪಕ್ಷವನ್ನು ಬಿಟ್ಟು ನನ್ನ ಪಕ್ಷವನ್ನನುಸರಿಸಿ ಸದ್ಗತಿಯನ್ನು ಹೊಂದುವದು ಯೋಗ್ಯವೆಂದು ಕಂಡುಬರುತ್ತದೆ. ಎಲೈ ಬ್ರಹ್ಮಾದ್ವೈತಿಯೇ ! ಸರ್ವವ್ಯಾಪಕವಾದ ಅಖಂಡವಾದ ಪರಬ್ರಹ್ಮವು ಮೂರ್ತಪದಾರ್ಥವಾಗದಿರುವದರಿಂದ ಅದರ ಧ್ಯಾನವೇ ಮನಸ್ಸಿನಲ್ಲಿ ಸಂಭವಿಸಲಾರದು. ಎಂಬ ಎರಡನೇ ನಿನ್ನ ಆಕ್ಷೇಪಣೆಯಾದರೂ ಶ್ರುತಿವಿರುದ್ಧವಾದದ್ದೇ ಆಗಿದೆ. "ಇಷ್ಟಮೂರ್ಜಂ" ಎಂಬ ಶೃತಿಯಿಂದ ಇಷ್ಟಲಿಂಗವೂ, "ಶತಪ್ರಾಣಸ್ವಂತಃ" ಎಂಬ ಶೃತಿಯಿಂದ ಪ್ರಾಣಲಿಂಗವೂ, "ಭಾವಗ್ರಾಹ್ಯಂ" ಎಂಬ ಶೃತಿಯಿಂದ ಭಾವಲಿಂಗವೂ ಹೇಳಲ್ಪಡುವ ಕಾರಣ, ಆ ಸಚ್ಚಿದಾನಂದರೂಪ ಪರಬ್ರಹ್ಮವೇ ಕರಗಿದ ತುಪ್ಪವು ಗಟ್ಟಿಗೊಂಡಂತೆ ಲಿಂಗಮೂರ್ತಿಯ ಸ್ವರೂಪವಾಗಿದೆಯೆಂದು ಕಂಡುಬರುವಕಾರಣ, ಪರಬ್ರಹ್ಮವು ಮೂರ್ತಪದಾರ್ಥವಲ್ಲವಾದದರಿಂದ ಮನಸ್ಸಿನಲ್ಲಿ ಅದರ ಧ್ಯಾನವು ಸಂಭವಿಸುವದಿಲ್ಲವೆಂಬುವದು ಶೃತಿವಿರುದ್ಧವು. ಆ ಪರಬ್ರಹ್ಮವು ತನ್ನ ಅದ್ಭುತ ಶಕ್ತಿಯಿಂದ ಮೂರ್ತಸ್ವರೂಪವೂ ಅಮೂರ್ತಸ್ವರೂಪವೂ ಕೂಡ ಆಗಿರುವದೆಂದು ಮೇಲಣ ಶೃತಿಗಳಿಂದ ಸಿದ್ಧವಾಗುವದಲ್ಲದೆ, ಇಂದ್ರಿಯ ನಿಗ್ರಹದಲ್ಲಿ ಶೂರರಾದವರು ಅಂತಸ್ತತ್ವವನ್ನು (ಪ್ರಾಣಲಿಂಗವನ್ನು) ಧರಿಸುತ್ತಾರೆ. ಎಂಬರ್ಥವುಳ್ಳ ಮಹಿಮ್ನ ಸ್ತೋತ್ರವನ್ನು ರಚಿಸಿದಪುಷ್ಪದಂತನು ಮನಸ್ಸಿನಲ್ಲಿ ಆ ಬ್ರಹ್ಮದ ಧ್ಯಾನವು ಸಂಭವಿಸುತ್ತದೆಂಬುವ ಅಭಿಪ್ರಾಯವನ್ನು ಕೊಟ್ಟಿದ್ದಾನೆ. ಅಲ್ಲದೆ ಆ ಬ್ರಹ್ಮದ ವಾಸ್ತವಿಕವಾದ ಮೂರ್ತಸ್ವರೂಪವನ್ನೂ ಕೂಡ ಅಂಗೀಕರಿಸುವನೆಂದು ಸ್ಪಷ್ಟವಾಗುವದು. ಇದಲ್ಲದೆ ಆ ಪರಬ್ರ

ಧ್ಯಾನಾದೇರುಪಾಯಸ್ಯ ಅಜ್ಞಾನಾದಿ ಸಂಕೋಚಸ್ಯ ಸತ್ಯತ್ವೇಪಿ ತನ್ನಿವೃತ್ತೇ ರುಪಪನ್ನತ್ವಾತ್ ಸತ್ಯಸ್ಯ ತಾಮ್ರಾದೇಃ ಸುವರ್ಣತ್ವ ದಶಾವಚ್ಛೇದೇನ ನಿವೃತ್ತಿ ಸಂಭವಾತ್. ಕಾರ್ಯನಿವೃತ್ತಿರ್ನಾಮ ಕಾರಣರೂಪೇಣಸ್ಥಿತಿಃ. ತಸ್ಮಾದ್ದುಸ್ತರ ಭವನಿಸ್ತರಣದೃಢೋಪಾಯ ಧ್ಯಾನಾದಿನಾ ಅಮೃತತ್ವಪ್ರಾಪ್ತೇಃ ಸಿದ್ಧತ್ವಾತ್, ಕೇವಲೇನ ವಾಕ್ಯಜಸ್ಯ ಜ್ಞಾನೇನ ಸರ್ವಗ್ರಂಥಿವಿಚ್ಛೇದಾಭಾವಾತ್ "ಯದಾಸರ್ವೇಪ್ರಭಿದ್ಯಂತೆ ಹೃದಯಸ್ಯೇಹಗ್ರಂಥಯಃ ಅಥಮರ್ತ್ಯೋಽಮೃತೋಭವತಿ ಏತಾವದನುಶಾಸನಂ" ಇತಿಶ್ರುತೇಃ ಹೃದಯಗ್ರಂಥಿಭೇದಾಭಾವೇ ಅಮೃತತ್ವಾಪ್ರಾಪ್ತೇಃ | ಹೃದಯಾಧಿಕರಣಕಗ್ರಂಥೇಃ ಭೇದಕಸ್ಯಾಪಿ ತದಧಿಕರಣಕತ್ವಂವಕ್ತವ್ಯಂ | ಅನ್ಯಥಾ ಏಕತ್ರಸ್ಥಿತಸ್ಯಾ ನ್ಯತ್ರಸ್ಥಿತೇನ ಭೇದ್ಯತ್ವಂ ಸ್ಯಾತ್. ಸಚ ಹೃದಯಾಧಿಕರಣಕಾಖಂಡಬ್ರಹ್ಮಾಕಾರವೃತ್ತೇರೇವ ತದ್ಭೇದಕತ್ವಮಿತಿವಾಚ್ಯಂ

ಹ್ಮವು ತನ್ನ ಮಾಯಾಶಕ್ತಿಯಿಂದ ಭಕ್ತರ ಉಪಾಸನೆಯ ಸಲುವಾಗಿ ಅಂತಸ್ಥವೂ ಪರಿಚ್ಛಿನ್ನವೂ ಆಗಿರುವವೆಂಬುವ ರೇಣುಕ ಭಗವತ್ಪಾದರ ವಾಕ್ಯದಿಂದ ಆ ಪರಬ್ರಹ್ಮಕ್ಕೆ ಪರಿಚ್ಛೇದವು ಯಥಾರ್ಥವಾದದ್ದೆಂದು ಸಿದ್ಧವಾಗುತ್ತದೆ. ಅದ್ದರಿಂದ ಹೃತ್ಪುಂಡರೀಕಾದಿಯಲ್ಲಿ ಆ ಪರಬ್ರಹ್ಮಧ್ಯಾನವು ಸಂಭವಿಸುತ್ತದೆ ಎಲೈ ಬ್ರಹ್ಮಾದ್ವೈತಿಯೇ! "ಅಣೋರಣೀಯಾನ್‌ಮಹತೊ ಮಹೀಯಾನ್" ಎಂಬ ಶೃತಿಯಿಂದ ಆ ಪರಬ್ರಹ್ಮದ ಮೂರ್ತಾಮೂರ್ತಸ್ವರೂಪಗಳು ಪಾರಮಾರ್ಥಿಕಗಳೆಂದು ಸ್ಪಷ್ಟವಾಗುತ್ತದೆಲ್ಲವೇ ? ಅದ್ದರಿಂದ ಮನಸ್ಸಿನಲ್ಲಿ ಆ ಬ್ರಹ್ಮದ ಧ್ಯಾನವು ಸಂಭವಿಸಲಾರದೆಂಬುವ ನಿನ್ನ ಪೂರ್ವಪಕ್ಷವು ಅಸಂಗತವೇ ಸರಿ. ಇದಲ್ಲದೆ ಆ ಧ್ಯಾನದಿಂದ ಮೋಕ್ಷವು ಸಾಧ್ಯವಾಗುವದೆಂದರೆ ಮೋಕ್ಷವು ಅನಿತ್ಯವಾಗಬೇಕು. ಎಂಬ ನಿನ್ನ ಆಕ್ಷೇಪಣೆಯೂ ಕೂಡ ಯುಕ್ತವಾಗುವದಿಲ್ಲ. ಯಾಕಂದರೆ ನಮ್ಮ ಶಿವಾದ್ವೈತ ಮತದಲ್ಲಿ ಸರ್ವ ಪ್ರಪಂಚವೂ ನಿತ್ಯವಾಗಿಯೇ ಇರುವದು. ಅಂದಮೇಲೆ ಮೋಕ್ಷವು ಅನಿತ್ಯವಾಗಬಹುದೇ ? ಅದೂಕೂಡ ನಿತ್ಯವಾದದ್ದೇ. ಹಾಗಾದರೆ ಎಲೈ ಶಿವಾದ್ವೈತಿಯೇ ನಿಮ್ಮ ಮತದಲ್ಲಿ ಮೋಕ್ಷವು ನಿತ್ಯವಾಗಿದ್ದರೆ ಧ್ಯಾನಾದಿ ಉಪಾಯಗಳೇಕೆ? ಅಂದರೆ ಅದು ನಿತ್ಯವಾಗಿದ್ದರೂ ಅದಕ್ಕೆ ಆವರಕವಾದ ಸಂಕೋಚಕಳೆಯ ನಾಶಕ್ಕಾಗಿ ಧ್ಯಾನಾದಿ ಉಪಾಯಗಳು ಬೇಕು. ಶಿವಾದ್ವೈತಿಯೇ ನಿನ್ನ ಮತದಲ್ಲಿ ಅಜ್ಞಾನಾದಿ ಸಂಕೋಚವೂ ಕೂಡ ನಿತ್ಯ (ಸತ್ಯ) ವಾಗಿದೆಯಲ್ಲವೇ ? ಈ ಸತ್ಯವಾದ ಸಂಕೋಚದ ನಿವೃತ್ತಿರೂಪ ಪ್ರಯೋಜನವನ್ನಾದರೂ ಹೇಗೆ ಹೇಳುವಿ ? ಅಂದರೆ ಬ್ರಹ್ಮಾದ್ವೈತಿಯೇ ಸತ್ಯವಾದ ತಾಮ್ರದ ನಿವೃತ್ತಿಯು ಅದು ರಸಯೋಗದಿಂದ ಸುವರ್ಣವಾದಕಾಲದಲ್ಲಿ ಕಂಡುಬರುವಂತೆ, ಶಿವಯೋಗದಿಂದ ಜೀವನು ಶಿವನಾದಮೇಲೆ ಸತ್ಯವಾದ ಬಂಧದ ನಿವೃತ್ತಿಯನ್ನು ಒಪ್ಪಿಕೊಳ್ಳತಕ್ಕದ್ದು. ನಾನು ಹೇಳುವ ಕಾರ್ಯದ ನಿವೃತ್ತಿಯಂದರೆ ಕಾರಣರೂಪವಾಗಿ ಇರುವಿಕೆಯಂದು ಅರ್ಥ ಮಾಡಬೇಕು. ನಾಶವೆಂದು ತಿಳಿಯಕೂಡದು. ಆದುದ

ತಸ್ಯಾಜಡತ್ವಾತ್ ತದಯೋಗಾತ್ | ಅಸಂಗಸ್ಯ ಬ್ರಹ್ಮಣಸ್ತದಸಂಭವಾತ್ ಬಾಧ್ಯಬಾಧಕ ಭಾವಾಸಂಭವಶ್ಚಮತ್ಕೃತ ಬ್ರಹ್ಮಸೂತ್ರಶಾಂಕರ್ಯಾಂದರ್ಶಿತ ಇತಿ ತಾದೃಶಾಶುದ್ಧಿಗ್ರಂಥಿಪ್ರವಿಲಯಾಯ ಧ್ಯಾನಂ ವಿಧೀಯತೆ ಶ್ರುತಿ ಸ್ಮೃತಿ ಪುರಾಣೇತಿಹಾಸಾದಿಷು ತಥಾಹಿ. ಅಥರ್ವಶಿಖಾಯಾಂ ''ಶಿವಏಕೋಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ ಸಮಾಪ್ತಾಥರ್ವಣೀಶ್ರುತಿಃ'' ಇತ್ಯಸ್ಯಾ ಉಪಬೃಂಹಣವಾಕ್ಯಂಚ ಸೂತಸಂಹಿತಾಯಾಂ ಯಜ್ಞವೈಭವಖಂಡೇಶ್ರೂಯತೆ ‖ ಅಥ ಮೋಕ್ಷಾರ್ಥಿಭಿಃ ಪ್ರಾಜ್ಞೈಃ ಶಿವಏವ ಶಿವಂಕರಃ | ಧ್ಯೇಯಃ ಸರ್ವಂಪರಿತ್ಯಜ್ಯ ಶಿವಾದನ್ಯತ್ತುದೈವತಂ ‖ ಅಸ್ಮಿನ್ನರ್ಥೆಶ್ರುತಿಃ ಸಾಧ್ವೀ ಸಮಾಪ್ತಾವೇದ ವಿತ್ತಮಾ ‖ ಇತಿ ''ಸರ್ವಂಖಲ್ವಿದಂಬ್ರಹ್ಮ ತಜ್ಜಲಾನಿಶಾಂತಉಪಾಸೀತೇತಿ'' ಇತಿ ಶ್ರುತಿರಪ್ಯುಪಾಸನಾಮುಪದಿಶತಿ | ತಸ್ಮಾಜ್ಜಾಯತ ಇತಿತಜ್ಜಂ ತಸ್ಮಿನ್

ರಿಂದ ದುಸ್ತರವಾದ ಸಂಸಾರ ಸಮುದ್ರದ ನಿಸ್ತರಣದಲ್ಲಿ ಸಮರ್ಥವಾದ ಧ್ಯಾನಾದಿ ಉಪಾಯವೇ ಮುಖ್ಯವಾದದ್ದೆಂದು ಸಿದ್ಧವಾದದ್ದರಿಂದ ಧ್ಯಾನದಿಂದ ಮುಕ್ತಿಯೆಂದು ಹೇಳುವಲ್ಲಿ ಯಾವ ಸಂಶಯವೂ ಇಲ್ಲವು.

ತತ್ವಮಸ್ಯಾದಿ ವಾಕ್ಯಜನ್ಯವಾದ ಜ್ಞಾನವು (ವೃತ್ತಿಯು) ನಿನ್ನ ಮತದಲ್ಲಿ ಜಡವಾಗಿ ರುವದರಿಂದ ಆ ವೃತ್ತಿಯು ಸರ್ವ ಹೃದಯದ ಅಜ್ಞಾನಾದಿ ಗ್ರಂಥಿಗಳನ್ನು ನಾಶಮಾಡಲಾರದು. ಆ ಗ್ರಂಥಿಗಳ ನಾಶವಾಗದಿದ್ದರೆ ಮುಕ್ತಿಯು ಸಂಭವಿಸಲಾರದು. ಯಾವಾಗ ಹೃದಯದ ಸರ್ವಗ್ರಂಥಿಗಳೂ ನಾಶವಾಗುವವೊ ಅದೇ ಕಾಲದಲ್ಲಿ ಮನುಷ್ಯನು ಅಮೃತನು (ಮುಕ್ತನಾಗುವನು) ಎಂದು ಶ್ರುತಿಯು ತಿಳಿಸಿರುತ್ತದೆ. ಹೃದಯದಲ್ಲಿರುವ ಅಜ್ಞಾನಾದಿ ಗ್ರಂಥಿಗಳನ್ನು ನಾಶಮಾಡಬೇಕಾದರೆ ವಿರೋಧಿಯೂ ಕೂಡ ಹೃದಯದಲ್ಲಿಯೇ ಇರಬೇಕು ಅಲ್ಲಿರದಿದ್ದರೆ ನಾಶವೇ ಆಗಲಾರದು. ಆದ್ದರಿಂದ ''ಅಹಂಬ್ರಹ್ಮಾಸ್ಮಿ'' ಎಂಬುವ ವೃತ್ತಿಯು ಹೃದಯದಲ್ಲಿಯೇ ಇರುವದು. ಅಜ್ಞಾನವು ಕೂಡಾ ಹೃದಯದಲ್ಲಿರುವದು. ಅಂದರೆ ಆ ವೃತ್ತಿಯು ಜಡವಾದದ್ದು ಆದುದರಿಂದ ಅಜ್ಞಾನದ ನಾಶಕ್ಕೆ ಅನುಕೂಲವಾಗಿ ಪ್ರಯತ್ನ ಪಡಲಾರದೆಂದು ಹೇಳಿಯೇ ಇದ್ದೇವೆ. ಇನ್ನು ಬ್ರಹ್ಮವೇ ಅದನ್ನು ನಾಶಮಾಡುತ್ತದೆಂದರೆ ಬ್ರಹ್ಮಕ್ಕೆ ಏನೂ ಬೇಕಿಲ್ಲವು. ಅದು ಕೇವಲ ಸಾಕ್ಷಿಯು (ಉದಾಸೀನವು) ಅಸಂಗವು ಇದಲ್ಲದೆ ವೃತ್ತಿಗೂ ಅಜ್ಞಾನಕ್ಕೂ ಬಾಧ್ಯಬಾಧಕಭಾವವು ಸಂಭವಿಸುವದಿಲ್ಲವೆಂದು ನಾವು ಬ್ರಹ್ಮಸೂತ್ರ ಶಾಂಕರೀ ವೃತ್ತಿಯಲ್ಲಿ ವಿಸ್ತಾರವಾಗಿ ಹೇಳಿದ್ದೇವೆ ಅಲ್ಲಿಯೇ ವಿಶೇಷ ಸಂಗತಿಯನ್ನು ತಿಳಿದುಕೊಳ್ಳಿರಿ. ಎಂದು ಶಾಂಕರೀಕಾರನು ಹೇಳಿರುವನು. ಆದುದರಿಂದ ಅಂಥ ಅಜ್ಞಾನಾದಿ ಅಶುದ್ಧಿಯ ನಾಶಕ್ಕಾಗಿ ಧ್ಯಾನವೇ ಉಪಾಯವೆಂದು ಶ್ರುತಿ ಸ್ಮೃತಿ ಇತಿಹಾಸ ಪುರಾಣ ಮೊದಲಾದ ಗ್ರಂಥಗಳಲ್ಲಿ ವಿಧಿಸಲ್ಪಡುತ್ತದೆ.

ಲೀಯತ ಇತಿ ತಲ್ಲಂ ತಸ್ಮಿನ್ನನಿತೀತಿ ತದನಂ । ತಜ್ಜಂಚ ತಲ್ಲಂಚ ತದನಂಚೇತಿ ತಜ್ಜಲಾನಿ । ಅವಯುವಲೋಪಶ್ಛಾಂದಸಃ ಇತಿ ಶಬ್ದೋ ಹೇತ್ವರ್ಥಃ ಅರ್ಥಾತ್ ಚಿದಚಿತ್ಪ್ರಪಂಚಾತ್ಮಕಂ ಬ್ರಹ್ಮ. ಸೃಷ್ಟಿಸ್ಥಿತಿಲಯಾಧಿಷ್ಠಾನತ್ವೇನೋಪಾಸಿತವ್ಯಂ ಶಮಾನ್ವಿತೇನೇತಿ ವಿಧೀಯತೇ । ಕಠವಲ್ಲೀಷ್ವಪಿ "ನಾಯಮಾತ್ಮಾ ಬಲಹೀನೇನ ಲಭ್ಯೋ ನ ಮೇಧಯಾ ನ ಬಹುನಾ ಶ್ರುತೇನ ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನೂಂಸ್ವಾಂ" ಇತ್ಯುಕ್ತಂ" ಯೋಗಯಾಜ್ಞವಲ್ಕ್ಯಸ್ಮೃತೌ । ಅಥ ಧ್ಯಾನಂ ಪ್ರವಕ್ಷ್ಯಾಮಿ ಶೃಣು ಗಾರ್ಗಿ ವರಾನನೇ । ಧ್ಯಾನಮೇವ ಹಿ ಸರ್ವೇಷಾಂ ಕಾರಣಂ ಬಂಧಮೋಕ್ಷಯೋಃ ॥ ಧ್ಯಾನಂ ಶಿವಸ್ವರೂಪಸ್ಯ ವೇದನಂ ಮನಸಾ ಖಲು ॥ ಕೃಷ್ಣಗೀತಾಯಾಂ. ಯುಂಜನ್ನೇವಂ ಸದಾತ್ಮಾನಂ ಯೋಗೀ ನಿಯತಮಾನಸಃ । ಶಾಂತಿಂ ನಿರ್ವಾಣಪರ

ಧ್ಯಾನವೇ ಮೋಕ್ಷಕ್ಕೆ ಕಾರಣವೆಂದು ಅಥರ್ವಶಿಖೋಪನಿಷತ್ತು ವಿಧಿಸುತ್ತದೆ. ಅಂದರೆ ಶಿವಾತಿರಿಕ್ತ ವಿಷ್ಣ್ವಾದಿ ದೇವತೆಗಳನ್ನು ಬಿಟ್ಟು ಮೋಕ್ಷವೆಂಬ ಕಲ್ಯಾಣವನ್ನುಂಟುಮಾಡುವುದರಿಂದ ಶಿವನೊಬ್ಬನೇ ಧ್ಯಾನಿಸಲ್ಪಡಲು ಯೋಗ್ಯನು. ಈ ವಿಷಯದಲ್ಲಿ ಶ್ರುತಿಯು ಸಮಾಪ್ತವಾಯಿತು. ಎಲ್ಲಿ ? ಬ್ರಹ್ಮಾದ್ವೈತಿಯೇ ಧ್ಯಾನವು ಮುಕ್ತಿಗೆ ಸಾಕ್ಷಾತ್ಕಾರಣವಾಗಿದ್ದ ಪಕ್ಷದಲ್ಲಿ "ಶಿವ ಏಕೋ ಧ್ಯೇಯಃ" ಎಂದು ಅಥರ್ವ ಶ್ರುತಿಯು ಧ್ಯಾನವು ಮುಕ್ತಿಗೆ ಕಾರಣವೆಂದು ಏಕೆ ವಿಧಾನಮಾಡುತ್ತದೆ. ಈ ಶ್ರುತ್ಯರ್ಥವನ್ನು ಶ್ರೀ ವ್ಯಾಸರು ತಮ್ಮ ಸೂತಸಂಹಿತೆಯ ಯಜ್ಞವೈಭವ ಖಂಡದಲ್ಲಿ ಹೇಳಿದ್ದಾರೆ "ಅಥ ಮೋಕ್ಷಾರ್ಥಿಭಿಃ ಪ್ರಾಜ್ಞೈಃ ಶಿವ ಏವ ಶಿವಂಕರಃ" ಎಂದು ಮುಕ್ತಿಗೆ ಧ್ಯಾನವು ಮುಖ್ಯೋಪಾಯವೆಂದು ತಮ್ಮಭಿಪ್ರಾಯವನ್ನು ಏಕೆ ಸ್ಪಷ್ಟಮಾಡಿದ್ದಾರೆ ಇವಲ್ಲದೆ "ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿ ಶಾಂತ ಉಪಾಸೀತೇತಿ" ಸೃಷ್ಟಿಸ್ಥಿತಿಲಯಾದಿಗಳಿಗೆ ಅಧಿಷ್ಠಾನವಾದ ಈ ಚರಾಚರ ಪ್ರಪಂಚರೂಪನಾದ ಪರಶಿವರೂಪವಾದ ಬ್ರಹ್ಮವನ್ನು ಉಪಾಸನೆ ಮಾಡಬೇಕು. ಎಂದು ಹೇಳುವ ಶ್ರುತಿಯು ಮುಕ್ತಿಗೆ ಬ್ರಹ್ಮೋಪಾಸನೆಯೇ ಮುಖ್ಯಕಾರಣವೆಂಬ ಅಭಿಪ್ರಾಯವನ್ನು ಕೊಡುತ್ತದೆ. ಮತ್ತು ಸರ್ವಾತ್ಮನಾದ ಶಿವನೇ ನಾನು ಎಂಬ ಚಿಚ್ಛಕ್ತಿ ರೂಪವಾದ ಬಲವಿಲ್ಲದವನು ಬೇರೆ ಮೇಧಾದಿ ಉಪಾಯಗಳಿಂದ ಆ ಪರಮಾತ್ಮನನ್ನು ಹೊಂದಲಾರನೆಂಬರ್ಥವುಳ್ಳ "ನಾಯಮಾತ್ಮಾ ಬಲಹೀನೇನ ಲಭ್ಯಃ" ಎಂಬ ಕಠವಲ್ಲೀ ಶ್ರುತಿಯು ಕೂಡಾ ಮುಕ್ತಿಗೆ ಧ್ಯಾನವು ಮುಖ್ಯಕಾರಣವೆಂದು ತೋರಿಸುತ್ತದೆ ಎಲೈ ಮಾಯಾವಾದಿಯೇ ಧ್ಯಾನವು ಚಿತ್ತಶುದ್ಧಿಗೆ ಕಾರಣವು. ಮತ್ತು ಉಪನಿಷತ್ತುಗಳು ಉಪಾಸನೆಗೆ ವಿಧಾಯಕಗಳಲ್ಲವೆಂದರೆ ಮೇಲೆ ಹೇಳಿದ ಅಥರ್ವ ಮೊದಲಾದ ಶ್ರುತಿಯು ಧ್ಯಾನವು ಮುಕ್ತಿಗೆ ಮುಖ್ಯಕಾರಣವೆಂದೂ "ಧ್ಯೇಯಃ" "ಉಪಾಸೀತೇತಿ" ಎಂಬ ವಿಧಿವಾಕ್ಯಗಳಿಂದ ಉಪನಿಷತ್ತುಗಳು ಉಪಾಸನಾವಿಧಾಯಕಗಳೆಂದೂ ಏಕೆ ಹೇಳುತ್ತದೆ. ನಿಷ್ಠಾಂದ ಜ್ಞಾನವೊಂದೇ ಮುಕ್ತಿಗೆ ಕಾರಣವು. ಧ್ಯಾನವಾ

ಮಾಂ ಮತ್ಸಂಸ್ಥಾಮಧಿಗಚ್ಛತೀತಿ ॥ ಕೌರ್ಮೇ ॥ ಧ್ಯಾನನಿಷ್ಠಸ್ಯ ಸತತಂ ನಶ್ಯತೇ ಸರ್ವಪಾತಕಂ । ತಸ್ಮಾನ್ಮಹೇಶ್ವರಂ ಜ್ಞಾತ್ವಾ ತದ್ಧ್ಯಾನಪರಮೋ ಭವೇತ್ ॥ ಇತಿ. ಈಶ್ವರಧ್ಯಾನನಿಷ್ಠಂ ಪ್ರತೀಶ್ವರೋಽನುಗೃಹ್ಣಾತೀತಿ ಪಾತಂಜಲದರ್ಶನೇಪ್ಯುಕ್ತಂ "ಈಶ್ವರಪ್ರಣಿಧಾನಾದ್ವಾ" ಇತೀದಮಸ್ಯ ಭಾಷ್ಯಂ ವೈಯ್ಯಾಸಿಕಂ ಪ್ರಣಿಧಾನಾದ್ಭಕ್ತಿವಿಶೇಷಾದಾವರ್ಜಿತ ಈಶ್ವರಸ್ತಮನುಗೃಹ್ಣಾತಿ ಅಭಿಧ್ಯಾನಮಾತ್ರೇಣ ತದಭಿಧ್ಯಾನಾದಪಿ । ಇತಿ, ಕೃಷ್ಣಗೀತಾಯಾಂ. "ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ" ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ । ಇತಿ, ಉಕ್ತಂ ಚ ದೀಕ್ಷಿತಚರಣೈರಪಿ. "ಅಂತರ್ಗ್ರಂಥಿಪ್ರವಿಲಯಕೃತೇ ಚಿಂತ್ಯಸೇ ಯೋಗಿವೃಂದೈಃ" ಇತಿ ಭಕ್ತಾನುಗ್ರಹಾರ್ಥಂ ಸ್ವೀಕೃತಲೀಲಾಮೂರ್ತಿಸದ್ಭಾ

ದರೂ ಚಿತ್ತಶುದ್ಧಿಗೆ ಉಪಯುಕ್ತವಾಗುತ್ತದೆನ್ನುವ ನಿನ್ನ ಪಕ್ಷವು ಶ್ರುತಿಗಳಿಗೆ ವಿರುದ್ಧವಾಯಿತು. ಇನ್ನು ಸ್ಮೃತಿಗಳಿಗೆ ವಿರುದ್ಧವಾಗುತ್ತದೆನ್ನುವವನ್ನು ಶಾಂಕರೀಕಾರನು ತೋರಿಸುತ್ತಾನೆ. ಹೇಗೆಂದರೆ-ಎಲೈ ಶ್ರೇಷ್ಠನಾದ ಮುಖವುಳ್ಳಗಾರ್ಗಿಯೇ ಇನ್ನು ಮೇಲೆ ಧ್ಯಾನದಸ್ವರೂಪವೇನು? ಅದರಿಂದೇನು ಪ್ರಯೋಜನವು ಎಂಬುವ ವಿಷಯವನ್ನು ಹೇಳುತ್ತೇನೆ. ಕೇಳು? ಶಿವಸ್ವರೂಪದ ಚಿಂತನೆಯೇ ಧ್ಯಾನವು. ಈ ಧ್ಯಾನವು ಮೋಕ್ಷಕ್ಕೆ ಕಾರಣವು ಇನ್ನು ಸ್ತ್ರೀ ಚಂದನವನಿತಾ ಮೊದಲಾದ ವಿಷಯಗಳ ಧ್ಯಾನವು (ಆಲೋಚನೆಯು) ಬಂಧಕ್ಕೆ ಕಾರಣವು. "ವಿಸಿನ್ವಂತಿ ಪುರುಷಮನುಬಧ್ನಂತೀತಿ ವಿಷಯಾಃ" (ಪುರುಷನನ್ನು ಮೇಲಕ್ಕೇಳದ ಹಾಗೆ ಕಟ್ಟಿಹಾಕಿ ಬಿಡತಕ್ಕವುಗಳೆಂದು ವಿಷಯಶಬ್ದದ ಅರ್ಥವು ಇಂಥ ವಿಷಯಗಳಲ್ಲಿ ಧ್ಯಾನಮಾಡಿದರೆ ಅವು ಪುರುಷನನ್ನು ಬಂಧಿಸಿಬಿಡುತ್ತವೆ. ನಿತ್ಯ ಮೋಕ್ಷಸುಖವನ್ನು ಕೊಡತಕ್ಕ ಶಿವನನ್ನು ಧ್ಯಾನಿಸಿದರೆ ಅವನು ಅನುಗ್ರಹಿಸಿ ಮೋಕ್ಷಸುಖವನ್ನು ಕೊಡುವನು. ಆದ್ದರಿಂದ ಧ್ಯಾನವೇ ಬಂಧಮೋಕ್ಷಗಳಿಗೆ ಕಾರಣವೆಂದು ಯೋಗಯಾಜ್ಞವಲ್ಕ್ಯಸ್ಮೃತಿಯು ಹೇಳುತ್ತದೆ ಇದೇ ಅರ್ಥವನ್ನೇ "ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ । ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷಯಂ ಸ್ಮೃತಂ ॥ ಎಂಬುವ ಶ್ರುತಿಯೂ ಹೇಳುತ್ತದೆ. ಇದಲ್ಲದೆ "ಯುಂಜನ್ನೇವಂ" ಎಂಬುವ ಭಗವದ್ಗೀತೆಯೂ ಕೂಡಾ ಮುಕ್ತಿಗೆ ಧ್ಯಾನಯೋಗವೇ ಮುಖ್ಯಕಾರಣವೆಂದೂ ಉದ್ಘೋಷಿಸುತ್ತದೆ. ಆದ್ದರಿಂದ ಬ್ರಹ್ಮಾದ್ವೈತಿಯೇ? ಜ್ಞಾನವಂದೇ ಮುಕ್ತಿಗೆ ಕಾರಣವು ಧ್ಯಾನವು ಮುಕ್ತಿಗೆ ಕಾರಣವಲ್ಲವೆಂಬ ನಿನ್ನ ಪಕ್ಷವು ಮೇಲಣ ಸ್ಮೃತಿಗಳಿಗೆ ವಿರುದ್ಧವಾಯಿತು. ಇನ್ನು ಧ್ಯಾನಯೋಗ ನಿಷ್ಠನಾದವನ ಸರ್ವಪಾತಕಗಳು ನಷ್ಟವಾಗುವವು ಆದುದರಿಂದ ಮಹೇಶ್ವರನನ್ನು ತಿಳಿದು ಅವನ ಧ್ಯಾನದಲ್ಲಿ ಆಸಕ್ತನಾಗಬೇಕು. ಎಂಬ ಅರ್ಥವುಳ್ಳ ಕೂರ್ಮಪುರಾಣವೂ ಕೂಡ ಧ್ಯಾನವು ಮುಕ್ತಿಗೆ ಕಾರಣವೆಂಬಭಿಪ್ರಾಯವನ್ನು ಕೊಡುತ್ತದೆ. ಇದು ಅಲ್ಲದೆ ಈಶ್ವರಧ್ಯಾನಯೋಗದಲ್ಲಿ ನಿಷ್ಠನಾ

ವಃ ಶಾಸ್ತ್ರಪ್ರಸಿದ್ಧಏವ | ತಥಾಪಿ ಮಾನವಾ ಮೂರ್ಖಾಃ ಕೇಚಿತ್ ತಸ್ಯ ಪರಬ್ರಹ್ಮಣಃ ಶಿವಸ್ಯ ಮೂರ್ತೇರಸತ್ಯತ್ವಂ ವದಂತೀತಿಯತ್ತತ್ರ ಗುರುಕಾರುಣ್ಯಾಭಾವಏವ ಕಾರಣಮಿತಿ ಸ್ಪಷ್ಟಂ | ಉಕ್ತಂಚ ಬ್ರಹ್ಮಾಸಂದೇನ „ಬಹುಶಾಸ್ತ್ರಮಧೀತ್ಯಾಪಿ ಗುರುಕಾರುಣ್ಯವರ್ಜಿತಾಃ ಶಿವಸ್ಯ ಮೂರ್ತಿವಾರ್ತಾಮಪ್ಯಹೋ ಜಾನಂತಿನೈವಹಿ || ಇತಿ, ಪರಾಶರಶ್ಚ || ಜ್ಞಾನಾವಲಂಬನಭ್ರಾಂತ್ಯಾ ಮನುಷ್ಯಾ ಮಂದಬುದ್ಧಯಃ | ಮೂರ್ತ್ಯುಪೇಕ್ಷಾಂ ಪ್ರಕುರ್ವಂತಿ ಜ್ಞಾನಂತೇಷಾಂನಜಾಯತೆ || ಇತ್ಯುಕ್ತವಾನ್. ಉಕ್ತಂಚಾದಿತ್ಯಪುರಾಣೆ. ಇಂದ್ರಂ ಪ್ರತಿ ಬೃಹಸ್ಪತಿಃ || ಅಸ್ತ್ಯನಂತಗುಣಾವಾಸಃ ಪರಾನಂದೈಕವಿಗ್ರಹಃ | ಧ್ಯಾತಃ ಕೈವಲ್ಯದಃ ಪುಂಸಾಂ ಮಹಾದೇವೋನಚಾಪರಃ || ಕರ್ಮಪಾಶನಿಬದ್ಧಾನಾಂ ಮಹಾಮೋಹಾತ್ಮನಾಂಹರೆ | ಸ್ಮರಣಾನ್ಮೋಚಕಸ್ತೇಷಾಮುಮಾಪತಿರಿತಿಶ್ರು

ಧವನಿಗೆ ಈಶ್ವರನು ಅನುಗ್ರಹಿಸುತ್ತಾನೆಂದು "ಈಶ್ವರ ಪ್ರಣಿಧಾನಾದ್ವಾ" ಎಂಬುವ ಸೂತ್ರದಿಂದ ಪಾತಂಜಲ ದರ್ಶನದಲ್ಲಿ ಹೇಳಿದೆ. ಈ ಸೂತ್ರಕ್ಕೆ ಇರುವ ವ್ಯಾಸಭಾಷ್ಯದ ತಾತ್ಪರ್ಯವೇನಂದರೆ-ಪ್ರಣಿಧಾನವೆಂದರೆ-ಭಕ್ತಿವಿಶೇಷವು ಇದರಿಂದ ಪರಿಪಕ್ವ ಚಿತ್ತನಾದ ಪುರುಷನನ್ನು ಈಶ್ವರನು ಪ್ರಸನ್ನನಾಗಿ ಅನುಗ್ರಹಿಸುತ್ತಾನೆಂದು ಇರುತ್ತದೆ. ಈ ಪರಮೇಶ್ವರನ ಅನುಗ್ರಹವೇ ಮೋಕ್ಷವು. ಇದು ಭಕ್ತಿವಿಶೇಷದಿಂದ ಪ್ರಾಪ್ತವಾಗುತ್ತದೆನ್ನುವದರಿಂದ ಮುಕ್ತಿಗೆ ಭಕ್ತಿಯೋಗವೆ (ಧ್ಯಾನಸ್ವರೂಪವಾದ ಭಕ್ತಿಯೇ) ಉಪಾಯವೆಂದು ಹೇಳಿದಂತಾಯಿತು. ಮತ್ತು ಎಲೈ ಅರ್ಜುನ? ಯಾವ ಈಶ್ವರನು ಸಮಸ್ತ ಪ್ರಾಣಿಗಳ ಹೃದಯದಲ್ಲಿದ್ದುಕೊಂಡು ತನ್ನ ಮಾಯೆಯಿಂದ ಶರೀರವೆಂಬ ಯಂತ್ರವನ್ನುಹತ್ತಿದ ನಿಖಿಲ ಪ್ರಾಣಿಗಳನ್ನು ಆಯಾಯ ಕರ್ಮಗಳಲ್ಲಿ ಪ್ರೇರಿಸುವನೊ? ಆ ಈಶ್ವರನಿಗೇನೇ (ಪ್ರಾಣಲಿಂಗಕ್ಕೆ) ಶರಣಾಗತನಾಗು. ಅವನೊಬ್ಬನಲ್ಲದೇ ಮತ್ತಾರೂ ಮೋಕ್ಷಸುಖವನ್ನು ಕೊಡಲಾರರು. ಆದುದರಿಂದ ಸರ್ವಪ್ರಕಾರದಿಂದಲೂ ಅವನಿಗೇನೇ ಶರಣಾಗತನಾಗು ಎಂಬುವದರಿಂದ ಕೃಷ್ಣನು ಅಂತರ್ಲಿಂಗಾನುಸಂಧಾನವೆ ಮುಕ್ತಿಗೆ ಕಾರಣವೆಂದು ಅಭಿಪ್ರಾಯಕೊಟ್ಟಿರುವನೆಂದು ಭಗವದ್ಗೀತೆಯಲ್ಲಿ ತಿಳಿದುಬರುತ್ತದೆ.

ಎಲೈ? ಬ್ರಹ್ಮಾದ್ವೈತಿಯೇ? ಅಪ್ಪಯ್ಯದೀಕ್ಷಿತರೂ ಕೂಡಾ ಎಲೈ ಪರಶಿವನೆ ಒಳಗಿರುವ ಅಜ್ಞಾನಾದಿ ಗ್ರಂಥಿಗಳ ವಿಲಯಕ್ಕೋಸ್ಕರ ಯೋಗಿಗಳ ಸಮೂಹಗಳಿಂದ ಚಿಂತಿಸಲ್ಪಡುತ್ತಿರುವಿಯೇ ಎಂದು ತಮ್ಮ ಆತ್ಮಾರ್ಪಣ ಸ್ತುತಿಯೆಂಬ ಗ್ರಂಥದಲ್ಲಿ ಹೇಳಿರುವರು. ಬ್ರಹ್ಮಾತ್ಮೈಕ್ಯಸಾಕ್ಷಾತ್ಕಾರವೇ ಹೃದಯಗ್ರಂಥಿಯ ನಾಶಕ್ಕೆ ಕಾರಣವೆಂದರೆ ನಿನ್ನ ಪಕ್ಷಕ್ಕೆ ಅಪ್ಪಯ್ಯದೀಕ್ಷಿತರ ತಾತ್ಪರ್ಯವಿಲ್ಲವೆಂದು ಸ್ಪಷ್ಟವಾಯಿತು. ಇನ್ನು ಅನೇಕ ಉಪನಿಷತ್ತುಗಳಲ್ಲಿದ್ದ ಹರವಿದ್ಯಾವಿಧಿಯು ಹೇಳಲ್ಪಡುತ್ತಿರಲು ಪರಶಿವನಿಗೆ ಪರಿಚ್ಛಿನ್ನಮೂರ್ತಿಯು ಇಲ್ಲವು ಅವನ ಧ್ಯಾನವು ಸಂಭವಿಸುವದಿಲ್ಲವೆನ್ನುವ ನಿನ್ನ ಪಕ್ಷವು ಅಸಂಗತವಾದದ್ದು. ಪರಶಿವನ ಲೀಲಾಮೂರ್ತಿಯು ಇರುವ

ತಿಃ || ಇತಿ ಯದುಕ್ತಂ ಪರಬ್ರಹ್ಮಣಃ ಶಿವಸ್ಯ ನಿಷ್ಕಲಸ್ಯ ಪೂರ್ವಾನುಭವಾಭಾವಾತ್ ನ ತದ್ಧ್ಯಾನಂ ಸ್ಮೃತಿರೂಪಂ ಸಂಭವತೀತಿ ತದಪಿಬಾಲಿಶಭಾಷಿತಂ | ಅನನುಭೂತಸ್ಯಾಪಿ ಪದಾರ್ಥಸ್ಯ ಸ್ಮೃತಿರೂಪಚಿಂತಾಯಾ ದೃಶ್ಯಮಾನತ್ವಾತ್ | ಕಾಶೀಂ ಜಿಗಮಿಷುರಾಪ್ತವಾಕ್ಯಂ ಚೋರೋಪದ್ರವಮಾರ್ಗಾದನುಕೂಲಾಧ್ವಗಾಮಿಾಚಿಂತಯನ್ ಗಂಗಾಸ್ನಾನಾನಂದಮನುಭೂಯಚ. ಆನಂದಸಮರಸೋ ಭವತೀತಿಶ್ರುತ್ವಾ ನಿರುಪದ್ರವಮಾರ್ಗಮಾಲಂಬ್ಯ ಸನ್ನಿಹಿತ ಕಾಶೀದೇಶಃ ಸ್ಮೃತ್ವಾಚಾಪ್ತವಾಕ್ಯೇನ ಗಂಗಾಸ್ನಾನಾನಂದಮನುಭೂಯಚಾನಂದಪರವಶೋ ಭವತಿ ಯಥಾತಥಾ ಪರಮಾಪ್ತವಾಕ್ಯ ಶ್ರುತಿನಿಕರೇಣಾಧ್ವನಾ ಗುರುಮುಖಾಂಬೋಧಿ ನಿರ್ಗತೇನ ಗಚ್ಛನ್ ನಿಶ್ಚಿತಹಿತಾನುಕೂಲವ್ಯಾಪಾರಃ ಧ್ಯಾಯಂಶ್ಚ ಸ್ವಸ್ವರೂಪಂ ಸಚ್ಚಿದಾನಂದಂ ಪರಶಿವಂ ಧ್ಯಾನಧ್ರೌವ್ಯೇಚಾಮೃತೀಭವತೀತಿ

ದೆಂಬ ವಿಷಯವು ಶಾಸ್ತ್ರಪ್ರಸಿದ್ಧವಾಗಿದ್ದೇ ಆಗಿದೆ. ಆದರೂ ಕೆಲವರು ಶಿವನಿಗೆ ಮೂರ್ತಿ ಇಲ್ಲವೆನ್ನುವರು ಹೀಗೆ ಅವರು ಅನ್ನುವದು ಗುರುಕಾರುಣ್ಯವಿಲ್ಲದಿರುವದರಿಂದೆಂದು ಸ್ಪಷ್ಟವಾಗುತ್ತದೆ. ಬ್ರಹ್ಮಾನಂದರೂ ಕೂಡಾ ಬಹಳ ಶಾಸ್ತ್ರಗಳನ್ನು ಓದಿ ಗುರುಕಾರುಣ್ಯವಿಲ್ಲದಿರುವ ಮಂದಬುದ್ಧಿಗಳು ಶಿವನ ಮೂರ್ತಿಯ ವಾರ್ತೆಯನ್ನು ಕೂಡಾ ತಿಳಿಯುವದಿಲ್ಲವೆನ್ನುವದು ಆಶ್ಚರ್ಯದ ಸಂಗತಿಯೇ ಸರಿ ಎಂದು ಹೇಳಿರುವರು. ಇದು ಅಲ್ಲದೆ ಶ್ರೀ ಪರಾಶರರೂ ಕೂಡಾ ಜ್ಞಾನವೊಂದರಿಂದಲೇ ಮುಕ್ತಿಯುಂಟಾಗುವದರಿಂದ ಜ್ಞಾನವನ್ನೇ ಅವಲಂಬಿಸಬೇಕೆಂಬುವ ಭ್ರಾಂತಿಯಿಂದಮೂರ್ತಿಯನ್ನು ಸ್ವೀಕರಿಸದೆ ಉಪೇಕ್ಷೆಯನ್ನು ಮಾಡುವರು ಹೀಗೆ ಶಿವನ ಮೂರ್ತಿಯನ್ನು ಉಪೇಕ್ಷಿಸುವ ಮಂದಬುದ್ಧಿಗಳಿಗೆ ಜ್ಞಾನವೇ ಉಂಟಾಗುವದಿಲ್ಲವು ಎಂದು ಹೇಳಿರುವರು ಇದು ಅಲ್ಲದೆ ಆದಿತ್ಯ ಪುರಾಣದಲ್ಲಿ ಇಂದ್ರನನ್ನು ಕುರಿತು ಬೃಹಸ್ಪತಿಯು ಅನಂತಕಲ್ಯಾಣ ಗುಣಾವಾಸನೂ ಪರಾನಂದವೇ ಮುಖ್ಯವಾದ ಶರೀರವುಳ್ಳವನೂ ಆದ ಮಹಾದೇವನೊಬ್ಬನೇ ತನ್ನನ್ನು ಧ್ಯಾನಿಸಿದವರಿಗೆ ಕೈವಲ್ಯವನ್ನು ಕೊಡುವನಲ್ಲದೆ ಮತ್ತೊಬ್ಬನು ಕೊಡಲಾರನು ಎಂದೂ ಎಲೈ ಇಂದ್ರನೇ ಕರ್ಮಪಾಶಬದ್ಧರಾಗಿಯೂ ಮಹಾ ಮೋಹಿಗಳಾಗಿಯೂ ಇರುವ ಜನಗಳು ಶಿವಸ್ಮರಣೆಯನ್ನು ಮಾಡಲು ಆ ಉಮಾಪತಿಯಾದ ಶಿವನು ತನ್ನನ್ನು ಸ್ಮರಿಸುವ ಜನಗಳ ಪಾಶಗಳನ್ನು ಕತ್ತರಿಸಿಹಾಕಿ ಅವರಿಗೆ ಶಾಶ್ವತವಾದ ಮೋಕ್ಷಸುಖವನ್ನು ಕೊಡುವನೆಂದೂ ಹೇಳಿದ್ದಾನೆ. ಆದ್ದರಿಂದ ನಿನ್ನ ಪಕ್ಷವು ಪುರಾಣಕ್ಕೂ ವಿರುದ್ಧವಾಯಿತು. ಎಲೈ ಶಿವಾದ್ವೈತಿಯಾದ ವೀರಶೈವನೇ ನಿಷ್ಕಲವಾದ ಪರಶಿವಬ್ರಹ್ಮಕ್ಕೆ ಪೂರ್ವಾನುಭವವಿಲ್ಲದಿರುವದರಿಂದ ಸ್ಮೃತಿರೂಪವಾದ ಅವರ ಧ್ಯಾನವೇ ಸಂಭವಿಸುವದಿಲ್ಲವು ಇದಕ್ಕೆ ನಿನ್ನ ಸಮಾಧಾನವೇನು ಎಂಬುವ ಪ್ರಶ್ನವನ್ನು ಮೂರ್ಖನೂಕೂಡಾ ಮಾಡಲಾರನು. ಯಾಕಂದರೆ ಪೂರ್ವದಲ್ಲಿ ಅನುಭೂತವಾಗಿರುವ ಪದಾರ್ಥಕ್ಕಾದರೂ ಸ್ಮೃತಿಯು ಸಂಭವಿಸುತ್ತದೆ. ಹೇಗಂದರೆ ಒಬ್ಬಾನೊಬ್ಬ ಮನುಷ್ಯನು

ಕೇಚಿತ್ | ವಸ್ತುತಸ್ತು ಸಚ್ಚಿದಾನಂದಾದ್ವಿತೀಯ ಸರ್ವಜ್ಞ ಸರ್ವಾತ್ಮಕೋಽಹಮಿತ್ಯಾಕಾರಕಾನುಭವರೂಪ ಪರಾಹಂತಾಮಯ ಚಿಚ್ಛಕ್ತೇಃ ಶಿವಾವಸ್ಥಾಯಾಂ ಸತ್ವಾತ್ | ಪೂರ್ವಾನುಭೂತಸ್ಯೈವ ಸ್ವಸ್ವರೂಪ ಸಚ್ಚಿದಾನಂದಾತ್ಮಕ ಸರ್ವಜ್ಞತ್ವಾದಿ ವಿಶಿಷ್ಟಸ್ಯ ಗುರುಶಾಸ್ತ್ರಾದ್ಯುದ್ಬೋಧಕವಶಾತ್ ಸ್ವರೂಪಂ ಶಿವಂ ಸ್ಮೃತ್ವಾ ಸ್ಮೃತಿದಾರ್ಢ್ಯೇನ ಸ್ವಕೀಯಂ ಶಿವರೂಪಂ ಸಾಕ್ಷಾತ್ಕರೋತಿ | ಯಥಾ ಜಾಗ್ರತಿ ಧನಧಾನ್ಯಾದಿ ಸ್ವಸಾಮರ್ಥ್ಯಮನುಭೂಯ ಸುಪ್ತಸ್ತದ್ವಿಸ್ಮೃತ್ಯ. ಪ್ರತಿಬೋಧಾವಸ್ಥಾಭಿಮುಖಃ ಸನ್ ಮಂದಂಮಂದಂ ತತ್ ಸ್ಮೃತ್ವಾ ಪ್ರತಿಬುದ್ಧಃ ಸಾಕ್ಷಾತ್ಕರೋತಿ. ತಥೈವ ಶಿವಾವಸ್ಥಾಯಾಂ ಸಚ್ಚಿದಾನಂದ ಸರ್ವಜ್ಞತ್ವಾದಿ ಸ್ವಶಕ್ತಿಮನುಭೂಯ, ಸ್ವಸ್ವಾತಂತ್ರ್ಯತಃ ತದಪಜ್ಞಾನಸುಪ್ತಿದಶಾಪನ್ನಃ | ಪ್ರತಿಬುದ್ಧಶ್ಚ ಸ್ವಾತ್ಮೀಯಂ ಸರ್ವಂ ಪ್ರತ್ಯಕ್ಷೀಕೃತ್ಯ ಅಮೃತೀಭವತಿ.

ಎಂದೆಂದೂ ಕಾಶಿಗೆ ಹೋಗಿರುವುದಿಲ್ಲವು. ಅಲ್ಲಿ ಗಂಗಾಸ್ನಾನಾನಂದವನ್ನು ಅನುಭವಿಸಿಯೂ ಇರುವುದಿಲ್ಲವು. ಇಂತವನಿಗೆ ಚೋರರ ಉಪದ್ರವವಿರುವ ಮಾರ್ಗವನ್ನು ಬಿಟ್ಟು, ಅನುಕೂಲಮಾರ್ಗವನ್ನವಲಂಬಿಸಿ ಹೋಗುತ್ತ, ಅಲ್ಲಿ 'ಗಂಗಾಸ್ನಾನದ ಆನಂದವನ್ನು ಚಿಂತಿಸುತ್ತ ಗಂಗಾಸ್ನಾನಾನಂದವನ್ನು ಅನುಭವಿಸಿ, ಆನಂದಪರವಶನಾಗುವನೆಂಬುದಾಗಿ ಮತ್ತೊಬ್ಬ ಆಪ್ತನು ಹೇಳಲು, ಅದನ್ನು ಕೇಳಿ ಆತನು ಕಳ್ಳದಾರಿಯನ್ನು ಬಿಟ್ಟು ಅನುಕೂಲ ಮಾರ್ಗದಿಂದ ಹೋಗುತ್ತ ಮನಸ್ಸಿನಲ್ಲಿ ಗಂಗಾಸ್ನಾನದಿಂದಾಗುವ ಆನಂದವನ್ನು ಚಿಂತಿಸುತ್ತಿರಲು, ಅವನಿಗೆ ಆನಂದಸಮರಸಭಾವವು ಹೇಗೆ ಉಂಟಾಗುತ್ತದೆಯೋ ಅದರಂತೆ ಪರಮಾಪ್ತನಾದ ಶಿವನ ಶ್ರುತಿವಾಕ್ಯಗಳು ಗುರುಮುಖವೆಂಬ ಸಮುದ್ರದಿಂದ ಹೊರಡಲು ಆ ವಾಕ್ಯಗಳೆಂಬ ಮಾರ್ಗದಿಂದ ಹೋಗುತ್ತ ತನ್ನ ವ್ಯಾಪಾರವು ಹಿತವಾದದ್ದೆಂದು ನಿಶ್ಚಯಿಸಿ, ಸ್ವಸ್ವರೂಪವಾದ ಸಚ್ಚಿದಾನಂದರೂಪವಾದ ಪರಶಿವಬ್ರಹ್ಮವನ್ನು ಚಿಂತಿಸುತ್ತ, ಆನಂದಪರವಶನಾಗಿ ಅಮೃತನಾಗುವನು. ಎಲೈ ಬ್ರಹ್ಮಾದ್ವೈತಿಯೇ! ಎಂದೆಂದೂ ಗಂಗಾಸ್ನಾನಾನಂದವನ್ನು ಅನುಭವಿಸದೆ ಇದ್ದು ಅದನ್ನು ಚಿಂತಿಸುವದು ಪ್ರತ್ಯಕ್ಷಸಿದ್ಧವಾದ ಮಾತು. ಹೀಗಿದ್ದು ಅನನುಭೂತವಾದ ಪದಾರ್ಥಕ್ಕೆ ಸ್ಮೃತಿರೂಪವಾದ ಚಿಂತನೆಯು ಸಂಭವಿಸುವದಿಲ್ಲವೆನ್ನುವದು ಮೂರ್ಖತನವಲ್ಲವೆ ! ಎಂದು ಕ್ರಿಯಾಸಾರಕಾರರ ಅಭಿಪ್ರಾಯವನ್ನು ಕೇಚಿತ್ತು ಎಂಬುವದರಿಂದ ತೋರಿಸಿ ಶಾಂಕರೀಕಾರನು ತನ್ನ ಅಭಿಪ್ರಾಯವನ್ನು ವಸ್ತುತಸ್ತು (ವಾಸ್ತವಿಕವಾಗಿ) ಎಂಬುವದರಿಂದ ತೋರಿಸುತ್ತಾನೆ. ಹೇಗಂದರೆ ನಾನು ಸರ್ವಪ್ರಪಂಚರೂಪನು ನಾನು ಸರ್ವಜ್ಞನು ಎಂಬುವ ಅನುಭವವು ಪೂರ್ವದಲ್ಲಿ (ಶಿವಾವಸ್ಥೆಯಲ್ಲಿ) ಇತ್ತು. ಇಂಥ ಅನುಭವಕ್ಕೆ ವಿಷಯವಾದ ಸಚ್ಚಿದಾನಂದಾದ್ವಿತೀಯವಾದ ತನ್ನ ಶಿವಸ್ವರೂಪವನ್ನು ಗುರುಮುಖದಿಂದ ಹೊರಟ "ತ್ವಮಸಿ" ಮೊದಲಾದ ಶಾಸ್ತ್ರವೆಂಬ ಉದ್ಬೋಧಕವಶದಿಂದ ಸ್ಮರಿಸುತ್ತಾ ಹೋಗಲಾಗಿ ಸ್ಮೃತಿಯು ದೃಢವಾಗಲು ತನ್ನ ಶಿವರೂಪವನ್ನು ತಾನೇ ಪ್ರತ್ಯಕ್ಷವಾಗಿ ನೋಡುವನು. ಹೇಗಂದರೆ— ಜಾಗ್ರತ್‌ಕಾಲದಲ್ಲಿ ಪುರುಷನು ತನ್ನ ಧನ

ಅಘಟಿತ ಘಟನಾಪಟೋರಗಸ್ತ್ಯಸ್ಯ ಸಮುದ್ರಪಾನಶಕ್ತಿವತ್ ಅಚಿಂತ್ಯಾನಂತಶಕ್ತಿಕಸ್ಯ ಪರಶಿವಸ್ಯ ಅನುಗ್ರಹವಶಾದೇವಮುಕ್ತೋಭವತಿ | ತಥಾಚ ಪ್ರತಿಬೋಧೇನ ವಿಷಯೀಕೃತಂ ಯದಾಬ್ರಹ್ಮ ತದೈವಮತಂ ಸಮ್ಯಗ್‌ದೃಷ್ಟಂ ನಾನ್ಯೇನೋಪಾಯೇನೇತ್ಯತ್ರ ಹಿ ಶಬ್ದಃ ತದಾಯಂ ಪ್ರತಿಬುದ್ಧಃ | ಅಮೃತತ್ವಂವಿಂದತೆ ತಾದೃಶಪ್ರತಿಬೋಧರೂಪವೀರ್ಯಂಚ ಶುದ್ಧೇನಾತ್ಮನಾತ್ಮನಾವಿಂದತೆ. ತಾದೃಶವೀರ್ಯರೂಪಯಾವಿದ್ಯಯಾ ಅಮೃತಂ ನಿರ್ವಾಣಪದಂ ವಿಂದತೆ ದ್ವಿರುಕ್ತಿಸ್ತು ಪ್ರತಿಬೋಧಾಭಾವೇನಾಮೃತತ್ವಪ್ರಾಪ್ತಿಃ ಪ್ರತಿಬೋಧೇನೈವೇತ್ಯುಪದೇಶಾರ್ಥಾ, ಇತಿ ಮಂತ್ರಾರ್ಥಸಾಂಗತ್ಯಂ ದ್ರಷ್ಟವ್ಯಂ ವಿದ್ವದ್ಭಿರಿತಿ || ಕಿಮಸ್ತಿ ಬಹುನೋಕ್ತೇನ ಮಾನುಷಂ ಜನ್ಮದುರ್ಲಭಂ || ತತ್ರಾಪಿ ದುರ್ಲಭಂ ಜನ್ಮಕುಲೆ

ಥಾನ್ಯಾದಿ ಸಾಮರ್ಥ್ಯವನ್ನು ಮರೆತು ಪುನಃ ಎಚ್ಚರಿಕೆಯನ್ನು ಹೊಂದುವ ಸಮಯದಲ್ಲಿ ಮೆಲ್ಲಮೆಲ್ಲನೆ ತನ್ನ ಎಲ್ಲಾ ಸಾಮರ್ಥ್ಯವನ್ನು ಸ್ಮರಣೆಮಾಡುತ್ತ ಸಂಪೂರ್ಣ ಜಾಗ್ರತನಾಗಿ, ತನ್ನ ಸಾಮರ್ಥ್ಯವನ್ನು ಪ್ರತ್ಯಕ್ಷವಾಗಿ ನೋಡಿ ಆನಂದವುಳ್ಳವನಾಗುವನು. ಅದರಂತೆ ಶಿವಾವಸ್ಥೆಯಲ್ಲಿ ತನ್ನ ಸಚ್ಚಿದಾನಂದ ಸರ್ವಜ್ಞತ್ವಾದಿ ಸಾಮರ್ಥ್ಯವನ್ನು ಪ್ರತ್ಯಕ್ಷವಾಗಿ ಅನುಭವಿಸಿ, ತನ್ನ ಲೀಲಾಸ್ವಾತಂತ್ರ್ಯದಿಂದ ಆ ಸಾಮರ್ಥ್ಯದ ಮರವೆ ಎಂಬ ಸುಪ್ತಿಯನ್ನು ಹೊಂದಿ ಶ್ರೀಗುರುವಿನಲ್ಲಿ ಶರಣಾಗತನಾಗಿ ದೀಕ್ಷೆಯನ್ನು ಹೊಂದಿ ಆ ದೀಕ್ಷಾಕಾಲದಲ್ಲಿ ಶ್ರೀಗುರುವಿನ ಉಪದೇಶದಿಂದ ತನ್ನ ಸಾಮರ್ಥ್ಯವನ್ನು ಮೆಲ್ಲಮೆಲ್ಲನೆ ಸ್ಮರಿಸುತ್ತಾ, ಆ ಸಾಕ್ಷಾತ್ಕಾರರೂಪವಾದ ಚಿಚ್ಛಕ್ತಿ ಎಂಬ ಪ್ರತಿಬೋಧಾವಸ್ಥೆಯನ್ನು ಹೊಂದಿ ಅಮೃತನಾಗುವನು. ನಿಷ್ಕಲನೂ ನೀರೂಪನೂ ನಿರವಯವನೂ ಅಚಿಂತ್ಯರೂಪನೂ ಅನಂತಶಕ್ತಿಯುಳ್ಳವನೂ ಆಗಿದ್ದರೂ ಕೂಡಾ ಪರಶಿವನು ತನ್ನನ್ನು ಧ್ಯಾನಿಸುವವರಿಗೆ ಅನುಗ್ರಹ ಮಾಡುವನು. ಈ ಅನುಗ್ರಹ ಮಾತ್ರದಿಂದಲೇ ಸ್ವಸ್ವರೂಪ ಶಿವಸಾಕ್ಷಾತ್ಕಾರವಾಗುವದು. ಶಿವಾನುಗ್ರಹ ಮಾತ್ರದಿಂದಲೇ ಅಗಸ್ತ್ಯನು ಅಘಟಿತ ಘಟನಾ ಸಾಮರ್ಥ್ಯವುಳ್ಳವನಾಗಿ ವಿಶಾಲವಾದ ವಿಮಲವಾದ ಸಮುದ್ರವನ್ನೇ ಪಾನಮಾಡಿದನು. ಅಂದಮೇಲೆ ಧ್ಯಾನದಿಂದ ಶಿವಾನುಗ್ರಹವಾದಮೇಲೆ ಶಿವಭಕ್ತರು ತಮ್ಮ ಸ್ವರೂಪವಾದ ಪರಶಿವ ಬ್ರಹ್ಮವನ್ನು ಸಾಕ್ಷಾತ್ಕರಿಸದೆ ಇರುವರೆ? ಈ ವಿಷಯದಲ್ಲಿ ''ಅಗಸ್ತ್ಯಃ ಕುಂಭಜನ್ಮಾಬು ಶಿವಭಕ್ತ್ಯೈವ ಕೇವಲಂ | ಪಪೌ ಸಮುದ್ರಮತುಲಂ ಶಿವಶಕ್ತ್ಯುಪಬೃಂಹಿತಃ'' ಅಂದರೆ ಧ್ಯಾನಯೋಗದಿಂದ ತನ್ನ ಶಿವಶಕ್ತಿಯು ವಿಕಾಸವಾಗಿ, ಅಗಸ್ತ್ಯನು ಸಮುದ್ರವನ್ನು ಕುಡಿದನು ಎಂಬ ವಾಕ್ಯವು ಪ್ರಮಾಣವಾಗಿದೆ. ಇನ್ನು ಮಂತ್ರಾರ್ಥದ ಸಂಗತಿಯು ತೋರಿಸಲ್ಪಡುವದು. ಪ್ರತಿಬೋಧವಿದಿತಂ ಮತಮಮೃತತ್ವಂಹಿ ವಿಂದತೆ | ಆತ್ಮನಾವಿಂದತೆ ವೀರ್ಯಂ ವಿದ್ಯಯಾವಿಂದತೇಮೃತಂ || ಅಂದರೆ ಚಿತ್ತವು ವಿಕಾಸವನ್ನು ಹೊಂದಿ, ಶಿವನ ಅಂತಃಕರಣರೂಪವಾದ ಚಿಚ್ಛಕ್ತಿಯು ಸ್ವರೂಪವಾಗಲು, ಆ ಅಂತಃಕರಣದಿಂದ ಪರಶಿವಬ್ರಹ್ಮವು ತಿಳಿಯಲ್ಪಡುತ್ತೆ. ನಾನು ಸುಖಿಯು, ನಾನು ದುಃಖಿಯು ಎಂದು ಜೀವಾತ್ಮನ ಪ್ರತ್ಯಕ್ಷವು ಹೇಗೆ ಚಿತ್ತ

ಶೈವಸ್ಯಕಸ್ಯಚಿತ್ | ವೀರಶೈವಾನ್ವಯೇ ಜನ್ಮ ಪರಮಂ ದುರ್ಲಭಂ ಸ್ಮೃತಂ ತತ್ರಜಾತಾಸರಾಃಸರ್ವೇ ವೀರಶೈವಾನರೋತ್ತಮಾಃ || ಇತ್ಯುಕ್ತಪ್ರಕಾರೇಣ ಸರ್ವಶ್ರೇಷ್ಠತಮಂ ವೀರಶೈವಾನ್ವಯೇ ಅತಿದುರ್ಲಭಂ ಜನ್ಮಪ್ರಾಪ್ತವಾನಸ್ಯ ಧೃಷ್ಟವಶಾತ್ | ಪರಾಹಂತಾಪಗಾಹಿ ವೃತ್ತಿರಹಿತಶ್ಚೇತ್ಪುನಃ ಸಾಂಸಾರಿಕ ತಾಪತ್ರಯ ರೂಪಾನರ್ಥಂ ಪ್ರಾಪ್ನೋತೀತ್ಯಾಹ || ಇಹೇತಿ |

ಮೂ॥ ಇಹಚೇದವೇದೀದಥ ಸತ್ಯಮಸ್ತಿ ನಚೇದಿಹಾವೇದೀ
ನ್ಮಹತೀವಿನಷ್ಟಿಃ । ಭೂತೇಷುಭೂತೇಷು ವಿಚಿತ್ಯ
ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾಭವಂತಿ ॥
ಇತಿ ದ್ವಿತೀಯಃಖಂಡಃ ||

ದಿಂದುಂಟಾಗುವದೊ ? ಅದರಂತೆ ಸರ್ವಾತ್ಮಕ ಶಿವನೇ ನಾನು ಎಂಬುವ ಸಾಕ್ಷಾತ್ಕಾರವು ಚಿಚ್ಛಕ್ತಿಯಿಂದುಂಟಾಗುತ್ತದೆ. ಆದುದರಿಂದ, ಪ್ರತಿಬೋಧೇನ-ಚಿಚ್ಛಕ್ತಿಯಿಂದ, ವಿದಿತಂ-ತಿಳಿಯಲ್ಪಟ್ಟದ್ದು ಯಾವದುಂಟೊ? ಅದು ಮತಂ ತಿಳಿಯಲ್ಪಟ್ಟಿತು. ಅಂದರೆ ಪುರುಷನು ತನ್ನ ಚಿತ್ತವನ್ನು ಚಿಚ್ಛಕ್ತಿರೂಪವನ್ನಾಗಿ ಮಾಡಿಕೊಂಡು ಅದರಿಂದ ಯಾವಾಗ ಪರಶಿವನನ್ನು ತಿಳಿಯುವನೋ ಆಗ ಪರಶಿವಜ್ಞಾನವಾಗುತ್ತದೆಂದು ತಿಳಿಯತಕ್ಕದ್ದು. ಇಲ್ಲಿಯಾವನಿಂದ ಎಂಬುವ ಕರ್ತೃಪದವನ್ನು ಅಧ್ಯಾಹಾರಮಾಡಿಕೊಳ್ಳಬೇಕು. ಯಾವ ಕರ್ತೃವಿನಿಂದ ಪ್ರತಿಬೋಧವೆಂಬ ಕರಣದಿಂದ ಬ್ರಹ್ಮವು ತಿಳಿಯಲ್ಪಟ್ಟಿತೋ ಅವನಿಂದಲೇ ತಿಳಿಯಲ್ಪಟ್ಟಿತೆಂದು ತಿಳಿಯಬೇಕಲ್ಲದೆ ಮತ್ತೊಬ್ಬನಿಂದ ತಿಳಿಯಲ್ಪಡುವದಿಲ್ಲವೆಂದು ತಾತ್ಪರ್ಯವಂ ತೋರಿಸುವಲ್ಲಿ ಹಿ ಎಂಬ ಶಬ್ದವು ಅವನು ಅಮೃತತ್ವಂ-ಮುಕ್ತಿಯನ್ನು, ವಿಂದತೆ-ಹೊಂದುತ್ತಾನೆ. ಈ ಬ್ರಹ್ಮಸಾಕ್ಷಾತ್ಕಾರವನ್ನುಂಟುಮಾಡುವ ಶಕ್ತಿಯನ್ನು, ಆತ್ಮನಾ-ಶುದ್ಧನಾದ ಆತ್ಮನಿಂದ, ವೀರ್ಯಂ-ಚಿಚ್ಛಕ್ತಿಯನ್ನು. ವಿಂದತೆ-ಹೊಂದುತ್ತಾನೆ. ವಿದ್ಯಯಾ-ಚಿಚ್ಛಕ್ತಿರೂಪವಾದ ಪರಾಹಂಕಾರವೃತ್ತಿಯಿಂದ, ಅಮೃತಂ-ಮೋಕ್ಷವನ್ನು, ವಿಂದತೆ-ಹೊಂದುತ್ತಾನೆ. ಇಲ್ಲಿ ಎರಡುಸಾರೆ ಅಮೃತವನ್ನು ಹೊಂದುತ್ತಾನೆಂದು ಹೇಳಿರುವದು ಪ್ರತಿಬೋಧದಿಂದಲೇ ಮುಕ್ತಿಯಲ್ಲದೆ ಬೇರೆಯಾದ ಯಾವ ಉಪಾಯದಿಂದಲೂ ಮುಕ್ತಿಯು ಲಭಿಸುವದಿಲ್ಲವೆಂದು ಶಾಂಕರೀಕಾರನು ಈ ಮಂತ್ರದಲ್ಲಿರುವ ಪದಗಳಿಗೆ ಸರಲವಾದ ಅರ್ಥವನ್ನು ತೋರಿಸಿರುವನು. ಈ ಪ್ರಕಾರವಾಗಿ ಸಪ್ತಮಾಣ ಸಯುಕ್ತಿಕವಾದ ಮಂತ್ರಾರ್ಥ ಸಂಗತಿಯನ್ನು ಪರೀಕ್ಷಕರಾದ ವಿದ್ವಾಂಸರು ಅವಶ್ಯವಾಗಿ ನೋಡತಕ್ಕದ್ದೆಂದು ಈ ಮಂತ್ರದ ವ್ಯಾಖ್ಯಾನವು ಸಂಪೂರ್ಣವಾದಮೇಲೆ ತಾನೇ ಹೇಳಿರುವನು. ||೧೨|| ಕ್ರಿಮಿ ಕೀಟ ಪತಂಗ ಪಶು ಜನ್ಮಗಳಿಗಿಂತಲೂ ಮನುಷ್ಯನ ಜನ್ಮವು ಶ್ರೇಷ್ಠವಾದದ್ದು. ಇಂಥ ದುರ್ಲಭವಾದ ಮನುಷ್ಯ ಜನ್ಮಕ್ಕಿಂತಲೂ ಯಾವನಾದರೊಬ್ಬ ಶೈವ ಕುಲದಲ್ಲಿ ಜನ್ಮವನ್ನು ಹೊಂದುವದಂತೂ ದುರ್ಲಭವೆ. ವೀರಶೈವ ವಂಶದಲ್ಲಿ ಜನ್ಮವನ್ನು

ಇಹ ಮನುಷ್ಯೋತ್ತಮ ವೀರಶೈವಜನ್ಮನಿ ಸತಿ ಅವೇದೀಚ್ಚೇತ್ ವಿಶ್ವಾತ್ಮಕ ವಿಶ್ವಾಧಿಕ ಸರ್ವಜ್ಞತ್ವಾದಿಮಾನ್ ಶಿವಏವಾಹಮಿತ್ಯವಗತವಾನ್ ಯದಿ ಅಥ ಅನಂತರಂ, ಸತ್ಯಂ ಪರಶಿವಪದಮಸ್ತಿ ಪ್ರಾಪ್ತಂ ಭವತೀತ್ಯರ್ಥಃ. ನಚೇದಿಹಾವೇದೀತ್. ಅನೇಕಜನ್ಮಾನುಷ್ಠಿತಶ್ರೌತಸ್ಮಾರ್ತಕರ್ಮ ಪರಿಪಾಕಾತ್ ವೀರಶೈವಾನ್ವಯೇ ಜನ್ಮ ಪ್ರಾಪ್ಯಾಪಿ ಇಹ ಜನ್ಮನಿ ಯದಿ ಪರಶಿವಲಿಂಗಂ ಸ್ವಾಭಿನ್ನತ್ವೇನ ನವಿದಿತವಾನ್, ತದಾಮಹತಿ ಅಪರಿಮಿತಾ ವಿನಷ್ಟಿರ್ವಿನಾಶಃ "ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತೀತಿಸ್ಮೃತೇಃ | ಜನಿಜರಾಮರಣಕಾರಣ ಘೋರಾಪಾರಾಸಾರ ಸಂಸಾರರೂಪ ಸ್ವಶಕ್ತಿಸಂಕೋಚಮಲಾವರಣಲಕ್ಷಣಃ ಸ್ವವಿನಾಶೋಭವತೀತ್ಯರ್ಥಃ | ತಸ್ಮಾತ್ತಾಪತ್ರಯವಿಚ್ಛೇದನಸಮರ್ಥಂ ಪರಶಿವಲಿಂಗಮೇವಧ್ಯಾಯೇತ್. "ತದ್ವಿದ್ವಾನಕ್ಷರಂಧ್ಯಾಯೇದ್ಯದೀಚ್ಛೇಚ್ಛಾಂತಿಮಾತ್ಮನಃ ಇತಿ ಶ್ರುತೇಃ, ಜ್ಞಾತ್ವಾ ಶಿವಂಶಾಂತಿಮತ್ಯಂತಮೇತೀತಿಶ್ರುತೇಶ್ಚ ! ಭೂ

ಪಡೆಯುವದಂತೂ ಪರಮ ದುರ್ಲಭವು. ಎಂದು ಕ್ರಿಯಾಸಾರವಲ್ಲಿ ಹೇಳಿದ ಪ್ರಕಾರ ಇಂಥ ಶ್ರೇಷ್ಠವಾದ ವೀರಶೈವ ವಂಶದಲ್ಲಿ ಹುಟ್ಟಿದವನಿಗೆ ಶಾಶ್ವತ ಸುಖಕ್ಕೆ ಕಾರಣವಾದ ಶಿವಾದ್ವೈತ ಜ್ಞಾನವೊಂದಿಲ್ಲದಿದ್ದರೆ ಅವನು ಪುನಃ ಅನರ್ಥವನ್ನು ಹೊಂದಬೇಕಾಗುತ್ತೆಂದು "ಇಹಚೇದವೇದೀತ್" ಎಂಬ ಮಂತ್ರವೂ ಹೇಳುತ್ತದೆ. ಈ ಸರ್ವೋತ್ತಮವಾದ ವೀರಶೈವ ವಂಶದಲ್ಲಿ ಜನ್ಮವನ್ನು ಪಡೆದಮೇಲೆ ಇಲ್ಲಿಯೂ ಶಿವಾದ್ವೈತಜ್ಞಾನವನ್ನು ಸಂಪಾದಿಸಿ ಮುಕ್ತನಾಗದಿದ್ದರೆ ಅನೇಕ ಜನ್ಮಗಳಲ್ಲಿ ಶ್ರೌತಸ್ಮಾರ್ತ ಕರ್ಮಾಚರಣೆಯ ಪರಿಪಾಕದಿಂದ ವೀರಶೈವವಂಶದಲ್ಲಿ ಜನ್ಮವನ್ನು ಹೊಂದಿರುವುದು ವ್ಯರ್ಥವಾಗುವದಲ್ಲದೇ ಪುನಃ ಮೊದಲಿನಂತೆ ಸಂಸಾರಚಕ್ರದ ಸುಳಿಗೆ ಬಿದ್ದು ಜನನ ಮರಣಗಳಿಗೀಡಾಗಬೇಕಾಗುತ್ತದೆ. ಪುನಃ ತಾಪತ್ರಯಾಗ್ನಿಯಿಂದ ಬೆಂದು ಬೆಂಡಾಗಬೇಕಾಗುತ್ತದೆ ಈ ವೀರಶೈವ ವಂಶದಲ್ಲಿ ಹುಟ್ಟಿದ ಮಾತ್ರಕ್ಕೇನೇ ಮುಕ್ತಿಯಾಗಲಾರದು. ವೀರಶೈವ ವಂಶದಲ್ಲಿ ಹುಟ್ಟಿ ವಿಹಿತ ಕರ್ಮವನ್ನು ಮಾಡದೆ ಅವಿಹಿತ ಕರ್ಮವನ್ನು ಆಚರಿಸುತ್ತಿದ್ದರೆ ಮುಕ್ತಿಯು ಹೇಗೆ ಆದೀತು? ಆದ್ದರಿಂದ ಮೊದಲು ವೀರಶೈವದ ವಂಶದಲ್ಲಿ ಹುಟ್ಟುವದೇ ದುರ್ಲಭವು. ಇಂಥ ಜನ್ಮವನ್ನು ವ್ಯರ್ಥಗೊಳಿಸದೆ ಸರ್ವ ಪ್ರಪಂಚಕ್ಕೆ ಅಧಿಪತಿಯೂ ಸರ್ವ ಪ್ರಪಂಚ ಸ್ವರೂಪನೂ ಸರ್ವಜ್ಞತ್ವಾದಿ ಕಲ್ಯಾಣಗುಣಗಳುಳ್ಳವನೂ ಆದ ಯಾವ ಪರಶಿವನೋ ಅವನೇ ನಾನು ಎಂಬುವ ಶಿವಾದ್ವೈತಜ್ಞಾನವನ್ನು ಪಡೆದುಕೊಂಡು ಜನನ ಮರಣರೂಪಗಳಾದ ದುಃಖಕ್ಕೀಡಾಗದೆ ಮುಕ್ತರಾಗುವುದು ಪುರುಷಕರ್ತವ್ಯವಾಗಿರುವುದು. ಈ ಶಿವಾದ್ವೈತ ಜ್ಞಾನವಿಲ್ಲದಿದ್ದರೆ ಮನುಷ್ಯನಿಗೆ ವಿನಾಶವೆಂದು ಶ್ರುತಿಯಲ್ಲಿ ಹೇಳಿದಂತೆ, ಅಜ್ಞನೂ ಶಿವಾದ್ವೈತಜ್ಞಾನವಿಲ್ಲದವನೂ, ಗುರುವಾಕ್ಯದಲ್ಲಿ ಶ್ರದ್ಧೆಯಿಲ್ಲದವನೂ, ಸಂಶಯಾವಿಷ್ಟವಾದ ಮನಸ್ಸುಳ್ಳವನೂ ಆದ ಮನುಷ್ಯನು ನಾಶವನ್ನು ಹೊಂದುತ್ತಾನೆ ಎಂದು ಸ್ಮೃತಿಯೂ ಕೂಡಾ ಹೇಳುತ್ತದೆ. ಅಂದರೆ ಜನ್ಮ ಜರಾಮರಣಗಳಿಗೆ ಕಾರಣವಾದುದರಿಂದ ಅತಿ

ತೇಷು. ಭೂತೇಷು ಸಮಸ್ತೇಷು ಚರಾಚರೇಷು ವಿಚಿತ್ಯ. ಅವಿನಾಭಾವಸಂಬಂಧೇನ ಸಕಲ ನಿಷ್ಕಲ ಪರಶಿವಂಜ್ಞಾತ್ವಾ ಧೀರಾಸ್ತಾದೃಶ ಶಿವಾದ್ವೈತಧಿಷಣಾರಮಮಾಣಾ ವೀರಶೈವಾಃ ಪ್ರೇತ್ಯ. ವ್ಯಾವೃತ್ಯಾಸ್ಮಾಲ್ಲೋಕಾತ್ಪುತ್ರಕಲತ್ರಾದ್ಯುಪಲಕ್ಷಿತಾತ್ ಶರೀರಾದಾತ್ಮೈಕ್ಯತ್ವಾಭಿಮಾನಾಃ ಸಂತಃ ಅಮೃತಾ ಮುಕ್ತಾ ಭವಂತಿ ॥

ಇತಿ ಶ್ರೀಮಜ್ಜಗದ್ಗುರೂಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶಿದ್ಧಲಿಂಗ
ಶಿವಾಚಾರ್ಯ ಸಂಸ್ಥಾನಾಸ್ಥಾನಪಂಡಿತೇನ ಧರ್ಮರತ್ನಪದಪ್ರತಿಷ್ಠಿತೇನ
ಹುಬ್ಬಳ್ಳೀಪತ್ತನ ಪ್ರದೇಶಾಂತರ್ಗತ ಉಮಚಗಿ ವೃಷ್ಟಿಮಠಾಧಿ
ಷ್ಠಿತೇನ ಶಂಕರಶಾಸ್ತ್ರಿಣಾ ರಚಿತಾ ಕೇನೋಪನಿಷದೋ
ದ್ವಿತೀಯಖಂಡಸ್ಯ ಶಾಂಕರೀವ್ಯಾಖ್ಯಾ
ಸಮಾಪ್ತಾ ॥
ಶ್ರೀ ಹರಗುರುಚರ ಚರಣಾರ್ಪಿತಾಭವತು ॥

ಭಯಂಕರವಾಗಿ ನಿರವಧಿಯಾಗಿ, ಎಸೊಂದೂ ನಾಶವಿಲ್ಲದ್ದಾಗಿ, ಮೂರು ಮಲಾವರಣಸ್ವರೂಪವಾಗಿ ಇರುವ ಸಂಸಾರವೆಂಬುದೇ ಪುರುಷನ ವಿನಾಶವೆಂದು ತಿಳಿಯಬೇಕು. ಇಂತಹ ವಿನಾಶವು ಶಿವಾದ್ವೈತಜ್ಞಾನವಿಲ್ಲದಿದ್ದವನಿಗೆ ಪ್ರಾಪ್ತವಾಗುವದು. ಶಿವಾದ್ವೈತಜ್ಞಾನ ಇದ್ದರೆ ಸತ್ಯವಾದ ಪರಶಿವಸ್ವರೂಪವು ಪ್ರಾಪ್ತವಾಗುವದೆಂದು ಮಂತ್ರವು ಹೇಳುತ್ತದಲ್ಲದೆ, ಎಲ್ಲಾ ಚರಾಚರ ಪ್ರಪಂಚದಲ್ಲಿಯೂ ಶಿವನು ಅವಿನಾಭಾವ ಸಂಬಂಧದಿಂದ ಇರುವನೆಂದು ತಿಳಿದು, ತನ್ನ ಪುತ್ರಮಿತ್ರಕಲತ್ರಾದಿಗಳಲ್ಲಿಯೂ ತನ್ನ ಶರೀರದಲ್ಲಿಯೂ ಅಹಂಕಾರ ಮಮಕಾರಗಳನ್ನು ಬಿಟ್ಟು ಕೇವಲ ಲಿಂಗಾಂಗ ಸಾಮರಸ್ಯರೂಪವಾದ ಶಿವಾದ್ವೈತಜ್ಞಾನದಲ್ಲಿ ರಮಿಸುವ ಧೀರರು (ವೀರಶೈವರು) ಮುಕ್ತರಾಗುತ್ತಾರೆಂತಲೂ ಮಂತ್ರದ ತಾತ್ಪರ್ಯವೆಂಬಲ್ಲಿಗೆ ಶ್ರೀಮದುಜ್ಜಯಿನೀ ಸದ್ಧ
ರ್ಮ ಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಶಿದ್ಧಲಿಂಗ ಶಿವಾಚಾರ್ಯರ ಸಂಸ್ಥಾನಾ
ಸ್ಥಾನಪಂಡಿತರೂ ಧರ್ಮರತ್ನಪದವೀ ವಿಭೂಷಿತರೂ ಧಾರವಾಡಜಿಲ್ಲಾ ಹುಬ್ಬಳ್ಳಿತಾ
ಲ್ಲೂಕ ಉಮಚಗಿ ಎಂಬ ಗ್ರಾಮದ ಮಠೀಮಠದ ಬ್ರಹ್ಮಶ್ರೀ ಶಂಕರಶಾಸ್ತ್ರಿಗಳವ
ರಿಂದ ರಚಿಸಲ್ಪಟ್ಟ ಕೇನೋಪನಿಷತ್ತಿನ ದ್ವಿತೀಯಖಂಡದ ಶಾಂಕರೀವ್ಯಾಖ್ಯಾ
ನಕ್ಕೆ ಶಿರಸೀ ಶಿವಾದ್ವೈತ ವಿದ್ಯಾವಿಭೂಷಣ ಪದವೀಯಿಂದ ಅಲಂಕರಿಸಲ್ಪ
ಟ್ಟ ಬ್ರಹ್ಮಶ್ರೀ ಪಂಡಿತ ಗುರುಶಾಂತಶಾಸ್ತ್ರಿಗಳಿಂದ ಕನ್ನಡದಲ್ಲಿ
ರಚಿಸಲ್ಪಟ್ಟ ಭಾವದರ್ಪಣವು ಸಮಾಪ್ತವಾದುದು.



ಶಿವೋದಾತಾ ಶಿವೋಭೋಕ್ತಾ ಶಿವಃ ಸರ್ವಮಿದಂ ಜಗತ್ | ಶಿವೋಯ ಜ್ಞ್ಯತಿಸರ್ವಸ್ವಂ ಯಃ ಶಿವಃ ಸೋಽಹಮೇವಚ|| ಇತಿ ಸಿದ್ಧಾಂತಮಜಾನಾನಾ ಮಭಿಮತಾಸುರಕರ್ತೃಕ ವಿಜಯಸ್ಯ ಕರ್ತೃಕತ್ವಾನಾಮತಏವ ದೇಹಾದ್ಯಭಿ ಮಾನರಾಹಿತ್ಯಾಭಾವಾನಾಮಶುದ್ಧಾತ್ಮನಾಮಭಕ್ತಾನಾ ಮಿಂದ್ರಾದಿದೇವಾ ನಾಮಭಿಮಾನನಾಶಮಂತರಾ ಸ ಬ್ರಹ್ಮಜ್ಞಾನಶಕ್ತಿರೂಪವೀರ್ಯಪ್ರಾಪ್ತಿಃ ತೇಷಾಮಭಿಮಾನನಾಶೇಚ ಆತ್ಮನಾವಿಂದತೆ ವೀರ್ಯಮಿತ್ಯುಕ್ತಾರ್ಥೆ ಆಖ್ಯಾ ಯಿಕಾ ವ್ಯಾಜೇನ ವೀರ್ಯೋಪಾಯಮಭಿಮಾನರಾಹಿತ್ಯ ಪ್ರಾಧಾನ್ಯಲಕ್ಷಣಂ ಭಕ್ತಾದಿಸ್ಥಲಮಾಹಶ್ರುತಿರಿತಿಜ್ಞಾಯತೆ "ತ್ಯಕ್ತಾಭಿಮಾನೋ ದೇಹಾದೌಭಕ್ತ

ಶಿವನೇ ಎಲ್ಲವನ್ನೂ ಕೊಡುವನು. ಶಿವನೇ ಭೋಗಿಸುವವನು. ಶಿವನು ಪ್ರಪಂಚ ರೂಪನಾಗಿರುವನು. ಶಿವನೇ ಸರ್ವವೇದಸ್ವರೂಪನು. ಅವನೇ ನಾನು ಎಂಬುವ ಶಿವಾ ದ್ವೈತ ಸಿದ್ಧಾಂತವನ್ನು ತಿಳಿಯದಕಾರಣ ದೇವಾಸುರ ಯುದ್ಧದಲ್ಲಿ ನಮಗಾದ ಜಯವು ನಮ್ಮಿಂದಲೇ ಆಯಿತು. ನಾವೇ ಅಸುರರನ್ನು ಜಯಿಸಿದೆವೆಂದು ಅಭಿಮಾನವನ್ನು ಹೊಂದಿದ ದೇವತೆಗಳು ಸರ್ವಾಂತರ್ಯಾಮಿಯಾದ ಶಿವನಿಂದಲೇ ಎಲ್ಲಾ ಕಾರ್ಯಗಳಾಗುತ್ತವೆಂದೂ ಅವ ನೇ ಈ ಅಸುರರನ್ನು ಜಯಿಸಿದನೆಂದು ತಿಳಿಯದೇ ಕೇವಲ ಅಹಂಕಾರಿಗಳಾಗಲು ಇಂಥ ಇಂ ದ್ರಾದಿ ದೇವತೆಗಳು ದೇಹಾದಿಗಳೇ ಆತ್ಮನೆಂದು ತಿಳಿದ ಕಾರಣ ಅಶುದ್ಧಾತ್ಮರಾದುದರಿಂದಲೇ ಅಭಕ್ತರಾಗಿ ಚ್ಯುತರಾಗುವರೆಂದು ಆ ಸರ್ವಾಂತರ್ಯಾಮಿಯಾದ ದಯಾಘನವಾದ ಪರಶಿವ ಮೂರ್ತಿಯು ದೇವತೆಗಳ ಅಭಿಮಾನವನ್ನು ನಾಶಮಾಡುವದಕ್ಕೋಸ್ಕರ ಜ್ಯೋತಿರ್ಮಯವಾದ ಒಂದು ಸ್ತಂಭಾಕಾರವಾಗಿ ಆವಿರ್ಭವಿಸಿ, ಆ ದೇವತೆಗಳೊಡನೆ ಸಂವಾದವನ್ನು ನಡೆಯಿಸುವದ ರಿಂದ ಮುಂದಣ ಖಂಡಗಳಲ್ಲಿ ಆತ್ಮಶುದ್ಧಿರೂಪ ಉಪಾಯವು ಆಖ್ಯಾಯಿಕಾ ನೆವದಿಂದ ಹೇ ಳುತ್ತದೆ. ಆತ್ಮಶುದ್ಧಿಯಿಲ್ಲದಿದ್ದರೆ ವೀರ್ಯವಿಲ್ಲವು. ವೀರ್ಯವಿಲ್ಲದಿದ್ದರೆ ಮೋಕ್ಷವಿಲ್ಲವು. ಆದುದರಿಂದ "ಆತ್ಮನಾವಿಂದತೆವೀರ್ಯಂ" ಎಂಬಲ್ಲಿ ವೀರ್ಯಪ್ರಾಪ್ತಿಗೆ ಆತ್ಮಶುದ್ಧಿಯೇ ಕಾ ರಣವೆಂದು ಶ್ರುತಿಯು ಹೇಳಿ ಈಗ ಆತ್ಮಶುದ್ಧಿಯ ಉಪಾಯವಾದ ಭಕ್ತಾದಿ ಸ್ಥಲವನ್ನು ಹೇ ಳುತ್ತದೆ. ದೇಹಾದಿಗಳಲ್ಲಿ ಅಭಿಮಾನವಂ ಬಿಟ್ಟವನೇ ಭಕ್ತನು. ಈ ಭಕ್ತನಿಗೇನೇ ಆತ್ಮಶುದ್ಧಿ ಯು ಇವನಿಗೇನೇ ಚಿಚ್ಛಕ್ತಿರೂಪನಾದ ವೀರ್ಯಪ್ರಾಪ್ತಿಯು. ಇದರಿಂದಲೇ ಮೋಕ್ಷವೂ ಉಂ ಟಾಗುವುದು. ಈ ವಿಷಯದಲ್ಲಿ ಶಾಂಕರೀಕಾರನು "ತ್ಯಕ್ತಾಭಿಮಾನೋದೇಹಾದೌ ಭಕ್ತ ಇತ್ಯು ಚ್ಯತೆ ಬುಧೈಃ" ಮೊದಲಾದ ಅನೇಕ ಶಿವಾಗಮ ಪ್ರಮಾಣಗಳನ್ನು ಕೊಟ್ಟಿರುವನು. ಶ್ರೌತಸ್ಮಾ ರ್ತಾದಿ ಸತ್ಕರ್ಮಾಚರಣೆಯಿಂದ ಪಾಪಪುಂಜವನ್ನು ಕಿತ್ತುಹಾಕಿ, ಪುಣ್ಯಪ್ರಭಾವವುಳ್ಳವನೇ ಭಕ್ತ ಸ್ಥಲದೊಳಗಣ ಪಿಂಡಸ್ಥಲವನ್ನು ಹೊಂದಿದವನು. ಇವನಿಗೆ ಮುಂದುಮುಂದಣ ಸ್ಥಲಗಳು ಸಿದ್ಧಿ ಸಬೇಕಾದರೆ ತನ್ನ ದೇಹಾದಿಗಳಲ್ಲಿ ಅಭಿಮಾನವಂ ಬಿಟ್ಟು ಗುರುದೇವತೆಗಳಲ್ಲಿಯೇ ಅನುರಾಗ

ಇತ್ಯುಚ್ಯತೇ ಬುಧೈಃ | ತಚ್ಚಿತ್ತಮಚಲಂ ಯಸ್ಯಸವೈಮಾಹೇಶ್ವರಃ ಸ್ಮೃತಃ || ಚಿತ್ತಶುದ್ಧಿರ್ಭವೇದ್ಯಸ್ಯ ಸಪ್ರಸಾದೀತ್ಯುದಾಹೃತಃ | ತ್ಯಕ್ತ ಜೀವಭ್ರಮಶ್ಚಾಯಂ ಲಿಂಗಾತ್ಮಾ ಪ್ರಾಣಲಿಂಗಕಃ || ಶಿವನಿತ್ಯತ್ವ ನಿಶ್ಚಿಂತಃ ಸಾನಂದಃ ಶರಣೋಭವೇತ್ | ಶಿವಜೀವೋ ಭಯಭ್ರಾಂತಿರಹಿತಶ್ಚೈಕ್ಯಮುಚ್ಯತೇ || ಇತ್ಯುಕ್ತತ್ವಾತ್ | ಪಿಂಡಸ್ಥಲಸ್ಯ ಭಕ್ತಸ್ಥಲಾಂತರ್ಗತತ್ವಾತ್ ಧ್ಯಾನಾದಿನಾ ಆತ್ಮಶುದ್ಧೇರಭಾವೇ ಇಂದ್ರಸ್ಯೋಮಾವಾಕ್ಯಾತ್ ಕಥಂತಸ್ಯ ವೀರ್ಯಸ್ಯ ಬ್ರಹ್ಮಜ್ಞಾನರೂಪಸ್ಯ ಲಾಭಉಕ್ತಃ ಸಂಗಚ್ಛತೇ | ತಸ್ಮಾದಿಯ ಮಾಖ್ಯಾಯಿಕಾ "ಬ್ರಹ್ಮಹ

ವನ್ನು ಬೆಳೆಸುತ್ತಿರಬೇಕು ಹೀಗೆ ಗುರುದೇವತೆಗಳಲ್ಲಿ ಪ್ರೀತಿಯನ್ನು ಹೆಚ್ಚಿಸಿಕೊಂಡಾಗಲೇ ಸಂಪೂರ್ಣ ಭಕ್ತನಾಗುವನು. ಭಕ್ತನಾಗದಿದ್ದವನು ಅಶುದ್ಧಾತ್ಮನು. ಈ ಅಶುದ್ಧಾತ್ಮನಿಗೆ ವೀರ್ಯಪ್ರಾಪ್ತಿಯಿಲ್ಲವು ವೀರ್ಯವಿಲ್ಲದುದರಿಂದ ಅವನಿಗೆ ಮುಕ್ತಿಯೂ ಉಂಟಾಗುವುದಿಲ್ಲವು. ಇಂದ್ರಾದಿ ದೇವತೆಗಳಿಗೆ ಧ್ಯಾನಾದಿಗಳಿಂದ ಆತ್ಮಶುದ್ಧಿಯಿಲ್ಲದಿದ್ದರೆ ಅವರಿಗೆ ಪಾರ್ವತೀದೇವಿಯ ವಾಕ್ಯದಿಂದ ವ ಎಂದೆ ಹೇಳಲ್ಪಡುವ ಬ್ರಹ್ಮಜ್ಞಾನರೂಪವಾದ ವೀರ್ಯಲಾಭವು ಸಂಗತವಾಗಲಾರದು. ಆದ್ದರಿಂದ "ಬ್ರಹ್ಮಹದೇವೇಭ್ಯೋವಿಜಗ್ಯೆ" ಇದೇ ಮೊದಲಾದ ಕಥಾ ಸಂವಾದವು ಬ್ರಹ್ಮಜ್ಞಾನರೂಪವಾದ ವೀರ್ಯದ ಉಪಾಯವನ್ನು ತೋರಿಸುವದಕ್ಕೆಂದು ಕಂಡುಬರುತ್ತದೆ. ಅಥವಾ ದೇವತೆಗಳ ಅಭಿಮಾನವನ್ನು ಹೋಗಲಾಡಿಸಿ ಅವರನ್ನು ಭಕ್ತರನ್ನಾಗಿ ಮಾಡಬೇಕೆಂತಲೂ, ಆ ಭಕ್ತಿಯಿಂದ ಅವರಿಗೆ ಸದ್ಗತಿಯನ್ನು ಕೊಡಬೇಕೆಂತಲೂ, ದೇವತೆಗಳ ನೇತ್ರಕ್ಕೆ ಗೋಚರಿಸುವಂತೆ ಆ ನಿಷ್ಕಲ ಪರಬ್ರಹ್ಮವು ಸಾಕಾರ ಜ್ಯೋತಿರ್ಲಿಂಗರೂಪವಾಗಿ ಆವಿರ್ಭವಿಸಿತು. ಅದಕ್ಕೆ ದೇವತೆಗಳು ಈ ಮುಂದೆ ಕಾಣುವ, ಸ್ತಂಭಾಕಾರವಾಗಿರುವ, ಜ್ಯೋತಿಯೇನಿರಬಹುದೆಂದು ತಮ್ಮತಮ್ಮೊಳಗಾಲೋಚಿಸಿ, ಅಗ್ನಿಯೇ! ಇದೇನು? ಈ ಯಕ್ಷನನ್ನು ತಿಳಿದುಕೊಂಡುಬಾ ಎಂದು ಅಗ್ನಿಗೆ ಆಜ್ಞೆಯಂ ಮಾಡಲು, ಅಗ್ನಿಯು ಅದರ ಸಮೀಪಕ್ಕೆ ಹೋಗಲಾಗಿ. ಆ ಜ್ಯೋತಿರೂಪವಾದ ವಸ್ತುವು ಯಲೋ ನೀನ್ಯಾರು, ನಿನ್ನಲ್ಲಿ ಸಾಮರ್ಥ್ಯವೇನು? ಎಂದು ಪ್ರಶ್ನಮಾಡಿದ್ದಕ್ಕೆ ನನ್ನಲ್ಲಿ ಯಲ್ಲಾ ಜಗತ್ತನ್ನು ಸುಡುವ ಸಾಮರ್ಥ್ಯವದೆ. ನಾನು ಅಗ್ನಿಯು. ಎಂದು ಉತ್ತರವನ್ನು ಹೇಳಲು, ಹಾಗ್ಯಾದರೆ ಹುಲ್ಲುಕಡ್ಡಿಯನ್ನು ಸುಡು. ನಿನ್ನ ಸಾಮರ್ಥ್ಯವನ್ನು ನೋಡೋಣವೆಂದು ಆ ಜ್ಯೋತಿರ್ಲಿಂಗರೂಪನಾದ ಯಕ್ಷನು ಅಗ್ನಿಯ ಮುಂದೆ ಹುಲ್ಲುಕಡ್ಡಿಯನ್ನಿಡಲು, ಅದನ್ನು ಅಗ್ನಿಯು ಸುಡುವುದಕ್ಕೆ ಸಾಮರ್ಥ್ಯವಿಲ್ಲದೆ ಮುಖಭಂಗಿತನಾಗಿ, ತನ್ನ ಅಭಿಮಾನವನ್ನು ಬಿಟ್ಟು, ಇಂದ್ರಾದಿ ದೇವತೆಗಳೆಡೆಗೆ ಬಂದು, ನನ್ನಿಂದ ಆ ಪೂಜ್ಯವಸ್ತುವನ್ನು ತಿಳಿಯುವದಾಗಲಿಲ್ಲವು ಎಂದು ಹೇಳಲು. ಆ ದೇವತೆಗಳು ವಾಯುವನ್ನು ಕಳುಹಿಸಿದರು. ಆ ದೇವತೆಯನ್ನು ನೋಡಿ ಆ ಯಕ್ಷನು ಯಲೋ ನೀನ್ಯಾರು? ನಿನ್ನಲ್ಲಿ ಸಾಮರ್ಥ್ಯವೇನು? ಎಂದು ಕೇಳಲು, ವಾಯುವು ಏಕಕಾಲದಲ್ಲಿಯೇ ಈ ಜಗತ್ತನ್ನು ಹಾರಿಸಿಕೊಂಡು ಹೋಗುವ ಸಾಮರ್ಥ್ಯವು ನನ್ನಲ್ಲಿದೆ. ನನಗೆ ವಾಯು

ದೇವೇಭ್ಯೋ ವಿಜಿಗ್ಯೇ" ಇತ್ಯಾದಿಕಾ "ಆತ್ಮನಾ ವಿಂದತೇ ವೀರ್ಯಮಿತ್ಯುಕ್ತಸ್ಯ ವೀರ್ಯಸ್ಯೋ"ಪಾಯಪ್ರದರ್ಶನಾರ್ಥಾ ಇತಿ ನಿಶ್ಚೀಯತೇ | ಅಥವಾ ಪ್ರಾದುರ್ಭೂತ ಯಕ್ಷಸ್ಯೇಂದ್ರಾದಿ ಚಕ್ಷುರ್ಗ್ರಾಹ್ಯಸ್ಯ ಬ್ರಹ್ಮತ್ವಕಥನಾತ್ "ಯಚ್ಚಕ್ಷುಷಾನಪಶ್ಯತೀ"ತ್ಯಾದಿನಾ "ತದೇವಬ್ರಹ್ಮತ್ವಂ ವಿದ್ಧಿ ನೇದಂಯದಿದಮುಪಾಸತೇ" ಇತ್ಯಂಶೇನೋಕ್ತಸ್ಯಬ್ರಹ್ಮತ್ವ ಪ್ರತಿಷೇಧಸ್ಯ ಮಂದಬುದ್ಧೀನಾ ಮಪ್ರಾಕೃತದೃಕ್ಕಲಾದಿಗ್ರಾಹ್ಯೇಷ್ಟಾದಿ ಲಿಂಗಾಪ್ರತಿಯೋಗಿತಾಕತ್ವಸ್ಯ ಪ್ರದರ್ಶನಾರ್ಥೇಯ ಮಾಖ್ಯಾಯಿಕಾ ಆರಭ್ಯತೇ || ಬ್ರಹ್ಮಹದೇವೇಭ್ಯೋ ವಿಜಿಗ್ಯೇ ಇತಿ ||

ವೆಂದು ಕರೆಯುವರು. ಎಂದು ಹೇಳಲು, ಯಕ್ಷನು ಹಾಗಾದರೆ ಈ ತೃಣವನ್ನು ಮೇಲಕ್ಕೆ ಹಾರಿಸು ನೋಡೋಣ ಎಂದು ಒಂದು ಹುಲ್ಲುಕಡ್ಡಿಯನ್ನು ಆ ವಾಯುವಿನ ಎದುರಿಗೆ ಇಟ್ಟನು. ವಾಯುವಿಗೆ ಅದನ್ನು ಹಾರಿಸುವದಕ್ಕೆ ಸಾಮರ್ಥ್ಯ ಸಾಲದೇ. ತನ್ನ ಗರ್ವವನ್ನು ಬಿಟ್ಟು ಇಂದ್ರಾದಿ ದೇವತೆಗಳ ಬಳಿಗೆ ಹೋಗಿ, ನನ್ನಿಂದ ಅದನ್ನು ತಿಳಿಯುವುದಕ್ಕಾಗಲಿಲ್ಲವು. ಎಂದು ಹೇಳಲು, ಇಂದ್ರನು ನಾನೇ ಇದನ್ನು ಪರೀಕ್ಷಿಸುವೆನೆಂದು ಹಮ್ಮಿನಿಂದ ಹೊರಟು ಹೋಗಿ ನೋಡಲಾಗಿ ಆ ವಸ್ತುವು ಕಾಣದಂತೆ ಆಯಿತು. ಇಂದ್ರನು ಇದೇನಾಶ್ಚರ್ಯವು. ಎಂದು ಆ ಲಿಂಗಮೂರ್ತಿರೂಪವಾದ ಯಕ್ಷವನ್ನು ಧ್ಯಾನಿಸುತ್ತ ಅಲ್ಲಿಯೇ ಕುಳಿತುಕೊಂಡನು. ಅನಂತರ ಇವನ ಭಕ್ತಿಗೆ ಮೆಚ್ಚಿ, ಆ ಶಿವಚಿಚ್ಛಕ್ತಿರೂಪವಾದ ವಿಮರ್ಶ್ಯಶಕ್ತಿಯು ತನ್ನ ಸ್ಥೂಲಪರಿಣಾಮವಾದ ಪಾರ್ವತಿ ಸ್ವರೂಪವನ್ನು ತಾಳಿ ಆವಿರ್ಭವಿಸಿತು. ಇಂಥಾ ಅತಿಸುಂದರವಾದ ಪಾರ್ವತಿಯ ಸ್ವರೂಪವನ್ನು ನೋಡಿ, ಎಲೈ ಮಹಾದೇವಿಯೇ ಈ ಪೂಜ್ಯವಾದ ವಸ್ತುವಾವದು ? ಎಂದು ಪ್ರಶ್ನೆಮಾಡಲು, ಆ ಪಾರ್ವತೀದೇವಿಯು ಈ ಜಗತ್ತನ್ನು ಹುಟ್ಟಿಸುವ, ರಕ್ಷಿಸುವ, ನಾಶಮಾಡುವ, ನಿಯಮಿಸುವ, ಅನುಗ್ರಹಿಸುವ, ಲಿಂಗಮೂರ್ತಿಯಾದ ಪರಶಿವಬ್ರಹ್ಮವೇ ಇದೆಂದು ಉತ್ತರವನ್ನು ಹೇಳಿದಳು. ಎಂಬುವ ಮುಂದಣ ಕಥಾಪ್ರಸಂಗದಲ್ಲಿ ನೇತ್ರಕ್ಕೆ ಗೋಚರವಾದ ಆ ಯಕ್ಷಮೂರ್ತಿಗೆ ಪಾರ್ವತಿಯು ಬ್ರಹ್ಮವೆಂದು ಹೇಳದಿದ್ದರೆ ಹಿಂದೆ ಯಾವದು ನೇತ್ರಕ್ಕೂ ಮನಸ್ಸಿಗೂ ಗೋಚರವಾಗುವದಿಲ್ಲವೋ ಅದು ಬ್ರಹ್ಮವು. ಮತ್ತು ಯಾವದನ್ನು ಜನವು ಉಪಾಸನೆಮಾಡುತ್ತದೆಯೋ ಅದು ಬ್ರಹ್ಮವಲ್ಲವು ಎಂದು ಹೇಳಿದ ಸಂದರ್ಭದಿಂದ ನೇತ್ರಕ್ಕೆ ಗೋಚರಿಸುವ ಇಷ್ಟಲಿಂಗವು ಕೂಡ ಬ್ರಹ್ಮವಲ್ಲವೆಂದು ಮಂದಬುದ್ಧಿಗಳು ತಿಳಿಯುತ್ತಿದ್ದರು. ಈಗ ಆ ಸಾಕಾರಮೂರ್ತಿಯಾದ ಯಕ್ಷನಿಗೆ ಪಾರ್ವತಿಯು ಬ್ರಹ್ಮನೆಂದು ಪ್ರಯೋಗಿಸಿದಕಾರಣ ಸಾಕಾರವಾದ ಇಷ್ಟಲಿಂಗವು ಕೂಡ ಬ್ರಹ್ಮವೆಂದು ಸಿದ್ಧವಾಯಿತು. ಆದುದರಿಂದ ಹಿಂದೆ ಬ್ರಹ್ಮವಲ್ಲವೆಂದು ಶ್ರುತಿಯು ನಿಷೇಧಿಸುವದು. ಹಿಂದೆ ನಾವು ಹೇಳಿದಂತೆ ಪ್ರತಿಮಾಕಾರವಾದ ವಿಷ್ಣ್ವಾದಿ ಮೂರ್ತಿಗಳೆಂದು ಸ್ಪಷ್ಟವಾಯಿತು. ಈ ತತ್ವವನ್ನು ತೋರಿಸುವದಕ್ಕಾಗಿ ಮುಂದಣ "ಬ್ರಹ್ಮಹದೇವೇಭ್ಯೋ ವಿಜಿಗ್ಯೇ" ಮೊದಲುಗೊಂಡು ಆಖ್ಯಾಯಿಕಾ ರೂಪದಿಂದ ಆರಂಭಿಸಲ್ಪಡುತ್ತದೆ.

ಮೂ॥ ಬ್ರಹ್ಮಹದೇವೇಭ್ಯೋವಿಜಿಗ್ಯೇ ತಸ್ಯ ಬ್ರಹ್ಮಣೋ ವಿಜಯೇ ದೇವಾ ಅಮಹೀಯಂತ । ತ ಐಕ್ಷಂತಾ ಸ್ಮಾಕಮೇವಾಯಂವಿಜಯೊಅಸ್ಮಾಕಮೇವಾಯಂ ಮಹಿಮೇತಿ ॥೨೪॥೧॥

ಶಾಂ॥ ಬ್ರಹ್ಮಹ ಸರ್ವಶತತ್ವಾನಾಮುಪರಿಸ್ಥಿತಂ, "ಊರ್ಧ್ವಾಯನಮ ಊರ್ಧ್ವಲಿಂಗಾಯನಮಃ" ಇತಿ ಶ್ರುತಿಪ್ರತಿಪಾದ್ಯಂ । ಚಿಚ್ಛಕ್ತಿಪೀಠಸಹಿತಂ ಲಿಂಗಂ ನಿಷ್ಕಲಂ ದೇವೇಭ್ಯೋದೇವಾನಾಂ ಪ್ರಯೋಜನಾಯ, ವಿಜಿಗ್ಯೇ ಜಿತವದಸುರಾನ್ । ದೇವಾಸುರಸಂಗ್ರಾಮೆ ಅಸುರಾನ್ಜಿತ್ವಾ ಅಭಯಾನ್ ಸುರಾನಕರೋತ್ । ತಸ್ಯಬ್ರಹ್ಮಣೋಹಕಿಲವಿಜಯೇ ದೇವಾ ಇಂದ್ರಾದಯ ಅಮಹೀಯಂತ ಪೂಜಿತಾ ಅಭವನ್ ಅವಿಜ್ಞಾತ ತದ್ಬ್ರಹ್ಮಕರ್ತೃಕಾಃಸಂತಃ ಅಸ್ಮತ್ಕರ್ತೃಕತ್ವ

"ಊರ್ಧ್ವಲಿಂಗಾಯನಮಃ" ಎಂಬುವ ಶ್ರುತಿಯಿಂದ ಪ್ರತಿಪಾದ್ಯವಾಗಿಯೂ ಶಿವಾದಿ ಧರಣ್ಯಂತಗಳಾದ ತತ್ವಗಳಿಗೆ ಅಧಿಕವಾಗಿಯೂ ಚಿಚ್ಛಕ್ತಿ ಎಂಬ ಪೀಠಸಹಿತವಾಗಿಯೂ ಇರುವ ಯಾವ ನಿಷ್ಕಲಪರಶಿವಬ್ರಹ್ಮವೋ? ಅದುವೇ ಸದ್ಗುಣಶಾಲಿಗಳಾದ ಇಂದ್ರಾದಿ ದೇವತೆಗಳಿಗೂ, ರಾಕ್ಷಸರಿಗೂ, ನಡೆದ ಯುದ್ಧದಲ್ಲಿ ರಾಕ್ಷಸರನ್ನು ಜಯಿಸಿತು. ಅನಂತರ ಇಂದ್ರಾದಿ ದೇವತೆಗಳು ರಾಕ್ಷಸರನ್ನು ಜಯಿಸಿದವರು ನಾವೇ ಎಂದು ಅಹಂಕಾರಪರವಶರಾಗಿ ನಮಗಾದ ಜಯವು ಆ ಸರ್ವಾಂತರ್ಯಾಮಿಯಾದ ಶಿವನಿಂದಲೇ ಆಯಿತು ಎಂದು ತಿಳಿಯದೆ ನಮ್ಮಿಂದಲೇ ರಾಕ್ಷಸರಿಗೆ ಅಪಜಯವಾಯಿತು. ನಾವೇ ಅವರನ್ನು ಜಯಿಸಿರುವದರಿಂದ ನಾವುಗಳೇ ಶ್ರೇಷ್ಠರು, ಬಲಿಷ್ಠರು, ಎಂದು ತಿಳಿದು ಇಂದ್ರಾದಿದೇವತೆಗಳು ಅತಿಶಯಗರ್ವದಿಂದ ಮೆರೆಯುತ್ತಿದ್ದರು.

ಪೂರ್ವಕಲ್ಪದಲ್ಲಿ ಲೋಕಪ್ರಸಿದ್ಧರಾದ ಬ್ರಹ್ಮ ವಿಷ್ಣ್ವಾದಿ ದೇವತೆಗಳು ನಾನು ಹೆಚ್ಚು ತಾನು ಹೆಚ್ಚು ಎಂದು ಗರ್ವದಿಂದ ಯುದ್ಧಕ್ಕೆ ಸನ್ನದ್ಧರಾಗಿ ಯುದ್ಧವನ್ನು ಮಾಡುತ್ತಿರಲು ಸರ್ವಜ್ಞಮೂರ್ತಿಯಾದ ಪರಶಿವನು ಅವರ ಅಹಂಕಾರವನ್ನು ನಾಶಮಾಡುವದಕ್ಕಾಗಿ ಆ ಬ್ರಹ್ಮ ವಿಷ್ಣು ದೇವತೆಗಳ ಮಧ್ಯದಲ್ಲಿ ಸ್ತಂಭಾಕಾರವಾದ ಜ್ಯೋತಿಸ್ವರೂಪವನ್ನು ಧರಿಸಿ ಕಾಣಿಸಿಕೊಂಡನು. ಎಂದು ಪುರಾಣದಲ್ಲಿ ಹೇಳಲ್ಪಟ್ಟಪ್ರಕಾರ, ಇಂದ್ರಾದಿ ದೇವತೆಗಳ ಅಭಿಮಾನವಂ ನಾಶಮಾಡುವದಕ್ಕಾಗಿ ನಿಷ್ಕಲ ಪರಶಿವನೇ ಸ್ತಂಭಾಕಾರವಾದ ಆಕಾರವನ್ನು ಧರಿಸಿದನು. ಜಲವು ಘಟ್ಟಿಗೊಂಡು ಆಲಿಕಲ್ಲಾದಂತೆ ನಿಷ್ಕಲವಸ್ತುವೇ ಸಕಲವಾಯಿತು. ಆದ್ದುದರಿಂದ ಇಂದ್ರಾದಿ ದೇವತೆಗಳಿಗೆ ಗೋಚರಿಸಿಕೊಂಡಿತು. ಎಂಬುವದನ್ನು ಈ ಮುಂದಣ ಮಂತ್ರವು ಹೇಳುತ್ತದೆ. ಸರ್ವ ಕಾರ್ಯವನ್ನೂ ಈಶ್ವರನೇ ಮಾಡತಕ್ಕವನೆಂಬುವದನ್ನು ತಿಳಿಯದೆ, ನಾವೇ ಅಸುರರನ್ನು ಜಯಿಸಿದೆವೆಂದು ತಿಳಿದುಕೊಂಡ ದೇವತೆಗಳ ಗರ್ವವನ್ನು ಪರಿಹರಿಸಿ, ಅವ

ಮೇವಾಸ್ಯೇತ್ಯಭಿಮತವಂತಃ | ತದಭಿಮಾನಮೇವಾಹ ತೇ ದೇವಾ ಐಕ್ಷಂತ
ಜ್ಞಾತವಂತಃ | ಕಿಮಿತ್ಯಯಮಸುರಾಣಾಂ ವಿಜಯೋಸ್ಮಾಕಮೇವಾಸ್ಮಾಕ
ಮೇವಾಯಂ ಮಹಿಮೇತಿ | ಪುರಾಕಲ್ಪೇ ಮಹಾಕಾಲೇ ಪ್ರಳಯೇ ಲೋಕವಿಶ್ರು
ತೇ | ಅಯುಧ್ಯೇತಾಮಹಾತ್ಮಾನೌ ಬ್ರಹ್ಮವಿಷ್ಣೂ ಪರಸ್ಪರಂ || ತಯೋರ್ಮಾ
ನಂ ನಿರಾಕರ್ತುಂ ತನ್ಮಧ್ಯೇ ಪರಮೇಶ್ವರಃ | ನಿಷ್ಕಲಃ ಸ್ತಂಭರೂಪೇಣ ಸ್ವರೂ
ಪಂ ಪ್ರತ್ಯದರ್ಶಯತ್ || ಇತ್ಯುಕ್ತರೀತ್ಯಾ ಇಂದ್ರಾದೀನಾಮಭಿಮಾನ ನಿರಾಕ
ರಣಾಯ ತದೇವ ನಿಷ್ಕಲ ಪರಶಿವಲಿಂಗಮೇವ ಜಲ ಕರಕ ನ್ಯಾಯೇನ ದೃಶ್ಯರೂ
ಪೇಣಾವಿರ್ಭೂತಮಿತ್ಯಾಹ | ತದ್ಧೈಷಾಮಿತಿ ||

ಮೂ|| ತದ್ಧೈಷಾಂ ವಿಜಜ್ಞೌ ತೇಭ್ಯೋ ಹ ಪ್ರಾದುರ್ಬಭೂ
ವ ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ ||೧೫||೨||

ರಿಗೆ ಸದ್ಗತಿ ಎಂಬ ಪ್ರಯೋಜನವನ್ನುಂಟುಮಾಡಬೇಕೆಂಬುದ್ದೇಶದಿಂದ ತನ್ನ ಸ್ವಾತಂತ್ರ್ಯ
ಶಕ್ತಿಯಿಂದ ದೃಶ್ಯಸ್ತಂಭಾಕಾರವಾಗಿ ಕರಗಿದ ತುಪ್ಪವು ಹೆತ್ತ ತುಪ್ಪವಾದಂತೆ ಇಂದ್ರಾದಿ ದೇ
ವತೆಗಳಿಗೆ ಕಾಣಿಸಿಕೊಂಡಿತು. ಅಂದರೆ ತನ್ನ ಶಕ್ತಿಯಿಂದ ಪ್ರಾಪ್ತವಾದ ಅಖಂಡ ಗೋಲಕಾ
ಕಾರವಾದ ಒಂದು ಸ್ವರೂಪವನ್ನು ಧರಿಸಿತು. ಈ ವಿಷಯದಲ್ಲಿ ಘೃತಕಾಠಿನ್ಯನ್ಯಾಯದಂತೆ
ಸಚ್ಚಿದಾನಂದರೂಪವಾದ ಮೂರ್ತಿಯು ಶಿವನಿಗೆ ಅತಿರಿಕ್ತವಾಗಿಲ್ಲವು. ಎಂಬ ವ್ಯಾಸೋಕ್ತಿ
ಯು ಪ್ರಮಾಣವಾಗಿರುವುದು. ಮತ್ತು ವ್ಯಾಪಕವಾಗಿದ್ದರೂ, ನಿರಂಜನವಾಗಿದ್ದರೂ, ನಿರ್ಗುಣ
ನಿಷ್ಕಲವಾಗಿದ್ದರೂ ಭಕ್ತರ ಅನುಗ್ರಹಕ್ಕಾಗಿ ನೀರು ಘಟ್ಟಿಗೊಂಡು ಆಲೀಕಲ್ಲಾದಂತೆ ಚಿದಾ
ನಂದರೂಪವಾದ ಬ್ರಹ್ಮವು ಯಾವದೋ ಒಂದು ಘನೀಭಾವರೂಪವಾದ ಸ್ವರೂಪವನ್ನು ಧರಿಸಿ
ರುವುದರಿಂದ, ಪರಿಚ್ಛಿನ್ನವಾದ ಲಿಂಗಮೂರ್ತಿಯೆಂಬುವದು ಆ ಪರಬ್ರಹ್ಮದ ಯಥಾರ್ಥವಾದ
ಸ್ವರೂಪವೇ ಆಗಿರುವುದೆಂದು ಅಪ್ಪಯ್ಯದೀಕ್ಷಿತರೂ ಕೂಡ ಆತ್ಮಾರ್ಪಣಸ್ತವದಲ್ಲಿ ಹೇಳಿರು
ವರು. ಆದುದರಿಂದ ಅಪರಿಚ್ಛಿನ್ನವಾದ ಸಚ್ಚಿದಾನಂದ ಪರಬ್ರಹ್ಮವೇ ಇಂದ್ರಾದಿಗಳ ಅನುಗ್ರಹ
ಕ್ಕಾಗಿ ತನ್ನ ಲೀಲೆಯಿಂದ ನಿರ್ಮಿತವಾದ ದೃಶ್ಯವಾದ ಲಿಂಗಮೂರ್ತಿಯ ಸ್ವರೂಪದಿಂದ ಆವಿ
ರ್ಭವಿಸಿದಕಾರಣ, ಆಶ್ಚರ್ಯಚಕಿತರಾದ ದೇವತೆಗಳು ಮುಂಭಾಗದಲ್ಲಿ ಕಾಣುವ ಅತಿ ಪವಿತ್ರ
ವಾದ ಮಂಗಳಮೂರ್ತಿಯನ್ನು ತಿಳಿಯಲಿಲ್ಲವು. ಇಲ್ಲಿ ಕೆಲವು ಜಗನ್ಮಿಥ್ಯಾತ್ವವಾದಿಗಳು ಶಂಕಿಸು
ವದೇನಂದರೆ, ಆ ಇಂದ್ರಾದಿಗಳ ಮುಂದೆ ಆವಿರ್ಭವಿಸಿದ ಜ್ಯೋತಿರ್ಲಿಂಗಮೂರ್ತಿಯು ದೃಶ್ಯವಾ
ಗಿರುವದರಿಂದ ಅದು ಮಿಥ್ಯಾಭೂತವು. ಯಾಕಂದರೆ ದೃಶ್ಯವಾಗಿರುವದರಿಂದ ಜಗತ್ತು ಸ್ವಪ್ನ
ದಂತೆ ಅಸತ್ಯವಾಗುವುದೆಂಬವರ ಮತವಷ್ಟೆ. ಈ ಮತವನ್ನು ವಿಚಾರಿಸೋಣ. ಎಲೈ ಮಿಥ್ಯಾವಾ
ದಿಯೆ! ದೃಶ್ಯವಾದದ್ದೆಲ್ಲವೂ ಅಸತ್ಯವು. ಬ್ರಹ್ಮವೊಂದೇ ಸತ್ಯವು ಎಂಬ ಪಕ್ಷದಲ್ಲಿ ದೃಶ್ಯವಾದ

ಶಾಂ|| ತದ್ಧಬ್ರಹ್ಮ ಕಿಲೈಷಾಂ ದೇವಾನಾಮಜ್ಞಾತ ಸರ್ವಾಂಶಯರ್ಾವಿತ್ವ ರಸರ್ವಕರ್ತೃಕತ್ವಾನಾಂ ಜ್ಞಾತಾಸುರಕರ್ಮಕ ಸ್ವಕರ್ತೃಕ ವಿಜಯಾನಾಂ ವಿಜಿಜ್ಞೌ. ತದಭಿಮಾನಂ ವಿದಿತವತ್ತಸ್ಯ ಸರ್ವಜ್ಞತಾದಿಶಕ್ತಿಮತ್ವಾತ್ | ತಸ್ಮಾತ್ತ್ರೇಷಾಮಹಂಕಾರಸಿರಸನಾಯ | ತೇಭ್ಯಸ್ತೇಷಾಮರ್ಥಾಯಾನುಗ್ರಹಾಯ ಸ್ವಾಭಾವಿಕಸ್ಯ ಸ್ವಾತಂತ್ರ್ಯಾದಿಮಹಿಮ್ನಾದೃಶ್ಯೇನ ಸ್ತಂಭರೂಪೇಣೇಂದ್ರಿಯ ಗೋಚರತಯಾ ಪ್ರಾದುರ್ಬಭೂವ | ಘೃತಕಾಠಿಣ್ಯನ್ಯಾಯೇನ ಸ್ವಶಕ್ತ್ಯಾ ವಿಜೃಂಭಿತಾಖಂಡಗೋಲಕಾಕಾರಂ ಕಿಂಚಿತ್ಸ್ವರೂಪಮಾದಧೆ ಇತ್ಯರ್ಥಃ | ಉಕ್ತಂಚ ಭಗವತಾವ್ಯಾಸೇನಾಪಿ | ಘೃತಕಾಠಿಣ್ಯವನ್ಮೂರ್ತಿಃ ಸಚ್ಚಿದಾನಂದಲಕ್ಷಣಾ | ಶಿವಾದ್ವೈವೇನಸ್ಯೈವಾಸ್ತಿ ಶಿವಏವಹಿಸರ್ವದಾ || ಇತಿ. ಉಕ್ತಂಚದೀಕ್ಷಿತಚರಣೈರಪಿ | ಆನಂದಾಬ್ಧೇಃಕಮಪಿಚಘನೀಭಾವಮಾಸ್ಥಾಯರೂಪಮ್ || ಇತಿ ತಸ್ಮಾತ್ಪರಶಿವಸ್ಯಾ ಪರಿಚ್ಛಿನ್ನಸ್ಯ ನಿರ್ವಿಕಲ್ಪ ನಿರಾಕಾರ ನಿರಸ್ತಾಶೇಷವಿಪ್ಲವ ಸರ್ವಜ್ಞ ಸರ್ವವ್ಯಾಪಕ ಸರ್ವಶಕ್ತಿ ನಿರಂಕುಶಸ್ಯ ಸ್ವಪ್ರಕಾಶಸ್ಯೇಂದ್ರಾದ್ಯನುಗ್ರಹಾರ್ಥಂ ಸ್ವಲೀಲಾನಿರ್ಮಿತದೃಶ್ಯಲಿಂಗಮೂರ್ತಿರೂಪೇಣಾವಿರ್ಭೂತತ್ವಾತ್ | ವಿಸ್ಮಯಾಪನ್ನಾದೇವಾಸ್ತತ್ಸ್ವರೂಪಂ ಸಮ್ಯಜಾನತ ನ ವಿದಿತವಂತಃ ಕಿಮಿದಂ

ಯಕ್ಷನಿಗೆ ಬ್ರಹ್ಮವೆಂದು ಪಾರ್ವತೀದೇವಿಯು ಉಪದೇಶವು ಹೇಗೆ ಸಂಗತವಾಗುತ್ತದೆ? ದೃಶ್ಯವಾದದ್ದು ಮಿಥ್ಯೆಯಂದರೆ- ಯಕ್ಷಬ್ರಹ್ಮಕ್ಕೂ ಮಿಥ್ಯಾತ್ವವು ಬರಬೇಕಾಗುವದು. ಮತ್ತು ಇದು ಮಿಥ್ಯೆ ಎಂಬ ವಿಷಯದಲ್ಲಿ ಸ್ವಪ್ನದೃಷ್ಟಾಂತವು ಸಂಭವಿಸುವದಿಲ್ಲವು ಸ್ವಪ್ನಪ್ರಪಂಚಕ್ಕೂ ಜಾಗ್ರತ್ ಪ್ರಪಂಚಕ್ಕೂ ಬಹಳ ವೈಲಕ್ಷಣ್ಯವಿರುವದು. ಸ್ವಪ್ನದಲ್ಲಿ ವಿಷಪಿಯೂಷವಾಸಗಳಿಂದ ಮನುಷ್ಯನು ಮೃತನಾಗುವದಿಲ್ಲವು. ಜಾಗ್ರತ್ಪ್ರಪಂಚದಲ್ಲಿ ವಿಷವಂ ಪಾನಮಾಡಿದರೆ ಮೃತನಾಗುವನು. ಆದಕಾರಣ ಸ್ವಪ್ನದೃಷ್ಟಾಂತವು ಅಸಿದ್ಧವು. ಇದಲ್ಲದೆ ಎಲೈ ಮಿಥ್ಯಾವಾದಿಯೇ! ನಿನ್ನ ಮಿಥ್ಯಾತ್ವವಂದರೇನು? ಬ್ರಹ್ಮಜ್ಞಾನದಿಂದ ಬಾಧ್ಯವಾದದ್ದು ಮಿಥ್ಯೆಯಂದನ್ನುವಿಯೋ? ಅಥವಾ ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿಲ್ಲದ್ದು ಮಿಥ್ಯೆಯಂದನ್ನುವಿಯೋ? ಮೊದಲಿನ ವಿಕಲ್ಪವು ಯುಕ್ತವಾಗುವದಿಲ್ಲವು. ಯಾಕಂದರೆ "ಸರ್ವೋವೈರುದ್ರ" ಎಂಬುವ ಮೊದಲಾದ ಶ್ರುತಿಗಳು ಪ್ರಪಂಚವು ಶಿವಸ್ವರೂಪವೆ ಆಗಿದೆ ಎಂದು ಹೇಳುವಕಾರಣ ಜ್ಞಾನದಿಂದ ಶಿವರೂಪವಾದ ಜಗತ್ತಿನ ಬಾಧೆಯಾಗಲಾರದು. ಆದರೆ ಕೊಡುವವನೂ ಭೋಗಿಸುವವನೂ ಸರ್ವಪ್ರಪಂಚಸ್ವರೂಪನೂ ಶಿವನೇ ಆಗಿರುವನು. ಆ ಶಿವನೇ ನಾನು ಎಂಬುವ ಶಿವಾದ್ವೈತಜ್ಞಾನದಿಂದ ಘಟಾದಿಗಳಲ್ಲಿ ಘಟತ್ವಾದಿ ಭೇದ ಬುದ್ಧಿಯು ನಿವೃತ್ತಿಯನ್ನು ಹೊಂದುತ್ತದೆ. ಘಟಾದಿಗಳು ಶಿವರೂಪವಾಗಿಯೇ ಇರುವವು. ಅದ್ದರಿಂದ ಅವುಗಳ ನಿವೃತ್ತಿಯಾಗುವದಿಲ್ಲ. ಆದ್ದರಿಂದ ಬ್ರಹ್ಮಜ್ಞಾನದಿಂದ ಪ್ರಪಂಚಕ್ಕೆ ಬಾಧೆಯಿಲ್ಲವು. ಮಿಥ್ಯಾವಾದಿಯೇ? ಜನಕಾದಿ ಬ್ರಹ್ಮಜ್ಞಾನಿಗ

ಪುರೋವರ್ತಿಯಕ್ಷಂ ಪೂಜಾರ್ಹಂ ಪವಿತ್ರತಮಂ ಮಂಗಲಮೂರ್ತ್ಯಾತ್ಮಕ
ಮಿತಿ ಸಹತಸ್ಯದೃಶ್ಯತ್ವೇನವೈತಥ್ಯಂ ಸ್ಪಷ್ಟವತ್ | ಬ್ರಹ್ಮಣೋಽಪಿವೈತಥ್ಯಾಪ
ತ್ತೇಃ ಯಕ್ಷಸ್ಯದೃಶ್ಯಸ್ಯ ಬ್ರಹ್ಮತ್ವಸ್ಯವಕ್ಷ್ಯಮಾಣತ್ವಾತ್ | ಕಿಂಚದೃಷ್ಟಾಂತಾ
ಸಿದ್ಧೇಃ ಜಾಗ್ರತ್ಪ್ರಪಂಚಸ್ಯ ವೈಲಕ್ಷಣ್ಯಾತ್ | ಕಿನ್ನಾಮಮಿಥ್ಯಾತ್ವಂ ಬ್ರಹ್ಮ
ಜ್ಞಾನಬಾಧ್ಯತ್ವಂವಾ ತ್ರೈಕಾಲಿಕ ನಿಷೇಧಪ್ರತಿಯೋಗಿತ್ವಂವಾ | ನಾದ್ಯಃ
ಬಾಧ್ಯಬಾಧಕಭಾವಸ್ಯೈವಾಸಂಭವಾತ್ | "ಸರ್ವೋವೈರುದ್ರಃ" "ಸರ್ವಂ
ಖಲ್ವಿದಂಬ್ರಹ್ಮ" ಇತ್ಯಾದೌ ಪ್ರಪಂಚಸ್ಯ ಶಿವಾತ್ಮಕತ್ವೋಪದೇಶಾತ್ ಶಿವೋ
ದಾತಾ ಶಿವೋಭೋಕ್ತಾ ಶಿವಃ ಸರ್ವಮಿದಂಜಗತ್ || ಇತ್ಯುಕ್ತ ಶಿವಾದ್ವೈತ

ಳಲ್ಲಿಯೂ ಪ್ರಪಂಚವ್ಯವಹಾರವು ಕಂಡುಬರುತ್ತದಲ್ಲವೆ? ಬ್ರಹ್ಮಜ್ಞಾನದಿಂದ ಪ್ರಪಂಚಕ್ಕೆ ಬಾ
ಧೆಯನ್ನು ಹೇಳಿದರೆ ಜೀವನ್ಮುಕ್ತರಿಗೆ ಶರೀರಧಾರಣಾದಿ ಪ್ರಪಂಚವ್ಯವಹಾರವೇ ಯುಕ್ತವಾಗ
ಲಾರದು. ಈ ವಿಷಯದಲ್ಲಿ ಅಖಂಡಾದ್ವೈತ ಭಾವನವಾಗಲು ಸರ್ವವು ಬ್ರಹ್ಮಸ್ವರೂಪವಲ್ಲದೆ
ಬೇರೆಯಲ್ಲವು ಜ್ಞಾನದಿಂದ ವಿಕಲ್ಪಬುದ್ಧಿಯು ಲಯವಾಗುತ್ತದೆ ಸ್ವರೂಪತಃ ನಾಶವೇ ಆಗು
ವದಿಲ್ಲವೆಂಬ ವಾಕ್ಯವು ಪ್ರಮಾಣವಾಗಿದೆ. ಮೂರುಕಾಲಗಳಲ್ಲಿಲ್ಲದ್ದು ಮಿಥ್ಯೆಯೆಂದರೆ
"ಅಮೂಲಘನಾಧಾರಂ" ಎಂಬುವ ಶ್ರುತಿಯಿಂದ ಜಗತ್ತು ಅನಾದಿಯೆಂದು ಕಂಡುಬರುವಕಾ
ರಣ ಜಗತ್ತಿಗೆ ತ್ರೈಕಾಲಿಕನಿಷೇಧವನ್ನು ಹೇಳಲಿಕ್ಕಾಗುವದಿಲ್ಲವು. ಇದಲ್ಲದೆ ತ್ರೈಕಾಲಿಕನಿ
ಷೇಧವೆಂದರೆ ನೈಯಾಯಿಕನು ಸ್ವೀಕರಿಸಿದ ನಾಲ್ಕು ಅಭಾವಗಳ ಪೈಕಿ ಪ್ರಾಗಭಾವವೊ?
ಧ್ವಂಸವೊ? ಅತ್ಯಂತಾಭಾವವೊ? ಅಥವಾ ಅನ್ಯೋನ್ಯಾಭಾವವೊ? ಜಗತ್ತಿನ ಪ್ರಾಗಭಾವವ
ನ್ನು ಹೇಳಲಿಕ್ಕಾಗುವದಿಲ್ಲ "ಅಸದ್ವಾ ಇದಮಗ್ರ ಆಸೀತ್ ತತೊ ವೈಸದಜಾಯತ" ಇವೇ
ಮೊದಲಾದ ಶ್ರುತಿಗಳಲ್ಲಿ ಬಾಲ್ಯ ಯೌವನಗಳಂತೆ ಪ್ರಲಯಕಾಲದಲ್ಲಿ ಪ್ರಪಂಚಕ್ಕೆ ಸೂಕ್ಷ್ಮತೆ
ಯೂ ಸೃಷ್ಟಿಕಾಲದಲ್ಲಿ ಆ ಸೂಕ್ಷ್ಮಪ್ರಪಂಚಕ್ಕೆ ಸ್ಥೂಲತೆಯು ಇರುವುದೆಂದರ್ಥವು ಸಿದ್ಧವಾಗು
ವದರಿಂದ ಜಗತ್ತಿನ ಪ್ರಾಗಭಾವವೆಂದು ನಿಷೇಧ ಶಬ್ದಕ್ಕೆ ಅರ್ಥಮಾಡಲಾಗುವದಿಲ್ಲವು. ಮತ್ತು
ಜಗತ್ತಿನ ನಿಷೇಧವೆಂದರೆ ಧ್ವಂಸವೆಂದೂ ಅರ್ಥಮಾಡುವದಕ್ಕಾಗುವದಿಲ್ಲವು. "ಸದೇವಸೌಮ್ಯೇದ
ಮಗ್ರಆಸೀತ್" ಇವು ಮೊದಲಾದ ಶ್ರುತಿಗಳಲ್ಲಿ ಪ್ರಲಯದಲ್ಲಿಯೂ ಕೂಡ ಪ್ರಪಂಚದ ಸ್ಥಿತಿ
ಯು ಕಂಡುಬರುವದಕಾರಣ ನಿಷೇಧಶಬ್ದಕ್ಕೆ ಧ್ವಂಸವೆಂದು ಅರ್ಥಮಾಡುವದು ಯುಕ್ತವಲ್ಲವು.
ಇನ್ನು ನಿಷೇಧವೆಂದರೆ ಅತ್ಯಂತಾಭಾವವೆಂದು ಹೇಳಲಿಕ್ಕೂ ಆಗುವದಿಲ್ಲವು. ಪ್ರಪಂಚದಲ್ಲಿ
ಅರ್ಥಸಿದ್ಧಿಗಳೂ ಕ್ರಿಯಾಸಿದ್ಧಿಗಳೂ ಪ್ರತ್ಯಕ್ಷತಃ ಕಂಡುಬರುವದರಿಂದ ಪ್ರಪಂಚಕ್ಕೆ ಅತ್ಯಂತಾ
ಭಾವವನ್ನು ಹೇಳಲಾಗುವದಿಲ್ಲವು. ಪ್ರಪಂಚಕ್ಕೆ ಭೇದರೂಪವಾದ ನಿಷೇಧವನ್ನೂ ಕೂಡ
ಹೇಳಲಾಗುವದಿಲ್ಲವು. "ಸರ್ವಂ ಖಲ್ವಿದಂ ಬ್ರಹ್ಮ" ಎಂದು ಮೊದಲಾದ ಶ್ರುತಿಗಳಿಂದಲೂ
"ತದನನ್ಯತ್ವಮಾರಂಭಣ ಶಬ್ದಾದಿಭ್ಯಃ" ಎಂಬುವ ಬ್ರಹ್ಮಸೂತ್ರದಿಂದಲೂ ಜಗತ್ತಿನ ಅಭೇದವೇ
ಸ್ಪಷ್ಟವಾಗಿ ಹೇಳಲ್ಪಟ್ಟಿರುವಕಾರಣ ನಿಷೇಧವೆಂದರೆ ಪ್ರಪಂಚದ ಭೇದವೆಂದರ್ಥವನ್ನು ಮಾಡು

ಜ್ಞಾನೇನ ಘಟಪಟಾದೌ ಘಟತ್ವಾದಿಬುದ್ಧಿರ್ನಿವರ್ತತೇ ನತು ಘಟಾದಿಃ, ತಸ್ಯಾಶಿವರೂಪತ್ವಾತ್, ತಸ್ಮಾನ್ನ ಬ್ರಹ್ಮಜ್ಞಾನೇನ ಪ್ರಪಂಚಬಾಧಃ | ಜನಕಾದಿಬ್ರಹ್ಮವಿದಾಮಪಿ ಪೂರ್ವವದ್ವ್ಯವಹಾರಸ್ಯ ದೃಶ್ಯಮಾನತ್ವಾತ್ ಕಿಂಚಜೀವನ್ಮುಕ್ತಾನಾಂ ಶರೀರಧಾರಣಾದಿ ವ್ಯವಹಾರಾನುಪಪತ್ತಿಃ ಸ್ಯಾತ್ | ಉಕ್ತಂಚ ‥ಅಖಂಡಾದ್ವೈತಭಾನೇತು ಸರ್ವಂಬ್ರಹ್ಮೈವನಾನ್ಯಥಾ | ಜ್ಞಾನಾದ್ವಿಕಲ್ಪಬುದ್ಧಿಸ್ತು ಲೀಯತೇನ ಸ್ವರೂಪತಃ ‥ನದ್ವಿತೀಯಃ‥ ಅಮೂಲಘನಾಧಾರಮಿಮಾಃ ಪ್ರಜಾಃಪ್ರಜಾಯಂತೆ ನಕದಾಚಿದನೀದೃಶಂಜಗತ್ | ಇತ್ಯಾದೌ ಜಗತೋ ಅನಾದಿತ್ವಪ್ರತಿಪಾದನಾತ್ | ಕಿಂಚ ತ್ರೈಕಾಲಿಕಾಭಾವಃ ಪ್ರಾಗಭಾವೋವಾಧ್ವಂಸೋವಾ ಅತ್ಯಂತಾಭಾವೋವಾ ಅನ್ಯೋನ್ಯಾಭಾವೋವಾ ನಾದ್ಯಃ ‥ಅಸದ್ವಾ ಇದಮಗ್ರಆಸೀತ್ ತತೋವೈಸದಜಾಯತ‥ ಇತ್ಯಾದಿ ಶ್ರುತಿಷು ಬಾಲ್ಯಯೌವನಾದಿವತ್ ಪ್ರಲಯೇ ಪ್ರಪಂಚಸ್ಯ ಸೂಕ್ಷ್ಮತ್ವಂ ತತ್ಸೂಕ್ಷ್ಮ ಪ್ರಪಂಚಸ್ಯೈವ ಸೃಷ್ಟಿಕಾಲೆ ಸ್ಥೂಲತ್ವವ್ಯಪದೇಶಾತ್ ಸದ್ವಿತೀಯಃ ‥ಸದೇವಸೌಮ್ಯೇ

ವನು ಯುಕ್ತವಲ್ಲವು. ಮತ್ತು ಜಗತ್ತು ಶಿವನಿಗಿಂತಲೂ ಭಿನ್ನವಲ್ಲವೆಂಬುವ ವಿಷಯದಲ್ಲಿ ನೊರೆ ತೊರೆಬುದ್ಬುದಾದಿ ಆಕಾರಗಳೆಲ್ಲವು ಸಮುದ್ರಕ್ಕಿಂತಲೂ ಭಿನ್ನವಾಗಿಲ್ಲದಂತೆಯೂ ತಂತುಗಳಿಂದ ಹುಟ್ಟಿದಪಟವು ತಂತುಗಳಿಗೆ ಅಭಿನ್ನವಾಗಿರುವಂತೆಯೂ ಶಿವನಿಂದ ಹುಟ್ಟಿದ ಪ್ರಪಂಚವು ಶಿವನಿಗೆ ಅಭಿನ್ನವಾಗಿಯೇ ಇರುವದು. ಎಂಬುವ ಶ್ರೀರೇಣುಕಭಗವತ್ಪಾದರ ಉಕ್ತಿಯೂ ಪ್ರಮಾಣವಾಗಿದೆಯಾದಕಾರಣ ಆದ್ಯಂತಗಳಲ್ಲಿಯಾವದಿಲ್ಲವೋ? ಅದು ವರ್ತಮಾನದಲ್ಲಿಯೂ ಇಲ್ಲದುದರಿಂದ ಮಿಥ್ಯೆಯೆಂಬ ಪದಾರ್ಥಕ್ಕೆ ಸದೃಶಗಳಾದ ಜಾಗ್ರತ್ಪದಾರ್ಥಗಳು ಸತ್ಯಪದಾರ್ಥಗಳಂತೆ ನೋಡಲ್ಪಡುವವು ಎಂಬ ಗೌಡಪಾದಾಚಾರ್ಯರ ಉಕ್ತಿಯು ಸಿದ್ಧವಾಗುವದಿಲ್ಲವು ಬುದ್ಧಿಯಲ್ಲಿ ತೋರುವ ಸರ್ವಪದಾರ್ಥಗಳ ಜ್ಞಾನವು ಪಾರಮಾರ್ಥಿಕವೇ ಆಗಿರುವದರಿಂದ ಭ್ರಾಂತಿಯಾದರೂ ಪಾರಮಾರ್ಥಿಕವೇ ಆಗಿರುವದು. ಯಾಕೆಂದರೆ ಆ ಭ್ರಾಂತಿಗೆ ಕಾರಣಗಳಾದ ಆಯಾಯ ಪದಾರ್ಥಗಳು ಸತ್ಯಗಳಾಗಿರುವವೆಂದಮೇಲೆ ಭ್ರಾಂತಿ ಎಂಬ ಕಾರ್ಯವು ಅಸತ್ಯವಾಗಬಹುದೆ? ಸಮಸ್ತಜ್ಞಾನವು ಸತ್ಯವಾದದ್ದೇ ಇರುವದು ಶುಕ್ತಿರಜತಜ್ಞಾನಕ್ಕೆ ಕಾರಣವು ಚಾಕಚಕ್ಯಾದಿ ಸಾದೃಶ್ಯವೂ ಇದು ಸತ್ಯವೇ ಆಗಿದೆ. ಸತ್ಯವಾದಕಾರಣದಿಂದ ಹುಟ್ಟಿದ ಇದು ರಜತವೆಂಬ ಜ್ಞಾನವು ಸತ್ಯವೇ ಆಗಿದೆ ಆದುದರಿಂದ ಸ್ವಪ್ನಾದಿ ದೃಷ್ಟಾಂತದಿಂದ ಜಾಗ್ರತ್ಪ್ರಪಂಚಕ್ಕೆ ಮಿಥ್ಯಾತ್ವವು ಸಿದ್ಧಿಸುವದಿಲ್ಲ. ಎಲ್ಲಿ? ಮಿಥ್ಯಾತ್ವವಾದಿಯೇ ? ಯಾವದು ದೃಶ್ಯವೊ ಅದು ಮಿಥ್ಯೆಯೆಂದು ಸ್ವೀಕರಿಸಿದರೆ ಬ್ರಹ್ಮವೂ ಕೂಡ ಮಿಥ್ಯೆಯಾಗಬೇಕಾಗುವದು. ದೃಶ್ಯವೆಂದರೆ ಜ್ಞಾನವಿಷಯವು ಬ್ರಹ್ಮಕ್ಕೆ ಜ್ಞಾನವಿಷಯತ್ವವನ್ನಂಗೀಕರಿಸದಿದ್ದರೆ ಬ್ರಹ್ಮಾನುಭೂತಿಯಾಗಲಾರದು. ಇದಲ್ಲದೆ ಜಗತ್ತು ಮಿಥ್ಯೆಯೆಂದರೆ ಜಗದಃ ಶಾಂತಿಗಾದ ವೇದಾಂತಾದಿ ಶಾಸ್ತ್ರಗಳೂ ಕೂಡ ಅಸತ್ಯ

ದಮಗ್ರಆಸೀತ್” ಇತ್ಯಾದಿಶ್ರುತಿಷು ನಾಶಃ ಕಾರಣಲಯಃ ಇತಿ ನ್ಯಾಯೇನ ಪ್ರಲಯೇಪಿ ಪ್ರಪಂಚಸ್ಯ ಸದಾತ್ಮಕತ್ವೇನ ಸ್ಥಿತ್ಯುಪದೇಶಾತ್ ಸತ್ಯತೀಯಃ ಅರ್ಥಸಿದ್ಧಿಕ್ರಿಯಾಸಿಧ್ಯಾತ್ಮಕತ್ವೇನ ದೃಷ್ಟತ್ವಾತ್. ನ ಚತುರ್ಥಃ “ಸರ್ವಂಖಲ್ವಿದಂಬ್ರಹ್ಮ” “ಸರ್ವೋವೈರುದ್ರಃ” “ವಾಚಾರಂಭಣಂ ವಿಕಾರೊನಾಮಧೇಯಂ ಮೃತ್ತಿಕೇತ್ಯೇವಸತ್ಯಂ” “ತದನನ್ಯತ್ವಮಾರಂಭಣ ಶಬ್ದಾದಿಭ್ಯಃ” ಇತ್ಯಾದಿಶ್ರುತಿ ಸೂತ್ರೈರಭೇದಸ್ಯೋಕ್ತತ್ವಾತ್ ಉಕ್ತಂಚ ಸಿದ್ಧಾಂತಶಿಖಾಮಣೌ ರೇಣುಕಭಗವತ್ಪಾದೈಃ | ಫೇನೋರ್ಮಿಬುದ್ಬುಧಾಕಾರಾ ಯಥಾಸಿಂಧೋರ್ನಭಿದ್ಯತೆ || ಯಥಾತಂತುಭಿರುತ್ಪನ್ನಃ ಪಟಸ್ತಂತುಮಯಃಸ್ಮೃತಃ | ತಥಾ ಶಿವಾತ್ಸಮುತ್ಪನ್ನಂ ಶಿವಏವ ಚರಾಚರಮಿತಿ ತಸ್ಮಾತ್ ಆದಾವಂತೇಚಯನ್ನಾಸ್ತಿ ವರ್ತಮಾನೇಪಿತತ್ತಥಾ | ವಿತಥೈಃ ಸದೃಶಾಃ ಸ್ಸಂತೋವಿತಥಾ ಇವಲಕ್ಷಿತಾಃ || ಇತಿಪರೈರುಕ್ತಮಯುಕ್ತಮೇವ | ಬುಧ್ಯುಪಸ್ಥಿತ ಸರ್ವಪದಾರ್ಥಜ್ಞಾನಸ್ಯ ಪಾರಮಾರ್ಥಿಕತ್ವಾತ್ | ಭ್ರಾಂತಿಕಾರಣೀಭೂತ ತತ್ತತ್ಪದಾರ್ಥಾ

ಗಳೇ ಆಗಿಹೋಗುವವು. ಆದ್ದರಿಂದ ಅಸತ್ಯವಾದ ವೇದದಿಂದ ಶ್ರುತಿಪ್ರತಿಪಾದ್ಯವಾದ ಬ್ರಹ್ಮವು ಅಸತ್ಯವಾಯಿತು. ವೇದವು ಸತ್ಯವೆಂದರೆ ಅದ್ವೈತಕ್ಕೆ ಹಾನಿಯಾಗುವದು. ಜಗತ್ತು ಮಿಥ್ಯೆಯೆನ್ನುವ ವಿಷಯದಲ್ಲಿ ತೋರಿಸಿದ ದೃಶ್ಯತ್ವ ಹೇತುವು ಬ್ರಹ್ಮದಲ್ಲಿಯೂ ಇರುವದರಿಂದ ಬ್ರಹ್ಮವು ಪ್ರಪಂಚದಂತೆ ಅಸತ್ಯವಾಯಿತಲ್ಲವೇ ? ಬ್ರಹ್ಮದಲ್ಲಿ ದೃಶ್ಯತ್ವವಿಲ್ಲವೆಂದರೆ ಬ್ರಹ್ಮವು ತತ್ವಮಸ್ಯಾದಿ ವಾಕ್ಯಜನ್ಯವಾದ ಜ್ಞಾನಕ್ಕೆ ವಿಷಯವಾಗಲಾರದು ಆದ್ದರಿಂದ ಬ್ರಹ್ಮಕ್ಕೂ ಕೂಡ ಮಿಥ್ಯಾತ್ವವು ಪ್ರಾಪ್ತವಾಯಿತು. ವಿನಾಯಕಂ ಪ್ರಕುರ್ವಾಣೋರಚಯಾಮಾಸವಾನರಂ | ಎಂಬಂತೆ ಜಗತ್ತಿಗೆ ಮಿಥ್ಯಾತ್ವವನ್ನು ಸಾಧಿಸುವ ಭರದಲ್ಲಿ ನೀನೇ ಬ್ರಹ್ಮದಲ್ಲಿ ಮಿಥ್ಯಾತ್ವವನ್ನು ತಂದಂತಾಯಿತು. ಎಲೈ ? ಜಗತ್ಸತ್ಯತ್ವವಾದಿಯಾದ ವೀರಶೈವನೇ ? ಬ್ರಹ್ಮದಲ್ಲಿ ಯಾವದೊಂದೂ ಧರ್ಮವಿಲ್ಲದಿರುವದರಿಂದ ದೃಶ್ಯತ್ವ (ಜ್ಞಾನವಿಷಯತ್ವ) ರೂಪವಾದ ಹೇತುವೂ ಕೂಡ ಪಕ್ಷವಾದ ಬ್ರಹ್ಮದಲ್ಲಿ ಇಲ್ಲವಾದ್ದರಿಂದ ಆ ಹೇತುವಿನಿಂದ ಬ್ರಹ್ಮಕ್ಕೆ ಮಿಥ್ಯಾತ್ವವು ಸಿದ್ಧವಾಗಲಿಲ್ಲವೆಂದರೆ ಮಿಥ್ಯಾತ್ವವಾದಿಯೇ ? ಬ್ರಹ್ಮವು ನಿರ್ಧರ್ಮಕವು ಎಂಬುವ ನನ್ನ ಜ್ಞಾನಕ್ಕಾದರೂ ವಿಷಯವೆಂದು ನೀನು ಒಪ್ಪಿಕೊಳ್ಳಬೇಕಲ್ಲವೆ ? ಈ ನಿನ್ನ ಜ್ಞಾನಕ್ಕೇನೇ ಬ್ರಹ್ಮವು ವಿಷಯವಾದ್ದರಿಂದ ಅದು ಮಿಥ್ಯೆಯೆಂದು ಸಿದ್ಧವಾಗುವದಾದುದರಿಂದ ನೀನು ಜಗತ್ತು ಮಿಥ್ಯೆಯನ್ನುವಲ್ಲಿ ತೋರಿಸಿದ ದೃಶ್ಯತ್ವಹೇತುವು ದೃಷ್ಟವಾಯಿತು. ಇದಲ್ಲದೇ ನಿನ್ನ ಅನುಮಾನವು ಸತ್ಪ್ರತಿಪಕ್ಷದೋಷದಿಂದ ದೂಷಿತವಾಗುತ್ತದೆ. ಹೇಗೆಂದರೆ ಜಗತ್ತು ಸತ್ಯವಾಗಿದೆ. ಆಮೆಯ ಕಾಲು ಮೊದಲಾದ ಅವಯವಗಳಂತೆ ಸೃಷ್ಟಿಗಿಂತಲೂ ಪೂರ್ವದಲ್ಲಿ ಜಗತ್ತು ಸಂಕುಚಿತವಾಗಿರುವದರಿಂದ ಜಗತ್ತು ಮಿಥ್ಯೆಯೆಂದು ಹೇಳುವುದಕ್ಕಾವದಿಲ್ಲವು. ಆ ಆಮೆಯು ಕಾಲುಗಳು ಒಮ್ಮೊಮ್ಮೆ ಕಾ

ನಾಂ ಸತ್ಯತ್ವಾತ್| ಸರ್ವಂಜ್ಞಾನಂ ಸತ್ಯಮೇವ. ತಥಾಚ ನ ಸ್ವಪ್ನಾದಿದೃಷ್ಟಾಂ
ತೇನ ಜಾಗ್ರತ್ಪ್ರಪಂಚಸ್ಯಮಿಥ್ಯಾತ್ವಂ. ಕಿಂಚಬ್ರಹ್ಮಣೋಪಿ ದೃಶ್ಯತ್ವೇನ ಮಿಥ್ಯಾ
ತ್ವಂಸ್ಯಾತ್ | ಅನ್ಯಥಾ ಬ್ರಹ್ಮಾನುಭೂತಿರ್ನಸ್ಯಾತ್ ಕಿಂಚ ಜಗತೋಮಿಥ್ಯಾ
ತ್ವೇ ವೇದಾಂತಾದಿ ಶಾಸ್ತ್ರಸ್ಯಾಪಿ ಮಿಥ್ಯಾತ್ವೇನ ತತ್ಪ್ರತಿಪಾದ್ಯಬ್ರಹ್ಮಣೋಪಿ
ಮಿಥ್ಯಾತ್ವಂ ದುರ್ವಾರಂ | ತಥಾಚ ಬ್ರಹ್ಮಮಿಥ್ಯಾಭವಿತುಮರ್ಹತಿ ಅಸತ್ಯಹೇ
ತುಜನ್ಯ ಜ್ಞಾನವಿಷಯತ್ವಾತ್. ಪ್ರಪಂಚವತ್ | ನಚಬ್ರಹ್ಮಣಃನಿರ್ಧರ್ಮಕ
ತ್ವಾತ್, ಪಕ್ಷೇ ದೃಶ್ಯತ್ವರೂಪಹೇತೋರಭಾವಾತ್. ತವಹೇತುರಸಿದ್ಧ ಇತಿವಾ
ಚ್ಯಂ ನಿರ್ಧರ್ಮಕಂ ಬ್ರಹ್ಮೇತಿಜ್ಞಾನಸ್ಯೈವವಿಷಯತ್ವಾತ್. ದೃಶ್ಯತ್ವಂ ಬ್ರಹ್ಮ
ಣಿಪಕ್ಷೇ ಆಯಾತಮನ್ಯಥಾಕಥಮುಚ್ಯತೆ ಬ್ರಹ್ಮನಿರ್ಧರ್ಮಕಮಿತಿ. ತಸ್ಮಾತ್ತ್ವ
ದುಕ್ತಂ ಜಗನ್ಮಿಥ್ಯಾತ್ವಸಾಧಕಂ ದೃಶ್ಯತ್ವಂ ದುಷ್ಟಂ, ಕಿಂಚ ಜಗತ್ಸತ್ಯಂ ಸೃಷ್ಟಿ
ಪ್ರಾಕ್ಕಾಲೆ ಸಂಕುಚಿತತ್ವಾತ್ ಸಂಕುಚಿತ ಕೂರ್ಮಾಂಗವತ್ ಯನ್ನದೃಶ್ಯತೆ
ತನ್ನಾಸ್ತೀತಿವಕ್ತುಮಶಕ್ಯತ್ವಾತ್ ಸೃಷ್ಟಿಕಾಲೆಪ್ರತ್ಯಕ್ಷಸಿದ್ಧತ್ವಾತ್ ಸತ್ಯಮೇವ

ಣಿಸದಿದ್ದರೆ ಅವು ಅಸತ್ಯಗಳೆಂದು ಹೇಳುವದು ಯುಕ್ತವಲ್ಲವು. ಸೃಷ್ಟಿಗಿಂತಲೂ ಪೂರ್ವದಲ್ಲಿ ಈ
ಸ್ಥೂಲಜಗತ್ತು ಸೂಕ್ಷ್ಮರೂಪದಿಂದ ಇದ್ದು ಸೃಷ್ಟಿಯಾದಮೇಲೆ ಪ್ರತ್ಯಕ್ಷತಃ ಜಗತ್ತಿನ ಇರುವಿ
ಕೆಯು ಸಿದ್ಧವಾಗುತ್ತದೆ. ಅಂತ್ಯದಲ್ಲಿಯೂ ಸಂಕುಚಿತ ರೂಪದಿಂದದ್ದ ಕಾರಣ ಮೂರೂಕಾಲ
ಗಳಲ್ಲಿ ಇಲ್ಲದ್ದು ಮಿಥ್ಯೆಯೆಂದು ಅನ್ನುವದು ಅನುಚಿತವು. ಎಲೈ ಸತ್ಯತ್ವವಾದಿಯೇ ? ಸಮ
ಸ್ತ ಪ್ರಪಂಚಮಿಥ್ಯಾಭೂತವಾದ ಮಾಯೆಯಿಂದ ಕಲ್ಪಿತವಾದಕಾರಣ ಪ್ರಪಂಚವು ಮಿಥ್ಯೆಯು.
ಕಾರಣವು ಮಿಥ್ಯೆಯಾದುದರಿಂದ ಕಾರ್ಯವು ಮಿಥ್ಯೆಯಾಗಬೇಕಲ್ಲವೇ ? ಎಲೈ ಮಿಥ್ಯಾತ್ವವಾ
ದಿಯೇ ? "ಮಾಯಾಂತು ಪ್ರಕೃತಿಂ ವಿದ್ಯಾತ್" "ಪರಾಸ್ಯಶಕ್ತಿರ್ವಿವಿಧೈವ ಶ್ರೂಯತೆ" ಇವೇ
ಮೊದಲಾದ ಶ್ರುತಿಗಳಿಂದ ಮಾಯಾ ಪದಾರ್ಥವು ಬ್ರಹ್ಮಶಕ್ತಿಯೆಂದು ಕಂಡುಬರುವಕಾರಣ
ಅದು ಮಿಥ್ಯೆಯಲ್ಲವಾದುದರಿಂದ ಜಗತ್ತು ಸತ್ಯವಾದದ್ದೇ. ಈ ವಿಷಯದಲ್ಲಿ ಮಹಾದೇವ
ನಾದ ಶಿವನು ತಾನೇ ತನ್ನ ಇಚ್ಛೆಯಿಂದ ತನ್ನಲ್ಲಿದ್ದ ಪದಾರ್ಥಗಳನ್ನು ತನ್ನ ಸ್ವಾಭಾವಿಕ ಶಕ್ತಿ
ಗಿಂತಲೂ ಮತ್ತೊಂದನ್ನು ಅಪೇಕ್ಷಿಸದೇ ಯೋಗಿಯಂತೆ ಪ್ರಕಾಶಗೊಳಿಸುವನೆಂದು ಕಾಮಿಕಾ
ಗಮವು ಹೇಳುತ್ತದೆ. ಜಗತ್ತು ಮಿಥ್ಯಾಭೂತವಾದ ಮಾಯೆಯಿಂದ ಕಲ್ಪಿತವಾದದ್ದೆಂಬುವ ಮ
ತದಲ್ಲಿ ಈಶ್ವರನೂಕೂಡ ರಜ್ಜುವಿನಲ್ಲಿ ಸರ್ಪದಂತೆ ಕಲ್ಪಿತನಾದುದರಿಂದ ಮಿಥ್ಯಾಭೂತನೆಂದ
ಮೇಲೆ ವಿಧಿನಿಷೇಧಬೋಧಕಗಳಾದ ವೇದ ವೇದಂತಾದಿ ಶಾಸ್ತ್ರಗಳಿಗೆ ಜಲಾಂಜಲಿಯನ್ನು ಬಿಡ
ಬೇಕಾಗುತ್ತದೆ ಆದ್ದರಿಂದ ಭಕ್ತಿಶ್ರದ್ಧಾದಿಗಳು ವ್ಯರ್ಥಗಳು ತಾನೇ ಅಸತ್ಯನಾದ ಈಶ್ವರನು
ತನ್ನಲ್ಲಿ ಭಕ್ತಿಯನ್ನಿಟ್ಟವನಿಗೆ ಫಲವಂ ಕೊಡಲಾರನು. ಅಸತ್ಯನಾದ ಕಲ್ಪಿತನಾದ ಈಶ್ವರನಲ್ಲಿ
ಕೃತ್ರಿಮ ಸಾಲಗ್ರಾಮದಲ್ಲಿ ಹೇಗೊ ಹಾಗೆ ಭಕ್ತಿಶ್ರದ್ಧಾದಿಗಳು ಉದಯಿಸಲಾರವು. ರಜ್ಜುವಿ

ಅಂತೇಪಿ ಸಂಕುಚಿತರೂಪೇಣ ಸ್ಥಿತತ್ವಾತ್ ಸತ್ಯಂ | ನನುಸರ್ವಸ್ಯಾಪಿ ಮಿಥ್ಯಾಭೂತಮಾಯಾಕಲ್ಪಿತತ್ವಾತ್ ಮಿಥ್ಯೇತಿಚೇನ್ನ "ಮಾಯಾಂತುಪ್ರಕೃತಿಂ ವಿದ್ಯಾತ್ ಮಾಯಿನಂತು ಮಹೇಶ್ವರಂ" "ಪರಾಸ್ಯಶಕ್ತಿರ್ವಿವಿಧೈವಶ್ರೂಯತೆ ಸ್ವಾಭಾವಿಕೀಜ್ಞಾನಬಲಕ್ರಿಯಾಚ" ಇತ್ಯಾದಿ ಶ್ರುತೀಷು ಮಾಯಾಯಾಃ ಬ್ರಹ್ಮಶಕ್ತಿತ್ವೇನಾವಗಮಾತ್ | ಉಕ್ತಂಚ ಕಾಮಿಕಾಗಮೆ || ಶಿವಏವಹಿದೇವೋಂತಃಸ್ಥಿತಮಿಚ್ಛಾವಶಾದ್ಬಹಿಃಯೋಗಿವನಿರುಪಾದಾನಮರ್ಥಜಾತಂ ಪ್ರಕಾಶಯೇತ್ || ಇತಿ ಮಿಥ್ಯಾಮಾಯಾಕಲ್ಪಿತಂ ಜಗದಿತಿಮತೆ | ಈಶ್ವರಾದಿಕಂ ರಜ್ಜುಸರ್ಪವತ್ಕಲ್ಪಿತಮಿತಿ ಭಕ್ತಿಶಾಸ್ತ್ರಾಣಾಂ ವಿಧಿನಿಷೇಧ ಬೋಧಕ ವೇದಶಾಸ್ತ್ರಾಗಮಪುರಾಣೇತಿಹಾಸಾನಾಂದತ್ತಾಂಜಲಿಪ್ರಸಂಗಾತ್ | ನಚಾತ್ರಾಪಿ ಭಕ್ತಿಶ್ರದ್ಧಾದೀನಾಂ ದೃಶ್ಯಮಾನತ್ವಾನ್ನ ವೈಯ್ಯರ್ಥ್ಯಮಿತಿವಾಚ್ಯಂ | ಅಸತಿಕಲ್ಪಿತೆ ಈಶ್ವರೆ ಕೃತ್ರಿಮ ಸಾಲಗ್ರಾಮ ಇವ ಕಸ್ಯವಾಭಕ್ತಿಶ್ರದ್ಧಾದಯೋಭವೇಯುಃ| ರಜ್ಜ್ವಾರೋಪಿತಸರ್ಪವತ್ ಕಲ್ಪಿತೇಶ್ವರಃ ಫಲಪ್ರದಾತಾವಾಕಥಂಭವೇತ್ | ತಸ್ಮಾದಿಂ

ನಲ್ಲಿ ಆರೋಪಿತವಾದ ಸರ್ಪದಂತೆ ಕಲ್ಪಿತನಾದ ಈಶ್ವರನು ಫಲವನ್ನು ಕೊಡಲಾರನು. ಆದುದರಿಂದಮಿಥ್ಯಾತ್ವವಾದವು ಬೌದ್ಧಚಾರ್ವಾಕಾದಿಗಳ ನಿರೀಶ್ವರವಾದದಂತೆ ಅನಾದರಣೀಯವಾದದ್ದು. ಈ ವಾದವನ್ನು ಯಾವ ಭಾಕ್ತಿಕಮತದವನೂ ಕೂಡ ಅಂಗೀಕರಿಸಲಾರನು. ಆದುದರಿಂದ ಇಂದ್ರಾದಿ ದೇವತೆಗಳ ಅನುಗ್ರಹಕ್ಕೋಸ್ಕರ ಅಭಿವ್ಯಕ್ತವಾದ ಯಕ್ಷನಿಗೆ ದೃಶ್ಯತ್ವವಿದ್ದರೂ ಅದಕ್ಕೆ ಮಿಥ್ಯಾತ್ವವನ್ನು ಹೇಳಕೂಡದು. ಯಾಕೆಂದರೆ ಸಮಸ್ತ ಪ್ರಪಂಚವೇ ಸತ್ಯವಾಗಿದೆಯಲ್ಲವೇ? ಸಮಸ್ತ ಪ್ರಪಂಚವೂ ಶಿವರೂಪವಾಗಿರುವದರಿಂದ ಅದಕ್ಕೆ ಮಿಥ್ಯಾತ್ವವನ್ನು ಹೇಳಿದರೆ ಶಿವನಿಗೇನೇ ಮಿಥ್ಯಾತ್ವವನ್ನು ಹೇಳಿದಂತಾಗುವದು. ಎಲೈ ಸತ್ಯತ್ವವಾದಿಯೇ! "ವಾಚಾರಂಭಣಂ ವಿಕಾರೊ ನಾಮಧೇಯಂ ಮೃತ್ತಿಕೇತ್ಯೇವಸತ್ಯಂ" "ನೇಹನಾನಾಸ್ತಿಕಿಂಚನ" ಇವೇ ಮೊದಲಾದ ಶ್ರುತಿಗಳು ಪ್ರಪಂಚಕ್ಕೆ ಮಿಥ್ಯಾತ್ವವನ್ನು ಹೇಳುತ್ತವೆಯಾದಕಾರಣ ನಿನ್ನ ಸದ್ವಾದವಂಮಾಡುವ ಶ್ರುತಿಗಳಿಗೆ ವಿರುದ್ಧವಾಯಿತು. ಅಂದರೆ ಎಲೈ ಮಿಥ್ಯಾತ್ವವಾದಿಯೇ! ಇವೆರಡು ಶ್ರುತಿಗಳಿಂದಲೂ ಜಗತ್ತಿಗೆ ಮಿಥ್ಯಾತ್ವವು ಸಿದ್ಧಿಸುವದಿಲ್ಲವು. ವಾಚಾರಂಭಣಶ್ರುತಿಯು ಜಗತ್ತು ಶಿವನಿಗೆ ಭಿನ್ನವಾಗಿಲ್ಲವೆಂದು ಜಗತ್ತಿನ ಅಭೇದವನ್ನು ಬೋಧಿಸುತ್ತದೆ. ನೇಹನಾನಾ ಎಂಬುವ ಶ್ರುತಿಯು ಸರ್ವಾತ್ಮಕ ಶಿವನೇ ನಾನೆಂಬ ಶಿವಾದ್ವೈತವನ್ನು ಬೋಧಿಸುತ್ತದಲ್ಲದೆ, ಪ್ರಪಂಚದ ಅಸತ್ವವನ್ನು ಹೇಳುವದಿಲ್ಲವು. ಈ ವಿಷಯದಲ್ಲಿ ವಾಚಾರಂಭಣ ವಾಕ್ಯಗಳು ಜಗತ್ತಿಗೆ ಪರಶಿವಬ್ರಹ್ಮದ ಅನನ್ಯತ್ವವನ್ನು ಬೋಧಿಸುವದರಿಂದ ಆ ವಾಕ್ಯಗಳು ಜಗತ್ತಿಗೆ ಮಿಥ್ಯಾತ್ವವನ್ನು ಸಮರ್ಥಿಸುವದಿಲ್ಲವು ಯಾಕೆಂದರೆ ಜಗತ್ತು ಶಿವರೂಪವಾಗಿರುವದು. ಆದಕಾರಣದಿಂದ ಜಗತ್ತು ಸತ್ಯವೆಂಬ ಪುರಾಣವಾಕ್ಯವು ಪ್ರಮಾಣವಾಗಿರುವದು. ಆದ್ದರಿಂದ ಎಲ್ಲಾ ಭಾವ ಪದಾರ್ಥಗಳು

ಧ್ಯಾದ್ಯನುಗ್ರಹಾಯಾವಿರ್ಭೂತಸ್ಯ ಯಕ್ಷಸ್ಯ ದೃಶ್ಯತ್ವೇಪಿ ನಮಿಥ್ಯಾತ್ವಂ, ಸರ್ವಸ್ಯಾಪಿ ಪ್ರಪಂಚಸ್ಯ ಸತ್ಯತ್ವಾತ್ | ತಸ್ಯ ಶಿವರೂಪತ್ವಾತ್ ಅತ ಏವೋಕ್ತಂ, ವಾಚಾರಂಭಣವಾಕ್ಯಾನಿ ತದನನ್ಯತ್ವಬೋಧನಾತ್ | ನಮಿಥ್ಯಾತ್ವಯಕಲ್ಪಂತೇಜಗತಃ ಶಿವರೂಪತಃ || ಇತಿ, ಉಕ್ತಂಚಾನ್ಯತ್ರ "ತಸ್ಮಾದ್ಭಾವಾಃ ಸ್ಥಿರಾಃ ಸರ್ವೇ ನಶ್ಯಂತೇ ಸ್ವರೂಪತಃ | ಇತಿ, ತಸ್ಮಾನ್ನಿಷ್ಕಲಂ ಬ್ರಹ್ಮೈವಾದ್ಭುತಾಕಾರೇಣ ಯಕ್ಷರೂಪೇಣ ಪರಿಣತಮಿತಿಬೋಧ್ಯಂ ||

ಮೂ|| ತೇಗ್ನಿಮಬ್ರುವನ್ ಜಾತವೇದ ಏತದ್ವಿಜಾನೀಹಿ |
ಕಿಮಿದಂ ಯಕ್ಷಮಿತಿ ತಥೇತಿ ||೧೬||೩||

ತೇ ದೇವಾಃ ಜಾತವೇದ ಏತದ್ಯಕ್ಷಂ ವಿಜಾನೀಹಿ ತ್ಯುಕ್ತವಂತಃ | ತಥಾಸ್ತ್ವಿತಿ ||೧೬|| ||೩||

ಮೂ|| ತದಭ್ಯದ್ರವತ್ ತಮಭ್ಯವದತ್ ಕೋಸೀತ್ಯಗ್ನಿರ್ವಾಹಮಸ್ಮಿ | ಇತ್ಯಬ್ರವೀಜ್ಜಾತವೇದಾವಾ
ಅಹಮಸ್ಮೀತಿ ||೧೭||೪||

ಶಾಂ|| ತದ್ಯಕ್ಷಂ ಅಭ್ಯದ್ರವತ್ ಸಮೀಪಂಗತಃ | ತಮಗ್ನಿಮಭ್ಯವದತ್ ಕೋಸೀತಿ | ಪೃಷ್ಟೋಗ್ನಿರಗ್ನಿರ್ವಾಹಮಸ್ಮಿ | ಜಾತವೇದಾವಾ ಅಹಮಸ್ಮೀತಿ ಸ್ವಸ್ಯಪ್ರಸಿದ್ಧನಾಮದ್ವಯಮುಕ್ತವಾನಿತ್ಯರ್ಥಃ ||೧೭||೪||

ಸತ್ಯಗಳೇ ಆಗಿರುವದರಿಂದ ಸ್ವರೂಪತಃ ಅವುಗಳಿಗೆ ನಾಶವಿಲ್ಲವೆಂಬುವ ಬೇರೆಯಾದ ಆಪ್ತವಾಕ್ಯವುಕೂಡ ಪ್ರಮಾಣವಾಗಿರುವದು. ಇದಲ್ಲದೆ "ಮಿಥ್ಯಾತ್ವೇಸ್ತಿನವಾ ಸಮಸ್ತಜಗತಾಂ ಮಾನಂ ಯದಸ್ತ್ಯೇವಚೇತ್ ತತ್ಸತ್ಯಂ ಯದಿಸಂಭವೇದಭಿಮತಾದ್ವೈತಸ್ಯಹಾನಿಸ್ತತಃ | ಮಿಥ್ಯಾಚೇದ್ಧ್ರುದಿತನ್ನ ಸಿಧ್ಯತಿಜಗನ್ಮಿಥ್ಯಾತ್ವಮೇತತ್ತಥಾ | ಸತ್ಯಂ ಬ್ರಹ್ಮ ತದನ್ಯದೇತದಖಿಲಂ ಮಿಥ್ಯೇತಿವಕ್ತಾಜಡಃ || ಎಂದು ಶಿವಾಧಿಕ್ಯ ರತ್ನಾವಳಿಕಾರನೂ ಬ್ರಹ್ಮಸತ್ಯಂ ಜಗನ್ಮಿಥ್ಯಾ ಎಂಬುದಕ್ಕೆ ದೋಷವನ್ನು ಪ್ರಯೋಗಿಸಿರುವನು. ಆದ್ದರಿಂದ ನಿಷ್ಕಲ ಪರಬ್ರಹ್ಮವೇ ಅದ್ಭುತಾಕಾರವಾಗಿ ಪರಿಣಮಿಸಿತೆಂದು ತಿಳಿಯತಕ್ಕದು.

ಎಲೈ ಅಗ್ನಿಯೇ ! ಈ ಪವಿತ್ರವಾದ ವಸ್ತುವನ್ನು ತಿಳಿದುಕೊಂಡುಬಾ ಎಂದು ಆ ದೇವತೆಗಳು ಹೇಳಿದರು. ಅಗ್ನಿಯು ಹಾಗೆಯೇ ಆಗಲಿ ಎಂದು ಹೇಳಿತು. ಅಗ್ನಿಯು ಆ ಪವಿತ್ರವಾದ ವಸ್ತುವಿನ ಸಮೀಪಕ್ಕೆ ಹೋಗಲಾಗಿ, ಅಗ್ನಿಯನ್ನು ಕುರಿತು ನೀನು ಯಾರೆಂಬದಾಗಿ ಆ ಯಕ್ಷಮೂರ್ತಿಯು ಕೇಳಿತು. ಅದಕ್ಕೆ ಅಗ್ನಿಯು ನನಗೆ ಅಗ್ನಿಯೆಂತಲೂ,

ಮೂ॥ ತಸ್ಮಿನ್ತ್ವಯಿಕಿಂವೀರ್ಯಮಿತ್ಯಪೀದಂ ಸರ್ವಂ
ದಹೇಯಂ । ಯದಿದಂ ಪೃಥಿವ್ಯಾಮಿತಿ ।,೧೮॥೫॥

ಶಾಂ॥ ತಸ್ಮಿನ್ ತನ್ನಾಮನಿ ತ್ವಯಿ ಕಿಂವೀರ್ಯಂ ಸಾಮರ್ಥ್ಯಮಿತಿಪೃಷ್ಟೋಽಗ್ನಿಃ । ಯದಿದಂಪೃಥಿವ್ಯಾಂವರ್ತತೇ ತದಿದಂ ಸರ್ವಂದಹೇಯಂ ಭಸ್ಮೀಕುರ್ಯಾಮಿತಿ ಸರ್ವದಹನಸಾಮರ್ಥ್ಯಮಸ್ತೀತ್ಯಬ್ರವೀದಿತ್ಯರ್ಥಃ ॥೧೮॥೫॥

ಅವತರಣಿಕಾ॥ ಅಶಕ್ಯಮಸ್ಯೈರ್ಯದನುಗ್ರಹಂವಿನಾ ತೃಣಕ್ಷಯೋಽಪ್ಯತ್ರ ಯಥೇಷ್ಟಯಾಕ್ವಚಿತ್ । ಇತ್ಯುಕ್ತಪ್ರಕಾರೇಣ ಶಿವಪ್ರಸಾದಂವಿನಾ ಬ್ರಹ್ಮವಿಷ್ಣ್ವಾದಯೋದೇವಾ ಅಪಿ ನ ಸೃಷ್ಟ್ಯಾದಿಕರ್ಮಣಿ ಸಮರ್ಥಾಭವಂತಿ। ನಹಿಜಃ ಕಿಮಪಿ ಕರ್ತುಮೀಶತೇ । ಇತ್ಯೇತತ್ಪ್ರದರ್ಶನಾರ್ಥಂ ತಸ್ಮೈತೃಣಂ ನಿದಧಾವಿತ್ಯಾಹ ॥

ಮೂ॥ ತಸ್ಮೈತೃಣಂ ನಿದಧಾವೇತದ್ದಹೇತಿ ತದುಪಪ್ರೇ
ಯಾಯ ಸರ್ವಜವೇನ ತನ್ನಶಶಾಕ ದಗ್ಧುಂ । ಸ
ತತಏವ ನಿವವೃತೇ। ನೈತದಶಕಂ ವಿಜ್ಞಾತುಂ ಯ
ದೇತದ್ಯಕ್ಷಮಿತಿ ॥೧೯॥೬॥

ಶಾಂ॥ ತಸ್ಮೈತಾದೃಶಾಭಿಮಾನವತೇ ತೃಣಮೇತದ್ದಹೇತಿ ತೃಣಂ ತಸ್ಯಪುರತೋ ನಿದಧೌ । ತತ್ತೃಣಂ ಸರ್ವಜವೇನ ಉಪಪ್ರೇಯಾಯ ತತ್ಸಮೀಪಂ

ಜಾತವೇದಸ್ ಎಂಬಿವು ಪ್ರಸಿದ್ಧಗಳಾದ ಎರಡು ನಾಮಗಳಿರುವವೆಂದು ಹೇಳಿತು ಆಮೇಲಿ ಎಲೈ ಅಗ್ನಿಯೇ ನಿನ್ನಲ್ಲಿ ಸಾಮರ್ಥ್ಯವೇನೆಂದು ಯಕ್ಷಮೂರ್ತಿಯು ಕೇಳಲಾಗಿ, ಈ ಭೂಮಂಡಲದಲ್ಲಿ ಕಾಣುವ ಸಮಸ್ತ ಪದಾರ್ಥಗಳನ್ನು ಏಕಕಾಲದಲ್ಲಿಯೇ ದಹಿಸುವೆನೆಂದು ಅಗ್ನಿಯು ಉತ್ತರವನ್ನು ಕೊಟ್ಟಿತು. ಆ ಸರ್ವಸಮರ್ಥನಾದ ಪರಶಿವನ ಅನುಗ್ರಹವು ಇಲ್ಲದಿದ್ದರೆ ಯಾವ ಪ್ರಾಣಿಯಿಂದಲೂ ಒಂದು ಹುಲ್ಲುಕಡ್ಡಿಯನ್ನು ಕೊಯ್ಯುವವಕ್ಕೂ ಅಲ್ಲಾಡಿಸುವದಕ್ಕೂ ಯೋಗ್ಯತೆಯಿಲ್ಲವೆಂದು ಪುರಾಣದಲ್ಲಿ ಹೇಳಿದ ಪ್ರಕಾರ ಶಿವಾನುಗ್ರಹವಿಲ್ಲದೆ ಬ್ರಹ್ಮ ವಿಷ್ಣ್ವಾದಿ ದೇವತೆಗಳೂ ಕೂಡ ಸೃಷ್ಟಿ ಮೊದಲಾದ ಕಾರ್ಯಗಳನ್ನು ಮಾಡಲು ಸಮರ್ಥರಾಗುವದಿಲ್ಲವು. ಎಂಬ ಈಶ್ವರ ಮಾಹಾತ್ಮ್ಯವನ್ನು ತೋರಿಸುವದಕ್ಕಾಗಿ ಈ ಮುಂದಣ ಮಂತ್ರವು ಅಗ್ನಿಯ ಮುಂದೆ ಆ ಯಕ್ಷಮೂರ್ತಿಯು ಹುಲ್ಲುಕಡ್ಡಿಯನ್ನಿಟ್ಟಿತೆಂದು ಹೇಳುತ್ತದೆ. ಸರ್ವಪ್ರಪಂಚವನ್ನೇ ದಹಿಸುವೆನೆಂಬ ಅಭಿಮಾನವುಳ್ಳ ಅಗ್ನಿಯಮುಂದೆ ಆ ಯಕ್ಷಮೂರ್ತಿಯು ಹುಲ್ಲುಕಡ್ಡಿಯನ್ನಿಟ್ಟು ಇದನ್ನು ಸುಡು ಎಂದು ಹೇಳಿತು. ಆಗ ನನ್ನಿಂದ ಈ ಹುಲ್ಲನ್ನು

ಗತವಾನಿತ್ಯರ್ಥಃ । ತತ್ತೃಣಂ ದಗ್ಧುಂ ನಶಶಾಕ । ಸೋಽಗ್ನಿಃ ತತಏವ ತಸ್ಮಾತ್ ಸ್ಥಾನಾತ್ ನಿವವೃತೇ ದೇವಾನ್ಪ್ರತಿನಿವೃತ್ತಃ । ನಾಹಂಯದೇತದ್ಯಕ್ಷಂ ತದೇತದ್ವಿಜ್ಞಾತುಮಶಕ್ಯಂ । ಇತ್ಯುಕ್ತವಾನಿತಿಶೇಷಃ ॥ ಏವಮಗ್ರೇಽಪಿ ॥೧೯॥೬॥

ಮೂ॥ ಅಥ ವಾಯುಮಬ್ರುವನ್ ವಾಯವೇತದ್ವಿಜಾನೀಹಿ । ಕಿಮೇತದ್ಯಕ್ಷಮಿತಿ । ತಥೇತಿ ॥೨೦॥ ತದಭ್ಯದ್ರವತ್ ತದಭ್ಯವದತ್ಕೋಽಸೀತಿ। ವಾಯುರ್ವಾಹಮಸ್ಮೀತ್ಯಬ್ರವೀನ್ಮಾತರಿಶ್ವಾವಾಹಮಸ್ಮೀತಿ ॥೨೧॥ ತಸ್ಮಿಂಸ್ತ್ವಯಿಕಿಂ ವೀರ್ಯಮಿತ್ಯಪೀದꣳ ಸರ್ವಮಾದದೀಯ ಯದಿದಂ ಪೃಥಿವ್ಯಾಮಿತಿ ॥ ೨೨॥ ತಸ್ಮೈತೃಣಂ ನಿದಧಾವೇತದಾದತ್ಸ್ವೇತಿ। ತದುಪಪ್ರೇಯಾಯ ಸರ್ವಜವೇನ ತನ್ನಶಶಾಕ ಆದಾತುಂ । ತತಏವ ನಿವವೃತೇ ನೈತದಶಕ್ಯಂ ವಿಜ್ಞಾತುಂ। ಯದೇತದ್ಯಕ್ಷಮಿತಿ ॥೨೩॥ ಅಥೇಂದ್ರಮಬ್ರುವನ್ ಮಘವನ್ನೇ ತದ್ವಿಜಾನೀಹಿ ಕಿಮೇತದ್ಯಕ್ಷಮಿತಿ । ತಥೇತಿ । ತದಭ್ಯದ್ರವತ್. ತಸ್ಮಾತ್ತಿರೋದಧೇ ॥೨೪॥

ಸುಡುವದಾಗುವದಿಲ್ಲವೇ ? ನೋಡೋಣ ಎಂದು ವೇಗದಿಂದ ಸಮೀಪಕ್ಕೆ ಹೋಯಿತು. ಆದಾಗ್ಯೂ ಆ ಹುಲ್ಲನ್ನು ಸುಡಲು ಸಾಮರ್ಥ್ಯವಿಲ್ಲದೆ ಹೋಯಿತು. ಆಗ ಅಗ್ನಿಯು ದೇವತೆಗಳ ಹತ್ತಿರ ಬಂದಿತು. ಮತ್ತು ಆ ಪರಬ್ರಹ್ಮಯಕ್ಷಮೂರ್ತಿಯನ್ನು ತಿಳಿಯಲು ನನಗೆ ಸಾಧ್ಯವಿಲ್ಲೆಂದೂ ಹೇಳಿತು. ॥೧೯॥ ॥೬॥

ಅನಂತರದಲ್ಲಿ ದೇವತೆಗಳು ವಾಯುವನ್ನು ಕುರಿತು ಎಲೈ ವಾಯುವೇ ಈ ಯಕ್ಷಮೂರ್ತಿಯು ಯಾವದು ಇದರ ಸ್ವರೂಪವನ್ನು ತಿಳಿದುಕೊಂಡು ಬಾ ಎಂದು ಹೇಳಲು, ವಾಯುವು ಆ ಯಕ್ಷಮೂರ್ತಿಯ ಸಮೀಪಕ್ಕೆ ಹೋಯಿತು. ಆಮೇಲೆ ವಾಯುವನ್ನು ಕುರಿತು ಆ ಯಕ್ಷಮೂರ್ತಿಯು ನೀನು ಯಾರು ? ನಿನ್ನಲ್ಲಿ ಸಾಮರ್ಥ್ಯವೇನೆಂದು ಪ್ರಶ್ನೆಮಾಡಲು ನಾನು ವಾಯುವು; ಹಾಗೂ ಮಾತರಿಶ್ವಾ ಎಂಬ ಹೆಸರಿನಿಂದ ಪ್ರಸಿದ್ಧನಿರುವೆನು. ನನ್ನಲ್ಲಿ ಈ ಭೂಮಿಯಲ್ಲಿರುವ ಸರ್ವ ಪದಾರ್ಥಗಳನ್ನು ಹಾರಿಸುವ ಸಾಮರ್ಥ್ಯವಿದೆಂದು ಉತ್ತರವನ್ನು ಕೊಟ್ಟಿತು. ಹಾಗಾದರೆ ಈ ಹುಲ್ಲುಕಡ್ಡಿಯನ್ನು ಹಾರಿಸೆಂದು ಮುಂದೆ ಇಟ್ಟಿತು. ವಾಯುವು ಅತಿವೇಗದಿಂದ ಆ ಹುಲ್ಲುಕಡ್ಡಿಯ ಸಮೀಪಕ್ಕೆ ಬಂದು

ಶಾಂ|| ಅಥೇಂದ್ರಮಿತಿ || ತದಭ್ಯದ್ರವದಿತ್ಯಂತಂ ಪೂರ್ವವತ್ | ತಸ್ಮಾದಿಂದ್ರಾದ್ಯಕ್ಷಸಮೀಪಂಗತಾತ್. ತಿರೋದಧೇ ತಿರೋಹಿತಂ ತದ್ಯಕ್ಷಂ | ಇಂದ್ರಸ್ಯಸ್ವಾಭಿಮಾನಮತ್ಯಂತಂ ನಿರಾಕರ್ತುಂ ತಥಾತಂಧ್ಯಾನಾದೌ ಪ್ರವರ್ತಯಿತುಂ ತೇನಸಹಾಕಂ ನೈವಾಭಾಷತ್ ತಿರೋಹಿತಮೇವಾಭವದಿತ್ಯರ್ಥಃ೨೪||೧೧||

ಅವತರಣಿಕಾ || ಶ್ವೇತಾಶ್ವತರೇ "ಕಿಂ ಕಾರಣಂಬ್ರಹ್ಮ ಕುತಃ ಸ್ಮಜಾತಾ ಜೀವಾಮ್ಯಕೇನ" ಇತ್ಯುಪಕ್ರಮ್ಯ ಕಾಲಾದಿಕಾರಣತ್ವವಾದಿಮತಮಾಕ್ಷಿಪ್ಯ ಧ್ಯಾನವತಾಂ ತೇಷಾಂ ಮುನೀನಾಂಮಧ್ಯೇ ಪಾಶವಿಚ್ಛೇದನಸಮರ್ಥಾ "ವಿದ್ಯಯಾ ವಿಂದತೇಮೃತಂ" ಇತ್ಯತ್ರೋಕ್ತವಿದ್ಯಾರೂಪಾ ಪರಶಿವಾವಿಭಕ್ತಾ ಚಿಚ್ಛಕ್ತಿರ್ಯಥಾ ತೇಷಾಮನುಗ್ರಹಾಯಾವಿರ್ಭೂತಾಸತೀ ಶಕ್ತಿಮಂತಂ ಶಿವಮುವಾಚ | ಉಕ್ತಂಚ ಶಿವಪುರಾಣೇ ಮುಮುಕ್ಷಯಾ ಪುರಾಕೇಚಿನ್ಮುನಯೋ ಬ್ರಹ್ಮವಾದಿನಃ | ಸಂಶಯಾವಿಷ್ಟಮನಸೋ ಮೃಶಂತಿ ಯಥಾಯಥಂ || ಕಿಂ ಕಾರಣಂ ಕುತೋಜಾತಾ ಜೀವಾಮಃ ಕೇನವಾವಯಂ | ಕೇನವರ್ತಾಮಹೇ ಶಶ್ವತ್ಸುಖೇಷ್ವನ್ಯೇಷುಚಾಪ್ಯಮೀ || ಇತಿತರ್ಕಯಂತಃ—ತೇಧ್ಯಾನಯೋಗಾ

ಅವನು ಎತ್ತಲು ಸಮರ್ಥನಾಗದೆ ಮುಖಭಂಗಿತನಾಗಿ ಪುನಃ ಹಿಂದಕ್ಕೆ ಹೊರಟುಹೋಯಿತು. ಆಮೇಲೆ ದೇವತೆಗಳು ಎಲೋ ಇಂದ್ರನೇ ನೀನಾದರೂ ಈ ಯಕ್ಷಮೂರ್ತಿಯನ್ನು ತಿಳಿದುಕೊಂಡು ಬಾ ಎಂದು ಹೇಳಲು ಆಗಲೆಂದು ಇಂದ್ರನು ಹೊರಟುಹೋದನು. ಇಂದ್ರನು ಯಕ್ಷಮೂರ್ತಿಯ ಸಮೀಪಕ್ಕೆ ಹೋಗುವಷ್ಟರಲ್ಲಿಯೇ ಆ ಜ್ಯೋತಿರ್ಮಯ ಮೂರ್ತಿಯು ಇವನಿಗೆ ಕಾಣದಂತಾಯಿತು. ಅಂದರೆ ಇಂದ್ರನಿಗೆ ನಾನು ದೇವೇಂದ್ರನೆಂಬ ಅಭಿಮಾನವು ಅತಿಶಯವಾಗಿರುವುದರಿಂದ ಆಗರ್ವವನ್ನು ನಿರಾಕರಿಸುವದಕ್ಕಾಗಿಯೂ ಆ ದೇವೇಂದ್ರನಿಗೆ ತನ್ನ ಧ್ಯಾನಧಾರಣಾದಿಗಳಲ್ಲಿ ಪ್ರವೃತ್ತಿಯನ್ನುಂಟುಮಾಡುವದಕ್ಕಾಗಿಯೂ ಅಗ್ನ್ಯಾದಿ ದೇವತೆಗಳೊಡನೆ ಸಂಭಾಷಣೆಯ ಮಾಡಿದಂತೆ ಈ ದೇವೇಂದ್ರನೊಡನೆ ಸಂಭಾಷಣವನ್ನು ಕೂಡ ಮಾಡದೆ ಅಂತರ್ಧಾನವನ್ನು ಹೊಂದಿತೆಂಬ ತಾತ್ಪರ್ಯವು ||೨೦||೨೧||೨೨||೨೩||೨೪||

ಈ ಜಗತ್ತಿಗೆ ಬ್ರಹ್ಮವು ಹ್ಯಾಗೆಕಾರಣವು ? ನಾವು ಎಲ್ಲಿಂದ ಜನಿಸಿದೆವು ? ನಾವು ಯಾವವಸ್ತುವಿನಿಂದ ಬದುಕುತ್ತೇವೆ? ಇವೇ ಮೊದಲಾದ ಶ್ವೇತಾಶ್ವತರೋಪನಿಷತ್ತಿನ ವಾಕ್ಯವೊದಲ್ಗೊಂಡು ಮುಂದಣ ವಾಕ್ಯಗಳಿಂದ ಕಾಲಾದಿಗಳಿಗೆ ಕಾರಣತ್ವವಂ ಹೇಳುವವರ ಮತವನ್ನು ಆಕ್ಷೇಪಿಸಿಕೊಂಡು ಯಾವದೊಂದು ನಿರ್ಣಯವಾಗದಿರುವ ಕಾರಣ ಆ ಮುನಿಗಳು ಪರಶಿವಧ್ಯಾನಾಸಕ್ತರಾಗಿರಲು ಪಾಶಗಳನ್ನು ನಾಶಮಾಡುವದರಲ್ಲಿ ಸಮರ್ಥವಾಗಿಯೂ "ವಿದ್ಯಯಾ ವಿಂದತೇಮೃತಂ" ಎಂದು ಹಿಂದಣಮಂತ್ರದಲ್ಲಿ ಹೇಳಲ್ಪಟ್ಟ ವಿದ್ಯಾರೂಪವಾಗಿಯೂ ಪರಶಿವನಲ್ಲಿ ಅವಿನಾಭಾವ ಸಂಬಂಧದಿಂದ ಇರುವದಾಗಿಯೂ ಇರುವ ಚಿಚ್ಛಕ್ತಿಯು ಆ ಮುನಿಗಳನ್ನು

ಸುಗತಾಃ ಪ್ರಾಪಶ್ಯನ್ ಶಕ್ತಿಮೈಶ್ವರೀಂ | ಪಾಶವಿಚ್ಛೇದಿಕಾಂ ದೇವೀಂ ನಿಗೂಢಾಂ ಸ್ವಗುಣೈರ್ಭೃಶಂ || ತತೋವಿಚ್ಛಿನ್ನಪಾಶಾಸ್ತೇ ಸರ್ವಕಾರಣಕಾರಣಂ | ಶಕ್ತಿಮಂತಂ ಮಹಾದೇವಮಪಶ್ಯನ್ ದಿವ್ಯಚಕ್ಷುಷಾ || ಇತಿ, ತಥೈವದೇಹಾದ್ಯಭಿಮಾನಂ ತ್ಯಕ್ತ್ವಾ ಯಕ್ಷಧ್ಯಾನಮಗ್ನಸ್ಯ ಭಕ್ತಸ್ಯ ಶುದ್ಧಾತ್ಮನ ಇಂದ್ರಸ್ಯಾನುಗ್ರಹಾರ್ಥಂ ಶ್ರೀಮಹಾದೇವೀ ಭಗವತೀ ಚಿಚ್ಛಕ್ತಿರೇವ ಸ್ಥೂಲಂ ಪಾರ್ವತೀರೂಪಂ ಸ್ವೀಕೃತವತೀ | ತಾಂಚೇಂದ್ರಃ ಪಪ್ರಚ್ಛ ಕೇತ್ಯಾಹ | ಸತಸ್ಮಿನ್ನೇವೇತಿ ||

ಮೂ|| ಸ ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ | ಬಹುಶೋಭಮಾನಾಮುಮಾಂ ಹೈಮವತೀಂ ತಾಂ ಹೋವಾಚ ಕಿಮೇತದ್ಯಕ್ಷಮಿತಿ ||೩||೧೨|| ಇತಿ ತೃತೀಯಃ ಖಂಡಃ.

ಶಾಂ|| ಸ ಇಂದ್ರಃ ತಸ್ಮಿನ್ನೇವಾಕಾಶೇ ಯಸ್ಮಿನ್ನಾಕಾಶಪ್ರದೇಶೇ ಪರಶಿವಬ್ರಹ್ಮ ಸ್ವಸ್ಯತಿರೋಧಾನಮದರ್ಶಯತ್ ಗೋಪಿತಸ್ವರೂಪಂಚಾಭವತ್ |

ಅನುಗ್ರಹಿಸುವದಕ್ಕಾಗಿ ಅವರ ಮಧ್ಯದಲ್ಲಿ ಆವಿರ್ಭವಿಸಿ ಶಕ್ತಿಸಹಿತನಾದ ಪರಶಿವನೇ ಜಗತ್ಸೃಷ್ಟ್ಯಾದಿಗಳಿಗೆ ಮುಖ್ಯಕಾರಣನೆಂದು ಉಪದೇಶಿಸಿದಳು. ಈ ವಿಷಯದಲ್ಲಿ ಪೂರ್ವದಲ್ಲಿ ಬ್ರಹ್ಮವಾದಿಗಳಾದ ಮುನಿಗಳು ಮೋಕ್ಷೇಚ್ಛೆಯಿಂದ ಬ್ರಹ್ಮತತ್ವವನ್ನು ತಿಳಿಯಲಾರದೆ ಸಂಶಯಗ್ರಸ್ತ ಮನಸ್ಕರಾಗಿ ಜಗತ್ತಿಗೆ ಕಾರಣವಾವುದು? ನಾವು ಎಲ್ಲಿಂದ ಜನಿಸಿದೆವು? ಯಾವದರಿಂದ ಜೀವಿಸುತ್ತೇವೆಂದು ಊಹಿಸುವವರಾಗಿ ಧ್ಯಾನಯೋಗದಲ್ಲಿ ಆಸಕ್ತರಾಗಲು ಈಶ್ವರಸಂಬಂಧಿಯಾದ ಪಾಶವಿಚ್ಛೇದನ ಸಮರ್ಥವಾದ ಸ್ವಗುಣಗಳಿಂದ ಆಚ್ಛಾದಿತವಾದ ದಿವ್ಯಶಕ್ತಿಯನ್ನು ನೋಡಿದರು. ಆವಿರ್ಭೂತವಾದ ದಿವ್ಯಶಕ್ತಿಯೊಡನೆ ವಿಚಾರಮಾಡಲು ಜ್ಞಾನೋದಯವಾಗಿ ತಮ್ಮ ಪಾಶಗಳನ್ನು ಕಳೆದುಕೊಂಡು ಸರ್ವಪ್ರಪಂಚಕ್ಕೆ ಕಾರಣರಾದ ಬ್ರಹ್ಮವಿಷ್ಣ್ವಾದಿಗಳಿಗೆ ಕಾರಣನಾದ ಶಕ್ತಿವಿಶಿಷ್ಟನಾದ ಮಹಾದೇವನನ್ನು ತಮ್ಮ ದಿವ್ಯದೃಷ್ಟಿಯಿಂದ ಸಾಕ್ಷಾತ್ಕರಿಸಿದರು. ಎಂಬುವ ಶಿವಪುರಾಣವಾಕ್ಯವು ಪ್ರಮಾಣವಾಗಿದೆ. ಅದೇ ರೀತಿಯಂತೆ ದೇಹಾದ್ಯಭಿಮಾನವನ್ನು ಬಿಟ್ಟು ಯಕ್ಷಧ್ಯಾನಾಸಕ್ತನೂ ಶುದ್ಧಾತ್ಮನೂ ಭಕ್ತನೂ ಆದ ಇಂದ್ರನ ಅನುಗ್ರಹಕ್ಕಾಗಿ ಶ್ರೀ ಭಗವತೀ ಮಹಾದೇವಿಯಾದ ಚಿಚ್ಛಕ್ತಿಯೇ ಸ್ಥೂಲವಾದ ಪಾರ್ವತೀರೂಪವನ್ನು ಸ್ವೀಕರಿಸಿ ಇಂದ್ರನಿಗೆ ದರ್ಶನಕೊಟ್ಟಳು. ಇಂದ್ರನು ಆ ಮಹಾದೇವಿಯನ್ನು ಕೇಳಿದನೆಂಬದಾಗಿ "ಸತಸ್ಮಿನ್ನೇ . . . .ವ" ಮಂತ್ರವು ಹೇಳುತ್ತದೆ.

ತಸ್ಮಿನ್ನೇವಸ್ತ್ರಿಯಂ ಬಹುಶೋಭಮಾನಾಂ ಶೋಭನತಮಾಂ ತಾಂ ವಿದ್ಯಾಸ್ವ ರೂಪಿಣೀಂ ಹೈಮವತೀಂ ಹಿಮವತಃ ಪುತ್ರೀಂ ಉಮಾಂ ಉಮಾಶಬ್ದವಾಚ್ಯಾಂ ಪಾರ್ವತೀಮಾವಿರ್ಭೂತಾಮುವಾಚ ಹ ಶರಣಾಗತಃ ಸನ್ ಆಜಗಾಮ-ಆಗತ ವಾನ್-ತಥಾ ಪ್ರಾರ್ಥಯಾಮಾಸೇತ್ಯರ್ಥಃ | ಕಿಮೇತದ್ಯಕ್ಷಂ ಉಜ್ವಲಾಕಾ ರಂ ಸ್ವರೂಪಂದರ್ಶಯಿತ್ವಾ ತಿರೋಹಿತಂ | ತತ್ಕಿಮಿತಿ ||

ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗ
ಶಿವಾಚಾರ್ಯಾಸ್ಥಾನ ಪಂಡಿತೇನ ಧರ್ಮರತ್ನಪ್ರಶಸ್ತಿಸಮಲಂ
ಕೃತೇನ ಶ್ರೀ ಶಂಕರಶಾಸ್ತ್ರಿಣಾ ವಿರಚಿತಾ ಕೇನೋಪ
ನಿಷ ತ್ತೃತೀಯಖಂಡಸ್ಯ ಶಾಂಕರವ್ಯಾಖ್ಯಾ
ಸಮಾಪ್ತಾ.


ಶಿವಂ—ಶಿವಂ—ಶಿವಂ—ಭೂಯಾತ್.

ಶ್ರೀಹರಗುರುಚರ ಚರಣಾರ್ಪಿತಾಭವತು.



ಆಮೇಲೆ ಯಾವಸ್ಥಲದಲ್ಲಿ ಪರಶಿವಬ್ರಹ್ಮವು ತನ್ನ ಮಂಗಲಮಯವಾದ ಸ್ವರೂಪವನ್ನು ಪ್ರಕಾಶಗೊಳಿಸಿ ಪುನಃ ಆ ಸ್ವರೂಪವನ್ನು ಮುಚ್ಚಿಕೊಂಡಿತೋ? ಅದೇ ಸ್ಥಲದಲ್ಲಿ ಅತ್ಯಂತ ಮಂ ಗಲಸ್ವರೂಪವಾದ ವಿದ್ಯಾಸ್ವರೂಪಿಣಿಯಾದ ಹಿಮವಂತನ ಪುತ್ರಿಯಾದ ಉಮಾಶಬ್ದವಾಚ್ಯಳಾದ ಪಾರ್ವತೀದೇವಿಯು ಆವಿರ್ಭವಿಸಿ ಇಂದ್ರನಿಗೆ ಕಾಣಿಸಿಕೊಂಡಿತು. ಇಂದ್ರನು ಶರಣಾಗತನಾಗಿ ನಿನ್ನೆ ಮಹಾದೇವಿಯೇ ಈ ಪ್ರಜ್ವಲಾಕಾರವುಳ್ಳ ಪೂಜ್ಯವಸ್ತುವು ತನ್ನ ಸ್ವರೂಪವನ್ನು ತೋರಿಸಿ ಅಡಗಿಕೊಂಡಿತು. ಇದೇನೆಂದು ಕೇಳಿದನು.

ಇಂತಂಬಲ್ಲಿಗೆ ಪಂಡಿತ ಧರ್ಮರತ್ನ ಶ್ರೀ ಶಂಕರಶಾಸ್ತ್ರಿಗಳಿಂದ ರಚಿತವಾದ ಕೇನೋಪನಿಷ
ತ್ತೃತೀಯಖಂಡದ ಶಾಂಕರೀವ್ಯಾಖ್ಯೆಗೆ ಶಿವಾದ್ವೈತ ವಿಭೂಷಣ ಸಿರಸಿ
ಗುರುಶಾಂತಶಾಸ್ತ್ರಿಗಳಿಂದ ರಚಿಸಲ್ಪಟ್ಟ ಭಾವದರ್ಪಣವು
ಸಮಾಪ್ತವಾದುದು.



ಮೂ॥ ಸಾಬ್ರಹ್ಮೇತಿಹೋವಾಚ ಬ್ರಹ್ಮಣೋವಾ ಏತದ್ವಿಜ ಯೇ । ಮಹೀಯಧ್ವಮಿತಿ ತತೋಹೈವ ವಿದಾಂಚಕಾರ ಬ್ರಹ್ಮೇತಿ ॥೨೬॥೧॥

ಶಾಂ॥ ಸಾ ಭಗವತೀ ಪಾರ್ವತೀದೇವೀ! ಇಂದ್ರಸ್ಯಶಕ್ತಿಪಾತಂ ಸಮಾಲೋಕ್ಯ ವಿಶ್ವಾತ್ಮಕಂ ವಿಶ್ವಾಧಿಕಂ ಸರ್ವಶಕ್ತಿಕಂ ಯತ್ಪರಶಿವಲಿಂಗಂ ತದೇವ ಯುಷ್ಮದ್ದುರಭಿಮಾನಶಮನಾರ್ಥಂ ಯಕ್ಷರೂಪೇಣಾವಿರಾಸೀತ್. ತದ್ಯಕ್ಷಂ ಬ್ರಹ್ಮೈವೇತಿ ಸರ್ವಕರ್ತೃಕ ಪರಶಿವಬ್ರಹ್ಮೈವ ನತ್ವನ್ಯತ್ ಇತಿ ಹ ಕಿಲ ಉವಾಚ ಬ್ರಹ್ಮಣೋವಾ ಏತದ್ವಿಜಯೇ ಅಸುರಕರ್ಮಕವಿಜಯೆ । ಮಹೀಯಧ್ವಂ ಯೂಯಮಿತಿ । ತತೋಹೈವ ತತ್ಪಾರ್ವತ್ಯುಪದೇಶಾದೇವ ಬ್ರಹ್ಮೇತಿ ವಿದಾಂಚಕಾರ ॥೨೬॥೧॥

ಮೂ॥ ತಸ್ಮಾದ್ವಾ ಏತೇದೇವಾ ಅತಿತರಾಮಿವಾನ್ಯಾಂದೇವಾನ್ ಯದಗ್ನಿರ್ವಾಯುರಿಂದ್ರಸ್ತೇಹ್ಯೇನನ್ನೇದಿಷ್ಠಂ ಪಸ್ಪ್ರಶುಸ್ತೇಹ್ಯೇನತ್ಪ್ರಥಮೋವಿದಾಂಚಕಾರಬ್ರಹ್ಮೇತಿ ॥೨೭॥೨॥

ಶಾಂ॥ ತಸ್ಮಾದ್ವಾ ತಸ್ಮಾದೇವಹೇತೋರ್ಯತ್ ಯಸ್ಮಾದಗ್ನಿರ್ವಾಯುರಿಂದ್ರಸ್ತೇಹಿದೇವಾ ಏನತ್ಪ್ರಥಮಃ ಪ್ರಥಮಂ ವಿದಾಂಚಕಾರ ವಿದಾಂಚಕ್ರುಃ

ಭಗವತೀ ಪಾರ್ವತೀದೇವಿಯು ಇಂದ್ರನ ಶಕ್ತಿಪಾತಚಿನ್ಹೆಗಳನ್ನು ನೋಡಿ ಎಲೈ ಇಂದ್ರಾದಿಗಳಿರಾ! ವಿಶ್ವಾತ್ಮಕನೂ ವಿಶ್ವಾಧಿಕನೂ ಸರ್ವಶಕ್ತಿಯುಳ್ಳ ಲಿಂಗಮೂರ್ತಿಯೂ ಆದ ಆ ಪರಶಿವನೇ ನಿಮ್ಮಗಳ ದುರಭಿಮಾನವನ್ನು ನಾಶಮಾಡಿ ಅನುಗ್ರಹಿಸಬೇಕೆಂಬುದ್ದೇಶದಿಂದ ಮಂಗಲಮಯವಾದ ಆಕಾರವುಳ್ಳವನಾಗಿ ಆವಿರ್ಭವಿಸಿದನು. ಆ ಯಕ್ಷಮೂರ್ತಿಯು ಸರ್ವಕರ್ತೃವಾದ ಪರಶಿವಬ್ರಹ್ಮವೆ ಆಗಿದೆ ಅದು ಮತ್ತೊಂದಲ್ಲ ಆ ಸರ್ವಾಂತರ್ಯಾಮಿಯಾದ ಬ್ರಹ್ಮವೇ ಅಸುರರಿಗೆ ಅಪಜಯವನ್ನುಂಟುಮಾಡಿ ನಿಮಗೆ ಜಯವನ್ನುಂಟುಮಾಡಿತು. ಈ ಜಯವು ನಮ್ಮಿಂದಲೇ ಆಯಿತೆಂದು ನೀವು ಗರ್ವಿತರಾದಿರಿ ಎಂದು ಪಾರ್ವತೀದೇವಿಯು ಉಪದೇಶಮಾಡಲು ಆ ಉಪದೇಶದಿಂದಲೇ ಇಂದ್ರನು ಬ್ರಹ್ಮಜ್ಞಾನಿಯಾದನು. ಇಂದ್ರನ ವಾಕ್ಯದಿಂದ ಉಳಿದ ಅಗ್ನಿ ಮೊದಲಾದ ದೇವತೆಗಳು ಬ್ರಹ್ಮಜ್ಞಾನಿಗಳಾದರು. ಆದುದರಿಂದ ಅಗ್ನಿಮೊದಲಾದ ದೇವತೆಗಳು ಇನ್ನುಳಿದ ದೇವತೆಗಳಗಿಂತಲೂ ಶ್ರೇಷ್ಠರೆನಿಸಿಕೊಂಡರು. ಯಾಕೆಂದರೆ ಇನ್ನುಳಿದ ದೇವತೆಗಳಿಗಿಂತ ಇಂದ್ರ ಅಗ್ನಿ ವಾಯುದೇವತೆಗಳು ಪ್ರಥಮದಲ್ಲಿ ಬ್ರಹ್ಮವನ್ನು ತಿಳಿದರಷ್ಟೆ? ಅಗ್ನಿ ವಾಯು

ಶಸ್ಮಾದ್ದೇವೇತಿ ಪೂರ್ವೇಣಸಂಬಂಧಃ ಏತೇದೇವಾ ಅನ್ಯಾನ್ ದೇವಾನ್ ಅತಿ ಶರಾಮಿವ ಅತ್ಯಂತಮೇವೋತ್ಕರ್ಷಂ ಪ್ರಾಪ್ತವಂತ ಇತ್ಯರ್ಥಃ ||೨೭||೨||

ಮೂ|| ತಸ್ಮಾದ್ವಾ ಇಂದ್ರೋ ಅತಿತರಾಮಿವಾನ್ಯಾನ್ ದೇ
ವಾನ್ ಸಹ್ಯೇನನ್ನೇದಿಷ್ಠಂ ಪಸ್ಪರ್ಶ ಸಹ್ಯೇನತ್ಪ್ರ
ಥಮೋ ವಿದಾಂಚಕಾರ ಬ್ರಹ್ಮೇತಿ ||೨೮||೩||

ಶಾಂ|| ಯತೋಗ್ನಿವಾಯೂ ವಿದಿತವಂತಾವಿಂದ್ರವಾಕ್ಯಾತ್ ಇಂದ್ರ ಶ್ಚೋಮಾವಾಕ್ಯಾತ್, ಪ್ರಥಮಂ ವಿದಿತವಾನ್ ಅತಿಸಮೀಪಸ್ಥಮದ್ಭುತಾಕಾರಂ ಜ್ಯೋತಿರ್ಮಯಂ ತಸ್ಮಾದ್ಧೇತೋ ರಿಂದ್ರೋನ್ಯಾನ್ ದೇವಾನತಿಶೇತೆ ಏತಾವ ತ್ಪರ್ಯಂತಮುಕ್ತಾಖ್ಯಾಯಿಕಾಮ್ನಾಯಃ ಭಕ್ತಸ್ಥಲಾಚಾರಸಂಪತ್ತಿಂವಿನಾನ ಬ್ರಹ್ಮವಿದ್ಯಾಪ್ರಾಪ್ತಿರಿತಿಪ್ರದರ್ಶನಾರ್ಥಃ. ಸಹಿ ದೇಹಾದ್ಯಭಿಮಾನರಾಹಿತ್ಯ ಪ್ರಾಧಾನ್ಯಲಕ್ಷಣ ಭಕ್ತಸ್ಥಲರಹಿತಸ್ಯ ತದಭಿಮಾನಪೂರ್ವಕ ಕಾಮಕ್ರೋ ಧಾದಿ ಯುಕ್ತಸ್ಯ ಶಿವಾದ್ವೈತ ವಿದ್ಯಾವಿರ್ಭಾವೋಸ್ತಿ | ಅಗ್ನ್ಯಾದೀನಾಂ ಸ್ವ ಕರ್ತೃಕಜಯಾಭಿಮಾನೆ ಭಕ್ತಸ್ಥಲತ್ವಾಭಾವಾತ್ ಯಕ್ಷಮೂರ್ತೇಃ ದುರ್ಜ್ಞೇ ಯತ್ವಮುಕ್ತಂ. ಅಭಿಮಾನನಾಶೇಚ ತೇಷಾಂ ಭಕ್ತಸ್ಥಲಾಪನ್ನತ್ವಾತ್ ಬ್ರಹ್ಮ ಜ್ಞಾನಮುಕ್ತಂ ತಸ್ಮಾತ್ ಬ್ರಹ್ಮವಿದ್ಯಾಸಾಧನೀಭೂತ ಭಕ್ತಸ್ಥಲಪ್ರದರ್ಶನಾ ರ್ಥೋಯಮಾಖ್ಯಾಯಿಕಾಮ್ನಾಯಃ ಸಮಾಪ್ತಃ | ಅಗ್ರೇಚ ಭಕ್ತಕರ್ತವ್ಯತಾ ಕಮಂತರ್ಲಿಂಗಧಾರಣಾಪರಪರ್ಯಾಯಮುಪಾಸನಮುಚ್ಯತೆ ||೨೮||೩||

ದೇವತೆಗಳು ಇಂದ್ರನ ಉಪದೇಶವಾಕ್ಯದಿಂದ ಬ್ರಹ್ಮವನ್ನು ತಿಳಿದುಕೊಂಡರು. ಇಂದ್ರನಾದರೂ ಉಮಾವಾಕ್ಯದಿಂದ ಮಿಕ್ಕ ದೇವತೆಗಳಿಗಿಂತಲೂ ಪ್ರಥಮದಲ್ಲಿಯೇ ಬ್ರಹ್ಮವನ್ನು ತಿಳಿದು ಕೊಂಡಿದ್ದರಿಂದ ಇಂದ್ರನು ದೇವೇಂದ್ರನಾದನು. (ಎಲ್ಲಾ ದೇವತೆಗಳಿಗಿಂತಲು ಮಿಗಿಲಾದನು) ಇಲ್ಲಿಯವರಿವಿಗೂ ಹೇಳಲ್ಪಟ್ಟ ಆಖ್ಯಾಯಿಕಾ ಗ್ರಂಥವು ಭಕ್ತಸ್ಥಲಾಚಾರಸಂಪತ್ತಿಯೊಂದಿಲ್ಲ ದಿದ್ದರೆ ಬ್ರಹ್ಮವಿದ್ಯಾವಿರ್ಭಾವವಿಲ್ಲವೆಂದು ತೋರಿಸುವದಕ್ಕೋಸ್ಕರವೆಂದು ತಿಳಿಯತಕ್ಕದ್ದು. ದೇಹಾದಿ ಅಭಿಮಾನರಹಿತನಾಗಿ ಭಕ್ತನಾಗದಿದ್ದರೆ ಕಾಮಕ್ರೋಧಾದಿಯಿಂದ ಕೂಡಿದವನಿಗೆ ಶಿವಾದ್ವೈತಜ್ಞಾನವು ಲಭಿಸುವದಿಲ್ಲವು ಅಗ್ನಿ ಮೊದಲಾದ ದೇವತೆಗಳಿಗೆ ಅಭಿಮಾನವಿದ್ದ ಕಾರಣ ಅವರು ಭಕ್ತರಾಗಲಿಲ್ಲವಾದ್ದರಿಂದಲೇ ಅವರಿಗೆ ಯಕ್ಷಮೂರ್ತಿಯು ಬ್ರಹ್ಮವೆಂದು ತಿಳಿಯದೇ ಹೋಯಿತು. ಅವರ ಅಭಿಮಾನನಾಶವಾಗಲು ಭಕ್ತರಾದ ಅವರಿಗೆ ಬ್ರಹ್ಮಜ್ಞಾನವು ಹೇಳಲ್ಪ ಟ್ಟಿತು. ಆದುದರಿಂದ ಈ ಆಖ್ಯಾಯಿಕಾಗ್ರಂಥವು ಬ್ರಹ್ಮಜ್ಞಾನಕ್ಕೆ ಸಾಧನೀಭೂತವಾದ ಭಕ್ತ

ಮೂ॥ ತಸ್ಯೈಷ ಆದೇಶೋ ಯದೇತದ್ವಿದ್ಯುತೋವ್ಯದ್ಯುತ
ದಾ೩ ಇತೀನ್ಯಮೀಮಿಷದಾ೩ ಇತ್ಯಧಿದೈವತಂ ॥೨೯॥

ಶಾಂ॥ ತಸ್ಯ ಸ್ತಂಭಾಕಾರೇಣಾವಿರ್ಭೂತಸ್ಯ ಜ್ಯೋತಿರ್ಮಯಸ್ಯ ಪರಶಿವಬ್ರಹ್ಮಣಃ ಆದೇಶಃ ಉಪಾಸನೋಪದೇಶಃ ಯತ್ ಯಸ್ಮಾತ್ ಏತತ್ ಪ್ರಕೃತಂ ಬ್ರಹ್ಮ ವಿದ್ಯುತಃ ತಟಿತಃ ಪ್ರಸಿದ್ಧಾಯಾಃ ವ್ಯದ್ಯುತದಾ ಪ್ರಕಾಶ ಇವ ಆವಿರ್ಭೂತಂ ಪುನಶ್ಚ ನ್ಯಮೀಮಿಷದಾ ನಿಮೇಷಣಮಿವ ತಿರೋಹಿತಂ ನ್ಯಮೀಮಿಷತ್ ವ್ಯದ್ಯುತದಿತ್ಯತ್ರ ಪ್ರತ್ಯಯಾರ್ಥೋಽವಿವಕ್ಷಿತಃ ಯಥಾ ವಿದ್ಯುಪ್ರಕಾಶೋಂಧಕಾರಂ ದೂರೀಕೃತ್ಯ ಯುಗಪದೇವ ಸರ್ವತ್ರ ವ್ಯಾಪ್ತೋ ಭವತಿ ತಿರೋಹಿತಶ್ಚ ಭವತಿ ತಥೈತದ್ಬ್ರಹ್ಮ ದೇವಾನಾಂ ಸ್ವಪ್ರಕಾಶಸ್ಯ ದರ್ಶನಾನಂತರಂ ತಿರೋಹಿತಮಭೂತ್ ತಸ್ಮಾದ್ವಿದ್ಯುತ್ಪ್ರಕಾಶ ತತ್ತಿರೋಭಾವ ಇವ ಬ್ರಹ್ಮ ಕ್ಷಿಪ್ರಂ ಸೃಷ್ಟ್ಯಾದಿಕಾರಿ ವರ್ತತ ಇತಿ ಜ್ಞಾತ್ವಾ, ಉಪಾಸ್ಯಂ ಏತದುಪಾಸನಂ ಚಾಂತರ್ಲಿಂಗಧಾರಣಾಪರಪರ್ಯಾಯಮಿತಿ ಬೋಧ್ಯಂ. ಏತದುಪಸಮಾನದರ್ಶನಪೂರ್ವಕೋಪಾಸನಂಚ ಅಧಿದೈವತಂ ದೇವತಾವಿಷಯಕಂ ಸರ್ವಾಂತರ್ಯಾಮಿ ಪ್ರಾಣಲಿಂಗಾಪರಪರ್ಯಾಯೇಶ್ವರದೇವತಾವಿಷಯಮಿತ್ಯರ್ಥಃ । ತಮೀಶ್ವರಾಣಾಂ ಪರಮಂ ಮಹೇಶ್ವರಂ ತಂ ದೇವತಾನಾಂ ಪರಮಂ ಚ ದೈವತಂ । ಪತಿಂ ಪತೀನಾಂ ಪ್ರಥಮಂ ಪುರಸ್ತಾತ್ ವಿದಾಮ ದೇವಂ ಪರಮೇಶಮೀಡ್ಯಂ ಇತ್ಯುಕ್ತೇಃ ॥೨೯॥೪॥

ಸ್ಥಲವನ್ನು ತೋರಿಸುವದಕ್ಕೆಂದು ಕಂಡುಬರುತ್ತದೆ. ಇಲ್ಲಿಗೆ ಭಕ್ತಸ್ಥಲದ ಪ್ರದರ್ಶನವೆಂಬ ಪ್ರಯೋಜನವುಳ್ಳ ಈ ಸಂವಾದವು ಸಮಾಪ್ತವಾಯಿತು. ಇನ್ನು ಮೇಲೆ ಅಧಿಕಾರಿಯಾದ ಭಕ್ತನಿಗೆ ಯೋಗ್ಯವಾದ ಅಂತರ್ಲಿಂಗಧಾರಣೆಯು ಅಥವಾ ಉಪಾಸನೆಯು ಹೇಳಲ್ಪಡುತ್ತದೆ. ವಿದ್ಯುತ್ತಿನ (ಮಿಂಚಿನ) ಪ್ರಕಾಶವು ಏಕಕಾಲದಲ್ಲಿ ಸಕಲಾಂಧಕಾರವನ್ನು ದೂರಮಾಡಿ ಯಲ್ಲಿಯೂ ವ್ಯಾಪಿಸಿ ಕ್ಷಿಪ್ರದಲ್ಲಿಯೇ ಅಡಗಿಹೋಗುವಂತೆ ಸ್ತಂಭಾಕಾರವಾಗಿ ಕಾಣಿಸಿಕೊಂಡಿರುವ ಬ್ರಹ್ಮರೂಪವಾದ ಈ ಯಕ್ಷಮೂರ್ತಿಯು ದೇವತೆಗಳಿಗೆ ಕಾಣಿಸಿಕೊಂಡು ಶೀಘ್ರವಾಗಿ ಅಡಗಿಹೋದುದರಿಂದ ಪರಶಿವಬ್ರಹ್ಮವು ಕ್ಷಿಪ್ರವಾಗಿ ಸೃಷ್ಟ್ಯಾದಿ ಕಾರ್ಯಗಳನ್ನು ಮಾಡಬಲ್ಲದೆಂದು ತಿಳಿದು ಅದನ್ನು ಉಪಾಸನೆಯಂ ಮಾಡಬೇಕು. ಈ ಉಪಾಸನೆಗೇನೇ ಅಂತರ್ಲಿಂಗಧಾರಣೆಯನ್ನುವರು. ಇದುವೇ ಅಧಿದೈವತೋಪಸನೆಯು ಸರ್ವಾಂತರ್ಯಾಮಿಯಾದ ಈಶ್ವರನೇ ದೇವತೆಯಾಗಿರುವುನೆಂದು ತಿಳಿಯಬೇಕಲ್ಲದೆ ವಿಷ್ಣ್ವಾದಿ ದೇವತಾವಿಷಯಕವಾದುದೆಂದು ತಿಳಿಯಬಾರದು. ಪರಶಿವನಲ್ಲಿಯೇ ಪರದೈವತ್ವವಲ್ಲದೆ ಇತರ ದೇವತೆಗಳಲ್ಲಿಲ್ಲವು. ಈ ವಿಷಯದಲ್ಲಿ ಈಶ್ವರರುಗಳಿಗೆ ಮಹೇಶ್ವರನೂ ದೇವತೆಗಳಿಗೆ ಪರದೈವನೂ ಪತಿಗಳಿಗೆ ಪತಿಯೂ ಆಗಿರುವ ಪರಶಿವನನ್ನು ತಿಳಿದೆವು ಎಂಬ ವಾಕ್ಯವು ಪ್ರಮಾಣವಾಗಿದೆ ॥೨೯॥೪॥

ಮೂ॥ಅಥಾಧ್ಯಾತ್ಮಂ ಯದೇತದ್ಗಚ್ಛತೀವ ಚ ಮನೋಽನೇ
ನೆಚೈತದುಪಸ್ಮರತ್ಯ ಭೀಕ್ಷ್ಣಂ ಸಂಕಲ್ಪಃ॥೩೦॥

ಶಾಂ॥ ಅಥ ಅನಂತರಮಧ್ಯಾತ್ಮಂ ಉಪದೇಶಃ ಉಚ್ಯತೆ ಇತಿಶೇಷಃ । ಅರ್ಥಾತ್ ಆಧ್ಯಾತ್ಮಿಕೋಪದೇಶಃ ಇದಾನೀಮುಚ್ಯತೆ ಇತ್ಯರ್ಥಃ ಮನಃ ಮೇ ವಿಷಯಾಸಕ್ತಂ ಚಿತ್ತಂಗಚ್ಛತೀವ ವಿಷಯದೇಶಂ ಪ್ರತಿ ಯಥಾಗಚ್ಛತಿ ತಥಾನಿರ್ವಿಷಯಂಸತ್ ಯದೇತತ್ ಶ್ರೋತ್ರಸ್ಯಶ್ರೋತ್ರ್ಯಮಿತ್ಯುಪಕ್ರಮವಾಕ್ಯ ನಿರ್ದಿಷ್ಟಂ ಷಟ್ಸ್ಥಲರೂಪಂಬ್ರಹ್ಮ ತತ್ಪ್ರತಿಚಗಚ್ಛತಿ. ಅವಿನಾಭಾವೇನ ಸಂಬಂಧಂಭವತಿ. ಅನೇನಚ ಮನಸಾಂತು ನಿರ್ವಿಷಯೇಣ ಚಿತಿಶಕ್ತಿರೂಪೇಣ ಏತತ್ ಸ್ವಸ್ವರೂಪಂಬ್ರಹ್ಮ ಉಪಸ್ಮರತಿ । ಸ್ವಕೀಯಸರ್ವಾತ್ಮಕ ಪರಶಿವಬ್ರಹ್ಮಸ್ವರೂಪ ವಿಸ್ಮರಣಮಪಸಾರ್ಯ ಸರ್ವಾತ್ಮಕಶಿವೋಽಹಮಿತಿ ಪರಶಿವಬ್ರಹ್ಮಸ್ವತಾದಾತ್ಮ್ಯೇನಸ್ಮರತಿ ಅಭೀಕ್ಷ್ಣಂ ಪೌನಃಪುನ್ಯೇನ ಸರ್ವಾತ್ಮಶಿವೋಽಹಮಸ್ಮೀತಿ ಸಾಧಕ

ಇನ್ನು ಮೇಲೆ ಆಧ್ಯಾತ್ಮಿಕೋಪದೇಶವು ಹೇಳಲ್ಪಡುತ್ತದೆ. ವಿಷಯಾಸಕ್ತವಾದ ಚಿತ್ತವು ವಿಷಯಗಳಿರುವ ಪ್ರದೇಶಕ್ಕೆ ಹೋಗಿ ವಿಷಯಾಕಾರವಾಗದಂತೆ ಅಂತರ್ಮುಖವಾಗಿ ಪರಶಿವರೂಪ ಬ್ರಹ್ಮವನ್ನೇ ಹೊಂದಿ ಅಖಂಡವಾದ ಪರಶಿವಬ್ರಹ್ಮಾಕಾರವನ್ನೇ ಹೊಂದುವುದು. ಈ ಮೇರೆಗೆ ಬ್ರಹ್ಮಾಕಾರವಾದ ನಿರ್ವಿಷಯವಾದ ಮನಸ್ಸಿಗೆ ಚಿತಿಶಕ್ತಿಯೆಂದು ಶೈವಶಾಸ್ತ್ರದ ರೂಢಿಯು. ಮನುಷ್ಯನು ತನ್ನ ಮನಸ್ಸನ್ನು ಚಿತಿಶಕ್ತಿರೂಪವನ್ನಾಗಿ ಮಾಡಿಕೊಂಡರೆ ಅದುವೇ ಶಕ್ತಿವಿಕಾಸರೂಪವಾದ ಮೋಕ್ಷವು. ಈ ಮೋಕ್ಷಕ್ಕೆ ಚಿತ್ತವು ನಿರ್ವಿಷಯವಾಗುವದೇ ಕಾರಣವು. ಈ ವಿಷಯದಲ್ಲಿ ಮನಏವ ಮನುಷ್ಯಾಣಾಂ ಕಾರಣಂಬಂಧಮೋಕ್ಷಯೋಃ। ಬಂಧಾಯ ವಿಷಯಾಸಕ್ತಂ ಮುಕ್ತ್ಯೈನಿರ್ವಿಷಯಂ ಸ್ಮೃತಂ ಎಂಬ ವಾಕ್ಯವು ಪ್ರಮಾಣವಾಗಿರುವುದು. ಉಪಾಸಕನು ನಿರ್ವಿಷಯವಾದ ಚಿತ್ತದಿಂದ ತನಗಭಿನ್ನವಾದ ಬ್ರಹ್ಮವನ್ನು ಸ್ಮರಿಸುವನು. ಅಂದರೆ ಸರ್ವಾತ್ಮಕ ಪರಶಿವಬ್ರಹ್ಮವು ನಾನೇ ಎಂಬುವ ತನ್ನ ಸ್ವರೂಪದ ವಿಸ್ಮರಣೆಯನ್ನು ದೂರಮಾಡಿ ಸರ್ವಾತ್ಮಕಶಿವನೇ ನಾನೆಂಬುದಾಗಿ ತನ್ನ ಸ್ವರೂಪವನ್ನು ಪುನಃ ಪುನಃ ಸ್ಮರಿಸಲು ಸ್ವರೂಪ ಸಾಕ್ಷಾತ್ಕಾರವಂ ಪಡೆಯುವನು. ತನ್ನ ಸ್ವರೂಪವನ್ನು ಪುನಃ ಪುನಃ ಸ್ಮರಿಸುವದಕ್ಕೆ ಸಂಕಲ್ಪವೆಂದು ಹೆಸರು. ಈ ಸಂಕಲ್ಪದಿಂದ ಸ್ವರೂಪ ಸಾಕ್ಷಾತ್ಕಾರವಾಗಿ ಮುಕ್ತನಾಗುವನು. ಈ ಸಾಕ್ಷಾತ್ಕಾರಕ್ಕೆ ಸಾಧನವಾದ ಉಪದೇಶವೇ ಆಧ್ಯಾತ್ಮಿಕೋಪದೇಶವು. ಯಾವ ಪರಶಿವಬ್ರಹ್ಮವು ತನ್ನ ಶಕ್ತಿಯ ಸ್ವಾತಂತ್ರ್ಯದಿಂದ ಷಟ್‌ಸ್ಥಲರೂಪವಾಗಿದೆಯೋ ? ಆ ಪರಶಿವಬ್ರಹ್ಮವೇ ವನವೆಂಬ ಹೆಸರುಳ್ಳದ್ದು. ವನ ಇಷ್ಟಶಬ್ದಗಳು ಒಂದೇ ಅರ್ಥವುಳ್ಳವುಗಳು. ವನಎಂಬ ಧಾತುವು. ಸಂಭಜನ (ಸೇವಾ ಅಥವಾ ಪ್ರಾರ್ಥನಾ) ಎಂಬರ್ಥವುಳ್ಳದ್ದು ಇಷ್ಟ ಅಂದರೆ ಇಚ್ಛೆಯೆಂಬರ್ಥವು. ಆದುದರಿಂದ ವನ ಅಂದರೂ ಇಷ್ಟವೆಂದರೂ

ಸ್ಯ ಯಾ ಇಚ್ಛಾಸಸಂಕಲ್ಪಃ | ಶಿವಾದ್ವೈತಭಾವದಾರ್ಢ್ಯೇಚಸ್ವಾಭಿನ್ನತ್ವೇನ ಪರಶಿವಬ್ರಹ್ಮ ಸಾಕ್ಷಾತ್ಕರೋತೀತಿ | ಏತಾದೃಶಸಾಕ್ಷಾತ್ಕಾರಸಾಧನೋಪದೇಶ ಏವ | ಆಧ್ಯಾತ್ಮಿಕೋಪದೇಶಾ ಇತ್ಯರ್ಥಃ ||೩೦||೫||

ಮೂ|| ತದ್ಧ ತದ್ವನಂನಾಮತದ್ವನಮಿತ್ಯುಪಾಸಿತವ್ಯಂ | ಸಯುಪಿತದೇವಂ ವೇದಾಭಿಹ್ಯೈನಂ ಸರ್ವಾಣಿಭೂತಾನಿ ಸಂವಾಂಛಂತಿ ||೩೧||

ಶಾಂ|| ತದ್ಧೇತಿ ಕಿಯತ್ ಸ್ವಶಕ್ತಿಸ್ವಾತಂತ್ರ್ಯೇಣ ಷಟ್ಸ್ಥಾವಚ್ಛಿನ್ನ ಲಿಂಗ ರೂಪಂಜಾತಂ ತದ್ಧ ಬ್ರಹ್ಮಕಿಲತದ್ವನಂನಾಮಸರ್ವೈಃ ಪೃಥಿವ್ಯಾದ್ಯಾತ್ಮಾಂತ ಭೂತಾಂಗೈರಂಗಸ್ಥಲೈರ್ವನಂ ಪ್ರಾರ್ಥನೀಯಂ | ವನಸಂಭಜನೆ ಇತಿಧಾತೋಃ | ಸರ್ವೈರಂಗಸ್ಥಲೈರ್ವನನೀಯತ್ವಾತ್ ಪ್ರಾರ್ಥನಾವಿಷಯತ್ವಾತ್ ಪ್ರಾರ್ಥನಾಚ ಇಚ್ಛಾತದ್ವಿಷಯತ್ವಾತ್ | ಅತ್ರವನಪದಂ ಇಷ್ಟಲಿಂಗನಾಮಕ ಮಿತ್ಯರ್ಥಃ || ಸರ್ವೈರಪ್ಯಂಗಸ್ಥಲಾಪನ್ನೈಃ ಸ್ವಸ್ವಸ್ಥೂಲಭೂತಷಟ್ಕಶುದ್ಧಿರೂಪ ಸಾಮರಸ್ಯಾಯ ಇಷ್ಟಲಿಂಗಗತಾಚಾರಾದಿ ಲಿಂಗಾನಾಂ ಪ್ರಾರ್ಥನೀಯತ್ವಾತ್ ವನನೀಯಸ್ಯವನಸ್ಯೇಷ್ಟಲಿಂಗಸ್ಯೈಕಾರ್ಥಕತ್ವಾತ್. ಅಗ್ರೇಸರ್ವಾಣಿ ಭೂ

ಒಂದೇ ಅರ್ಥವು. ವೀರಶೈವನು ಸ್ಥೂಲಭೂತಗಳನ್ನು ಸೂಕ್ಷ್ಮಭೂತಗಳನ್ನೂ ಶುದ್ಧಿಮಾಡಿಕೊಳ್ಳದಿದ್ದರೆ ಶಿವಪೂಜಾದಿ ಕರ್ಮಗಳಿಗೆ ಅಧಿಕಾರಿಯೇ ಆಗುವದಿಲ್ಲವಾದುದರಿಂದ ಮೊದಲು ಸ್ಥೂಲಭೂತ ಶುದ್ಧಿ (ಜಯ)ಯನ್ನು ಮಾಡಿಕೊಳ್ಳಬೇಕು. ವೀರಶೈವಗುರುಸಂಪ್ರದಾಯಜ್ಞನಾದ ಗುರುವಿನ ಮುಖದಿಂದ ಷಡುದ್ಯಾತಾದಿ ಏಕಾಂತವಾದ ಪ್ರಯೋಗಗಳಿಂದ ಮೊದಲು ಪೃಥಿವ್ಯಾದಿಗಳ ಗುಣಗಳನ್ನು ಕಳೆದು, (ಆಯಾಯ ಲಿಂಗದಲ್ಲಿ ಲೀನಮಾಡಿ) ಪೃಥಿವೀ ಮೊದಲುಗೊಂಡು ಆತ್ಮಾಂತಗಳಾದ ಸ್ಥೂಲಭೂತಗಳ ಅಂಶಗಳನ್ನು ಇಷ್ಟಲಿಂಗದಲ್ಲಿರುವ ಆರು ಲಿಂಗಗಳಲ್ಲಿ ಲಯಂಗೊಳಿಸಿ ಉಳಿದ ಶುದ್ಧ ಸೂಕ್ಷ್ಮಭೂತಗಳನ್ನು ಅಂಗಗಳನ್ನಾಗಿ ಮಾಡಿಕೊಂಡು ಭಕ್ತಾದಿಸ್ಥಲಗಳನ್ನು ಸಮರಸಂಗೊಳಿಸಲು ಆಗ ಭೂತಗಳು ಜಯವಾಯಿತೆಂದು ತಿಳಿಯಬೇಕು. ಇಂಥ ಅಂಗಸ್ಥಲಗಳಿಂದ ಆ ಬ್ರಹ್ಮವು ಪ್ರಾರ್ಥಿಸಲ್ಪಡಲು ಯೋಗ್ಯವಾದುದರಿಂದ ಅದಕ್ಕೆ ವನವೆಂದು ಹೆಸರು (ಇಷ್ಟಲಿಂಗವೆಂದು ಹೆಸರು.) ಈ ಪ್ರಕಾರವಾಗಿ ಸೂಕ್ಷ್ಮ ಸ್ಥೂಲಭೂತಗಳನ್ನು ಶುದ್ಧಿಗೊಳಿಸುವದಕ್ಕಾಗಿ ತನಗೆ ಅಭಿನ್ನವಾಗಿ ಇಷ್ಟಲಿಂಗದಲ್ಲಿ ಸಂಯಮ ಧ್ಯಾನ ಧಾರಣ ಸಮಾಧಿಗಳನ್ನು ಆಚರಿಸಲು ಭೂತಗಳ ಜಯವಾಗುವದು. ಇಷ್ಟಲಿಂಗವು ಭೂತಗಳಿಂದ ಸೇವಿಸಲು ಯೋಗ್ಯವಾದುದೆಂದು ತಿಳಿದು, ಅಲ್ಲಿ ಸಂಯಮವನ್ನು ಮಾಡಲು ಆ ಉಪಾಸಕನಿಗೆ ಭೂತಗಳು ವಶಗಳಾಗಿ ಉಪಾಸಕನ ಇಚ್ಛಾನುಸಾರವಾಗಿರುವವು. ಅವುಗಳಿಗೆ ಉಪಾಸಕನು ಅಧೀನನಾಗದೆ ಅವುಗಳನ್ನೇ ತನ್ನಧೀನದಲ್ಲಿಟ್ಟುಕೊಳ್ಳುವನು. ಅಚೇತನಗಳಾದ ಭೂತಗಳೂ

ತಾನಿ ಸಂವಾಂಛಂತೀತ್ಯುಕ್ತ್ವಾ ಭೂತಶುದ್ಧಿರೂಪ ಭೂತಜಯಸ್ಯ ವಕ್ಷ್ಯಮಾಣತ್ವಾತ್. ಸ್ಥೂಲಷಡ್ಭೂತಜಯಾಯ. ಸ್ಥೂಲಷಡ್ಲಿಂಗಗರ್ಭೇಷ್ಟಲಿಂಗಸ್ಯೈವ ಸಂಯಮ ಏಕ್ಷಯತ್ವಮಿತಿವಕ್ತುಮೌಚಿತ್ಯಾತ್| ಏತಾವತಾ ಕಿಂ ಜಾತಮಿತಿಚೇತ್ | ತದುಕ್ತಂ ಬ್ರಹ್ಮವನಮಿತಿ ಇಷ್ಟಲಿಂಗರೂಪಮಿತಿ ಜ್ಞಾತ್ವಾ ಉಪಾಸಿತವ್ಯಂ. ಸ್ಥೂಲಭೂತಷಟ್ಕಂ ಸ್ಥೂಲಷಡ್ಲಿಂಗ ಗರ್ಭೇಷ್ಟಲಿಂಗೇ ಸಂಯೋಜನೀಯಂ ‹‹ಉಪಾಸಸ್ಯೈವ ಸಂಯೋಗಃ ಸಂಯೋಗೋದ್ವೈತಸಲ್ಲಯಃ›› ಇತ್ಯುಕ್ತತ್ವಾತ್ | ಸಂಭಜನೀಯೇಷ್ಟ ಲಿಂಗೋಪಾಸನೆ | ಕಿಂಫಲಮಿತ್ಯತ್ರಾಹ. ‹‹ಸಯ ಇತಿ›› ಯಃ ಏವಂ ಸರ್ವೈರಂಗೈಃ ಪ್ರಾರ್ಥನೀಯಮಿತಿವೇದ. ಉಪಾಸ್ತೆ ಸ ಏತತ್ ವನಂಭವತಿ. ವನನೀಯೇಷ್ಟಲಿಂಗರೂಪೋಭವತಿ ಕಿಂಚೈಸಂಹವನಂಕಿಲೋಪಾಸಕಂ. ಸರ್ವಾಣಿ ಭೂತಾನಿ ಷಟ್ಸಂಖ್ಯಾಕಾನ್ಯಪಿ. ಅಭಿಭಿತಃ ಸರ್ವಪ್ರಕಾರೇಣ ಸಂವಾಂಛಂತಿ ಉಪಾಸಕಸ್ಯೇಚ್ಛಾನುಸಾರೇಣ ಸಮ್ಯಗಿಚ್ಛಂತಿ, ತಸ್ಯವಶವರ್ತಿನೋಭವಂತೀತ್ಯರ್ಥಃ | ಅನೇನಮಂತ್ರೇಣ ಇಷ್ಟಲಿಂಗೋಪಾಸನಮುಕ್ತಮಿತಿವೇದಿತವ್ಯಂ ||೩೧||೬||

ಮೂ|| ಉಪನಿಷದಂಭೋ ಬ್ರೂಹೀತ್ಯುಕ್ತಾತೆ ಉಪನಿಷ
ದ್ಬ್ರಾಹ್ಮೀಂವಾವ ತೆ ಉಪನಿಷದಮಬ್ರೂಮೇತಿ ||

ಕೂಡ ಉಪಾಸಕನ ಆಜ್ಞಾನುಸಾರವಾಗಿಯೇ ನಡೆಯುವವು. ಪುರಾಣೇತಿಹಾಸಗಳಲ್ಲಿ ಹೇಳಿದ ಕೆಲವು ಅದ್ಭುತ ಕಾರ್ಯಗಳು ಯೋಗದಿಂದ ಸಿದ್ಧಿಸುತ್ತವೆಂದು ಕಂಡುಬರುವದರಿಂದ ಅವುಗಳನ್ನೆಲ್ಲ ಸುಳ್ಳು ಎಂದು ಹೇಳಲಿಕ್ಕೆ ಬರುವದಿಲ್ಲವು. ಆ ಕಾರ್ಯಗಳನ್ನು ಮಾಡಿದವನು ಭೂತಜಯ ಮಾಡಿಕೊಂಡಿದ್ದರೆ ಅವನ ಆಜ್ಞೆಯ ಮೇರೆಗೆ ಅಚೇತನವೂ ಕೂಡ ಮಾತನಾಡಬಹುದು. ಹೀಗೆ ಭೂತಜಯವನ್ನು ಪಡೆದುಕೊಂಡ ಶಿವಯೋಗಿಯನ್ನು ಇಚ್ಛಾನುಸಾರವಾಗಿ ಸಮಸ್ತ ಭೂತಗಳೂ ಇಚ್ಛಿಸುತ್ತವೆಂದು ಈ ಮಂತ್ರವು ಹೇಳುವದರಿಂದ ಭೂತಜಯವೂ. ಈ ಭೂತಜಯಕ್ಕಾಗಿ ಇಷ್ಟಲಿಂಗೋಪಾಸನೆಯೂ ಹೇಳಲ್ಪಟ್ಟಿತೆಂದು ತಿಳಿಯತಕ್ಕದ್ದು. ಬಾಲ್ಯದಲ್ಲಿ ನಮಗೆ ಅನೇಕ ಹೇಯಪದಾರ್ಥಗಳು ಆದರಣೀಯಗಳಾಗಿ ಸ್ವಲ್ಪ ಪ್ರೌಢಾವಸ್ಥೆಗೆ ಬರಲು ಆ ಹೇಯ ಪದಾರ್ಥಗಳನ್ನು ತುಚ್ಛೀಕರಿಸಿ, ಅವುಗಳ ಸ್ಮರಣೆಯೂ ಕೂಡ ತಪ್ಪಿಹೋಗುವಂತೆ, ಭೂತಗಳ ಅಹಂಕಾರ ಮಮಕಾರಗಳನ್ನು ಬಿಟ್ಟು ಅವುಗಳನ್ನು ತುಚ್ಛೀಕರಿಸಿ ಅವುಗಳನ್ನು ಮರೆತು ಇಷ್ಟಲಿಂಗವೇ ನಾನು ಎಂದು ಜ್ಞಾನವು ದೃಢವಾಗಲು ಭೂತಜಯವೆಂದು ತಿಳಿಯಬೇಕೆಂಬುವದೇ ಶಾಂಕರೀಕಾರನ ತಾತ್ಪರ್ಯವು. ||೩೧||೬||

"ಆತ್ಮನಾವಿಂದತೇವೀರ್ಯಂ›› ಎಂಬಲ್ಲಿ ವಿದ್ಯಾರೂಪವಾದ ವೀರ್ಯಪ್ರಾಪ್ತಿಯು ಆತ್ಮಶುದ್ಧಿಯಿಂದ ಆಗುತ್ತದೆಂದು ಹೇಳಲ್ಪಟ್ಟಿತು. ಆದುದರಿಂದ ಉಪನಿಷತ್ತನ್ನು ಹೇಳು ಎಂದು

ಶಾಂ|| ಆತ್ಮನಾವಿಂದತೇ ವೀರ್ಯಮಿತ್ಯಸ್ಮಿನ್ ವಿದ್ಯಾರೂಪವೀರ್ಯಪ್ರಾಪ್ತಿಃ ಶುದ್ಧಾತ್ಮನಾ ಭವತೀತ್ಯುಕ್ತಂ. ತಸ್ಮಾದುಪನಿಷದಂಭೋ ಬ್ರೂಹೀತಿ ಶಿಷ್ಯೇಣ ಪೃಷ್ಟೋ ಗುರುಃ ಪುನರಾಹ ಉಕ್ತಾತ ಉಪನಿಷದಿತಿ. ಸಾಕ್ಷಾನ್ಮೋಕ್ಷಪ್ರಾಪಕ ವಿದ್ಯಾವೀರ್ಯಾಪರಪರ್ಯಾಯ ಚಿಚ್ಛಕ್ತಿರೂಪೋಪನಿಷದುಕ್ತೈವ ತೇತುಭ್ಯಂ ಬ್ರಾಹ್ಮೀಂ ಬ್ರಹ್ಮಣಃ ಪರಶಿವಸ್ಯ ಇಯಂ ಚಿಚ್ಛಕ್ತಿರೂಪಾ ತಾಂ ವೀರ್ಯರೂಪಾಮುಪನಿಷದಂ ವಿದ್ಯಾಂ ಯಯಾಸಾಮೀಪ್ಯೇನ ಸಾಮರಸ್ಯಲಕ್ಷಣೇನ ನಿತರಾಂ ಪರಶಿವಬ್ರಹ್ಮಪ್ರಾಪ್ಯ ಕೃತ್ರಿಮಾಹಂಕಾರಾದೀನ್ ಶಿಥಿಲೀಕೃತ್ಯ ಸ್ವಶಕ್ತಿ ಸಂಕೋಚಾಖ್ಯಾತಿಂ ಸಾದಯತ್ಯಪಸಾರಯತಿಶ್ಚೈವ ಇತ್ಯುಪನಿಷತ್ | ತಾಮಬ್ರೂಮ್ಯೈವ ಉಕ್ತವಂತಏವ ಅತೋಽನ್ಯಾಮಾತ್ಮಶುಧ್ಯಾಪಯಿಕೀಮುಪನಿಷದಂ ವಕ್ಷ್ಯಾಮಃ ಶೃಣ್ವಿತ್ಯರ್ಥಃ ||೩೨||೭||

ಮೂ. ತಸ್ಯೈತಪೋ ದಮಃ ಕರ್ಮೇತಿಪ್ರತಿಷ್ಠಾ । ವೇದಾಃ ಸರ್ವಾಂಗಾನಿ ಸತ್ಯಮಾಯತನಂ ||೩೩||

ಶಾಂ|| ತಸ್ಯೈ ಯಾ ತವಾಗ್ರೇ ವಿದ್ಯಾರೂಪಾ ಉಪನಿಷದುಕ್ತಾ ತಸ್ಯೈ ತಪಃ ಕರ್ಮಚ ।।ಶಿವಾರ್ಥೇ ದೇಹಸಂಶೋಷಸ್ತಪಃ ಕೃಚ್ಛ್ರಾದಿರ್ನೋಮತಂ |

ಶಿಷ್ಯನು ಕೇಳಲಾಗಿ, ವಿದ್ಯಾಸ್ವರೂಪವಾದ ಉಪನಿಷತ್ತನ್ನು ಹಿಂದೆಯೇ ಹೇಳಿದ್ದೇವೆ. ಸಾಕ್ಷಾತ್ಸಂಬಂಧದಿಂದ ಮೋಕ್ಷಕ್ಕೆ ಕಾರಣವಾದ ವಿದ್ಯಾವೀರ್ಯಗಳೆಂದು ಎರಡು ಪರ್ಯಾಯನಾಮಗಳುಳ್ಳ ಚಿಚ್ಛಕ್ತಿರೂಪವಾದ ಉಪನಿಷತ್ತನ್ನು ಹೇಳಿಯೇ ಇರುವೆವು. ಬ್ರಹ್ಮವಿದ್ಯೆಗೆ ಉಪನಿಷತ್ತೆಂದು ಹೆಸರು ಬರಲಿಕ್ಕೆ ಕಾರಣವೇನಂದರೆ- ಉಪ ಸಮೀಪದಲ್ಲಿ ಅತ್ಯಂತವಾಗಿ ನಾಶಮಾಡತಕ್ಕದು ಯಾವದುಂಟೋ ಅದು ಉಪನಿಷತ್ತು. ಬ್ರಹ್ಮವಿದ್ಯೆಯು ಸಾಮರಸ್ಯರೂಪವಾದ ಸಾಮೀಪ್ಯದಿಂದ ಸಂಸಾರಕ್ಕೆ ಕಾರಣವಾದ ಅಜ್ಞಾನ ಎಂಬ ಮೂಲ ಮಲವನ್ನೇ ನಾಶಮಾಡುತ್ತದಾದ ಕಾರಣ, ಬ್ರಹ್ಮವಿದ್ಯೆಗೆ ಉಪನಿಷತ್ತೆಂದು ಹೆಸರು, ಎಲೈ ಶಿಷ್ಯನೆ! ಇಂದ್ರಬ್ರಹ್ಮವಿದ್ಯಾರೂಪವಾದ ಉಪನಿಷತ್ತನ್ನು ನಿನಗೆ ಹೇಳಿದೆನು. ಇನ್ನು ಮೇಲೆ ಈ ವಿದ್ಯೆಗೆ ಸಾಧಕವಾದ ಆತ್ಮಶುದ್ಧಿ ಎಂಬ ಉಪಾಯದಲ್ಲಿ ಅಂತರ್ಗತವಾದ ಉಪನಿಷತ್ತನ್ನು ನಿನಗೆ ಹೇಳುವೆನು ಎಂದು ಶ್ರುತಿಯು ಗುರುರೂಪದಿಂದ ಹೇಳುವುದು. ||೩೨||೭||

ಎಲೈ ಶಿಷ್ಯನೆ! ನಿನಗೆ ಯಾವ ಉಪನಿಷತ್ತು ಹೇಳಲ್ಪಟ್ಟಿತೋ? ಇದಕ್ಕೆ ಶಿವಪೂಜೆಗೋಸ್ಕರ ಪೂಜಾದ್ರವ್ಯಗಳನ್ನು ಸಂಪಾದಿಸುವ ವಿಷಯದಲ್ಲಿ ದೇಹಶ್ರಮವೆಂಬ ತಪಸ್ಸು ಶಿವಪೂಜಾಕರ್ಮವು ದಮವೆಂಬುವ ಗುಣವು ಇವುಗಳೇ ಸಾಧನಗಳಾಗುವವಲ್ಲದೆ, ಕೃಚ್ಛ್ರಾದಿ ತಪಸ್ಸು ಬಾಹ್ಯಯಾಗಾದಿಗಳೂ ಸಾಧನಗಳಾಗುವದಿಲ್ಲವು. ಅವು ಕೇವಲಶಿವಭಕ್ತಿಯಗೋಸ್ಕರವಾಗಿ ವೇದಶಾಸ್ತ್ರಗಳಲ್ಲಿ ಹೇಳಲ್ಪಟ್ಟವೆಯುಲ್ಲದೆ ಮುಖ್ಯವಾದ ಮೋಕ್ಷಫಲಕ್ಕಾಗಲೀ

ಶಿವಾರ್ಚಾಕರ್ಮ ವಿಜ್ಞೇಯಂ ಬಾಹ್ಯಂ ಯಾಗಾದಿನೋಚ್ಯತೆ || ಇತ್ಯಾದಿನೋಕ್ತಂ ವೀರಶೈವೈರಾದರಣೀಯಮಿತಿಜ್ಞೇಯಂ. ನತುಪರ್ವೈರಪ್ಯುಪಗತಂ ಕೃಚ್ಛ್ರಾದಿ | ಬಹುವಿತ್ತವ್ಯಯಾಯಾಸಸಾಧ್ಯ ಜ್ಯೋತಿಷ್ಟೋಮ ಯಾಗಾದಿಕರ್ಮ | ಅಗ್ನಿಷ್ಟೋಮಾದಯೋಯಜ್ಞಾ ಅಶ್ವಮೇಧಾವಸಾನಕಾಃ | ಸರ್ವೇಪಿ ಶಿವಭಕ್ತ್ಯರ್ಥಂ ನಿಶ್ಚಿತಾ ವೇದಶಾಸ್ತ್ರಯೋಃ || ಇತ್ಯುಕ್ತೇಸ್ತತ್ಫಲಸ್ಯಾಪಿನಶ್ವರತ್ವಾಚ್ಚ "ಯಥೇಹಕರ್ಮಚಿತೋಲೋಕಃ ಕ್ಷೀಯತೆ ಏವಮೇವಾಮುತ್ರಪುಣ್ಯಚಿತೋಲೋಕಃ ಕ್ಷೀಯತೆ" ಇತಿಶ್ರುತೇಃ ಬಾಹ್ಯಕರ್ಮಸ್ವೀಕಾರೆ ತತ್ಫಲಸ್ಯಾಪ್ಯನಿತ್ಯತ್ವಾಪತ್ತೇಃ ದಮಶ್ಚ ಬಾಹ್ಯೇಂದ್ರಿಯ ನಿಗ್ರಹರೂಪಃ | ಪ್ರತಿಷ್ಠಾ ವಿದ್ಯಾವಿರ್ಭಾವಹೇತುರಿತ್ಯರ್ಥಃ. ಶಿವಾರ್ಚಾದಿಕರ್ಮಸದ್ಭಾವೆ ಸಾಪ್ರತಿತಿಷ್ಠತಿ ತದಭಾವೆ ಸಾನ ಪ್ರತಿತಿಷ್ಠತೀತಿ ಶಿವಪೂಜಾದಿಕಂ ವಿದ್ಯಾವಿರ್ಭಾವಹೇತುರ್ಭವತಿ ದಮಸ್ಯಾಪಿ ವಿದ್ಯಾಪ್ರಯೋಜಕತ್ವಾತ್ ವಿದ್ಯಾಸಾಧನಘಟಕತ್ವಮುಕ್ತಮಿತಿಜ್ಞೇಯಂ ಉಕ್ತಂಚ ಸಿದ್ಧಾಂತಶಿಖಾಮಣೌ ರೇಣುಕಭಗವತ್ಪಾದೈಃ | ತಮೋ

ಅಥವಾ ಮುಖ್ಯ ಫಲಪರ್ಯವಸಾಯಿಯಾದ ವಿದ್ಯೆಗೇ ಆಗಲೀ ಉಪಯುಕ್ತಗಳಾಗುವದಿಲ್ಲವು ಅನಿತ್ಯ ಸ್ವರ್ಗಾದಿ ಸುಖಕ್ಕೇನೆ ಕಾರಣಗಳಾಗುವವು. ಸ್ವರ್ಗಾದಿ ಅನಿತ್ಯ ಫಲವನ್ನು ಅಪೇಕ್ಷಿಸದಿರುವ ಕೇವಲ ಮುಮುಕ್ಷುಗಳಾದ ವೀರಶೈವನಿಗೆ ಬಾಹ್ಯ ಯಾಗಾದಿ ಕರ್ಮಗಳು ಅನುಷ್ಠೇಯಗಳಲ್ಲವು. ಹಾಗಾದರೆ ಆ ವೈದಿಕ ಕರ್ಮಗಳನ್ನೂ, ಅವುಗಳನ್ನೂ ಪ್ರತಿಪಾದಿಸುತ ವೇದಗಳ ಪೂರ್ವಭಾಗವನ್ನು ವೀರಶೈವನು ಬಿಟ್ಟರೆ ಬೌದ್ಧಾದಿಗಳಂತೆ ಅವೈದಿಕನಾಗಬಹುದಲ್ಲವೇ ? ಅಂದರೆ ವೀರಶೈವನಿಗೆ ಪೂರ್ವಕಾಂಡೀಯ ಕರ್ಮಗಳಿಂದ ಪ್ರಯೋಜನವಿಲ್ಲವು ಅಂಥ ಅನಿತ್ಯಫಲಾಪೇಕ್ಷೆಯುಳ್ಳವನೇ ಅವುಗಳನ್ನು ಆಚರಿಸುವನು. ಸರ್ವೋತ್ತಮಾಧಿಕಾರಿಯಾದ ವೀರಶೈವನು ಕೇವಲ ಜ್ಞಾನಕಾಂಡದಲ್ಲಿ ಹೇಳಿದ ಕರ್ಮಗಳನ್ನು ಮಾತ್ರ ಆಚರಿಸುವದರಿಂದ. ಇವನು ನಿಂದ್ಯನಾಗುವದಿಲ್ಲವು. ಪೂರ್ವಕಾಂಡದಲ್ಲಿ ಹೇಳಿರುವ ಕರ್ಮಗಳನ್ನು ಆಚರಿಸುವವನಿಗೆ ನಿತ್ಯವಾದ ಮೋಕ್ಷಫಲವು ಲಭಿಸುವದಿಲ್ಲವೆಂತಲೂ ಆ ಪೂರ್ವಕಾಂಡದಲ್ಲಿರುವ ಕರ್ಮಗಳು ನಮಗೆ ಸಮ್ಮತಗಳಲ್ಲವೆಂತಲೂ ನಾವು ಹೇಳುವದಿಲ್ಲವು. ಆದರೆ ಬಾಹ್ಯಕರ್ಮಗಳು ಉತ್ತಮಾಧಿಕಾರಿಯಾದ ಲಿಂಗಾಂಗಿಗೆ ಮಾತ್ರ ಯೋಗ್ಯವಲ್ಲವು. ಯಾಕೆಂದರೆ "ವೀರಶೈವಕುಲೇಜನ್ಮ ಪರಮಂ ದುರ್ಲಭಂ ಸ್ಮೃತಂ" ಎಂಬಂತೆ ಪೂರ್ವಜನ್ಮದಲ್ಲಿ ಪಶುಕರ್ಮಗಳನ್ನಾಚರಿಸಿ ಅದರಿಂದುಂಟಾದ ಪುಣ್ಯಪ್ರಭಾವದಿಂದಲೇ ವೀರಶೈವನಾಗಿ ಹುಟ್ಟುವನು. ಅರ್ಥಾತ್ ಶಿವಭಕ್ತಿ ಹುಟ್ಟುವದಕ್ಕಾಗಿಯೇ ಬಾಹ್ಯಕರ್ಮಗಳು ಅವಶ್ಯಕವು. ಶಿವಭಕ್ತಿಯು ಹುಟ್ಟಿದಮೇಲೆ ಅವುಗಳಿಗೇನೊಂದೂ ಪ್ರಯೋಜನವಿಲ್ಲವು. ಆದಕಾರಣ ವೀರಶೈವನು ಕೇವಲ ಬ್ರಹ್ಮಕಾಂಡದ ಕರ್ಮಗಳನ್ನಾಚರಿಸುವನು. ಇದರಿಂದ ಲಿಂಗಾಂಗಿ ಬ್ರಾಹ್ಮಣನು ವೇದವನ್ನು ಮಾನಿಸುವವನಲ್ಲವೆಂಬ ಆಕ್ಷೇಪ ಉಂಟಾಗುವುದು ವೇದವೆಂಬ ಅಂಗಡಿಯಲ್ಲಿ ಅನೇಕಪರದ ರತ್ನಗಳು

ದಮೋ ವಿವೇಕಶ್ಚ ವೈರಾಗ್ಯಂ ಪೂರ್ಣಭಾವನಾ | ಕ್ಷಾಂತಿಃ ಕಾರುಣ್ಯಸಂಪತ್ತಿಃ ಶ್ರದ್ಧಾಸತ್ಯಸಮುದ್ಭವಾ || ಶಿವಭಕ್ತಿಃ ಪರೋಧರ್ಮಃ ಶಿವಜ್ಞಾನಸ್ಯಬಾಂಧವಾಃ | ಇತಿ, ಕಿಂಚ ವೇದಾಃ ಸರ್ವಾಂಗಾನಿ ಷಡಂಗಸಹಿತಾಶ್ಚ ವೇದಭಾಗಾ ವೀರಶೈವಾಚಾರ್ಯಾದೃತ ಶಾಶ್ವತಫಲಪ್ರಯೋಜಕೀಭೂತಾಃ ಸತ್ಯಂಚವಚನಂ ಆಯತಸಂ ಪ್ರಯೋಜಕಮಿತ್ಯರ್ಥಃ ||೩೩||೮||

ಮೂ|| ಯೋವಾ ಏತಾಮೇವಂ ವೇದಾಪಹತ್ಯ ಪಾಪ್ಮಾನಮನಂತೇ ಸ್ವರ್ಗೇಲೋಕೇ ಜ್ಯೇಯೇಪ್ರತಿತಿಷ್ಠತಿ ಪ್ರತಿತಿಷ್ಠತಿ || ಇತಿ ಚತುರ್ಥಃಖಂಡಃ

ಕೇನೋಪನಿಷತ್ಸಮಾಪ್ತಾ.


ಶಾಂ|| ಯೋವೇತಿ,, ಯಃ ಏತಾಂ ಬ್ರಹ್ಮವಿದ್ಯಾಮುಕ್ತಸಾಧನಸಂಪನ್ನಃ ವೇದಸಪಾಪ್ಮಾನಂ ಪಾಪಾದಿಜನಕ ಕಾರ್ಮಿಕಾದಿಮಲಮಪಹತ್ಯ, ವಿಧೂಯ, ಅನಂತೆ ಪರಶಿವಸ್ಯ ಬ್ರಹ್ಮಣಃ ಕಾಲಾದಿ ಪರಿಚ್ಛೇದರಹಿತತ್ವಾತ್. ಸರ್ವಾತ್ಮಕತ್ವಾತ್ ಬ್ರಹ್ಮವಿಷ್ಣ್ವಜ್ಞಾತಾದ್ಯಂತವತ್ವಾದ್ವಾ | ಅನಂತಃ ಪರಶಿವಃ |

ಬೆಳೆಗೆ ಸಿದ್ಧಗಳಾಗಿರಲು, ಹೆಚ್ಚಾದ ಬೆಲೆಯನ್ನು ಕೊಟ್ಟು ಅಲ್ಪವಾದ ಗಾಜಿನ ಹರಳುಗಳನ್ನು ತೆಗೆದುಕೊಳ್ಳುವದು ಜಾಣತನವೇನು? ಅಲ್ಪ ಮೂಲ್ಯದಿಂದ ಉತ್ತಮಗಳಾದ ಸತ್ಯಗಳಾದ ರತ್ನಗಳನ್ನು ಗ್ರಹಿಸುವದೇ ಉತ್ತಮವು. ವೀರಶೈವನು ಅಲ್ಪವಾದ ಕ್ರಿಯೆಗಳಿಂದ ಶಾಶ್ವತವಾದ ಮೋಕ್ಷಸುಖವನ್ನು ಪಡೆದುಕೊಳ್ಳುವನಾದುದರಿಂದ ಇವನೇ ಉತ್ತಮಾಧಿಕಾರಿಯೆಂದೆನಿಸುವನು. ಇವನಿಗೋಸ್ಕರ ವೇದಪುರುಷನೆಂಬ ವ್ಯಾಪಾರಿಯು ಉತ್ತಮ ರತ್ನಗಳಂತಿರುವ ಶಿವಪೂಜಾದಿ ಕರ್ಮಗಳನ್ನು ವಿಧಿಸಿರುವನು. ಆದುದರಿಂದ ಮೋಕ್ಷಸ್ವರೂಪವಾದ ಬ್ರಹ್ಮವಿದ್ಯೆಗೆ ಶಿವಪೂಜಾದಿ ಕರ್ಮಗಳೇ ಸಾಧಕಗಳು. ಆದರೆ ದಮವೆಂಬ ಗುಣವೂ ಮೋಕ್ಷಕ್ಕೆ ಪ್ರಯೋಜನಕಾರಿಯಾಗಿರುವದರಿಂದ ಅದನ್ನೂ ಸಾಧನಕೋಟಿಯಲ್ಲಿ ಸೇರಿಸಿ, ಈ ಉಪನಿಷತ್ತು ಹೇಳಿರುವದು. ಶಮ, ದಮ, ಶಾಂತಿ, ತಿತಿಕ್ಷಾ ಮೊದಲಾದ ಗುಣಗಳು ಶಿವಜ್ಞಾನಕ್ಕೆ ಸಾಧನಗಳಾಗಿರುವವೆಂದು ಶ್ರೀರೇಣುಕ ಭಗವತ್ಪಾದರು ಹೇಳಿಯೇ ಇರುವರು. ಇನ್ನೂ ವೀರಶೈವರಿಂದ ಅಂಗೀಕರಿಸಲ್ಪಟ್ಟ ಷಡಂಗಸಹಿತ ವೇದಭಾಗಗಳೂ ಸತ್ಯವಚನವೂ ಕೂಡ ಬ್ರಹ್ಮವಿದ್ಯೆಗೆ ಪ್ರಯೋಜಕಗಳಾಗುವವೆಂದು ಈ ಉಪನಿಷನ್ಮಂತ್ರದ ತಾತ್ಪರ್ಯವು. ||೩೩||೮||

ಬ್ರಹ್ಮವಿದ್ಯೆಯು ಶಿವಪೂಜಾದಿ ಸಾಧನಗಳಿಂದಾವಿರ್ಭವಿಸುವದೆಂದು ತಿಳಿದು ಯಾವನು ಶಿವಪೂಜಾದಿ ಕರ್ಮಗಳನ್ನಾಚರಿಸುವನೋ ಅವನು ಪಾಪಾದಿಗಳಿಗೆ ಕಾರಣವಾದ ಕಾರ್ಮಿಕಾದಿಮಲತ್ರಯದಿಂದ ಬಿಡಲ್ಪಟ್ಟು ಕಾಲಾದಿ ಪರಿಚ್ಛೇದಗಳಿಲ್ಲದುದಾಗಿಯೂ, ಸರ್ವಚೈತನ್ಯಸ್ವರೂಪವಾಗಿಯೂ, ಬ್ರಹ್ಮ ವಿಷ್ಣ್ವಾದಿ ದೇವತೆಗಳಿಗೆ ಅಗೋಚರವಾಗಿಯೂ ಇರುವ

ಬ್ರಹ್ಮಾ ಹರಿಶ್ಚ ಭಗವಾನಾದ್ಯಂತಂನೋಪಲಬ್ಧವಾನ್ | ತತೋಸ್ಯೇಚಸುರಾಯಸ್ಮಾದನಂತೋಹಮುಕೋಸ್ಮ್ಯಹಂ || ಇತಿ ಶಿವಗೀತೋಕ್ತೇಃ. ತಸ್ಮಿನ್ನನಂತೇ ಪರಶಿವೇ ಜ್ಯೇಯೇ ಜ್ಯೇಷ್ಠೇ ಸರ್ವೋತ್ತಮೇ ಸ್ವರ್ಗೇಲೋಕೇ ಸುಖಾತ್ಮಕ ಶಿವಲೋಕೇ ಅನಂತಾದಿಪದಸಮಭಿವ್ಯಾಹೃತಸ್ವರ್ಗಲೋಕಶಬ್ದಸ್ಯ ಪರಶಿವಲೋಕಪರಕತ್ವೌಚಿತ್ಯಾತ್ | ಪ್ರತಿತಿಷ್ಠತಿ ಪ್ರತಿಷ್ಠಿತೋಭವತಿ. ಪರಶಿವಲಿಂಗೆ ಸಾಮರಸ್ಯಂಪ್ರಾಪ್ನೋತೀತಿಯಾವತ್, ಪ್ರತಿತಿಷ್ಠತೀತಿ ಪುನರ್ವಚನಂ. ಉಪನಿಷತ್ಸಮಾಪ್ತಿಪ್ರದರ್ಶನಾರ್ಥಂ || ಇತಿ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾ
ಧೀಶ್ವರ ಶ್ರೀಮಜ್ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯಾಸ್ಥಾನಪಂಡಿತೇನ
ಉಮಚಿಗಿಪುರಮಧ್ಯವಿದ್ಯೋತಮಾನ ವೃಷ್ಟಿ ಮಠಾಧೀಶ್ವರೇಣ ಧರ್ಮ
ರತ್ನ ಪ್ರಶಸ್ತಿಸಮಲಂಕೃತೇನ ಶಂಕರಶಾಸ್ತ್ರಿಣಾ ರಚಿತಾ ಕೇನೋ
ಪನಿಷದಶ್ಚತುರ್ಥಖಂಡಸ್ಯ ಶಾಂಕರೀವ್ಯಾಖ್ಯಾ ಸಮಾಪ್ತಾ.

ಸರ್ವಾಭೀಷ್ಟಫಲಪ್ರದೆ ಶಿವಪದೆ ಕಲ್ಯಾಣಬೃಂದಾಸ್ಪದೆ
ಭಕ್ತಾನಾಂ ಸುಖದೆ ಲಸದ್ಗುರುಪದೆ ಸುಜ್ಞಾನ ಪಾಥೋಹ್ರದೆ ||
ವ್ಯಾಖ್ಯೇಯಂನಿಹಿತಾಭವಚ್ಚರಪದೆ ರತ್ನಾವಲೀ ಶಾಂಕರೀ
ಹ್ಯಯ್ಯಪ್ಪಾರ್ಯತನೂಜ ಶಂಕರ ಸುಧೀರತ್ನೇನ ವಿದ್ವಸ್ಮದೆ ||೧||



ಸರ್ವೋತ್ತಮವಾದ ನಿತ್ಯಾನಂದ ಸ್ವರೂಪವಾದ ಪರಶಿವನಲ್ಲಿ ನೆಲೆಗೊಳ್ಳುವನು. (ಸಾಮರಸ್ಯ ಮುಕ್ತಿಯನ್ನೈದುವನು) ಈ ಮಂತ್ರದಲ್ಲಿ "ಪ್ರತಿತಿಷ್ಠತಿ ಪ್ರತಿತಿಷ್ಠತಿ" ಎಂದು ಎರಡುಸಾರಿ ಹೇಳಿರುವದು ಉಪನಿಷತ್ಸಮಾಪ್ತಿಯನ್ನು ತೋರಿಸುವದಕ್ಕೆಂದು ತಿಳಿಯತಕ್ಕದು.

ಇಲ್ಲಿಗೆ ಶ್ರೀಮದುಜ್ಜಯಿನೀ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀಮಜ್ಜಗದ್ಗುರು ಸಿದ್ಧಲಿಂಗ ಶಿವಾ
ಚಾರ್ಯಾಸ್ಥಾನಪಂಡಿತ ಧಾರವಾಡಜಿಲ್ಲಾ ಹುಬ್ಬಳ್ಳೀ ತಾಲ್ಲೂಕ ಉಮಚಿಗಿ ಮಠಾಧ್ಯಕ್ಷ
ಧರ್ಮರತ್ನ ಪ್ರಶಸ್ತೀದರ ವೇದಮೂರ್ತಿ ಶಂಕರಶಾಸ್ತ್ರಿಗಳಿಂದ ರಚಿತವಾದ ಶಾಂಕರೀ
ಎಂಬ ಹೆಸರುಳ್ಳ ಕೇನೋಪನಿಷತ್ತಿನ ವ್ಯಾಖ್ಯಾನಕ್ಕೆ ಶಿವಾದ್ವೈತ ವಿದ್ಯಾವಿಭೂ
ಷಣ ಎಂಬ ಪ್ರಶಸ್ತಿಯಂ ಪಡೆದ ಸಿರಸಿ ಗುರುಶಾಂತಶಾಸ್ತ್ರಿಗಳಿಂದ ಕನ್ನಡ
ದಲ್ಲಿ ರಚಿತವಾದ ಭಾವದರ್ಪಣವೆಂಬ ಕನ್ನಡ ಟೀಕೆಯು ಸಮಾಪ್ತವಾದುದು.

ಕಂ|| ಕೇನೋಪನಿಷದ್ವ್ಯಾ | ಖ್ಯಾನಕೆ ವರಸಿರಸಿಮಠದ ಗುರುಶಾಂತ ಬುಧಂ ||
ತಾನೆ ವಿರಚಿಸಿದ ಕನ್ನಡ | ದಾನುಡಿಯುಡುಟೀಕೆ ಮುಗಿದುದೀಶ್ವರಕೃಪೆಯಿಂ||

ಶಿವಂ—ಭೂಯಾತ್

ಶಾಲಿವಾಹನಶಕೆ ೧೮೪೫ ವೈಶಾಖ ಶು||

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi



Dharmaratna Padavidharaha

Pandita Sankara Sastri, Umachigi.

ಧರ್ಮರತ್ನ ಪದವೀಧರಃ

ಪಂ. ಶಂಕರಶಾಸ್ತ್ರೀ, ಉಮಚಿಗಿ.

೧. ಈಶಾವಾಸ್ಯೋಪನಿಷಚ್ಛಾಂಕರೀ

೨. ಕೇನೋಪನಿಷಚ್ಛಾಂಕರೀ

೩. ವೀರಶೈವ ಸಿದ್ಧಾಂತಸುಧಾಕರ

ಈ ಮೂರು ಗ್ರಂಥಗಳು ಸಿಕ್ಕುವ ಸ್ಥಳ.

ಹರಿಹರದಲ್ಲಿರುವ ಹೊಸ ಮಠದ ವೇ|| ಚನ್ನಯ್ಯನವರು.

ತಾ|| ಹರಿಹರ,

ಚಿತ್ರದುರ್ಗ ಡಿಸ್ಟ್ರಿಕ್ಟ್.

ಮೆಸ್ಸರ್ಸ್ ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್,

ಹಾರ್ಮೋನಿಯಂ ವ್ಯಾಪಾರಿಗಳು, ಮೈಸೂರು.